ಭಾಷಾ ಸಮೀಕ್ಷೆ

ಭಾಗ–೧

'ಪುಟ್ಟಣ್ಣ'

ಪ್ರಕಾಶಕರು:
ಮುಲ್ಕಿ ಪ್ರಿಂಟಿಂಗ್ ಪ್ರೆಸ್, ಮುಲ್ಕಿ, ದ. ಕ.

ಭಾಷಾ ಸಮೀಕ್ಷೆ

ಭಾಗ—೧

'ಪುಟ್ಟಣ್ಣ'

PRINTERS & PUBLISHERS:
THE MULKI PRINTING PRESS,
MULKI, S. K.

ಮಾರಾಟಗಾರರು:
ಕಿತಾಬ್ ಘರ್, ಉಡುಪಿ, ದ. ಕ.

—೮—೦

ಭಾಷಾ ಪ್ರಪಂಚದಲ್ಲಿ ಶಬ್ದಕೋಶವನ್ನು ಬೆಳೆಸಲು ಹಿರಿಯರು ಹಲವಾರು ಹಂಚಿಕೆಗಳನ್ನು ಹೂಡಿರುವರು. ಅವುಗಳಲ್ಲಿ ಮೂಲಶಬ್ದಗಳಿಗೆ ಅಥವಾ ಪ್ರಕೃತಿಗಳಿಗೆ ಬೇರೆ ಬೇರೆ ಪ್ರತ್ಯಯಗಳನ್ನು ಹಚ್ಚಿ ಬಗೆಬಗೆಯ ಶಬ್ದಗಳನ್ನು ನೇರ್ಪಡಿಸಿಕೊಳ್ಳುವುದು ಒಂದು ಹಂಚಿಕೆಯಾಗಿದೆ. ಕ್ರಿಯಾಪ್ರಕೃತಿ ಅಥವಾ ಧಾತುಗಳಿಗೆ **ಕೃತ್ ಪ್ರತ್ಯಯ**ಗಳನ್ನು ಹಚ್ಚಿಸಿ ಹೊಸದಾಗಿ ವಿಶೇಷಣ, ನಾಮ ಮತ್ತು ಅವ್ಯಯಗಳನ್ನು ಸಾಧಿಸಿಕೊಳ್ಳಬಹುದು. ಧಾತು ಮತ್ತು ಅವ್ಯಯಗಳ ಹೊರತು ಉಳಿದ ಶಬ್ದಗಳಿಗೆ **ತದ್ಧಿತ ಪ್ರತ್ಯಯ**ಗಳನ್ನು ಸೇರಿಸಿ ಹೊಸದಾಗಿ ವಿಶೇಷಣ, ನಾಮ ಮತ್ತು ಅವ್ಯಯಗಳನ್ನು ಸಿದ್ಧಿಸಿಕೊಳ್ಳಬಹುದು. ನಮ್ಮ ಕಂನುಡಿಯು ಭಾರತದ ಸಂಸ್ಕೃತ, ಮರಾಠಿ, ಕೊಂಕಣಿ, ಗುಜರಾಥಿ, ಬಂಗಾಲಿ, ತಮಿಳು, ತೆಲುಗು ಮತ್ತು ಮಲೆಯಾಳವೇ ಮೊದಲಾದ ಹಲವಾರು ಭಾಷೆಗಳ ಮೇಲೆ ತನ್ನ ಪ್ರಭಾವವನ್ನು ಬೀರಿ ವಿಶೇಷ ಪರಿಣಾಮವನ್ನುಂಟುಮಾಡಿದೆ. ಅಂತೆಯೆ ಅನ್ಯ ಭಾಷೆಗಳ ನೆರವಿಂದ ಕಂನುಡಿಯೂ ತನ್ನ ಶಬ್ದಕೋಶವನ್ನು ಬೆಳೆಸಿಕೊಂಡಿದೆ. ಕಂನುಡಿಯು ಅನ್ಯ ಭಾಷೆಗಳಲ್ಲಿ ಸಂಸ್ಕೃತದಿಂದ ವಿಶೇಷ ತರದ ನೆರವನ್ನು ಪಡೆದಿದೆ. ಆದುದರಿಂದ ವಿದ್ಯಾರ್ಥಿವೃಂದವು ಸಂಸ್ಕೃತ ಪ್ರತ್ಯಯಗಳ ಕೊಂಚ ಮಟ್ಟಿನ ಜ್ಞಾನವನ್ನು ಪಡೆದುಕೊಂಡು ಶಬ್ದಾರ್ಥವನ್ನು ಹೆಚ್ಚಾಗಿ ಸ್ಪಷ್ಟಪಡಿಸಿಕೊಳ್ಳುವುದು ಅಗತ್ಯ.

ಧಾತುಗಳ ಹಿಂದೆ ಸೇರುವ ಅವ್ಯಯರೂಪಗಳನ್ನು **ಉಪಸರ್ಗ**ಗಳೆಂದು ಕರೆಯುವರು.

ಉಪಸರ್ಗ	**ಅರ್ಥ**	**ಉದಾ.**
ಅತಿ	ಬಹಳ, ವಿಶೇಷ, ಆಧಿಕ್ಯ.	ಅತಿವೃಷ್ಟಿ (ಅತಿ+ವೃಷ್ಟಿ – ಬಹಳ ಮಳೆ) ಅತಿಕ್ರಮ (–ಅಪ್ಪಣೆ ಮೀರಿ ಹೋಗುವಿಕೆ) ಅತಿಚಾರ, ಅತಿವಾದ, ಅತಿರಿಕ್ತ, ಅತಿಗಳೆ, ಅತಿಕ್ರುದ್ಧ.
ಅಧಿ	ಮೇಲೆ, ಕೂಡ, ಶ್ರೇಷ್ಠತ್ವ.	ಅಧೀಶತ್ವ (ಅಧಿ+ಈಶತ್ವ – ಯಜಮಾನನಾಗಿರೋಣ, ರಾಜಾಧಿಕಾರ) ಅಧಿಕರಣ, ಅಧಿಕ್ಷೇಪ, ಅಧಿರಾಜ, ಅಧಿನಾಥ, ಅಧಿಗಮ, ಅಧಿದೇವ.

ಅನು	ಅಂತೆ, ಹಾಗೆ, ಆ ಮೇಲೆ, ಹಿಂದೆ,	ಅನುಚರ (ಅನು+ಚರ– ಹಿಂದೆ ಹೋಗುವವ-ಸೇವಕ) ಅನುಗಮನ, ಅನುಜಾತ, ಅನುಕಂಪ, ಅನುಕೂಲ, ಅನುಪ್ರಾಸ, ಅನುವರ್ತನ, ಅನುಗ.
ಅಪ	ದೂರ, ಇಲ್ಲದೆ, ಬಿಟ್ಟು, ಹೊರತು, ಕೆಳಗೆ, ಕೆಟ್ಟ.	ಅಪಕ್ರಮ (ದೂರ ಹೋಗೋಣ; ಹಿಂದೆ ಸರಿಯೋಣ) ಅಪಚಾರ, ಅಪಮಾನ, ಅಪಕಾರ, ಅಪಗಮನ, ಅಪಖ್ಯಾತಿ, ಅಪಧೈರ್ಯ, ಅಪಧ್ಯಾನ, ಅಪಯಶಸ್ಸು, ಅಪಲಾಪ.
ಅಭಿ	ಸಮೀಪ, ಎದುರು, ಓಸ್ಕರ, ಕಡೆಗೆ, ಮೇಲೆ, ಮುಂದೆ, ಹೆಚ್ಚು.	ಅಭಿಗಮನ (ಸಮೀಪ ಹೋಗೋಣ, ಎದುರುಗೊಳ್ಳೋಣ) ಅಭಿಸಾರ, ಅಭಿಹಾರ, ಅಭಿಶಾಪ, ಅಭಿವರ್ಣಿಸು, ಅಭಿವಾದ, ಅಭಿರುಚಿ, ಅಭಿರಂಜನೆ, ಅಭಿಮುಖ, ಅಭಿಮಾನಿ, ಅಭಿಮತ, ಅಭಿನವ, ಅಭಿಜ್ಞ, ಅಭಿಜಾತ, ಅಭಿಚರ.
ಅವ	ದೂರ, ಕೆಳಗೆ, ಕೊರತೆ, ಹೆಚ್ಚಿಗೆ.	ಅವಕರುಣೆ (ಕರುಣೆಗೆ ಕೊರತೆ– ನಿರ್ದಯ) ಅವಮರ್ಯಾದೆ, ಅವಗಮನ, ಅವತಾರ, ಅವಗುಣ, ಅವಧಾರಣ, ಅವದಾತ, ಅವಧರಿಸು, ಅವಕೃಪೆ, ಅವಗಾಹ, ಅವಚ್ಛೇದ.
ಆ	ವರೆಗೆ, ಕಡೆಗೆ, ತನಕ, ಇಂದ, ಕಿಂಚಿತ್, ಮೇರೆ.	ಆಕಂಠ (ಕುತ್ತಿಗೆಯ ತನಕ) ಆಕರ್ಷಕ ಆಕರಿಸು, ಆಕಾಂಕ್ಷಿಸು, ಆಮರಣ, ಆಮೂಲಾಗ್ರ, ಆಜನ್ಮ, ಆಕರ್ಣ, ಆಗರ್ಭ, ಆಸೇತುಹಿಮಾಚಲ, ಆಚಂದ್ರಾರ್ಕ, ಆಜಾನುಬಾಹು.
ಉತ್	ಮೇಲೆ, ಮುಂದೆ, ಹೊರಗೆ, ಹೆಚ್ಚು, ಶ್ರೇಷ್ಠ.	ಉತ್ಕ್ರಮಿಸು, (ಉತ್ + ಕ್ರಮಿಸು– ಮೀರಿ ಮುಂದೆ ಹೋಗು– ಉಲ್ಲಂಘಿಸು) ಉತ್ಕ್ರಾಂತಿ, ಉತ್ಕೃಷ್ಟ, ಉತ್ಕಟ, ಉತ್ತುಂಗ, ಉತ್ತೇಜನ, ಉದ್ಭವ, ಉದ್ಭಾಸ, ಉದ್ಭ್ರಮ, ಉದ್ವೇಗ, ಉನ್ಮದ, ಉನ್ಮಿಷಿತ, ಉನ್ಮುಖ.

ಉಪ	ಕೆಳಗಿನ, ಸಹಾಯದ, ಹತ್ತಿರ, ಹೆಚ್ಚಳ, ಚಿಕ್ಕ, ಕೀಳು.	ಉಪಕಥೆ (ಉಪ+ಕಥೆ- ಚಿಕ್ಕ- ಸಹಾಯದ ಕತೆ) ಉಪಗತ, ಉಪನೇತ್ರ, ಉಪಕಂಠ, ಉಪಗುರು, ಉಪಜೀವನ.
ದುರ್ ದುಸ್ ದುಷ್ } ದುಃ	ದುಷ್ಟ, ಕೆಟ್ಟ, ಕಠಿನ, ನಿಂದ್ಯ, ಕಷ್ಟ, ದುಃಖ, ಅಸಾಧ್ಯ, ನಿಷೇಧವುಳ್ಳ.	ದುರಕ್ಷ (ದುರ್+ಅಕ್ಷ- ಕೆಟ್ಟ ಜೂಜು.) ದುರಭ್ಯಾಸ, ದುರಾಶೆ, ದುರುಕ್ತಿ, ದುರದೃಷ್ಟ, ದುರ್ಗತಿ, ದುರ್ಜಯ, ದುರ್ದಿನ, ದುರ್ನೀತಿ ದುರ್ಭಿಕ್ಷ, ದುರ್ಮಾರ್ಗ, ದುಷ್ಕರ್ಮ, ದುಷ್ಕೀರ್ತಿ, ದುಷ್ಫಲ, ದುಸ್ತರ, ದುಸ್ಸಂಗ, ದುಸ್ಸಾಧ್ಯ, ದುರ್ವಿಧ, ದುರ್ವಿಪಾಕ.
ನಿ	ಅತ್ಯಂತ, ರಹಿತ.	ನಿಪಾತ (ನಿ+ಪಾತ- ಅತ್ಯಂತ ದೊಡ್ಡ ಕೆಳಗೆ ಬೀಳುವಿಕೆ) ನಿಬಂಧ, ನಿಗರ್ವಿ, ನಿಘಾತ.
ನಿರ್ ನಿಸ್ ನಿಷ್	ನಿಷೇಧ, ಬಾಹಿರ, ನಿಶ್ಚಯ, ಇಲ್ಲದ, ರಹಿತ, ಅತ್ಯಂತ, ಅಭಾವ.	ನಿರಂಶ (ನಿರ್+ಅಂಶ- ಭಾಗವಿಲ್ಲದ, ಶೇಷವಿಲ್ಲದ). ನಿರಕ್ಷರಿ, ನಿರಂಕುಶ, ನಿರಪರಾಧಿ, ನಿರಭಿಮಾನ, ನಿರ್ಗತಿ, ನಿರ್ಗಂಧ, ನಿರ್ಘೋಷ, ನಿರ್ಜನ, ನಿಶ್ಚಿಂತೆ, ನಿಷ್ಕಪಟ, ನಿಷ್ಕರ್ಮ, ನಿಷ್ಕಾಂಚನ, ನಿಷ್ಫಲ, ನಿಸ್ತೇಜ, ನಿಸ್ಸಾರ.
ಪರಾ	ಮೇಲೆ, ಹತ್ತಿರ, ಹಿಂದೆ, ವಿಪರೀತ, ದೂರ, ವಿರುದ್ಧ.	ಪರಾಕ್ರಮ (ಪರಾ+ಕ್ರಮ- ವೈರಿಗಳ ಮೇಲೆ ಸಾಗು- ಶೂರತನ, ಶಕ್ತಿ.) ಪರಾಜಿತ (ಪರಾ+ಜಿತ), ಪರಾ+ಭೂತಿ, ಪರಾ+ಅಯಣ, ಪರಾ+ವೃತ್ತ, ಪರಾ+ಅಸು.
ಪರಿ	ಸುತ್ತು, ಸುತ್ತಲೂ, ಅಂತೆ, ಹಾಗೆ, ವಿರುದ್ಧವಾಗಿ, ಬಹಳ, ಅತ್ಯಂತ, ಚೆನ್ನಾಗಿ, ವರೆಗೆ.	ಪರಿಕ್ರಮ (ಪರಿ+ಕ್ರಮ- ಸುತ್ತು-ಸುತ್ತಲೂ+ಹೋಗು- ಸುತ್ತುವರಿಯೋಣ). ಪರಿಚರ, ಪರಿಚ್ಛೇದ, ಪರಿತಾಪ, ಪರಿತ್ಯಾಗ, ಪರಿಪೂರ್ಣ ಪರಿಬೋಧಿಸು, ಪರಿಭವ, ಪರಿವಾರ, ಪರಿವೃತ, ಪರಿವೇಷ, ಪರಿಶುದ್ಧ, ಪರಿಶಿಷ್ಟ, ಪರಿಶ್ರಮ, ಪರೀಕ್ಷಕ, ಪರಿಸಮಾಪ್ತಿ, ಪರ್ಯಂತರ.

ಪ್ರ	ಮುಂದೆ, ಎದುರಿಗೆ, ಆಧಿಕ್ಯ, ಚೆನ್ನಾಗಿ, ಹೆಚ್ಚಾಗಿ, ಮುಖ್ಯವಾಗಿ.	ಪ್ರಚಂಡ (ಪ್ರ+ಚಂಡ– ಬಹಳ+ಸಿಟ್ಟು, ಉಷ್ಣತೆ– ಬಹಳ ಆವೇಶವುಳ್ಳ. ಕ್ರೂರ, ಸಿಟ್ಟಿನ, ಸೆಕೆಯುಳ್ಳ, ಸಹಿಸಲಸಾಧ್ಯವಾದ), ಪ್ರಖ್ಯಾತ, ಪ್ರಚ್ಯುತ, ಪ್ರಕೋಪ, ಪ್ರಚುರ, ಪ್ರಜ್ವಲ.
ಪ್ರತಿ	ತಿರುಗಿ, ಬದಲು, ವಿರುದ್ಧ, ಎದುರು.	ಪ್ರತಿವಚನ, (ತಿರುಗಿ ಹೇಳುವಿಕೆ– ಉತ್ತರ). ಪ್ರತಿವಾರ್ತೆ, ಪ್ರತಿಕಾರ, ಪ್ರತಿಕೂಲ, ಪ್ರತಿನಿಧಿ, ಪ್ರತಿಧ್ವನಿ, ಪ್ರತಿಪಕ್ಷ, ಪ್ರತಿಪಾದನೆ ಪ್ರತಿಫಲ, ಪ್ರತಿಬಿಂಬ, ಪ್ರತಿಯತ್ನ, ಪ್ರತಿಯೋಗಿ, ಪ್ರತಿಹಿಂಸೆ.
ವಿ	ಹೊರತು, ಇಲ್ಲದೆ, ದೂರವಾದ, ವಿವಿಧ, ವಿಷಮ, ವಿರುದ್ಧ, ಅತಿ, ವಿಶೇಷ.	ವಿಖ್ಯಾತ (ವಿ+ಖ್ಯಾತ– ವಿಶೇಷ ಹೆಸರು ಹೊಂದಿದ). ವಿಕ್ರಮ, ವಿಕ್ರಯ, ವಿಕೀರ್ಣ, ವಿಘಾತ, ವಿಚಲ, ವಿಜಯ, ವಿಜಾತಿ, ವಿದೇಹ, ವಿದ್ವೇಷ, ವಿಪಕ್ಷ, ವಿಫಲ, ವಿಭಾಗ, ವಿಭ್ರಮ ವಿರಾಗಿ, ವಿರಕ್ತ, ವಿಮುಕ್ತಿ, ವಿಬುಧ, ವಿರೂಪ, ವಿರೋಧ, ವಿಲಯ, ವಿಲಾಪ, ವಿವರ್ಣ, ವಿಶುದ್ಧಿ, ವಿಶ್ರಾಂತ.
ಸಮ್	ಸರಳ, ಯೋಗ್ಯ, ಒಳ್ಳೆಯ, ಸಮಾನ, ಒಟ್ಟು.	ಸಂಸ್ಕೃತ (ತಿದ್ದಿ ಯೋಗ್ಯವನ್ನಾಗಿ ಮಾಡಿದ– ಸುಧಾರಿಸಿದ). ಸಂಸರ್ಗ, ಸಂಸಾರ, ಸಂಯುಕ್ತ, ಸಂಲಾಪ, ಸಂಹಾರ, ಸಂಕರ, ಸಂಕೀರ್ತನ, ಸಂಘಟನ, ಸಂಜಾತ, ಸಂತಾಪ, ಸಂಬಂಧ.
ಸು	ಒಳ್ಳೆಯ, ಸುಂದರ, ಚೆನ್ನಾಗಿ, ಹೆಚ್ಚಾಗಿ, ಸುಲಭವಾಗಿ, ಉತ್ತಮ, ಕೂಡಲೆ, ಬೇಗನೆ, ಅತ್ಯಂತ.	ಸುಕೃತ (ಸು+ಕೃತ– ಚೆನ್ನಾಗಿ ಮಾಡಿದ– ಒಳ್ಳೆಯ ಕೆಲಸ– ಧರ್ಮ, ಪುಣ್ಯ). ಸುಗತಿ, ಸುಗುಣ, ಸುಪ್ರಭಾತ, ಸುಪ್ರಸನ್ನ, ಸುಲೋಚನ, ಸುಮತಿ, ಸುಭಿಕ್ಷೆ, ಸುಶೀಲ, ಸುಮಂಗಲೆ, ಸುಲಭ, ಸುಗಮ.

ಶಬ್ದಗಳ ಹಿಂದೆ ಬರುವ ಅವ್ಯಯಗಳು.

ಅವ್ಯಯ	ಅರ್ಥ	ಉದಾ:
ಅ	ಇಲ್ಲದ, ಅಲ್ಲದ, ಅಭಾವ.	ಅಕ್ಷಯ, (ಅ+ಕ್ಷಯ– ನಾಶ ಇಲ್ಲದ). ಅಗಣಿತ, ಅಖಂಡ, ಅಖಿಲ, ಅಚ್ಯುತ, ಅಕಾಲ, ಅಸುರ, ಅಕ್ರೂರ, ಅನೀತಿ.
ಅನ್	ಅಲ್ಲದ, ಇಲ್ಲದ, ಅಭಾವ.	ಅನಾಯಾಸ (ಅನ್+ಆಯಾಸ– ಆಯಾಸ (ತ್ರಾಸ) ಇಲ್ಲದ– ಸುಲಭ). ಅನಾದಿ, ಅನಂತ, ಅನರ್ಘ್ಯ, ಅನಾಥ, ಅನಾಕುಳ.
ಕು	ಕೆಟ್ಟ, ದುಷ್ಟ.	ಕುಜನ (ಕೆಟ್ಟ ಜನ). ಕುಚೋದ್ಯ, ಕುಬುದ್ಧಿ, ಕುಯುಕ್ತಿ, ಕುತರ್ಕ, ಕುಗ್ರಾಮ, ಕುಪುತ್ರ, ಕುರೂಪ.
ಪುನರ್	ಮತ್ತೆ, ತಿರುಗಿ, ಮುಂದೆ.	ಪುನರಾಗಮನ (–ತಿರುಗಿ ಮೊದಲಿನ ಸ್ಥಾನಕ್ಕೆ ಬರುವಿಕೆ). ಪುನರ್ಜನ್ಮ, ಪುನರ್ದರ್ಶನ, ಪುನರ್ವಿವಾಹ.
ಸಹ. ಸ.	ಸಹಿತ, ಸಂಗಡ, ಒಟ್ಟಿಗೆ, ಒಡನೆ, ಜೊತೆಗೆ.	ಸಕುಟುಂಬ (ಹೆಂಡತಿ ಮಕ್ಕಳು ಕೂಡಿಕೊಂಡ) ಸಜೀವ, ಸನಾಥ, ಸಹಗಮನ, ಸಹಜಾತ, ಸಹವಾಸ, ಸಹೋದರ.

ಮೇಲಿನ ಅವ್ಯಯಗಳಲ್ಲಿ **ಅ.** ವ್ಯಂಜನಾದಿ ಶಬ್ದದ ಪೂರ್ವದಲ್ಲಿ ಮಾತ್ರ ಬರುವುದು. **ಅನ್.** ಸ್ವರಾದಿ ಶಬ್ದದ ಆದಿಯಲ್ಲಿ ಮಾತ್ರ ಬರುವುದು.

ಧಾತುಗಳಿಗೆ ಹತ್ತುವ ಕೃತ್ ಪ್ರತ್ಯಯಗಳು.

ಇವನು **ಈ ಕ್ರಿಯೆಯನ್ನು ಮಾಡುವನು**– ಎಂಬರ್ಥದಲ್ಲಿ;

ಅಕ ಬೋಧಕ (ಬೋಧ್+ಅಕ– ಬೋಧಿಸುವ ಕೆಲಸವನ್ನು ಮಾಡುವವನು)– ಶಿಕ್ಷಕ, ಉಪದೇಶಕ. (ಭಜ್+ಅಕ)– ಭಜಕ. (ಘಾತ್+ಅಕ)– ಘಾತಕ. (ಗಮ್+ಅಕ)– ಗಮಕ.

ಅನ ಮದನ (ಮದ್+ಅನ– ವ್ಯಾಮೋಹ, ಆಶ್ಯಾಶೆಯನ್ನು ಉಂಟುಮಾಡುವವ)– ಕಾಮ. ಸೂದನ– (ಸೂದ್+ಅನ). (ವಿಭೀಷ್+ಅನ)– ವಿಭೀಷನ(ಣ).

ಇತ್ರ ಪವಿತ್ರ (ಪವ್+ಇತ್ರ)- ಶುದ್ಧ, ಸ್ವಚ್ಛ. ಲವಿತ್ರ (ಲವ್+ಇತ್ರ)- ಕತ್ತರಿಸುವ ಒಂದು ಸಣ್ಣ ಆಯುಧ.

ಉ ಭಿಕ್ಷು (ಭಿಕ್ಷ್+ಉ)- ಬೇಡುವವನು ಚಿಕೀರ್ಷು (ಚಿಕೀರ್ಷ್+ ಉ)- ಯಾವುದೊಂದನ್ನು ಮಾಡಬೇಕೆಂಬ ಪ್ರಬಲವಾದ ಇಚ್ಛೆ ಯುಳ್ಳವನು.

ತೃ ದಾತೃ (ದಾ+ತೃ)- ಕೊಡುವವ, ದಾನಿ. ಮಾತೃ (ಮಾನ್+ತೃ)- ಉಪಚರಿಸುವವಳು, ತಾಯಿ.

ಮಾನ ಯಜಮಾನ (ಯಜ್+ಮಾನ)- ಯಜ್ಞ ಮಾಡುವವ, ಒಡೆಯ, ಪತಿ, ವರ್ತಮಾನ (ವರ್ತ+ಮಾನ)- ಇಂದಿನ ಕಾಲ, ನಡೆಯುವ ವೇಳೆ, ಸುದ್ದಿ, ಸಂಗತಿ.

ವಸ್ (ವಾಂಸ) ವಿದ್ವಸ್ (ವಿದ್ವಾಂಸ) - (ವಿದ್+ವಸ್)- ತಿಳಿದವ, ಜಾಣ.

ಭವಿಷ್ಯತ್ಕಾಲದ ಕರ್ಮವಾಚಕ ಪ್ರತ್ಯಯಗಳು.

ಅನೀಯ ಗಣನೀಯ (ಗಣ್+ಅನೀಯ)- ಎಣಿಸತಕ್ಕ, ಕಮನೀಯ (ಕಮ್+ ಅನೀಯ)- ಆಶಿಸತಕ್ಕ, ಪ್ರೀತಿಸತಕ್ಕ- ಸುಂದರ, ಮನೋಹರ.

ತವ್ಯ ಕರ್ತವ್ಯ (ಕೃ+ತವ್ಯ)- ಮಾಡತಕ್ಕ ಕೆಲಸ, ಕರ್ಮ.

ಯ ಖಾದ್ಯ (ಖಾದ್+ಯ)- ತಿನ್ನತಕ್ಕದ್ದು, ತಿನ್ನುವ ಪದಾರ್ಥ, ವಂದ್ಯ (ವಂದ್+ಯ)- ನಮಸ್ಕರಿಸಲ್ಪಡತಕ್ಕ, ಪೂಜ್ಯ. ಅನುವದ್ಯ (ಅನುವದ್+ಯ)- ತಿರುಗಿ ಹೇಳತಕ್ಕ, ಮತ್ತೆ ಹೇಳೋಣ.

ಭೂತಕಾಲದ ಕರ್ಮವಾಚಕ ಪ್ರತ್ಯಯಗಳು

ಇತ ಮಿಲಿತ (ಮಿಲ್+ಇತ)- ಕೂಡಿದ, ಸೇರಿದ. ಸ್ವನಿತ (ಸ್ವನ್+ಇತ)- ಶಬ್ದ ಮಾಡಿದ, ಸಂಪಾದಿತ (ಸಂಪದ್+ಇತ).

ಣ ಪೂರ್ಣ (ಪೂರ್+ಣ)- ತುಂಬಿದ. ಜೀರ್ಣ (ಜೀರ್+ಣ)- ಸವೆದ, ಹಾಳಾದ, ಕರಗಿದ, ಪಚನಹೊಂದಿದ ತ್ರಾಣ (ತ್ರಾ+ಣ)- ರಕ್ಷಣೆ, ಕಾಪಾಡುವಿಕೆ, ಸಹಾಯ, ಶಕ್ತಿ.

ತ ಕೃತ (ಕೃ+ತ)- ಮಾಡಿದ. ದತ್ತ (ದಾ+ತ)- ಕೊಡಲ್ಪಟ್ಟ, ಕೊಟ್ಟ, ದಾನ. ಶೃತ (ಶೃ+ತ)- ಅಟ್ಟ, ಬೇಯಿಸಲ್ಪಟ್ಟ, ಕುದಿಸ

ಲ್ಪಟ್ಟ. ಖಾತ (ಖಾ+ತ)– ಅಗೆದ, ಕುಣಿ, ಹೊಂಡ, ಕೆರೆ, ದೊಡ್ಡ ಕೊಳ.

ಧ ಲಬ್ಧ (ಲಬ್+ಧ)– ದೊರೆತ, ಸಿಕ್ಕಿದ. ಕ್ರುದ್ಧ (ಕ್ರುಧ್+ಧ)– ಸಿಟ್ಟಾದ. ದಗ್ಧ (ದಹ್+ಧ)– ಸುಟ್ಟ, ಹೊತ್ತಿದ.

ನ ಮ್ಲಾನ (ಮ್ಲಾ+ನ)– ಬಾಡಿದ, ಮಾಸಿದ, ಕಳೆಗುಂದಿದ. ಸಂಪನ್ನ (ಸಂಪದ್+ನ)– ಕೂಡಿದ, ಹೊಂದಿದ, ಸಂಪತ್ತುಳ್ಳ, ಅದೃಷ್ಟವುಳ್ಳ, ಸಿರಿವಂತ. ಛಿನ್ನ (ಛಿದ್+ನ)– ಒಡೆದ, ಚೂರಾದ, ತುಂಡಾದ, ಬೇರೆಬೇರೆಯಾದ.

ooooo

ಭಾವವಾಚಕ ಪ್ರತ್ಯಯಗಳು.

ಅ ಸ್ಪರ್ಶ (ಸ್ಪೃಶ್+ಅ)– ಮುಟ್ಟುವಿಕೆ, ತಾಗುವಿಕೆ, ಸೋಂಕು. ಪ್ರವೇಶ (ಪ್ರವಿಶ್+ಅ)– ಹೋಗೋಣ, ಒಳಗೆ ಹೋಗುವುದು, ಸೇರಿಕೆ. ಅತೀಸಾರ (ಅತೀ+ಸೃ+ಅ)– ಬಹಳ ಹೊಟ್ಟೆ ಜಾಡಿಸೋಣ, ತುಂಬ ಹೊರಕಡೆ ಹೋಗುವ ಒಂದು ತರದ ಬೇನೆ.

ಅನ ಪಾನ [ಪಾ(–ಕುಡಿ)+ಅನ]– ಕುಡಿಯೋಣ. ಗಾನ (ಗಾ+ಅನ)– ಹಾಡುವಿಕೆ, ಹಾಡು, ಪದ. ಮನನ (ಮನ್–ವಿಚಾರಮಾಡು+ಅನ) –ವಿಚಾರಮಾಡುವಿಕೆ, ತಿಳಿದುಕೊಳ್ಳುವಿಕೆ.

ತಿ ಸ್ತುತಿ (ಸ್ತು–ಹೊಗಳು+ತಿ)– ಹೊಗಳಿಕೆ, ಪ್ರಶಂಸೆ. ಖ್ಯಾತಿ (ಖ್ಯಾ –ಹೇಳು+ತಿ)– ಹೇಳಿಕೆ, ಕೀರ್ತಿ.

ಆ ಅರ್ಚಾ (ಅರ್ಚ್–ಪೂಜೆಮಾಡು+ಆ)– ಪೂಜೆ. ಕೃಪಾ (ಕೃಪ್– ದಯೆಮಾಡು+ಆ)– ದಯೆ. ಶಂಕಾ (ಶಂಕ್–ಸಂಶಯಗೊಳ್ಳು)– ಸಂಶಯ. ಸ್ಪೃಹಾ (ಸ್ಪೃಹ್–ಬಯಸು+ಆ)– ಬಯಕೆ, ಕೋರಿಕೆ, ಆಶೆ. ಸೇವಾ (ಸೇವ್–ಚಾಕರಿಮಾಡು+ಆ)– ಉಪಚಾರ.

ooooo

ತದ್ಧಿತ ಪ್ರತ್ಯಯಗಳು.

ಇದು ಇವನ ಸ್ವಭಾವವು ಇಲ್ಲವೆ ಧರ್ಮವು ಎಂಬರ್ಥದಲ್ಲಿ:

ಅ ತಪಸ್–ತಾಪಸ, ನಟ್–ನಾಟ್ಯ.

ಅದರಲ್ಲಿ ಹೆಸರಾದವ, ಅದರ ಒಡೆಯ ಎಂಬರ್ಥದಲ್ಲಿ:

ಅ ಪೃಥ್ವಿ— ಪಾರ್ಥಿವ.

ಇಕ ಲೋಕ-ಲೌಕಿಕ, ಸಮಾಜ-ಸಾಮಾಜಿಕ, ಯಂತ್ರ-ಯಾಂತ್ರಿ
ಪರಮಾರ್ಥ—ಪಾರಮಾರ್ಥಿಕ.

ಅದರ **ವಿಕಾರ** ಎಂಬಲ್ಲಿ:

ಅ ಪಯಸ್—ಪಾಯಸ. ಖದಿರ—ಖಾದಿರ. ಮೃದು—ಮಾರ್ದ

ಯ ಗೋ—ಗವ್ಯ.

ಅದರಲ್ಲಿ **ಹುಟ್ಟಿದ್ದು** ಎಂಬರ್ಥದಲ್ಲಿ:

ಅ ಸಿಂಧು—ಸೈಂಧವ. ಮಗಧ—ಮಾಗಧ.

ಇಕ ರೇವತಿ—ರೈವತಿಕ. ಮಾಸ—ಮಾಸಿಕ. ದೇಹ—ದೈಹಿಕ.

ಈಯ್ ಸ್ವಜಾತಿ—ಸ್ವಜಾತೀಯ. ಶರ್ಕರ—ಶರ್ಕರೀಯ. ಉತ್ಕರ—ಉ
ರೀಯ. ಶಾಲಾ—ಶಾಲೀಯ.

ತ್ಯ ದಕ್ಷಿಣ—ದಾಕ್ಷಿಣಾತ್ಯ. ಪೂರ್ವ—ಪೌರ್ವಾತ್ಯ.

ಯ ದಿವ—ದಿವ್ಯ. ಕುರು—ಕೌರವ್ಯ. ಗ್ರಾಮ—ಗ್ರಾಮ್ಯ. ಗರ್ಗ—
ಗಾರ್ಗ್ಯ.

ಅದನ್ನು **ಓದಿದವ, ಬಲ್ಲವ** ಎಂಬರ್ಥದಲ್ಲಿ:

ಅಕ ಶಿಕ್ಷಾ—ಶಿಕ್ಷಕ. ಘಾತ—ಘಾತಕ.

ಅಣ ಚರ, ಚಾರ—ಚಾರಣ.

ಇಕ ವೇದ—ವೈದಿಕ. ಕರ್ಮ—ಕಾರ್ಮಿಕ. ಕೃಷಿ—ಕೃಷಿಕ. ವೀಣಾ
ವೈಣಿಕ. ವಿಮಾನ—ವೈಮಾನಿಕ.

ಅದರಂತೆ ಆಚರಣ ಮಾಡುವವ, ನಡೆಯುವವ ಎಂಬರ್ಥದಲ್ಲಿ:

ಇಕ ಧರ್ಮ—ಧಾರ್ಮಿಕ. ನಾಸ್ತಿ—ನಾಸ್ತಿಕ.

ಅಲ್ಲಿ **ತಿರುಗುವವನು** ಎಂಬರ್ಥದಲ್ಲಿ:

ಇಕ ಪಥ—ಪಥಿಕ. ರಥ—ರಥಿಕ.

ಆ ಕಾಲದಲ್ಲಿ ಮಾಡಿದ್ದು ಎಂಬರ್ಥದಲ್ಲಿ:

ಇಕ ದಿನ—ದೈನಿಕ. ವರ್ಷ—ವಾರ್ಷಿಕ.

ಅದನ್ನು ಹೊಂದಿದವ ಎಂಬರ್ಥದಲ್ಲಿ:

ಇತ ಪುಲಕ—ಪುಲಕಿತ.

ಅತಿಶಯದಿಂದ ಎಂಬರ್ಥದಲ್ಲಿ:

ಇಷ್ಠ ಬಲೀ—ಬಲಿಷ್ಠ. ಶ್ರ—ಶ್ರೇಷ್ಠ. ಪ್ರೀ—ಪ್ರೇಷ್ಠ.

ಧರ್ಮ ಇಲ್ಲವೆ ಸ್ವಭಾವವನ್ನು ತೋರಿಸುವಲ್ಲಿ:

ತಾ ಜಡ—ಜಡತಾ. ಗ್ರಾಮ—ಗ್ರಾಮತಾ.

ತ್ವ ಸ್ತ್ರೀ—ಸ್ತ್ರೀತ್ವ.

ಯ ಮೂರ್ಖ—ಮೌರ್ಖ್ಯ. ಚತುರ್ವರ್ಣ—ಚಾತುರ್ವರ್ಣ್ಯ.
ತ್ರಿಲೋಕ—ತ್ರೈಲೋಕ್ಯ.

ಅದರಿಂದ **ಪೂರ್ಣ** ಎಂಬರ್ಥದಲ್ಲಿ:

ಮಯ ಕೃಪಾ—ಕೃಪಾಮಯ. ಗೋ—ಗೋಮಯ.

ಆ ಬಗ್ಗೆ ತಕ್ಕವನು ಎಂಬರ್ಥದಲ್ಲಿ:

ಯ ದಂಡ—ದಂಡ್ಯ, ದಕ್ಷಿಣೆ—ದಕ್ಷಿಣ್ಯ.

ಅದು ಉಳ್ಳವ ಎಂಬರ್ಥದಲ್ಲಿ:

ಅ ಪ್ರಜ್ಞಾ—ಪ್ರಾಜ್ಞ. ವೃತ್ತಿ—ವಾರ್ತ.

ಇಕ ಮಾಯಾ—ಮಾಯಿಕ. **ಮತ್** ಬುದ್ಧಿ—ಬುದ್ಧಿಮತ್.

ವತ್ ಧನ—ಧನವತ್. ಜಲ—ಜಲವತ್.

ಇನ್ ಗುಣ—ಗುಣಿನ್. ಕರ—ಕರಿನ್.

ವಿನ್ ಮೇಧಾ—ಮೇಧಾವಿನ್. ತಪಸ್—ತಪಸ್ವಿನ್.

ಕಂನುಡಿಯಲ್ಲಿ ಹೊಸ ನುಡಿಗಳನ್ನು ಉಂಟುಮಾಡುವ ಮಹತ್ತ್ವದ ಹಲವು ಪ್ರತ್ಯಯಗಳು.

ಕೆಳಗಿನ ಪ್ರತ್ಯಯಗಳ ಸೇರುವಿಕೆಯಿಂದಾದ ವಸ್ತುವಾಚಕ ನಾಮಗಳನ್ನು ಪರಿಶೀಲಿಸಿರಿ.

ಅ. ತೋಡು+ಅ—ತೋಟ. **ಅಣ.** ಪಟ್ಟ+ಅಣ—ಪಟ್ಟಣ. ಅರ (ಧರ್ಮ)+ಅಣ—ಅರಣ. ಕಡಿವಣ. **ಇ.** ಕಳ್ (ಹಾಲು)+ಇ—ಕಳ್ಳಿ. ಹೋರು+ಇ—ಹೋರಿ. **ಎ.** ಹೊಗು+ಎ—ಹೊಗೆ. ಕೆನ್+ಎ—ಕೆನ್ನೆ. ಇಕ್ಕೆ. ಸೋರೆ. **ಕ.** ಅಲೆ+ಕ—ಅಲಕ. **ಕು.** ಕರಿಕು. ಉಸುಕು. **ಕೆ.** ಹೊದಿಕೆ. ಮೊಳಕೆ. **ಗ.** ಕಡಗ. **ಗು.** ಅಲಗು. **ಗೆ.** ಗುದಿಗೆ, ಬಡಿಗೆ, ಸರಿಗೆ. **ಚು.** ಅಚ್ಚು, ಕಿಚ್ಚು. **ಚೆ.** ಕೊಳಚೆ, ಮಿಡಚೆ. **ಜು.** ಗುಂಜು, (ಗುನಿ+ಜು). **ಜೆ.** ಬಂಜೆ, (ಬರಿದ+ಜೆ). **ಟ.** ಅಟ್ಟ, (ಅಡ್ಡ+ಟ). **ಟು.** ತರಟು, (ತಟ್ಟು)—

(ತರೆ+ಟು). **ಟಿ.** ಗಂಟಿ. **ಡು.** ಗುಂಡು, (ಗುಳ್+ಡು), ಕೊರಡು. **ಡೆ.** ಗುಡ್ಡೆ. **ತ.** ಅಗಳ್ತ, (ಅಗಳತ). **ತು.** ತೊತ್ತು, (ತೊಳ್ತು). **ತೆ.** ಕತ್ತೆ, (ಕಳ್ತೆ), ಮಿಡಿತೆ. **ದು.** ಕೈದು, ಬಿರುದು. **ದೆ.** ಪಳಿದೆ. **ಪು.** ಉಡುಪು, ಚಿಪ್ಪು. **ಪೆ.** ತಿಪ್ಪೆ. ಸಿಪ್ಪೆ. **ಬು.** ತುರುಬು, ಸಿಡುಬು, ಕೊಂಬು. **ಬೆ, ಂಬೆ.** ಬಣಂಬೆ, (ಬಣವೆ). **ಮು.** ಕೆಮ್ಮು, (ಕೆರೆ+ಮು). **ರ.** ಬಿಡಾರ. **ರು.** ತಳಿರು, ಬಸಿರು, ಉಗುರು. **ಲು.** ಹೆಳಲು, ಬೆರಲು, ಮಳಲು, (ಮಣಲು). **ವು.** ತೊಡವು, (ಆಭರಣ). **ವೆ.** ಇರುವೆ. **ಸು.** ಹೊರಸು, ಇರಸು. **ಸೆ.** ಹುಣಿಸೆ. **ಳು.** ಉಗುಳು, ಮುಗುಳು, ಕುರುಳು. **ಳೆ.** ಗುಳ್ಳೆ.

ಕೃತ್ ಪ್ರತ್ಯಯಗಳು

ಅ ಕುಂಟು + ಅ—ಕುಂಟ. ಗೆಲ್ + ಅ—ಗೆಲ್ಲ. ನಿಲ್ + ಅ—ನೆಲ. ಕುಡಿ+ಅ—ಕೊಡ. ತೂಗು+ಅ—ತೂಕ. ಓಡು+ಅ—ಓಟ. ಕಾಡು+ಅ—ಕಾಟ. ಕೂಡು+ಅ—ಕೂಟ.

ಅಕ ನೋಡು+ಅಕ—ನೋಟಕ. ಕಾಡು+ಅಕ—ಕಾಟಕ. ಎಸೆ+ಅಕ ಎಸಕ.

ಅಕು (ಕು) ಕಡಿ+ಅಕು—ಕಡಕು (ಕಡಿಯೋಣ). ಒಡಿ (ಡೆ)+ಅಕು—ಒಡಕು. ತಳ್+ಅಕು—ತಳಕು (ಥಳಕು).

ಅಣ ಒಡ್ಡು+ಅಣ—ಒಡ್ಡಣ (ಸಮೂಹ+ಒಡ್ಡುವುದು). ಮೂಡು+ಅಣ ಮೂಡಣ (ಮೂಡುವ ಸ್ಥಾನ).

ಅಣಿ ಅಡ್ಡ+ಅಣಿ—ಅಡ್ಡಣಿ. **ಅಣಿಕೆ** ಬೀಸು+ಅಣಿಕೆ—ಬೀಸಣಿಕೆ.

ಅಣಿಗೆ ಹುಟ್ಟು+ಅಣಿಗೆ—ಹುಟ್ಟಣಿಗೆ.

ಅತ-ತ ಅಗಿ+ತ—ಅಗಿತ. ಕುಣಿ+ತ—ಕುಣಿತ. ಅರಿ+ತ—ಅರಿತ. ಕೊಯ್+ಅತ—ಕೊಯ್ತ. ಸುಯ್+ಅತ—ಸುಯ್ತ. ಅಸಿತ. ಇಳಿತ, ಹರಿತ.

ಅತಿ, ಅತೆ, ತೆ. ಆಗಿ—ಅಗತಿ. ಅಗಳು—ಅಗಳ್ತಿ. ಕುಡಿ—ಕುಡಿತೆ. ಮಿಗು—ಮಿಗುತೆ. ಅಳಿ—ಅಳತೆ. ಕವಿ—ಕವಿತೆ. ಅಕ್ಕರು—ಅಕ್ಕರತಿ. ಉಳಿ—ಉಳತೆ. ಜರಿ—ಜರತೆ.

ಅಪು, ಉಪು, ಅವು, ಉವು, ಅಹು, ಉಹು, ಇವುಗಳ ಮೂಲರೂಪ ಗಳು **ಪು, ಹು, ವು.** ಅರಿ—ಅರವು—ಅರಹು—ಅರಿವು—ಅರುಹು—ಅರುವು. ಅಳೆ—ಅಳವು. ಸೆಳೆ—ಸೆಳವು. ನೆನೆ—ನೆನಪು—ನೆನವು—ನೆನಹು. ಬರ್—ಬರವು. ಒನೆ—ಒನಪು. ಬಿಗಿ—ಬಿಗವು—ಬಿಗುವು—ಬಿಗುಹು. ಮುದಿ—ಮುಪ್ಪು. ಕಾ—ಕಾಪು—ಕಾಹು—ಕಾವು—ಕಾಯ್ಪು. ಮೇ—ಮೇವು—ಮೇಪು. ನೋ—ನೋವು. ಓ—ಓಪು. ಕೂರ್—ಕೂರ್ಪು. ನುಣ್—ನುಣ್ಪು. ಚೆಲ್—ಚೆಲುವು. ಹೊಳೆ—ಹೊಳಪು. ಹಸಿವು. ದಣಿವು

ಅರ ಎತ್ತು—ಎತ್ತರ. ಉಬ್ಬು—ಉಬ್ಬರ.

ಅಲು ಕಾ—ಕಾವಲು, ಬೀಳು—ಬೀಳಲು (ಬಿಳಲು), ತೂಂಗು—ತೂಂಗಲು, ಮುಗ್ಗು—ಮುಗ್ಗಲು, ವಿಾಸು—ವಿಾಸಲು, ಒಕ್ಕು—ಒಕ್ಕಲು, ಅಳು—ಅಳಲು.

ಅಹ, ಹ, ಹು. ಬರೆ—ಬರೆಹ, ತೊರೆ—ತೊರೆಹ, ಬಲ್—ಬಲುಹು.

ಅಳ ಹೆಚ್ಚು—ಹೆಚ್ಚಳ, ಮುಚ್ಚು—ಮುಚ್ಚಳ, ಇಕ್ಕು—ಇಕ್ಕಳ.

ಆಯು ಉಳಿ—ಉಳಿತಾಯು, ಒತ್ತು—ಒತ್ತಾಯು.

ಆಳಿ ಓದು—ಓದಾಳಿ. ಏರು—ಏರಾಳಿ.

ಇ ಉಣ್—ಉಣಿ, ಪೋಲು—ಪೋಲಿ, ಮುದುಡು—ಮುದುಡಿ, ಹೆಣದಿನಿ, ದನಗಾಹಿ. ಅಳಿ—ಅಳವಿ. ಕೊಳ್—ಕೊಳವಿ. ಉಡು—ಉಡಿ. ಬಡ್ಡು—ಬಡ್ಡಿ. ತಳ್ಳು—ತಳ್ಳಿ.

ಇಕೆ ಹೇಳು—ಹೇಳಿಕೆ, ನಾಚು—ನಾಚಿಕೆ, ಬೇಡು—ಬೇಡಿಕೆ.

ಇಗ ಊಳು—ಊಳಿಗ (ಚಾಕರಿ).

ಇಗೆ ಏಳು—ಏಳಿಗೆ, ಉಬ್ಬು—ಉಬ್ಬಿಗೆ, ತೆರು—ತೆರಿಗೆ, ತೊಡು—ತೊಡಿಗೆ, ಒಪ್ಪು—ಒಪ್ಪಿಗೆ, ಕೊಡು—ಕೊಡಿಗೆ, ಮೆಚ್ಚು—ಮೆಚ್ಚಿಗೆ, ಮುತ್ತು—ಮುತ್ತಿಗೆ, ಹೇಸು—ಹೇಸಿಗೆ, ಹೊಲಿ—ಹೊಲಿಗೆ, ಮುಚ್ಚು—ಮುಚ್ಚಿಗೆ.

ಇಲು ಒಣಗು—ಒಣಗಿಲು, ಕೊಯ್—ಕೊಯಿಲು—ಕೊಯ್ಲು. ಒಟ್ಟು—ಒಟ್ಟಿಲು, ತೊಟ್ಟು—ತೊಟ್ಟಿಲು, ಮಿಗು—ಮಿಗಿಲು, ಸೋಗು—ಸೋಗಿಲು, ಸಡಿ—ಸಡಿಲು (ಸರಿ+ಲು).

ಇಸು, ಸು ತಿನ್—ತಿನಿಸು, ಮುನಿ—ಮುನಿಸು, ಹೊಲಸು, ಬಿರುಸು.

ಉಕ ಕುಡಿ—ಕುಡುಕ, ಮುರಿ—ಮುರುಕ.

ಎ ಕೊಲ್—ಕೊಲೆ, ಉರುಬು—ಉರುಬೆ. ನಿಲ್—ನೆಲೆ, ನಗು—ನಗೆ, ಅರಟು—ಅರಟೆ.

ಕುಳಿ ಅಂಜು—ಅಂಜುಕುಳಿ, ತಿರಿ—ತಿರುಕುಳಿ.

ಕೆ ಕಲಿ—ಕಲಿಕೆ, ತಾಳ್—ತಾಳ್ಕೆ, ಅರಿ-ಅರಿಕೆ, ಬೆರೆ-ಬೆರಕೆ, ಹಿಡಿ—ಹಿಡಿಕೆ, ಎಣಿಸು—ಎಣಿಕೆ, ಉಳಿ-ಉಳಿಕೆ, ಏರ್-ಏರ್ಕೆ, ಆಳ್-ಆಳ್ಕೆ, ಪೇಳ್-ಪೇಳ್ಕೆ, ತೆರಳ್-ತೆರಳ್ಕೆ.

ಗೆ ನಡಿ-ನಡಿಗೆ, ಹಬ್ಬು-ಹಬ್ಬುಗೆ, ಸುಲಿ-ಸುಲಿಗೆ, ಬೇ—ಬೇಗೆ.

ಬುರುಕ ಅಂಜು—ಅಂಜುಬುರುಕ.

ಮೆ ಒಲಿ-ಒಲ್ಮೆ (ಒಲಿಮೆ-ಒಲುಮೆ), ಬಲಿ-ಬಲ್ಮೆ (ಬಲಿಮೆ-ಬಲುಮೆ) ಅರಿ-ಅರಿಮೆ, ಮೇಲ್-ಮೇಲ್ಮೆ, ಕೀಳ್-ಕೀಳ್ಮೆ, ಜಾಣ್-ಜಾಣ್ಮೆ ಕಡಿ-ಕಡಿಮೆ.

ವಣಿ, ವಣಿಗೆ ಉರಿ-ಉರವಣಿ-ಉರವಣಿಗೆ, ಬರೆ-ಬರವಣಿ-ಬರವಣಿಗೆ.

ವಳಿ ನಡಿ—ನಡವಳಿ (ನಡಾವಳಿ), ಸಲ್ಲು-ಸಲುವಳಿ (ಸಲ್ವಳಿ), ಹಿಡಿ—ಹಿಡಿವಳಿ (ಒಕ್ಕಲುತನ).

ವಾಳ ಹಾರು—ಹಾರುವಾಳ (ರತಿಯನ್ನು ಬಯಸುವುದು), ಆಕೆ (ಆರ್ಕೆ) —ಆಕೆವಾಳ.

ತನ ಮನೆ-ಮನೆತನ, ಬಡ-ಬಡತನ, ನಾಯಿ-ನಾಯತನ. ಹೊಸ-ಹೊಸತನ.

ವೆ ಎಳವೆ, ಬಾಳುವೆ.

ತದ್ಧಿತ ಪ್ರತ್ಯಯಗಳು.

ಶೀಲ, ಗುಣ, ಸ್ವಭಾವದಲ್ಲಿ,

ಅ ಜಾಣ. ಕುಂಟ.

ಇ ಕೆಲಸಿ. ಹೋರಿ. ಉಣಿ. ವಿಜ್ಞಾನಿ.

ಕ ಕೊಳಕ. ಕುಡುಕ. ಮುದುಕ.

(ಇ) ಗ ಸುಳ್ಳಿಗ. ಪ. ಟೊಣಪ. ಯು. ಎಳೆಯ, ಹಿರಿಯ, ಇನಿಯ.

ಆಡಿ ಉಂಡಾಡಿ. ನಾಡಾಡಿ.
ಆಳಿ ಓದಾಳಿ. ಮಾತಾಳಿ. ಕೇಡಾಳಿ. ಜೂದಾಳಿ.
ಉಳ ಮರುಳ.
ಕುಳಿ ಓಡುಕುಳಿ.
ಗುಳಿ ಲಂಚಗುಳಿ. ಸಾಲಗುಳಿ. ಆಟಗುಳಿ.
ಕೋರ ಚಾಡಿಕೋರ.
ತಿನಿ ಲಂಚದಿನಿ.

ಉಳ್ಳವನು ಎಂಬ ಅರ್ಥದಲ್ಲಿ:

ಇಗ ರೊಕ್ಕಿಗ, ಜೇನಿಗ, ಸೊಗಸಿಗ.
ಯು ಒಡೆಯ (ಒಡಲೆಯನ್ನುಳ್ಳವ).
ವಂತ ಬುದ್ಧಿವಂತ, ಹಣವಂತ, ಗುಣವಂತ, ಕೆಲಸವಂತ, ಮಾನವಂತ. ಲಕ್ಷಣವಂತ.
ಸ್ತ(ಸ್ಥ) ನಂಬಿಗಸ್ತ, ರೊಕ್ಕಸ್ತ (ರೊಕ್ಕಸ್ಥ).
ದಾರ ಹಕ್ಕುದಾರ.

ಇಲ್ಲದವ, ಹಾಳುಮಾಡುವನೆಂಬ ಅರ್ಥದಲ್ಲಿ:

ಇಲಿ ನಾಣಿಲಿ, ಪಲ್ಲಿಲಿ.
ಕುಲಿ ಅರಗುಲಿ.
ಕೇಡಿ ಮಾನಗೇಡಿ.

ಅದರಲ್ಲಿ ಇರುವವ ಎಂಬಲ್ಲಿ:

ಇಲ ಗಾವಿಲ, ನಾವಿಲ.
ಇಗ ಬಾಗಿಲಿಗ, ಊರಿಗ, ಅಂಬಿಗ, ಕಂನಾಡಿಗ.
ಉಳಿಗ ಮಾತುಳಿಗ, ಕಬ್ಬುಳಿಗ.
ಕಾರ, ಗಾರ ಮಾತುಗಾರ.
ಇಚ ಅಲರಿಚ (ಬ್ರಹ್ಮ), ಒಡಲಿಚ (ಕಾಮ).

ಒಂದರಲ್ಲಿ 'ಪಿರಿದು ವರ್ತಿಪ'ನೆಂಬಲ್ಲಿ, ಅತ್ಯಂತಾಸಕ್ತಿಯುಸಂ ತೋರುವಲ್ಲಿ.

ಆಳಿ ಮಾತಾಳಿ.
ಕ ತಿರುಕ.

ಗ ಮಾತುಗ, ಊರುಗ, ಮಣ್ಣಿಗ, ಲಂಚಗ.

ಇಗ ಕೇಡಿಗ, ತಿನಿಸಿಗ.

ಕುಟಿಗ ಕಲ್ಲುಕುಟಿಗ.

ಬಡಕ ಲಂಚಬಡಕ.

ಬಕ್ಕ ಕೂಳಬಕ್ಕ, ತಿನಿಸುಬಕ್ಕ.

ಇದರಿಂದಲೆ ಜೀವಿಸುವನೆಂಬಲ್ಲಿ:

ಉಣಿ ಬಂಡುಣಿ (ತುಂಬಿ), ಎಲರುಣಿ (ಹಾವು).

ಉಳಿಗ ದೇವುಳಿಗ.

ವಣಿಗ ಲಂಚವಣಿಗ, ಸಾಲವಣಿಗ.

ಇದು ಅವರ ಉದ್ಯೋಗವೆಂಬಲ್ಲಿ:

ಅಟಿಗ ದೀವಟಿಗ, ಮಾವಟಿಗ.

ಆಡಿಗ ಹಾವಾಡಿಗ.

ಅಡಿಗ ಹೂವಡಿಗ (ಹೂವಾಡಿಗ)

ಆಯ್ತ ಕಲ್ಲಾಯ್ತ (ಕಲ್ಲಿನ ಅಧಿಕಾರಿ), ಅಚ್ಚುಳಾಯ್ತ (ಪರಿವಾರದವ).

ಆಯ್ಲ ಘೋಳಾಯ್ಲ (ಘೋಡಾ+ಆಯ್ಲ–ರಾವುತ). ಪುಗ್ಗಾಯ್ಲ (ಗರ್ವಿತ)

ಆರ ಕಮ್ಮಾರ (ಕಮ್ಮ–ಕುಲುಮೆ). ಕುಂಬಾರ.

ಇಗ ತೋಟಿಗ, ಕಮತಿಗ (ಕಾಮತ್–ಬೇಸಾಯ ಮಾಡುವವ) ಗಾಣಿಗ, ಕಬ್ಬಿಗ.

ಕಾರ, ಗಾರ. ಅಂಗಡಿಕಾರ, ಮಾಲೆಗಾರ, ಕೂಲಿಕಾರ, ಬಂಡಿಕಾರ, ಚಿತ್ರಗಾರ, ಸುಳ್ಳುಗಾರ, ನಗೆಕಾರ, ಬೇಟೆಗಾರ, ಮಾಲೆಗಾರ, ಸುಣ್ಣಗಾರ, ಮೀನುಗಾರ.

ವಡಿಗ ಕಂಚುವಡಿಗ, ಮಾಲೆವಡಿಗ.

ವಳ, ವಾಳ (ವಳ್ಳ) ಗೋವಳ, ಬಿಜ್ಜೆವಳ (ವಿದ್ವಾಂಸ), ತೋಟವಾಳ (ತೋಟಿಗ–ತೋಟ ಮಾಡುವವ), ಸೆಜ್ಜೆವಳ್ಳ (ಶಯ್ಯಾ ಮಂದಿರದ ಅಧಿಕಾರಿ), ಕಂಪುವಳ (ಗಾಳಿ).

ಸ್ತ್ರೀ ಪ್ರತ್ಯಯಗಳು

ಇ ಅರಸಿ, ಕಿವುಡಿ, ಮೂಕಿ, ಹುಡುಗಿ, ಪ್ರೌಢಿ, ರಂಗಿ (ರಂಗ), ರಾಮಿ (ರಾಮ), ಬಡವಿ, ಕರಿಕಿ (ಕರಿಕ), ಕುವರಿ, ಕುಕ್ಕುಟಿ (ಹೆಣ್ಣು ಕೋಳಿ), ಕುರಂಗಿ (ಹೆಣ್ಣು ಜಿಂಕೆ), ಚಂಡಿ (ಚಂಡ) (ಪಾರ್ವತಿ).

ಇತಿ ಅರಸಿತಿ (ಅರಸ), ಬೀಗಿತಿ (ಬೀಗ).

ಗಿತ್ತಿ ಕಳಸಗಿತ್ತಿ, ಕುಂಬಾರಗಿತ್ತಿ, ಡೊಂಬರಗಿತ್ತಿ (ಡೊಂಬರಾಟದವಳು) ಕುಟಿಲಗಿತ್ತಿ (ಮೋಸಮಾಡುವವಳು), ಸೂಲಗಿತ್ತಿ (ಹೆರಿಸುವವಳು) ಪುರೋಹಿತಗಿತ್ತಿ (ಪುರೋಹಿತೆ).

ಎ ಬಾಲೆ, ಜಾಣೆ, ಚನ್ನೆ (ಚಲುವೆ), ಸುತೆ, ಚದುರೆ (ನಿಪುಣೆ), ಕಾದಲೆ (ಪ್ರಿಯೆ), ಊರಿಟೆ (ಊರಿನಲ್ಲಿರುವವಳು), ಅಚ್ಚುಳಾಯ್ತೆ (ಬಾಗಿಲು ಕಾಯುವವಳು), ನಲ್ಲೆ (ಪ್ರಿಯೆ), ಮನದನ್ನೆ (ಪ್ರಿಯತಮೆ), ಲಂಚವಣಿಗೆ, ಬುದ್ಧಿವಂತೆ, ಕೆಲಸವಂತೆ, ಲಿಂಗಾಯಿತೆ, ಚಪಲೆ (ಚಂಚಲ ಸ್ತ್ರೀ).

ತಿ ಅರಸತಿ, ಗೊಲ್ಲತಿ, ಗೌಡತಿ, ಬೀಗತಿ, ಗೆಳತಿ, ಹೊಲತಿ.

(ಆರ) ಉಪ್ಪಾರ್ತಿ (ಉಪ್ಪು ಮಾಡುವವಳು- ಗೋಡೆ ಕಟ್ಟುವವಳು), ಕುಂಬಾರ್ತಿ.

(ಕಾರ) ಕೂಲಿಕಾರ್ತಿ, ಅಂಗಡಿಕಾರ್ತಿ, ಥೈಕಾರ್ತಿ, ಗಾಡಿಕಾತಿ (ವಿಲಾಸವತಿ), ಬಿಂಕಕಾತಿ (ಗರ್ವಿಷ್ಠೆ).

(ಗಾರ) ಆಟಗಾರ್ತಿ, ಪಾಲುಗಾರ್ತಿ, ತಂತ್ರಗಾರ್ತಿ, ಬಳೆಗಾರ್ತಿ, ಮಾಲೆಗಾರ್ತಿ (ಹೂವಿನ ಮಾಲೆ ಮಾಡುವವಳು), ಒಗಳಗಾತಿ, ಕೋಪಗಾತಿ, ತಿಂಡಿಗಾತಿ, ವಿನೋದಗಾತಿ, ಮಿಟಗಾರ್ತಿ.

(ವಳ) ಮಡಿವಳ್ತಿ, ಪೂವಳ್ತಿ, ಗೋವಳ್ತಿ (ಗೋಪಕಾಮಿನಿ), ಮಾಸವಳ್ತಿ (ವೀರನಾರಿ), ಅಡುವಳ್ತಿ (ಅಡುಗೆಯವಳು).

ಸಾನಿ ಗೌಡಸಾನಿ (ಹಳ್ಳಿಯ ಮುಖ್ಯಸ್ಥೆ), ಮಂತ್ರಸಾನಿ (ಶಿಶುವಿಮೋಚನ
(ಸ್ವಾಮಿನಿ) ವಿದ್ಯೆ ಬಲ್ಲವಳು—ಸೂಲಗಿತ್ತಿ.)

ಳು ಜಮೀನುದಾರಳು, ಇನಿಯಳು (ಪ್ರಿಯೆ), ಕಿರಿಯಳು, ಒಳ್ಳಿದಳು, ಎಳೆಯಳು, ಇಮ್ಮಿದಳು (ಚೆಲುವೆ).

ಣಿ ಜಮೀನದಾರಿಣಿ, ಕರಿಣಿ(ಹೆಣ್ಣಾನೆ), ಜೋಗಿಣಿ(ಭಿಕ್ಷುಣಿ, ತಪಸ್ವಿನಿ)

ಭಾವವಾಚಕ ಪ್ರತ್ಯಯಗಳು

ಇಕೆ ಉನ್ನತಿಕೆ, ಗೌಡಿಕೆ, ಬ್ರಾಹ್ಮಣಿಕೆ, ಗರುವಿಕೆ, ಉಪ್ಪಾರಿಕೆ, ಕುಂಬಾರಿಕೆ, ಕೂಲಿಕಾರಿಕೆ, ದೊಡ್ಡಸ್ತಿಕೆ.

ಕೆ ಮುಡಿಕೆ, ಕಾಣ್ಕೆ, ತೆರಳ್ಕೆ, ತೋರ್ಕೆ.

ಉ ಕುಂಟು, ಕುರುಡು, ಕಿವುಡು, ಉಗ್ಗು, ಸಿಗ್ಗು.

ತನ ಕಳ್ಳತನ, ದೊರೆತನ, ದಡ್ಡತನ, ಬ್ರಾಹ್ಮಣತನ, ಕುರುಬತನ, ಗೆಳೆತನ, ಒಡೆತನ, ಹಿರಿಯತನ.

ಗೆ ಉಡುಗೆ, ತೊಡುಗೆ, ಬಿಸುಗೆ.

ಪು ಬಲ್ಪು, ಮೆಲ್ಪು, ತಣ್ಪು, ನುಣ್ಪು, ಕಪ್ಪು (ಕರಿದು+ಪು-ಕರ್ಪು), ಬಿಳ್ಪು, ಪಡೆಪು, ಕಡುಪು, ಕೆಂಪು (ಕೆಚ್ಚನೆ+ಪು).

ಮೆ ಬಲ್ಮೆ, ಜಾಣ್ಮೆ, ಕಡುಮೆ, ಮೈಮೆ, ಪೆರ್ಮೆ.

ಶಬ್ದಗಳ ಮುಂದೆ ಬರುವುವು

ಅನಕ ಮಾಡುವನಕ.

ಅನ್ನ (ಅಂತಹ, ಆಗಿರುವಂತಹ) ನೆಟ್ಟನ್ನ, ದಪ್ಪನ್ನ, ಬೆಚ್ಚನ್ನ, ಬೆಳ್ಳನ್ನ, ದುಂಡನ್ನ, ಮನದನ್ನ, ಬರುವನ್ನರು.

ಆಡು ಹೋಗಾಡು, ಓಡಾಡು, ಕೊಂಡಾಡು, ಕೇಳಾಡು, ಅಲ್ಲಾಡು, ನೇತಾಡು, ಬೀಸಾಡು, ಕುಣಿದಾಡು, ಹಾರಾಡು.

ಆರೆ (ತಣಿಯುವ ವರೆಗೆ, ಸಾಕಾಗುವ ವರೆಗೆ). ಮನಸಾರೆ, ಬಾಯಾರೆ, ಕಣ್ಣಾರೆ, ಮನವಾರೆ.

ಇಡು ಗೋಳಿಡು, ಮೊರೆಯಿಡು, ದಾಳಿಡು, ಬೊಬ್ಬಿಡು, ಕೂಗಿಡು, ಊಳಿಡು, ಕಾಪಿಡು, ಮಾಡಿಡು, ಬರೆದಿಡು.

ಪಡು ಸುಖಪಡು, ಆಸೆಪಡು.

ಕೊಳ್ಳು (ಧರಿಸು, ಸ್ವೀಕರಿಸು, ಹೊಂದು, ಪಡೆ, ತನಗಾಗಿ ಮಾಡು) ಕಳಕೊಳ್ಳು, ಬರಕೊಳ್ಳು, ತಕ್ಕೊಳ್ಳು, ಇದಿರುಗೊಳ್ಳು, ದೊರೆಕೊಳ್, ಅಸುಂಗೊಳ್, ಬಿಲ್ಗೊಳ್

ಇರು ತಿಂದಿರು.

ಬಿಡು ಮಾಡಿಬಿಡು.

ಹೋಗು ಹಾರಿಹೋಗು.
ಹತ್ತು ಬರಹತ್ತು.
ಇಸು (ಸು-ಚು) ಹಿಂದಿಸು-ಹಿಂಚು, ಕತ್ತರಿಸು.

ಶಬ್ದಗಳ ಹಿಂದೆ ಬರುವುವು.

ಒಡ (ನೆ) (ಸಂಗಡ. ಸಹ) ಒಡನಾಡು, ಒಡನಾಟ, ಒಡಗೂಟ, ಒಡವಳಿ, ಒಡನುಡಿ, ಒಡವೆರೆ.

ಕಡು (ಕಟ್) (ಅತ್ಯಂತ) ಕಡುನಿಂಚು, ಕಡುದಿಟ್ಟ, ಕಡುಚೆಲುವ, ಕಡುಟಕ್ಕ, ಕಡು ಸಡಗರ, ಕಡುಲಾಗು, ಕಡುನಾಲಿಗೆ, ಕಡುಗೆಲಸಿ, ಕಟ್ಟಚ್ಚರಿ, ಕಟ್ಟರಸು, ಕಟ್ಟುತ್ತರ, ಕಟ್ಟವಸರ, ಕಟ್ಟಾಳು, ಕಟ್ಟಿರುವೆ, ಕಟ್ಟಿದಿರು, ಕಡುಗಲ್-ಕಗ್ಗಲ್ಲು.

ಕಗ್ (ಕರಿ-ದು) (ಕೇಡಿನ, ಅಪಾಯಕಾರಕ) ಕರಿಬಾಯಿ, ಕಗ್ಗಾಡು.

ಕಾ-ಕಾಡು (ಹಾಳು, ಹೊಲ್ಲ) ಕಾ ಬಾಳೆ, ಕಾಡುಮರ, ಕಾಪುರುಷ.

ಮರು—ಮಾರು (ಮತ್ತೆ, ತಿರುಗಿ, ಪ್ರತಿ) ಮರುಮಾತು, ಮಾರುತ್ತರ, ಮಾರ್ದನಿ, ಮಾರ್ಗೊಳ್ಳು

ಪಡೆ— (ವಿಶೇಷ, ಹೆಚ್ಚಿನ) ಪಡೆಮಾತು.

ಹುಸಿ, ಸುಳ್ಳು (ಗಭೀರ ಸ್ವರೂಪದ್ದಲ್ಲ; ಕೇವಲ ಔಪಚಾರಿಕ, ವಿನೋದಾತ್ಮಕ) ಹುಸಿಗಾಳಿಗ, ಹುಸಿನಗು, ಹುಸಿಮಾತು, ಹುಸಿಫಲ.

ಕಿರಿದೆಂಬಲ್ಲಿ:

ಗುಬ್ಬಿ ಗುಬ್ಬಿಬಾಳೆ, ಗುಬ್ಬಿಬಳೆ, ಗುಬ್ಬಿಬೆಳಸು.
ಚಿಕ್ಕ ಚಿಕ್ಕಪ್ಪ, ಚಿಕ್ಕಮ್ಮ
ಚಿಟ್ಟಿ ಚಿಟ್ಟಿಲಿ.
ಕಿರು ಕಿರುನಗೆ, ಕಿರುಮನೆ, ಕಿರುದಿನ, ಕಿರುಗೂಸು, ಕಿರುಗೂಳಿ.
ಬಡ ಬಡಮಾತು, ಬಡದಾಸ, ಬಡದವಸಿ.

ಹಿರಿದೊಂಬಲ್ಲಿ:

ಆನೆ ಆನೆಬಾಗಿಲು.
ಹಿರಿ ಹೆಮ್ಮರ, ಹೆಬ್ಬಾವು.
ಮಯ ನೀರಮಯ, ಹೆಣಮಯ.

ಅಭ್ಯಾಸ ೧.

೧. ಧ್ವನಿಸಾಮ್ಯವುಳ್ಳ ಶಬ್ದಗಳು.

ಕೈ— ಹಸ್ತ, ಕರ. (ಒಂದೇ ಕೈಯಿಂದ ಚಪ್ಪಾಳೆ ಸಾಧ್ಯವಿಲ್ಲ; ಆದ್ದರಿಂದ ಜಗಳವೂ ಸಾಧ್ಯವಿಲ್ಲ. -ಅನರ್ಥಕೋಶ). **ಗೈ**— ಮಾಡು. **ಜೈ**— ಜಯಿಸು, ಜೈಕಾರ. **ತೈ—ಥೈ**— ಕುಣಿತದ ಗತ್ತು ಇಲ್ಲವೆ ತಾಳ ಪದ್ಧತಿ. **ದೈ**— ದೇಹಿ, ದೀನ ಭಾವದ ಬೇಡಿಕೆ. (ದೇಹೀತಿ ವಚನಂ ಕಷ್ಟಂ: ಆದ್ದರಿಂದ, ದೈ ಎಂದು ಹೇಳಿದರೂ ಸಾಕಂತೆ- ಅ. ಕೋಶ). **ನೈ**— ನೆಯ್-ತುಪ್ಪ. **ಪೈ**— ಮೇಲಿನ, ಹೊರಗಿನ; ಚಿಕ್ಕ ನಾಣ್ಯ- ಮೂರು ಪೈಗಳು ಸೇರಿದರೆ ಒಂದು ಪಾವಾಣೆ. (ಪೈನೂನ್ಯ- ಕೈಯಲ್ಲೊಂದು ಕಾಸೂ ಇಲ್ಲ, ಎಂದು ಪಿಸುಣರು ಹೇಳುವ ಮಾತು- ಅ. ಕೋಶ). **ಬೈ**— ಮುಚ್ಚಿಡು, ಬಚ್ಚಿಡು, ಹುಗಿ, ದೂರು, ಬಾಚು, (ಬೈಗಳು- ತರ್ಕದಲ್ಲಿ ಸೋತಾಗ, ಇವೇ ನಮಗೆ ಆಧಾರ: ಹೇಡಿಗಳ ಅಸ್ತ್ರ- ಅ. ಕೋಶ). **ಭೈ**— ಅನುಕರಣೆಯ ಶಬ್ದ. **ಮೈ**—ಶರೀರ. **ರೈ**— ಸಂಪತ್ತು, ಬಂಗಾರ, ಕಾಂತಿ. **ವೈ**— ನಿಜವಾಗಿ, ಸಾಗಿಸು, ಅಪಹರಿಸು. **ಸೈ**— ಒಳಿತು, ಕ್ಷೇಮ, ಸರಿ, ಸಮ, ಕೊನೆ, ಮುಗಿತ, ಅಹುದಾದುದು. **ಹೈ**— ಉದ್ಗಾರ ಸೂಚಕ ಶಬ್ದ. **ಕಾವ**— ಕಾಯುವವ, ಯಮ, **ಆವ**— ಯಾವ. **ಗಾವ**— ಹಳ್ಳಿ, ಗ್ರಾಮ. **ಜಾವ**— ಯಾಮ, ಪ್ರಹರ, (ಜಾವಜ್ಜೀವ- ಜಾವಮಾತ್ರದ ಜೀವ ಉಳಿದಿರುವವನು, ಯಾವಜ್ಜೀವವೂ ಕೃತಜ್ಞನಾಗಿರುತ್ತೇನೆ ಎಂದು ಹೇಳುವುದು ಸುಲಭ- ಅ. ಕೋಶ). **ತಾವ**— ತಾಮ್ರ: ಕಾಗದದ ಹಾಳೆ. **ದಾವ**— ಕಾಡು, ಕಾಡುಗಿಚ್ಚು. **ನಾವ**— ನೌ, ನಾವು, ನಾವೆ-ಹಡಗ, ದೋಣಿ. **ಪಾವ**— ಪಾವಕ, ಅಗ್ನಿ, ಬೆಂಕಿ; ಒಂದು ಅಳತೆಯ ಹೆಸರು. (ಪಾವಕ- ನೈನಂ ದಹತಿ ಪಾವಕಃ ಎಂದು ಕಲ್ಹಾರಿನ ವಿಷಯವಾದ ಉಕ್ತಿ ಇದೆ; ಆದ್ದರಿಂದ, ಆತ್ಮನೂ ಕಲ್ಹಾರ್ ಸ್ವರೂಪ ಎಂದ ಹಾಗಾಯಿತು-

ಅ. ಕೋಶ). **ಬಾವ**— ಭಾಮ-ಭಾವ; ಅಕ್ಕನ ಗಂಡ. **ಭಾವ**— ಇರುವಿಕೆ, ತೋರುವಿಕೆ; ಹೃದಯ ಅವಸ್ಥೆಯನ್ನು ಹೊರಗೆಡವ ಮನೋವಿಕಾರ; ಅಭಿಪ್ರಾಯ; ಸಹೋದರಿಯ ಗಂಡ. **ಮಾವ**— ಹೆಂಡತಿಯ ತಂದೆ, ಗಂಡನ ತಂದೆ, ತಾಯಿಯ ಸಹೋದರ. (ಮೊದಲನೆಯ ದೀಪಾವಳಿಗೇನೆ ಮಾವ ದಿವಾಳಿ (ಗಾದೆ), ಗಂಡಹೆಂಡಿರ ಜಗಳದಲ್ಲಿ ಮಾವ ಬಡವಾದ (ಗಾದೆ), ಹೆಂಡತಿಯ ತಂದೆಯು ಹೆಸರಿಡುವ ಕಾಯಿ-ಆಮ್ರಫಲ- ಅ. ಕೋಶ). **ಯಾವ**— ಆವ, ಏತರ; ಜವೆಗೋದಿಗೆ ಸಂಬಂಧಿಸಿದ; ಅರಗು. **ರಾವ**— ರವ, ಸದ್ದು, ಶಬ್ದ, ಧ್ವನಿ, ಕೂಗು. **ಲಾವ**— ಕತ್ತರಿಸುವಿಕೆ **ಶಾವ**— ಶವಕ್ಕೆ ಸಂಬಂಧಿಸಿದ; ಮರಿ; ಪ್ರೇತ. **ಸಾವ**— ಸಾವು, ಸಾಯುವ. **ಹಾವ**— ಸಂಕೇತ, ಸನ್ನೆ, ನಟನೆ, ಶೃಂಗಾರ ಚೇಷ್ಟೆ, ಅಂಗಚೇಷ್ಟೆ. **ಯತಿ**— ಮುನಿ, ಸನ್ಯಾಸಿ; ಛಂದಶ್ಶಾಸ್ತ್ರದ ಮೇರೆಗೆ ಪದ್ಯದ ಚರಣವನ್ನು ಅನ್ನುವಾಗ ನಿಲ್ಲುವ ಸ್ಥಾನ. ('ಪಾಪಿ'ಯ ಪುನರ್ಮುದ್ರಿತ ಪ್ರತಿ- ಅ) **ಅತಿ**- ಬಹಳ, ವಿಶೇಷ. **ಕತಿ**- ಸಿಟ್ಟು, ಕೋಪ, ಕಿನಿಸು. **ಖತಿ**— ಖಾತಿ, ಸಿಟ್ಟು **ಗತಿ**— ಚಲನಸ್ಥಿತಿ, ದಾರಿ, ಸ್ಥಿತಿ. **ಜತಿ**— ಯತಿ, ಮುನಿ; ಸಂಗೀತದಲ್ಲಿ ಸರಾಗತೆ, ಹೊಂದಿಕೆ **ತತಿ**— ಸಾಲು, ಗುಂಪು, ಸಮೂಹ. **ನತಿ**— ಬಾಗುವಿಕೆ, ವಿನಯ, ನಮಸ್ಕಾರ. **ಪತಿ**— ಯಜಮಾನ, ಸ್ವಾಮಿ, ರಕ್ಷಿಸುವವ, ಗಂಡ, (ದಂಪತಿಗಳಲ್ಲಿ ದಂ ಕಳೆದುಕೊಂಡವನು- ಅ) **ಮತಿ**— ಜ್ಞಾನ, ತಿಳಿವಳಿಕೆ, ಬುದ್ಧಿ, ವಿಚಾರ. **ರತಿ**— ಪ್ರೀತಿ, ವಿಲಾಸ, ಶೃಂಗಾರ ಚೇಷ್ಟೆ; ಕೂಟ; ಕಾಮದೇವನ ಹೆಂಡತಿಯ ಹೆಸರು; ಗುಂಜಿ ಇಲ್ಲವೆ ರತ್ನತೂಕ. **ವತಿ**— ವಂತೆ; ಜೇಡಿಕೆ, ಕೇಳಿಕೆ, ಬಿನ್ನಹ; ಬಗ್ಗೆ, ಪರವಾಗಿ. **ಸತಿ**— ಸಾಧ್ವಿ, ಹೆಂಡತಿ; ಪಾರ್ವತಿ. **ಹತಿ**— ಹೊಡೆಯುವಿಕೆ, ಕೊಲ್ಲುವಿಕೆ, ಪೆಟ್ಟು.

ಯಮ— ನಿಗ್ರಹ, ಇಂದ್ರಿಯ ಕ್ರಿಯೆಗಳನ್ನು ತಡೆಯುವಿಕೆ; ಸತ್ತ ಬಳಿಕ ಮಾನವರ ಪುಣ್ಯಪಾಪಗಳ ವಿಚಾರಣೆ ಮಾಡಿ ದಂಡಿಸುವ ಅಧಿಕಾರಿ. (ಕರಿವ ಕಾದೆಣ್ಣೆಯೊಳ್ ಇರಿವ ಬೆಸೊಣ್ಣೆಳ್ ಕರುಳ ಹೆರೆವ ಬಾಯೊಳಗಲಗ ಸರಿವ, ಕರಗಸದಿಂ ಕೊರೆವ, ಕೆಯ್ ಕಾಲಳಂ ಮುರಿವ, ಕೆಂಗೇಡದೊಳು ಹುರಿವ- ಧರ್ಮಮೂರ್ತಿ- ಅ.) **ಅಮ**- ಅಮ್ಮ. (ಅಂಕಿತನಾಮದಲ್ಲಿ- ಚನ್ನಮ, ರಾಯಮ, ಲಿಂಗಮ); ಆಶ್ಚರ್ಯ ಮತ್ತು ದುಃಖ ಸೂಚಕ ಅವ್ಯಯ. **ಎಮ**— (ಸಂ) ಯಮ; ಒಳ್ಳೆಯದು, ನಿಜವಾಗಿ, (ಅಂಗೀಕಾರಾರ್ಥ),- (ನಿಮಗೆ

ಅಕ್ಕೆ, ಎಮ್ಮ, ಅಬ್ಜಗರ್ಭನ ಆಯುಂ ಶ್ರೀಯುಂ!, ಎಲ್ಲಂಗೆಮ್ ಎಲ್ಲ ಧನಮುಮನ್ ಎಲ್ಲ ಎಡೆಯೊಳಮ್ ಎಲ್ಲ ತೆರದೊಳಂ ಕುಡುಗೆ, ಎಮ!). **ಗಮ**— ಹೋಗುವ, ಚಲಿಸುವ. **ಘಮ**— ಅನುಕರಣಾವ್ಯಯ, (ಘಮೆಮ್ಬ). **ಜಮ**- (ಸಂ) ಯಮ. **ಟಮ**— ಅನುಕರಣಾವ್ಯಯ. (ಟಮಟಮ). **ಡಮ**— ಅನುಕರಣಾವ್ಯಯ. (ಡಮ ಡಂ. -ಡಮಡಮೆಮ್ಬ ಡಿಂಡಿಮಂ). **ತಮ**- ತಮಸ್ಸು, ಕತ್ತಲೆ, ಅಜ್ಞಾನ, ಪಾಪ; ಹೊಂಗೇಮರ. -ತಮ್ಮ-ಅವರ, ತಮಗೆ ಸಂಬಂಧಿಸಿದ. -ಅತ್ಯಂತ, ಅತಿ ಹೆಚ್ಚು. **ದಮ**— ಇಂದ್ರಿಯ ನಿಗ್ರಹ; ಶಿಕ್ಷೆ; ಸಾಧುಮಾಡುವಿಕೆ, ಪಳಗಿಸುವಿಕೆ. **ಧಮ**— ಊದುವ, ಬೀಸುವ. (ನಾಡಿಂಧಮ-ನಳಿಗೆಯ ಮೂಲಕ ಊದುವವ- ಅಕ್ಕಸಾಲಿಗ). **ನಮ**— (ಸಂ) ನಮಸ್, ವಂದನೆ, ನಮಸ್ಕಾರ. **ಮಮ**— ನನ್ನ. **ರಮ**— ಸಂತೋಷ ಪಡಿಸುವ, ಪ್ರಿಯ, ಮನೋಹರ, ಸೌಂದರ್ಯ, ಚೆಲ್ವಿಕೆ, ರಮ (ಪು), ರಮೆ (ಸ್ತ್ರೀ). **ಶಮ**— ಸ್ವಸ್ಥತೆ, ಶಾಂತಿ; ಮನೋನಿಗ್ರಹ, ಇಂದ್ರಿಯನಿಗ್ರಹ. **ಸಮ**— ಸಮಾನ, ಸರಿ, ಯೋಗ್ಯ; ಒಂದೇ ತೆರನಾದ; ಸರಳ, ಪ್ರಾಮಾಣಿಕ; ಒಳ್ಳೆಯ.

ನಾರಿ— ಹೆಂಗಸು, ಬಿಲ್ಲಿನ ಹೆದೆ, (ಯತ್ರ ನಾರ್ಯಸ್ತು ಪೂಜ್ಯಂ,(=ಸೊನ್ನೆ) ಎಲ್ಲಿ ನಾರಿಯರಿಲ್ಲವೋ, ತೆರಮಂತೆ ತತ್ರ ದೇವತಾಃ; ನಾರಿ ಮುನಿದರೆ ಮಾರಿ ಎನ್ನುತ್ತೇವೆ; ಆದರೆ ಕೊಂಡುಕೊಳ್ಳೋರು ಯಾರು?- ಅ.) **ಆರಿ**— ಆರೆ, ಆಣೆ-ಆರಿಕಲ್ಲು, ಆರೆಕಲ್ಲು, ಆಣೆಕಲ್ಲು-ಮೋಡಗಳಿಂದ ಬೀಳುವ ಹಿಮದ ಸಣ್ಣಕಲ್ಲು. **ಕಾರಿ**— ಕಪ್ಪು ನೆಲ; ನೀರಿನ ಒತ್ತು (A backwater- ಖಾಡಿ); ಒಂದು ಮುಳ್ಳಿನ ಗಿಡ, ದೋಣಿ, ನಾವೆ; ಮಾಡುವ. **ಖಾರಿ**— ಅಳತೆಯ ಒಂದು ಮಟ್ಟು; ಹದಿನಾರು ದ್ರೋಣಗಳಿಗೆ ಸಮಾನ, (ದ್ರೋಣಮಾನ-ಒಂದು ಅಳತೆ = 4 ಅಡಕಗಳು ಅಥವಾ 2 ಅಡಕಗಳು). **ಚಾರಿ**— ಉಪಾಯ, ಹಂಚಿಕೆ; ಗುರಿ, ಧ್ಯೇಯ; ಕ್ರಮ, ರೀತಿ, ನರ್ತನದ ಒಂದು ಸಂಚಾರ; ಯುಕ್ತಿ; ಅಗ್ಗ:-ನಡೆಯುವವ, ತಿರುಗುವವ- (ಸಂ) ಶಾರಿ. **ಜಾರಿ**— ಹಾದರಗಿತ್ತಿ; ಅಮಲು, ಅಧಿಕಾರ, ಚಲನೆ, ಚಾಲತಿ, ಅಮಲಿನಲ್ಲಿ ಇರೋಣ-ತರೋಣ, ಅಧಿಕಾರ ನಡೆಸೋಣ. **ತಾರಿ**— ನದಿ ದಾಟುವ ನಾವೆ, ದೋಣಿ, ಶಕುನ, ನೋಟ. **ದಾರಿ**— ಹಾದಿ, ಮಾರ್ಗ, ಎಡೆ, ಆಸ್ಪದ. **ಧಾರಿ**— ಧರಿಸುವವ, ಆಶ್ರಯ ಕೊಡುವವ, ಹಿಡಿವವ. **ಪಾರಿ**— ಹಾರಿ, ಕಬ್ಬಿಣದ ದಂಡ; ಲೋಟ, ಥಾಲಿ. **ಬಾರಿ**— ಸರದಿ, ಸಲ; ಸೂಳು, ಏಟು, ಬಾರು, ತೊಗಲಿನ ಪಟ್ಟಿ.

ಭಾರಿ— ಬಹಳ, ಅಧಿಕ, ಹೆಚ್ಚು, ದೊಡ್ಡ; ಗುಂಪು. **ಮಾರಿ**— ಕೊಲೆ, ಕೊಲೆಯ ಅಧಿದೇವತೆ; ಕಾಲರಾ ಬೇನೆ; ತೊಂದರೆ, ಹಿಂಸೆ, ಪೀಡೆ. (ಮಾರ ಮಾರಿಯನ್ನು ನೋಡಿ; ಹಾದಿದ್ದೆಲ್ಲ ಮಾರಿ ಪಾಲು (ಗಾದೆ), ಶತ್ರು ಪಕ್ಷದ ಫೈಟರ್ ವಿಮಾನಗಳು ಬಲವಾದರೆ- ಅ.) **ಯಾರಿ**— ಈರಿ, (A species of plant). (ಯಾರಿಯೆನೆ ಚಾರಮುಸ್ಕಡವೆುನಲಾ ಬುಗುರಿ- ಯಾರಿಯೆನೆ ಚರಮುಸ್ಕಂದೆಯೆನಲಾ ಬುಗುರಿ- ಈರಿಯೆನೆ ಬೇಲಮುಸ್ಕಂದೆಯೆನಲಾ ಬುಗುರಿ) **ವಾರಿ**— ನೀರು; ಬಾರಿ, ಸರತಿ. **ಶಾರಿ**— ಚದುರಂಗದ ಕಾಯಿ, ಪಗಡೆಯಾಟದ ಕಾಯಿ. **ಸಾರಿ** — (ಸಂ) ಶಾರಿ-ಲೆತ್ತ, ನೆತ್ತ; ಸರತಿ, ಬಾರಿ. **ಹಾರಿ**— ಕಬ್ಬಿಣದ ಕಂಬಿ-ಸಲಾಕಿ; ಆಕರ್ಷಕ; ಅಪಹರಿಸುವ, ಸಾರವುಳ್ಳ, ಸುಲಿವ.

೨. ಮೇಳ ನುಡಿಗಳು.

ಮಂದಿರ— ಗೃಹ, ಬೀಡು, ನಿಕೇತನ, ಆಲಯ, ನಿಲಯ, ಗೇಹ, ಮನೆ, ಭವನ, ವೇಶ್ಮ, ಸದ್ಮ, ನಿಶಾಂತ, ಸದನ, ನೆಲೆ, ಬೀಡಾರ, ಉದವಸಿತ, ವಸ್ತ್ಯ, ನಿಕಾಯ್ಯ, ಗುಡಾರ, ಚಪ್ಪರ, ಗುಡಿಸಲು.

ಕಡಲು— ಅಂಬುಧಿ, ಅಬ್ಧಿ, ಜಲಧಿ, ಜಡಧಿ, ಮುನ್ನೀರು, ವನಧಿ, ವಾರಿಧಿ, ವಾರಿನಿಧಿ, ಉದಧಿ, ಶರಧಿ, ಸಾಗರ, ಅಂಬೋಧಿ, ಸಮುದ್ರ, ಅಕೂಪಾರ, ಪಾರಾವಾರ, ಸರಿತ್ಪತಿ, ಉದನ್ವಂತ, ಸಿಂಧು, ಸರಸ್ವಂತ, ಅರ್ಣವ, ಅಮ್ಮಯ, ರತ್ನಾಕರ, ಜಲನಿಧಿ. ಯಾದಸಪತಿ, ಅಪಾಂಪತಿ.

ಅರಸ— ರಾಜ, ಪಾರ್ಥಿವ, ಅವನಿಪ, ಜನೇಶ್ವರ, ಧರಣೀಶ, ಧರಾವರ, ನೃಪ, ನರಪತಿ, ಭೂಪಾಲ, ಭೂಭುಜ, ಮನುಜೇಂದ್ರ, ಇಳೆಯಾಣ್ಮ, ನೆಲದೊಡೆಯ, ನೆಲದೆರೆಯ, ರಾಯ, ಮಹೀಪತಿ, ಭೂಪತಿ, ನರೇಂದ್ರ, ಇಳಾಧೀಶ, ಭೂಮೀಶ, ಜನಪ, ಧರಿತ್ರೀಪಾಲ, ನರನಾಥ, ಜನನಾಥ, ಭೂಕಾಂತ, ಪೃಥ್ವೀಶ, ಧರಿತ್ರೀಶ್ವರ, ರಾಟ್, ಭೂಪ, ಮಹೀಕ್ಷಿತ್, ಕ್ಷಮಾಭೃತ್.

ಪತಿ— ಗಂಡ, ಕಾಂತ, ಕಮಿತೃ, ರಮಣ, ಧವ, ಪ್ರಿಯ, ಅನುಕ, ವರಯಿತ, ಭರ್ತೃ, ದಯಿತ, ಇನ, ವಲ್ಲಭ.

ಮಗಳು— ಸುತೆ, ಪುತ್ರಿ, ಕುವರಿ, ತನಯೆ, ಆತ್ಮಜೆ, ದುಹಿತೃ.

ಆನೆ— ಗಜ, ಕರಿ, ಕುಂಜರ, ದ್ವಿರದ, ದ್ವಿಪ, ಇಭ, ವಾರಣ, ಸಾಮಜ, ದಂತಿ, ನಾಗ, ದಂತಾವಲ, ಹಸ್ತಿ, ಅನೇಕಪ, ಮತಂಗಜ, ಸ್ತಂಬೇರಮ, ಪದ್ಮಿ, ಯೂಥನಾಥ, ಯೂಥಪ, ಮದಕಲ, ಪ್ರಭಿನ್ನ, ಗರ್ಜಿತ, ಮತ್ತ.

ಮರ— ಕುಜ, ಭೂರುಹ, ಮಹೀರುಹ, ವೃಕ್ಷ, ತರು, ಕುಜಾತ, ಪಾದಪ, ಭೂಜ, ವಿಟಪಿ, ಶಾಖಿ, ಅನೋಕಹ, ಕುಟ, ಶಾಲ, ಪಲಾಶಿ, ದ್ರು, ದ್ರುಮ, ಅಗಮ.

ಕೂಸು— ಮಗು, ಶಿಶು, ಕಂದ, ಹಸುಳೆ, ಅರ್ಭಕ, ವತ್ಸ, ಪೋತ, ಪಾಕ, ಡಿಂಭ, ಪೃಥುಕ, ಶಾವಕ.

ಕುದುರೆ— ಅಶ್ವ, ತುರಗ, ತುರಂಗ, ವಾಜಿ, ಹರಿ, ತೇಜಿ, ವಾಹ, ವೀತಿ, ತುರಂಗಮ, ಘೋಟಕ, ಅರ್ವ, ಗಂಧರ್ವ, ಸೈಂಧವ, ಸಪ್ತಿ, ನರ.

ಕಮಲ— ಅರವಿಂದ, ಅಬ್ಜ, ಪಂಕಜ, ಜಲಜ, ಅಂಬುಜ, ಸರಸಿಜ, ವನಜ, ನಳಿನ, ಅಂಬುರುಹ, ರಾಜೀವ, ಜಡಜ, ಜಲರುಹ, ಶತಪತ್ರ, ಅಂಭೋಜ, ತಾವರೆ, ವನರುಹ, ಸರೋಜ, ಕಂಜ, ಪದ್ಮ, ಮಹೋತ್ಪಲ, ಸಹಸ್ರಪತ್ರ, ಕುಶೇಶಯ, ಪಂಕೇರುಹ, ತಾಮರಸ, ಸಾರಸ, ಸರಸೀರುಹ, ಪುಷ್ಕರ, ಪುಂಡರೀಕ, ಅಂಭೋರುಹ, ಕೋಕನದ, ಬಿಸಪ್ರಸೂನ.

೩. ಶಬ್ದಗಳ ವಿವಿಧಾರ್ಥಗಳು

ಅಂಬರ— ಬಟ್ಟೆ, ವಸ್ತ್ರ, ಪೋಷಾಕು; ಆಕಾಶ, ವಾತಾವರಣ; ಹತ್ತಿ, ಅರಳೆ; ಬಿಂಗ, ಅಭ್ರಕ; ಕುಂಕುಮಕೇಸರ; ನೆರೆಹೊರೆ; ಪಾಪ.

ಅಡಿ— ಪಾದ, ಬುಡ, ತಳ, ಅಂಘ್ರಿ; ೧೨ ಇಂಚಿನ ಅಳತೆ; ಸನ್ನಿಧಿ; ಹಂಗು; ಕಷ್ಟ, ಸಂಕಟ; ಅಡಚಣೆ: ಬಾಗಿಲು. (ಅಡಿಯ ಮುಂದಿಡೆ ಸ್ವರ್ಗ! ಆದ್ದರಿಂದ, ಸಾಮಾನ್ಯವಾಗಿ ಎಲ್ಲರೂ ನಿಂತಲ್ಲೇ ನಿಂತಿರುತ್ತಾರೆ; ಕೆಲವರು ಹಿಂದಕ್ಕೆ ಸರಿಯುವುದೂ ಉಂಟು— ಅ. ಕೋಶ).

ಇಂದ್ರ— ದೇವೇಂದ್ರ; ಒಡೆಯ, ಅರಸ; ಶ್ರೇಷ್ಠ, ಮುಖ್ಯ: ಮೇಘ; ರಾತ್ರಿ; ಮಹತ್ವ; ಬಲಗಣ್ಣಿನ ಬೊಂಬೆ.

ಅರಿ— ಶತ್ರು, ವೈರಿ, ಹಗೆ; ಖದಿರ; ಚಕ್ರ; ಒಡೆಯ, ಯಜಮಾನ; ವಾಯು; ಭಕ್ತ— ತುಂಡುಮಾಡು, ಕತ್ತರಿಸು, ಪುಡಿಮಾಡು, ನಾಶಮಾಡು. ಕಲ್ಲ ಮೇಲೆ ತಿಕ್ಕು, ಕಾಲಿನಿಂದ ಹತ್ತಿ ಕಾಳು ತೆಗೆ, ಹೊಲಸು ತೆಗೆ: ತೀಡು,

ಜ್ಞಾನಹೋದು; ಕಣ್ಣಿನ ಒಂದು ಬೇನೆ; ಕೆಟ್ಟ ಧಾನ್ಯ.

ಗಾಡಿ– ಸೌಂದರ್ಯ, ಸೊಬಗು, ಸೊಗಸು, ಮನೋಹರತೆ, ಬೆಡಗು, ಚೆಲುವು, ಚೊಕ್ಕಟ, ಸುಖ; ಕೀರ್ತಿ; ಸುದೆಶೆ– ಶಕಟ, ಬಂಡಿ, ಚಕ್ಕಡಿ; ಗಾಲಿ-ನತ್ತು; ಬಣವೆ; ತೋಟ; ಶುಭ.

ಇನ– ಒಡೆಯ, ನಾಯಕ, ಅರಸ; ಪತಿ, ಗಂಡ; ಸೂರ್ಯ; ಹಸ್ತ ನಕ್ಷತ್ರ; ಪರಮಾತ್ಮ.

ಚಕ್ರ– ಗಾಡಿಯ ಚಕ್ರ, ಗಾಲಿ, ತಿಗುರಿ; ವರ್ತುಳಾಕಾರದ (ವಿಷ್ಣುವಿನ –ಕೃಷ್ಣನ) ಒಂದು ಆಯುಧ; ವೃತ್ತಾಕಾರ; ಆಧಿಪತ್ಯ, ರಾಷ್ಟ್ರ, ಆಡಳಿತೆ; ಸೈನ್ಯವನ್ನು ಯುದ್ಧಕ್ಕೊಡ್ಡುವ ಒಂದು ರೀತಿ, ವ್ಯೂಹ; ಚಕ್ರವಾಕ ಪಕ್ಷಿ; ಯುದ್ಧ; ನೀರಿನ ಸುಳಿ, ತಿರುಗಣಿ; ಸಮೂಹ, ಗುಂಪು; ಕ್ಷಿತಿಜ; ನಾಲ್ಕಾಣೆ, ಪಾವಲಿ;– ಕುಂಬಾರನ ಚಿಗರಿ; ಎಣ್ಣೇ ಗಾಣ; ಕಾವ್ಯ ವಿಭಾಗ; ಕೃತ್ರಿಮೋಪಾಯ.

ಚರಣ— ಕಾಲು, ಪಾದ, ಅಡಿ, ಹಜ್ಜೆ; ಚಲಿಸುವಿಕೆ, ಅಲ್ಲಾಡುವಿಕೆ, ಅಲೆಯುವಿಕೆ, ತಿರುಗಾಟ; ಪದ್ಯದ ಒಂದು ಸಾಲು (ಪಾದ); ತಿನ್ನುವಿಕೆ, ಮೇಯುವಿಕೆ; ಹಾಡುತ್ತ ಅಡ್ಡಾಡುವ ಒಂದು ಜನಗಳ ಗುಂಪು; ನಾಲ್ಕನೇ ಒಂದಂಶ, ಕಾಲು; ಓಟ; ಶಿಪಾಯಿ, ಪತ್ತಿ; ಕಿರಣ, ಕದಿರು; ಬೇರು. (ಚರಣಾಗತ– ಕಾಲಿಗೆ ಬಿದ್ದವ– ಅ. ಕೋಶ.)

ನಗ— ಪರ್ವತ; ಮರ; ಗಿಡ; ಸೂರ್ಯ; ಸರ್ಪ; ಏಳರ ಸಂಖ್ಯೆ; ಸ್ಥಿರ ಪದಾರ್ಥ– ಆಭರಣ, ಸರಕು, ಬದುಕು; ಹೇರು, ಒಂದು ಎತ್ತು ಹೊರುವಷ್ಟು ಭಾರ; ಒಂದು ಜಾತಿಯ ಹಡಗು.

ಸಿಂಗ— ಸಿಂಹ; ಕಾಮದೇವ; ಬಾಣ; ಪಶುಗಳ ಕೋಡು; (ಊದುವ) ಕೊಂಬು.

ಮಾಟ— ಮಾಡುವಿಕೆ, ಕೆಲಸ, ಕಾರ್ಯ, ಉದ್ಯೋಗ; ರಚನೆ, ರೀತಿ, ನಮೂನೆ, ಮಾದರಿ; ರೂಪ, ಆಕೃತಿ; ಸೌಂದರ್ಯ, ಚೆಲುವಿಕೆ; ದಗೆ, ಮೋಸ, ವಂಚನೆ, ಠಕ್ಕುತನ, ಕಪಟ; ಕ್ಷುದ್ರ, ಕೃತ್ರಿಮ, ಉಪದ್ರವಕಾರಕ ಮಂತ್ರ ತಂತ್ರ. (ಅಂಕಿ ಅಂಶಗಳಿಂದ ಯಾವ ಸಿದ್ಧಾಂತವನ್ನೂ ಸಾಧುವೆನಿಸುವ ಶಾಸ್ತ್ರ– ಅ. ಕೋಶ).

ಮತ— ಆಲೋಚನೆ, ಅಭಿಪ್ರಾಯ, ವಿಚಾರ, ದೃಷ್ಟಿ, ಮನಸ್ಸು; ಸಮ್ಮತಿ; ನಂಬಿದ ಧರ್ಮ, ಪಂಥ, ಕುಲ, ಜಾತಿ; ತತ್ವ; ಉದ್ದೇಶ, ಆಶಯ, ವೋಟು; ವಿಶ್ವಾಸ, ಭಕ್ತಿ; ತಿಳುವಳಿಕೆ. (ಮತ– ಲೋಕದಲ್ಲಾಗಿರುವ ಆಗುತ್ತಿರುವ ರಕ್ತಪಾತಕ್ಕೆಲ್ಲ ಮುಖ್ಯ ಕಾರಣ, ರಕ್ತಪಾತದಿಂದ ಸ್ವರ್ಗ ಸಿಗುತ್ತದೆ ಎಂದು ಬೋಧಿಸುವ ರೀತಿ- ಅ. ಕೋಶ. ವೋಟು– ದೇಶದ್ರೋಹ ಮಾಡಲು ನಮಗಿರುವ ಒಂದು ಅವಕಾಶ– ಅ. ಕೋಶ. ವೋಟರು - ಐದು ವರ್ಷಕ್ಕೊಮ್ಮೆ ಹಠಾತ್ತನೆ ದೊಡ್ಡ ಮನುಷ್ಯರಾಗುವ ಸಾಮಾನ್ಯ ವ್ಯಕ್ತಿಗಳು; ಯಾರೋ ಮೆಚ್ಚಿ ಮುಂದೆ ನಿಲ್ಲಿಸಿದವನನ್ನು ತನ್ನವನೆಂದೇ ಭಾವಿಸಿ ಮೆಚ್ಚುವವ)

ಬಲ— ತ್ರಾಣ, ಕಸುವು, ಶಕ್ತಿ, ದರ್ಪ; ಪಡೆ, ಸೈನ್ಯ; ಶರೀರ, ದಪ್ಪ; ರೂಪ, ಆಕಾರ, ವೀರ್ಯ; ರಕ್ತ; ಎಲೆ, ಚಿಗುರು; ಕಾಗೆ; ಬಲರಾಮ (ಸೀರಪಾಣಿ); ಬಲಾಸುರನೆಂಬ ದೈತ್ಯ; ಪ್ರಭಾವ; ಸಹಾಯ, ಸಹಾಯಿ, ಸಂಗಡಿಗ; ಇಂದ್ರಿಯ; ಯುದ್ಧ; ಆಹುತಿ; ಎಡಕ್ಕೆ ವಿರುದ್ಧವಾದ, ದಕ್ಷಿಣ ಭಾಗ; ಸೌಂದರ್ಯ; ಆಕಾಶ; ನೀರು. (ಬಲವಂತ— ಹಣವಂತ— ಅ. ಕೋಶ)

ವಂಶ— ಬಿದಿರು, ಗಂಟು; ವೇಣು, ಕೊಳಲು; ಬೆನ್ನೆಲುಬು; ಕುಲ, ಸಂತತಿ, ಮನೆತನ, ಕುಟುಂಬ; ಗುಂಪು; ಸಮೂಹ; ಕಾವು, ಹಿಡಿ; ಮಹಾತಪಸ್ಸು; ಒಂದು ತರದ ಕಬ್ಬು; ಸಾಲವೃಕ್ಷ; ಕಣಿಲೆ; ನೀರು; ಮುಳ್ಳುಮುತ್ತುಗ ಮರ. (ವಂಶಕ್ಷಯಃ– ಸಾಹಿತಿಗಳಿಂದಲೂ ಬರಹಗಾರರಿಂದಲೂ ಪತ್ರಿಕಾಕರ್ತರಿಂದಲೂ ಆಗುತ್ತಿರುವುದು ಇದೊಂದೇ— ಅ. ಕೋಶ)

ನರ— ಮನುಷ್ಯ; ಅರ್ಜುನ; ಒಬ್ಬ ಋಷಿ; ಕುದುರೆ; ಚತುರಂಗದ ಆಳು; ಸ್ನಾಯು.

ದಂಡ– ಕೋಲು, ಬಡಿಗೆ, ದೊಣ್ಣೆ, ಊರುಗೋಲು; ಶಿಕ್ಷೆ, ಜುಲ್ಮಾನೆ, ತಪ್ಪುಗಾಣಿಕೆ; ವ್ಯೂಹ; ಸೈನ್ಯ; ವ್ಯರ್ಥ ಖರ್ಚು; ಹರಿಗೋಲಿನ ಹುಟ್ಟು; ಕೋಲಿನ ಉದ್ದ ಒಂದು ಅಳತೆ, ನಾಲ್ಕು ಮೊಳ ಉದ್ದ; ದಂಟು; ಕಡಗೋಲು; ತಾವರೆ; ಸೊಂಡಿಲು; ನಾಲ್ಕು ಉಪಾಯಗಳಲ್ಲಿ ಒಂದು; ಅಪಮಾನ; ಯಮ; ಇಂದ್ರಿಯ ನಿಗ್ರಹ; ಸೂರ್ಯನ ಪಾರ್ಶ್ವ ಚರ; ಹಿಡಿ, ಕಾವು. (ದಂಡೋಪದಂಡ– ದೊಂಬಿ, ದೊಣ್ಣೆ ಸಹಿತ ಜನರು ನುಗ್ಗುವಿಕೆ– ಅ. ಕೋಶ. ದಂಡಂ— ದಂಡಂ ದಶಗುಣಂ ಭವೇತ್– ಆದ್ದರಿಂದ ಮಕ್ಕಳ ತಪ್ಪಿಗೆ ಹಿರಿಯರನ್ನು ದಂಡಿಸಬೇಕಾಗುತ್ತದೆ.— ಅ. ಕೋಶ)

ಜಡ– ಚಟುವಟಿಕೆಯಿಲ್ಲದಿರುವ, ಮಂದ, ಆಲಸ್ಯವುಳ್ಳ, ದಡ್ಡ, ಮೂಢ. ಹೆಡ್ಡತನ, ಮೂರ್ಖ; ಹಿಮ, ಚಳಿ, ತಂಪು, ತುಷಾರ, ಮಂಜು; ನೀರು; ಪರ್ವತ; ದ್ರವ್ಯ; ಯಜ್ಞಭೇದ; ಜ್ವರ, ಬೇನೆ; ಗಟ್ಟಿಯಾದ, ಭಾರವಾದ; ಮೂಗ, ಮಾತು ಬಾರದವ.

೪. ಮಾರು ನುಡಿಗಳು.

ಅಳು—ನಗು. ಮಿತ್ರ—ಶತ್ರು. ಬಡವ—ಬಗ್ಗ. ಬಡವ—ಭಾಗ್ಯವಂತ. ಬಡವ—ಬಲ್ಲಿದ. ಉನ್ನತಿ—ಅವನತಿ. ಮೂಡು—ಮುಳುಗು (ಮುಣುಗು). ಎಡ—ಬಲ. ಸುಖ—ದುಃಖ. ನರಕ—ಸ್ವರ್ಗ. (ಸ್ವರ್ಗ—ನರಕ). ತಗ್ಗು—ಹಿಗ್ಗು. (ಹಿಗ್ಗು—ತಗ್ಗು). ಆಗು—ಹೋಗು. ಮೇಲೆ—ಕೆಳಗೆ. ಸಿಹಿ—ಕಹಿ. ಹಗಲು—ಇರುಳು.

೫. ಅವಯವಾರ್ಥ.

ದ್ವಿಜ— ದ್ವಿ=ಎರಡು, ಜ=ಹುಟ್ಟಿದ. ಎರಡು ಬಾರಿ ಹುಟ್ಟಿದ, ತಾಯಿಯ ಹೊಟ್ಟೆಯಿಂದ ಒಮ್ಮೆ; ಉಪನಯನ ಸಂಸ್ಕಾರದಿಂದ ಮತ್ತೊಮ್ಮೆ ಹುಟ್ಟಿದವನು= ಬ್ರಾಹ್ಮಣ. **ಅಗ್ರಜ**— ಅಗ್ರ= ತುದಿ, ಮೊದಲು. ಜ= ಹುಟ್ಟಿದ. (ತನ್ನಿಂದ) ಮೊದಲು ಹುಟ್ಟಿದವನು– ಅಣ್ಣ. **ಅಂಬುಜ**—ಅಂಬು=ನೀರಿನಲ್ಲಿ. ಜ=ಹುಟ್ಟಿದುದು– ತಾವರೆ. **ಅಸುರ**— ಅ=ಅಲ್ಲ. ಸುರ=ದೇವತೆ. ದೇವತೆ ಅಲ್ಲದವನು– ರಾಕ್ಷಸ. **ಮನುಜ**— ಮನು= ಮಾನವ ಕುಲದ ಹಿರಿಯನು ಪ್ರಜಾಪತಿ. ಜ= ಹುಟ್ಟಿದ. ಮನುವಿನ ದೆಸೆಯಿಂದ ಹುಟ್ಟಿದವನು— ಮನುಷ್ಯ. **ಧರ್ಮನಂದನ**— ಧರ್ಮ=ಯಮ. ನಂದನ=ಮಗ. ಯಮನ ಮಗ— ಧರ್ಮರಾಯ. **ಮುರಹರ**— ಮುರ= ಮುರನೆಂಬ ರಾಕ್ಷಸ. ಹರ=(ಜೀವವನ್ನು) ಅಪಹರಿಸು– ನಾಶಮಾಡು. ಮುರಾಸುರನನ್ನು ಕೊಂದವನು– ಕೃಷ್ಣ. **ಅಗೋಚರ**— ಅ=ಅಲ್ಲ; ಅಭಾವ. ಗೋ=ಕಣ್ಣು. ಚರ= ಸರಿದಾಡುವ; ನಡೆದಾಡುವ. ಕಣ್ಣೊಳಗೆ ಸರಿದಾಡಲು ಅಭಾವವುಳ್ಳದ್ದು— ಕಣ್ಣಿಗೆ ಕಾಣಿಸದ, ತಿಳಿಯದ— ಅದೃಶ್ಯ. **ಉರಗಶಯನ**— ಉರ=ಎದೆ; ಹೊಟ್ಟೆ. ಗ=ಗಮಿಸು, ಹೋಗು. ಉರಗ=ಎದೆ (ಹೊಟ್ಟೆ) ಯಿಂದ ಹೋಗುವುದು– ಹಾವು. ಶಯನ=ಮಲಗುವಿಕೆ, ಹಾಸಿಗೆ. –ಹಾವಿನ ಹಾಸಿಗೆಯುಳ್ಳವ– ವಿಷ್ಣು. **ತನುಜೆ**— ತನು=ದೇಹ. ಜೆ=ಹುಟ್ಟಿದವಳು. —ತನ್ನ ದೇಹದಿಂದ

ಹುಟ್ಟಿದವಳು- ಮಗಳು. **ಅಗ**— ಅ=ಇಲ್ಲ; ಅಭಾವ. ಗ=ಗಮನ; ಚಲನೆ —ಚಲನೆ ಇಲ್ಲದ್ದು- ಪರ್ವತ. **ವನಜ**— ವನ=ನೀರು. ಜ=ಹುಟ್ಟಿದ. -ನೀರಿನಲ್ಲಿ ಹುಟ್ಟಿದುದು- ತಾವರೆ. **ಖಗ**— ಖ=ಆಕಾಶ. ಗ=ಸಂಚರಿಸು. -ಆಕಾಶದಲ್ಲಿ ಸಂಚರಿಸುವುದು- ಪಕ್ಷಿ. **ಇಂಚರ**— ಇನಿದು=ಮಧುರ, ಪ್ರಿಯ, ಮನೋಹರ. ಸರ=ಸ್ವರ. —ಮಧುರವಾದ (ಇಂಪಾದ) ಧ್ವನಿ.

೬. ಕಿರುನುಡಿಗಳು.

ಲಕಲಕ ಹೊಳೆ— ಹುಣ್ಣಿಮೆಯ ಚಂದ್ರನು ಲಕಲಕ ಹೊಳೆಯುತ್ತಾನೆ. **ಧಗಧಗನೆ ಉರಿ**- ಲಾಕ್ಷಾಗೃಹವು ಧಗಧಗನೆ ಉರಿದು ನಾಶವಾಗಿ ಹೋಯಿತು. **ಕರ್ರನೆ ಕಂದು**— ಮಗನ ಸಾವಿನಿಂದಾಗಿ ಚಂದ್ರಮತಿಯ ಮೊಗದಾವರೆಯು ಕರ್ರನೆ ಕಂದಿತ್ತು. **ಮರಮರನೆ ಮರುಗು**— ಮರಮರನೆ ಮರುಗಿದರೆ ಮಡಿದವರು ಮತ್ತೆ ಮರಳುವರೆ? **ಹಿರಿಹಿರಿ ಹಿಗ್ಗು**— ಅನ್ಯರ ಅವನತಿಯನ್ನು ಕಂಡು ಹಿರಿಹಿರಿ ಹಿಗ್ಗುವವನೇ ವನ್ಯ ಪಶು.

೭

ಕರಕರನೆ ಕಡಿ— ಹಲ್ಲನ್ನು ಕರಕರನೆ ಕಡಿದು ಕಡಿನುಡಿ ಹಾರಿಸಿದರೆ ವೈರಿಗೆ ತಾಗುವುದೆ? **ಕರಕರನೆ ತಿನ್ನು**— ಸಿಟ್ಟಿನಿಂದ ಹಲ್ಲನ್ನು ಕರಕರನೆ ತಿಂದರೂ ಬೆನ್ನಿಗೆ ಬಿದ್ದ ಗುದ್ದು ಹಿಂದೆ ಹೋಗುವುದೆ? **ಸರಸರ ಏರು (ಹತ್ತು)**— ಸರಸರ ಏರಿದ ರಾಮನು ಮರದ ತುದಿಯಿಂದಲೆ ಕೈಬಿಟ್ಟನು. **ಕಿಡಿಕಿಡಿ ಆಗು**- ಭೀಮನ ಮೂದಲಿಕೆಯನ್ನಾಲಿಸಿದ ಸುಯೋಧನನು ಕಿಡಿಕಿಡಿ ಆಗಿ ಸರೋವರದಿಂದ ಮೇಲಕ್ಕೆ ಬಂದನು. **ಬಳಬಳ ಉದುರು**- ಚಿಕ್ಕಂದಿನ ಆಟದಲ್ಲಿ ದುರ್ಯೋಧನಾದಿಗಳು ಮರ ಹತ್ತಿದಾಗ ಭೀಮನು ಮರವನ್ನು ಅಲ್ಲಾಡಿಸಲು ಅವರೆಲ್ಲರೂ ಬಳಬಳ ಉದುರಿ ಕೆಳಗೆ ಬೀಳುತ್ತಿದ್ದರು. **ರಣರಣ ಬಿಸಿಲು**— ಗ್ರೀಷ್ಮ ಋತುವಿನ ಮಟಮಟ ಮಧ್ಯಾಹ್ನದ ರಣರಣ ಬಿಸಿಲಲ್ಲಿ ನಡೆಯಲು ಸಾಧ್ಯವೆ? **ತಳತಳ ಹೊಳೆ**— ತಳತಳ ಹೊಳೆಯುವ ಚಂದ್ರನನ್ನು ತಂದು ಕೊಡಬೇಕೆಂದು ಚಂಡಿ ಹಿಡಿದ ರಾಮನಿಗೆ ದರ್ಪಣ ತೋರಿಸಿ, ಆತನನ್ನು ರಮಿಸಿದ ಮಂಥರೆಯ ಜಾಣ್ಮೆಯನ್ನು ಕೊಂಡಾಡಬೇಕಲ್ಲವೆ! **ಭರಭರ ನಡೆ**— ಮಿಂಕಗಾರ್ತಿಯು ಭರಭರ ನಡೆಯಲು ಕೆಲಬಲದವರು ಬೆಕ್ಕಸಗೊಂಡರು.

೮

ಸಿಹಿ ಸಕ್ಕರೆ— ಆಕೆಯ ಮಾತು ಸಿಹಿ ಸಕ್ಕರೆ. **ಕುಡಿ ಹುಬ್ಬು**— ಕಿಶೋರಿಯ ಕುಡಿಹುಬ್ಬು ಕಾಮನ ಬಿಲ್ಲನ್ನು ನಾಚಿಸುವಂತಿದೆ. **ಮಾತಿನ ಮಾಲೆ**— ಮಾತಾಳಿಯೊಡನೆ ಮಾತಿನ ಮಾಲೆಗೆ ಬರಗಾಲವೆ? **ಅಡಿದಾವರೆ**— ಭಕ್ತನು ಭಗವಂತನ ಅಡಿದಾವರೆಗಳಲ್ಲಿ ಸರ್ವಸ್ವವನ್ನೂ ಅರ್ಪಿಸುವನು **ನುಣ್ಣಗೆ ಬೆಣ್ಣೆ**— ಧೂರ್ತರ ಮಾತು ನುಣ್ಣಗೆ ಬೆಣ್ಣೆ.

೯

ಮಾಣಿಕದಂತೆ ಮಾತು. ಉಕ್ಕಿನಂತೆ ಕಠಿಣತ್ವ (ಕಾಠಿಣ್ಯ). ನಕ್ಷತ್ರದಂತೆ ಮಿಣುಕು. ಮುಳ್ಳಿನಂತೆ ಚುಚ್ಚು. ಜೇನಿನಂತೆ ಮಧುರ. ಜೇನಿನಂತೆ ಸತತೋದ್ಯೋಗ. ಚಂದ್ರನಂತೆ ತಂಪು. ಬೆಣ್ಣೆಯಂತೆ ಮೃದು. ಹೂವಿನಂತೆ ಕೋಮಲ. ಕರುವಿನಂತೆ ಸಾಧು. ಹುಲ್ಲಿನಂತೆ ಲಘು.

೧೦. ಜೋಡು ನುಡಿಗಳು.

ಮುಚ್ಚು-ಮರೆ— ವೈದ್ಯರೊಡನೆ ರೋಗಿಯು ಮುಚ್ಚು-ಮರೆ ಮಾಡಿದರೆ ಚಿಕಿತ್ಸೆಯು ಫಲಕಾರಿಯಾಗದು. **ಹಣ್ಣು-ಹಂಪಲು**— ಉತ್ತಮ ಹಣ್ಣು-ಹಂಪಲು ಉತ್ತಮ ಪೌಷ್ಟಿಕ ಆಹಾರ. **ಅಚ್ಚು-ಮೆಚ್ಚು**— ಅಚ್ಚು-ಮೆಚ್ಚಿನ ಗಿಳಿಯನ್ನು ಬೆಕ್ಕು ಕಚ್ಚಿಕೊಂಡು ಹೋಯಿತು. **ಹಾಲು-ಮೊಸರು**—ಬಡವರ ಮಕ್ಕಳಿಗೆ ಹಾಲು-ಮೊಸರು ಕನಸಿನ ಮಂಡಿಗೆ. **ಬಂಧು-ಬಳಗ**–ಮಾನವನು ಸಾಯುವಾಗ ಬಂಧು-ಬಳಗದವರು ಬಂದು ಏನು ಪ್ರಯೋಜನ? **ಅಲ್ಪ-ಸ್ವಲ್ಪ**— ಹೊನ್ನು, ಮಣ್ಣು, ಹೆಣ್ಣು- ಇವುಗಳು ಎಲ್ಲ ಕೇಡಿಗೂ ಅಲ್ಪ-ಸ್ವಲ್ಪ ಹೇತುಗಳು. **ಆಟ-ನೋಟ**— ಮಕ್ಕಳ ಆಟ-ನೋಟಗಳು ಹೆತ್ತವರಿಗೆ ಸ್ವರ್ಗ ತುಲ್ಯ. **ಊಟ-ಉಡಿಗೆ**— ಊಟ-ಉಡಿಗೆಗೆ ಬರಗಾಲ ವಿದ್ದ ದೇಶದಲ್ಲಿ ಶಾಂತಿ ಉಳಿದೀತೆ? **ಬಿರುದು-ಬಾವುಲಿ**— ಬಿರುದು-ಬಾವುಲಿಗಳಿಗಾಗಿ ಬಾಯ್ಬಿಡುವ ಶ್ರೀಮಂತರಿಗೆ ಭಾರತದಲ್ಲಿ ಬರಗಾಲವೆ? **ಕಳ್ಳರು-ಕಾಕರು**— ದೇಶದ ಸುಭಿಕ್ಷೆಯೆ ಕಳ್ಳರು-ಕಾಕರ ನಾಶಕ್ಕೆ ಮೂಲ.

೧೧

ಅಲ್ಲಾಡು— ಕೊಂಚ ಅಲ್ಲಾಡಿದ ಮಾತ್ರಕ್ಕೆ ಮರದ ಹಣ್ಣು ಕೆಳಕ್ಕೆ ಉದುರದು. **ಅಳ್ಳಾಡು**— ಇಂದು ನಮ್ಮಲ್ಲಿ ಬಡವನು ಬಲ್ಲಿದನ ದರ್ಪಕ್ಕೆ

ಅಳ್ಳಾಡುವುದನ್ನು ನಾವು ನಿತ್ಯ ಕಾಣುವ ದೃಶ್ಯ. **ಈಡಾಡು**— ಸ್ವಾರ್ಥವನ್ನು ಈಡಾಡಿದರೆ ಮಾತ್ರ ಪಾರಮಾರ್ಥಕ್ಕೆ ಸಾಗಬಹುದು **ಈಸಾಡು**— ಈಸಾಡಿ ಸಾಗರವನ್ನು ದಾಟಲು ಸಾಧ್ಯವೆ? **ಎಚ್ಚಾಡು**— ಕರ್ಣಾರ್ಜುನರು ಭಯಂಕರ ಬಾಣಗಳನ್ನು ಎಚ್ಚಾಡಿದರು. **ಎಡೆಯಾಡು**— ಭಿಕ್ಷುಕರ ಎಡೆಯಾಟಕ್ಕೆ ಮೇರೆಯಿದೆಯೆ? **ಏಸಾಡು**— ಅರ್ಜುನನು ಏಸಾಟದಲ್ಲಿ ಅದ್ವಿತೀಯನು. **ಒಡನಾಡು**— ಬಲ್ಲವರ ಒಡನಾಟ ಬೆಲ್ಲವನು ಮೆದ್ದಂತೆ. **ಒಲೆದಾಡು** —ಮರಿ ತುಂಬಿಗಳ ಗಾನಕ್ಕೆ ಕೊರಳನ್ನು ಒಲೆದಾಡುವ ಆಕೆಯ ಸೊಬಗನ್ನು ನೋಡು. **ಓಲಾಡು**— ಗಾಳಿಯ ತೀಟಕ್ಕೆ ಬಳ್ಳಿಯು ಓಲಾಡುವುದು. **ಕುಣಿದಾಡು**— ಕುಣಿದಾಟಕ್ಕೆ ನಿಂತ ಮೇಲೆ ಕೊನೆ ಮುಸುಕು ಏಕೆ? **ಕೊಟ್ಟಾಡು** —ಬಡ್ಡಿಗೆ ಹಣವನ್ನು ಕೊಟ್ಟಾಡಿ ಬದುಕುವವನು ಕುಸೀದಿಕನು. **ಕೊಂಡಾಡು** —ಅರಸುಗಳ ಕಾರ್ಯ ಗುಣಗಳನ್ನು ಕೊಂಡಾಡುವವನು ಸ್ತುತಿಪಾಠಕನು. **ಕೊರಚಾಡು**— ಕೊಟ್ಟು ಕೊರಚಾಡುವವರ ಕೊಡುಗೆಗೆ ಕೈನೀಡಬಹುದೆ? **ಚುನ್ನವಾಡು**— ಉತ್ತಮರ ಕಂಡು ಚುನ್ನವಾಡುವವನೆ ಕ್ಷುಲ್ಲಕನು. **ಜೋಲಾಡು**— ಜೋಕುಗಾರ್ತಿಯು ಜೋಕಾಲಿಯಲ್ಲಿ ಜೋಲಾಡುವ ಜೋಕನ್ನು ನೋಡಿದೆಯಾ! **ತಿರುಗಾಡು**— ಮನೆ ಮನೆಗೆ ತಿರುಗಾಡಿದರೆ ಮಾತು ಬಾರದೆ ಬಿಟ್ಟೀತೆ? **ತಿರಿಗಾಡು**— ನಾರಿ ಪೇಟೆ ತಿರಿಗಾಡಿದರೆ ಮನೆ ನೋಡುವವರು ಯಾರು? **ತಿರಿದಾಡು**— ತಿರಿದಾಡುವವನು ತಿರುಪತಿ ತಿಮ್ಮಪ್ಪನ ಹತ್ತಿರ ಹೋದರೂ ತಿರಿದುಂಬುವುದು ತಪ್ಪೀತೆ? **ತುಳುಕಾಡು**— ತುಂಬಿದ ಕೊಡ ತುಳುಕಾಡದು. **ನಲಿದಾಡು**— ಮೇಘವನ್ನು ಕಂಡು ಕೇಕಿಯು ಕೇಗುತ್ತಾ ನಲಿದಾಡಿತು. **ನೇತಾಡು**— ನೇತಾಡುವವನ ಹತ್ತಿರ ಮಾತಾಡಲಿಕ್ಕೆ ಹೋದರೆ ಜೋತಾಡುವುದು ಸಿಕ್ಕೀತು. **ಬೀಸಾಡು**— ವಸ್ತ್ರವನ್ನು ಬೀಸಾಡಿದ ಹುಚ್ಚನು ಬೀದಿಯಲ್ಲಿ ರಿಂಗಣ ಹೊಡೆಯುತ್ತಿದ್ದನು. **ಮಿಳಿರ್ದಾಡು**— ಅಗೊ, ರಥದ ತುದಿಯಲ್ಲಿ ಮಿಳಿರ್ದಾಡುವ ಕೇತನವನ್ನು ನೋಡು. **ಮುಂಡಾಡು**— ತಾಯಿಯು ಮಗುವನ್ನು ಮುಂಡಾಡಿದಳು. **ಹಾರಾಡು**— ಹಾರುವನ ಹಾರಾಟ ಹೋರಾಟದ ವರೆಗೆ ಬಂದೀತೆ? **ಹಿಂದೆಯಾಡು**— ಹಿಂದೆಯಾಡುವ ನುಡಿಯು ಘೋರ ವಿಷ, ಮನವೆ! **ಹೊರಳಾಡು**— ಬವಗನ ಚಾವಟಿಯ ಬಡಿತಕ್ಕೆ ಅಮೃತಮತಿಯು ಕೇರೆ ಹೊರಳುವಂತೆ ಹೊರಳಾಡಿದಳು. **ಹೋಗಾಡು**— ಉದ್ದುರುಟು ಮಾತಾಡಿ, ಇದ್ದುದನು ಹೋಗಾಡಿ, ಉದ್ದ

ಮರದ ತುದಿಯನ್ನೇರಿ, ಕೈತಪ್ಪಿ ಬಿದ್ದು ಸತ್ತಂತೆ. **ಹೋರಾಡು**— ಎರಡು ಸೇನೆಗಳೂ ದೊಂಬಿಯಾಗಿ ಸೇರಿ ಹೋರಾಡುವ ದ್ವಂದ್ವ ಯುದ್ಧವೇ ತುಮುಲ.

೧೨. ಪಡೆನುಡಿಗಳು.

ಬೆನ್ನುತಟ್ಟು— ಬೆನ್ನುತಟ್ಟಿ ಕೆಲಸಮಾಡಿಸಿಕೊಳ್ಳುವುದು ಚತುರರ ಲಕ್ಷಣ. **ಒಡ್ಡುಮುರಿ**— ವೈಶಾಖದಲ್ಲಿ ಮುಂಜಾನೆ ಎದ್ದೊಡನೆ ಒಕ್ಕಲಿಗರು ಒಡ್ಡು ಮುರಿಯುತ್ತಾರೆ. **ಹಲ್ಲುಕಡಿ**— ದುರ್ಯೋಧನನು ಭೀಮಸೇನನನ್ನು ಕಂಡ ಕೂಡಲೆ ಹಲ್ಲುಕಡಿಯುತ್ತಿದ್ದನು. **ಕೈಕೊಳ್ಳು**— ರವೀಂದ್ರರ ದಿವ್ಯ ಕೃತಿಗಳನ್ನು ಇಂಗ್ಲೀಷ್ ಜನರಿಗೆ ಪರಿಚಯ ಮಾಡಿಕೊಡಬೇಕೆಂದು ಎಡ್ವರ್ಡ್ ಥಾಮಸ್‌ನ ಬಂಗಾಳಿ ಕಲಿತು, ಆ ಕೆಲಸ ಕೈಕೊಳ್ಳಲಿಲ್ಲವೆ? **ಬಾಲಹಿಡಿ**— ಸಿಪಾಯಿದಂಗೆಯಲ್ಲಿ ಸೋಲು ಸನ್ನಿಹಿತವೆಂದು ಕಂಡಾಗ ಸಹ ಅನೇಕ ತಿಂಗಳು ಬ್ರಿಟಿಷರ ಬಾಲ ಹಿಡಿದು ಮಣ್ಣು ಮುಕ್ಕಿಸಿದ ಧೀರನೆಂದರೆ ತಾತ್ಯಾಟೋಪಿ. **ಸಮಾಧಿಯಾಗು**— ಹಲವಾರು ಮಂದಿ ರಾಕ್ಷಸರು ಸಮಾಧಿಯಾಗಲು ಸ್ವರ್ಗಲೋಕದ ದಾಳಿಯೆ ಕಾರಣ. **ಕೆಯ್ಯಾಸೆ**— ಭಾರತೀಯ ರಾಜನ ಮಂತ್ರಿಗಳಿಗೆ ಮತ್ತು ಇತರ ಉನ್ನತ ಅಧಿಕಾರಿಗಳಿಗೆ ಕೆಯ್ಯಾಸೆ ತೋರಿಸಿ ಅವರಲ್ಲಿ ದ್ರೋಹಬುದ್ಧಿಯನ್ನು ಉಂಟುಮಾಡುವುದು ಬ್ರಿಟಿಷ್ ರೆಸಿಡೆಂಟರುಗಳ ಮುಖ್ಯ ಕೆಲಸವಾಗಿತ್ತು. **ಬಾಯಿಬಿಡು**— ಭ್ರಷ್ಟ ದೈವಕೆ ಬಾಯಿ ಬಿಟ್ಟಲ್ಲಿ ಫಲವಿಲ್ಲ. **ಅಡ್ಡಹಾದಿ ಹಿಡಿ**— ಕರ್ಣನ ಒಡನಾಟದಿಂದ ಅಡ್ಡ ಹಾದಿ ಹಿಡಿದ ದುರ್ಯೋಧನನು ಪಾಂಡವರಿಗೆ ರಾಜ್ಯ ಕೊಡಲು ಒಪ್ಪದೆ ಭಾರತ ಯುದ್ಧಕ್ಕೆ ಕಾರಣಪುರುಷನಾದನು. **ನಡುಕಟ್ಟಿ ನಿಲ್ಲು**— ಸಿಪಾಯಿ ದಂಗೆಯಲ್ಲಿ ನಡುಕಟ್ಟಿ ನಿಂತು ಕಾದಾಡುತ್ತಲೇ ಮರಣವನ್ನಪ್ಪಿದ ಇಪ್ಪತ್ತು ವರ್ಷದ ವೀರ ಯುವತಿ ಝಾನ್ಸಿ ಲಕ್ಷ್ಮೀಬಾಯಿಯನ್ನು ಮರೆಯಲು ಸಾಧ್ಯವೇ? **ಮುಖಕ್ಕೆ ಮಸಿ ಬಳಿ**— ಲಂಕೆಗೆ ಹಾರಿದ ಆಂಜನೇಯನು ರಾವಣನ ಮುಖಕ್ಕೆ ಮಸಿ ಬಳಿದು ಸುಗಸುವಾಗಿ ಹಿಂತಿರುಗಿದನು. **ಮೈ ಉಳಿಸಿಕೊಳ್ಳು**— ಮೈಗಳ್ಳರು ಕೆಲಸದಲ್ಲಿ ಹಿಂದಾದರೂ ಮೈ ಉಳಿಸಿಕೊಳ್ಳುವುದರಲ್ಲಿ ಬಹು ಮುಂದು. **ಕಾಲಿಗೆ ಬುದ್ಧಿ ಹೇಳು**— ಯುದ್ಧದಲ್ಲಿ ಒಬ್ಬ ರಾಜನು ಮಡಿದ ಕೂಡಲೆ ಆತನ ಸೈನಿಕರು ಕಾಲಿಗೆ ಬುದ್ಧಿ ಹೇಳುವುದು ಸ್ವಾಭಾವಿಕ. **ನೂರು ವರ್ಷ ತುಂಬು**— ಭಾರತದ ಕೃಷ್ಣನನ್ನು ಎದುರಿಸಿದವನಿಗೆ ನೂರು

ವರ್ಷ ತುಂಬಿದಂತೆಯೆ ಸರಿ. **ಒಂದು ತುಟಿ ಎರಡು ಮಾಡು**- ಮೂರ್ಖನ ಸಿಂದೆಗೆ ಒಂದು ತುಟಿ ಎರಡು ಮಾಡದವನೆ ಜಾಣ.

೧೩. ಶಬ್ದ ಸಂಗ್ರಹ.

ಕೂಗು—(ಗಟ್ಟಿಯಾಗಿ ಧ್ವನಿಗೈಯ್ಯು) ಕೂಗಿಡು, ಕೂಗಾಟ, ಕೂಗುವಿಕೆ, ಕೂಗಳತೆ.

ತಾಳು—(ಸೈರಿಸು, ಧರಿಸು.) ತಾಳಿಕೆ, ತಾಳ್ಮೆ, ತಾಳಿಮೆ, ತಾಳುಮೆ, ತಾಳುವಿಕೆ.

ಅಂಜು— (ಭಯಪಡು, ಹೆದರು.) ಅಂಜಿಕೆ, ಅಂಜಿಗ, ಅಂಜುಗುಳಿ, ಅಂಜುಬುರುಕ, ಅಂಜುಪುರುಕ, ಅಂಜುಬುರುಕಿ, ಅಂಜುಕುಳಿ.

ತಡೆ— (ಹೊತ್ತುಗಳೆ, ಸಾವಕಾಶಮಾಡು) ತಡ, ತಡಪು, ತಡವು, ತುರುಬು, ತಡೆಗಟ್ಟು, ತಡೆಗಟ್ಟೆ, ತಡೆಗಡಿ, ತಡೆಗಾಲ್, ತಡೆಗೆಡವು, ತಡೆಗೆಡೆ, ತಡೆವಿಡು, ತಡೆಹಾಕು, ತಡೆವೇಟೆಗಾತಿ.

ಒಪ್ಪು— (ಅಂಗೀಕರಿಸು, ಚಂದಗಾಣು) ಒಪ್ಪ, ಒಪ್ಪಂದ, ಒಪ್ಪರ, ಒಪ್ಪಿಕೆ, ಒಪ್ಪಿಗೆ, ಒಪ್ಪಿತ, ಒಪ್ಪಿಸು, ಒಪ್ಪಾಚಾರ, ಒಪ್ಪುಗೆ.

ಅಗಿ— (ತೋಡು, ಜಗಿ, ಸಂತೋಷಪಡು, ಅಂಜು) ಅಗಿತ, ಅಗತ, ಅಗತೆ, ಅಗರ್ತೆ, ಅಗಲ್ತೆ, ಅಗಳತ, ಅಗಳತೆ, ಅಗಳ್, ಅಗಳು, ಅಗುರ್, ಅಗುಳು, ಅಗಳ, ಅಗಸೆ, ಅಗಸೆಬಾಗಿಲು, ಅಗಿಸೆ, ಅಗುಸೆ.

ತಿಳಿ— (ತಿಳಿದುಕೊಳ್ಳು, ಸ್ವಚ್ಛತೆ.) ತಿಳಪು, ತಿಳುವಳಿಕೆ, ತಿಳವಳಿಕೆ, ತಿಳುಪು, ತಿಳಿಹು, ತಿಳುಹು, ತಿಳುವು, ತಿಳಿವು, ತಿಳಿಸು, ತಿಳಿಗೇಡಿ.

ಉರಿ— (ಸುಡು) ಉರಿಕೆ, ಉರಿಪು, ಉರಿಸು, ಉರಸು, ಉರುಸು, ಉರಪು, ಉರಿತ, ಉರತ, ಉರಿಕ, ಉರಿಕಜ್ಜಿ, ಉರಿಕಾಸು, ಉರಿಕಿಡಿ, ಉರಿಕೆಂಡ, ಉರಿಗಣ್ಣು, ಉರಿಗಣ್ಣೊ, ಉರಿಗಾಳಿ, ಉರಿಗಿಚ್ಚು, ಉರಿಗೆದರು, ಉರಿಗೆಯ್ಯು, ಉರಿಗೊಳ್ಳು, ಉರಿಗೊಳಿಸು, ಉರಿಚೇಳು, ಉರಿನಂಜು, ಉರಿಶೀತ, ಉರಿನಾಲಗೆ, ಉರಿಬಳ್ಳಿ, ಉರಿಬೇಕಿ, ಉರಿಮಂಡಲ, ಉರಿಮಾರಿ, ಉರಿಮೂತ್ರ, ಉರಿಯುಚ್ಚೆ, ಉರಿಯೆಣ್ಣೆ, ಉರಿವೆಣ್ಣೆ, ಉರಿವತ್ತಿ, ಉರಿವನೆ, ಉರಿವರಿ, ಉರಿವಾತು, ಉರಿವಿಸಿಲು, ಉರಿವೊಗು, ಉರಿಸಿಂಗಿ, ಉರಿಹತ್ತು, ಉರಿಹಚ್ಚು, ಉರಿಗಾಳು, ಉರುಪು, ಉರುವು, ಉರುಹು, ಉರ್ಪು.

ಆಳ್— (ರಕ್ಷಿಸು, ಅಧಿಕಾರಮಾಡು, ಸಮರ್ಥನಾಗು) ಆಳಿಗೆ, ಆಳ್ವಿಕೆ, ಆಳುವಿಕೆ, ಆಳುತನ, ಆಳ್ತನ, ಆಳ್ಕೆ, ಆಳ್ದ, ಆಳ್ಮ, ಆಳ್ದಾರಿ, ಆಳ್ವಲ, ಆಳ್ಮಲ್ಮೆ, ಆಳ್ವಿಸ, ಆಳ್ವಿಸನ, ಆಳ್ವಿಸಗಯ್, ಆಳುಗೆಲಸ, ಆಳುದ್ದ, ಆಳು ಪಾಟಿ, ಆಳುಮಗ, ಆಳುಮಟ್ಟ, ಆಳೋಟ, ಆಳಮರಿಸು, ಆಳುಗೀಳು— ಕಾಲಾಳು, ಬಿಲ್ಲಾಳು, ಕೂಲಿಯಾಳು, ತುಳಿಲಾಳು-ಕಟ್ಟಾಳ್ತನ, ಕೂರಾಳ್ತನ, ಬಲ್ಲಾಳ್ತನ- ಇರುಳಾಳ್ಮ, ಉಮೆಯಾಳ್ಮ, ನುಡಿವೆಣ್ಣಾಳ್ಮ, ಪಿರಿತಿನಿಯಾಳ್ಮ (ಈಶ್ವರ), ಬರ್ದಿಲಾಳ್ಮ.

ತುಂಬು— (ಪೂರ್ಣವಾಗು) ತುಂಬ, ತುಂಬಿಸು, ತುಂಬಿಕೆ, ತುಂಬು (ಕೋಡಿ), ತುಂಬಿ, ತುಂಬೆ (ಗುಂಗೀ ಹುಳ)- ತುಂಬುವೆರೆ (ಪೂರ್ಣಚಂದ್ರ), ತುಂಬು ಜವ್ವನ, ತುಂಬುವರಿ.

ಜಾರು— (ತಪ್ಪಿಬೀಳು, ಸರಿದುಬೀಳು, ಓಡು) ಜಾರಿಕೆ, ಜಾರುವಿಕೆ, ಜಾರ, ಜಾರೆ, ಜಾರತ್ವ, ಜಾರಿಸು, ಜಾರಿ, ಜಾರಿಣಿ- ಜಾರಜ, ಜಾರಜಾತ, ಜಾರಜಗ, ಜಾರಸ್ತ್ರೀ, ಜಾರಪುರುಷ, ಜಾರದೇವ-ಜಾರಗುಪ್ಪೆ, ಜಾರುನಡಿಕೆ, ಜಾರುಗೆಡಹು.

ಆಡು— (ಕ್ರೀಡಿಸು) ಆಟ, ಆಟಿಗೆ, ಆಟಿಡಪು (ಇಡಪು-ವೇಳೆ-ಆಟದ ದಿವಸ), ಆಡಿ, ಆಟಿಕೆ, ಆಡಿಗ, ಆಡಿತನ, ಆಡಿಸು, ಆಡುಕುಳಿ, ಆಡುಂಗುಳಿ, ಆಡುವಿಕೆ, ಆಡಿಸುವಿಕೆ, ಆಡುಹ, ಆಟಕ, ಆಟಕಾರ್ತಿ, ಆಟಗಾರ್ತಿ, ಆಟಗಾರ, ಆಟಗಾರಿ, ಆಟಗುಳಿ, ಆಟಲು, ಆಟಲೆ, ಆಟವಿಕ, ಆಟಾಳಿ, ಆಟಿ, ಆಟು, ಆಡುಂಬೊಲ-ಅಳ್ಳಾಟ, ಆರ್ಬಾಟ, ಎಡೆಯಾಟ, ಏರಾಟ, ಒಡನಾಟ, ಕಳ್ಳಾಟ, ಕೂಸಾಟ, ಕೊಂಡಾಟ, ಚಯ್ಯಾಟ, ಚಲ್ಲಾಟ, ತೋಳಾಟ, ಕೋಲಾಟ, ನೀರಾಟ, ಬೂತಾಟ, ಬೊಬ್ಬಾಟ, ಮರುಳಾಟ, ಮಾರಾಟ, ಮುಚ್ಚಾಟ, ಸೂಸಾಟ, ಸೋರಾಟ, ಹೋರಾಟ - ಅಗಚಾಟಲು, ಅಗಚಾಟಲೆ - ಬಲ್ಲಾಟವಿಕ - ಡಂಬಾಟಿಕೆ, ಪುಂಡಾಟಿಕೆ, ಬೂಟಾಬಿಕೆ, ಮಕ್ಕಳಾಟಿಕೆ, ಹುಡುಗಾಟಿಕೆ- ಅಗಚಾಟು, ಅಗುಚಾಟು - ಅಡನಾಡಿ, ಉಂಡಾಡಿ, ಒಡನಾಡಿ, ಕಾಡಾಡಿ, ಕಾಲಾಡಿ, ನಾಡಾಡಿ, ಬಾನಾಡಿ-ಅಲ್ಲಾಡಿಕೆ, ಹೊಡೆದಾಡಿಕೆ - ಉಂಡಾಡಿಗ, ನಾಡಾಡಿಗ—ಅಡನಾಡಿತನ, ಕಾಲಾಡಿತನ—ಗಾಣವಾಡಿಸು, ತಿರುವಾಡಿಸು, ನಲಿದಾಡಿಸು—ಅಲ್ಲಾಡು, ಅಳ್ಳಾಡು, ಈಡಾಡು.... ಮುಂ.

ಎಣಿಸು—(ಲೆಕ್ಕಿಸು) ಎಣಿಕೆ, ಎಣ್ಣು, ಎಣ್ಣಿಸು, ಎಣ್ಣಿಕೆ, ಎಣೆ, ಎಣೆಯು (ಗೆಳೆಯು), ಎಣೆಗಾರ—ಎಣೆಗಂಟು, ಎಣೆಗಳೆ, ಎಣೆಗಾಣು, ಎಣೆಗೋಣ, ಎಣೆಗೊಳ್, ಎಣೆಬರ್, ಎಣೆಯಕ್ಕರ, ಎಣೆಯೊಚ್ಚು, ಎಣೆವಡೆ, ಎಣೆವಕ್ಕಿ.

ಉಗಿ— (ಸೀಳು, ಉಗುರಿನಿಂದ ಗಾಯಮಾಡು) ಉಗಿಸು, ಉಗಿರು, ಉಗುರು, ಉಗುರಿಸು, ಉಗುಲು (ಕೊರೆದು ಮಾಡಿದ ತೂತು).

ಕೇಗು— (ಆನಂದದ ಕೂಗು, ನವಿಲಿನ ಕೂಗು) ಕೇಕಿ, ಕೇಕೆ, ಕೇಗು, ಕೇಕ, ಕೇಕಾರವ, ಕೇಕರಿಸು.

ತಿನ್— (ಸೇವಿಸು, ಭುಂಜಿಸು) ತಿನು, ತಿನ್ನು, ತಿನಸು, ತಿನಿಸು, ತೆನಸು, ತಿಂಡಿ, ತಿನಿ, ತಿನ್ನಿ, ತಿನ್ನಾಳಿ, ತಿನ್ನಾಸಕ, ತಿನಸಗೂಳಿ, ತಿನಸುಗೂಳಿ, ತಿನಸುಬಕ್ಕ, ತಿನಿಸುಬಕ್ಕ, ತಿನ್ನ, ತಿನಾಳಿ, ತೀನಾಳಿ, ತೀನಿ,—ಹೆಣದಿನಿ, ತುಡುತಿನ್ನಿ, ಹೆದ್ದೀನಿ.

ಇರಿ— (ತಿವಿ, ಹೊಡೆ, ಚುಚ್ಚು) ಇರಿತ, ಇರತ, ಇರಿತೆ, ಇರಿಪು, ಇರಿಸು, ಇರಕು, ಇರುಕು, ಇರುಂಕು, ಇರಕುಳ, ಇರಕುಳಿ, ಇರಗುಳಿ, ಇರಕೊಳ್ಳು, ಇರಿತಕಾರ, ಇರಿಗೂಳಿ–ಆರ್ಚಿರಿ, ಅಳ್ಳಿರಿ, ಈಡಿರಿ, ಎಡೆಗಿರಿ, ಕಚ್ಚಿರಿ, ಕವಲಿರಿ, ಕೂಕಿರಿ, ಬೊಬ್ಬಿರಿ, ಮಡಲಿರಿ, ಮುನ್ನಿರಿ–ಇರಿದಾಡು.

ಏರು—(ಹತ್ತು, ಮೇಲೆ ಹೋಗು) ಏರಿಕೆ, ಏರಿಸು, ಏರುವಿಕೆ, ಏರುತ, ಏರ–ಏರಗಟ್ಟು, ಏರಹಾಕು, ಏರಹೊತ್ತು, ಏರಾಟೆ, ಏರಿವೆಗೆ, ಏರಾಳಿ–ಏರುಂಜವ್ವನ, ಏರುಂಜವ್ವನೆ, ಏರುಬ್ಬಸ.

ಒಟ್ಟು— (ಕೂಡಿಸು, ಕೂಡಿಹಾಕು, ರಾಶಿಹಾಕು) ಒಟ್ಟಲು, ಒಟ್ಟಜೆ, ಒಟ್ಟಣ, ಒಟ್ಟಯಿಸು, ಒಟ್ಟಕೆ, ಒಟ್ಟಗೆ, ಒಟ್ಟಲ, ಒಟ್ಟವಿಸು, ಒಟ್ಟಸು, ಒಟ್ಟೊಟ್ಟಲು.

ತಣಿ— (ತೃಪ್ತಿಪಡು) ತಣಿಸು, ತಣಿವು, ತಣಿಪು.

ಓಡು— (ಬೇಗ ಬೇಗನೆ ಸರಿ) ಓಟ, ಓಡಿಸು, ಓಡಿಕೆ, ಓಡ, ಓಡುವಿಕೆ, ಓಡಿಗೆ, ಓಡುಕುಳಿ, ಓಟಗಾರ.

ಕಡಿ— (ಕಚ್ಚು, ತುಂಡುಮಾಡು) ಕಡಿತ, ಕಡಿಮೆ, ಕಡಿಕ, ಕಡಿಗ, ಕಡಿಕು, ಕಡತ, ಕಡಿಯಾಣ, ಕಡಿವಾಣ, ಕತ್ತಿ—ಕಡಿದಾಸು, ಕಡಿಕಡಿಮಾಡು, ಕಡಿಕೊಂಬು, ಕಡಿಗೆಯ್, ಕಡಿಯುಕ್ಕೆ, ಕಡಿವಡೆ, ಕಡಿವಾಗ,

ಕಡಿನೆರು, ಕಡಿವೋಗು-ತಡೆಗಡಿ, ತಲೆಗಡಿ, ಕಡುಗಡಿಗ, ಕೊಲೆಗಡಿಗ.

ಗುದ್ದು— (ಕೊಡೆ, ತೋಡು) ಗುದ್ದುವಿಕೆ, ಗುದ್ದಾಟ, ಗುದ್ದಲಿ, ಗುದ್ಲಿ, ಗುದ್ದರಿಸು, ಗುದ್ದಿಕೆ, ಗುದ್ದು ಮುರುಗೆ.

ಕಾಯು— (ಬಿಸಿಯಾಗು) ಕಾಯ್ಪು, ಕಾವು, ಕಾವರ, ಕಾವುರ, ಕಾಹುರ, ಕಾಹು, ಕಾಹುರತೆ, ಕಾಯಿಸು, ಕಾಸು-ಮೆಯ್ಯ ಕಾವು, ನೀರಿನ ಕಾವು, ಕಾವು ಕೊಡು, ಕಾವು ಹಾಕು, ಕೆಯ್ಗಾಯು, ಪೊಲಗಾಯು, ಕಾಯ ವೇಡು, ಕಡುಗಾಯು.

ಕೊಬ್ಬು— (ಸೊಕ್ಕೇರು, ಹುಲುಸಾಗಿ ಬೆಳೆ) ಕೊಬ್ಬಿಸು, ಕೊಬ್ಬಿಗ, ಕೊರ್ಬು, ಕೊರ್ವು, ಕುಬ್ಬು-ಕೊಬ್ಬೇರು, ಕೊಬ್ಬಾಟ, ಕುಬ್ಬಾಟ.

ಜೋಲ್, ಜೋಲು— (ಜೋತಾಡು, ಇಳಿಬೀಳು, ಸಡಿಲಾಗು) ಜೋಲಿ, ಜೋಲೆ, ಜೊಲ್ಲು, ಜೋಳಿಗೆ, ಜೋಲಿಗಾರ-ಜೋಲಾಡು, ಜೋತಾಡು, ಜೋಲುಬೀಳು, ಜೋಲಬೀಳು, ಜೋತುಬೀಳು, ಜೋಲುಗರುಳು, ಜೋಲು ಗಿವಿ, ಜೋಲುದೊಗಲು, ಜೋಲುಮುಖ, ಜೋಲ್ದುಟಿ, ಜೋಲ್ದುರುಬು, ಜೋಲಿಮಾಡು, ಜೋಲಿ ಸಂಬಾಳಿಸು, ಜೋಲಿಹೊಡೆ-ಕೆಯ್ಜೋಲು.

ಕಿರಿ— (ಸಣ್ಣದಾಗು) ಕಿರಿಯ, ಕಿರಿಯತನ, ಕಿರಿದು, ಕಿರಿಕುಲ, ಕಿರುಕುಲ, ಕಿರಕುಳ, ಕಿರುಕುಳ, ಕಿರಿಗಣ್ಣು, ಕಿರಿಗಿವಿ, ಕಿರಿಗೂಳಿ, ಕಿರಿದಾರಿ, ಕಿರಿನುಡಿ, ಕಿರುಗೂಸು, ಕಿರುನಗೆ, ಕಿರುನೇಸರು, ಕಿರುವರೆಯ.

ಹೆದರು— (ಅಂಜು, ಬೆದರು) ಹೆದರಿಕೆ, ಹೆದರಿಸು, ಹೆದರೆದೆ.

ದೂರು— (ನಿಂದಿಸು) ದೂರಿಸು, ದುರಳ, ದುರುಳ, ದುರುಳತನ, ದುರುಳಾಟ-ದೂರ್ಯಾಡು, ದೂರುಗೊಳ್ಳು, ದೂರುತರು, ದೂರುವೋಗು, ದೂರು ಹೇಳು, ದೂರುಹೊರು.

ನಿಲ್, ನಿಲ್ಲು— (ತಡೆ, ಹೋಗದಿರು, ಎದ್ದುನಿಲ್ಲು.) ನಿಲು, ನಿಲ್ಲು, ನಿಲ್ತು, ನಿಂದು, ನಿಲವು, ನಿಲಯ, ನಿಲುವೆ, ನೆಲ, ನೆಲೆ, ನಿಲ್ಲಿಸು, ನಿಲುವಿಕೆ, ನೆಲಸು, ನೆಲವು, -ನಿಲಗಡೆ, ನಿಲಯವಂತ, ನಿಲವುಗೆಡಿಸು, ನಿಲುವುಬೀಳು, ನಿಲ್ಲಗೊಡಿಸು, ನೆಲನಮುರ್ದಣಿ-ನೆಲಗಾಣು, ನೆಲೆಗಿಡು, ನೆಲೆಗೆಡಿಸು, ನೆಲೆಗೊಳ್ಳು, ನೆಲೆಗೊಳಿಸು, ನೆಲೆಯಾಗು, ನೆಲೆವಡೆ.

ಹಿರಿ— (ದೊಡ್ಡದಾಗು, ಹೊರತೆಗೆ.) ಹಿರಿಯ, ಹಿರಿಯತನ, ಹಿರಿದು,

ಹಿರೆ, ಹಿರೆಯತನ-ಹಿರಿಯಯ್ಯ, ಹಿರಿಯಾಕೆ-ಹೆಗ್ಗಡೆ, ಹೆದ್ದರೆ, ಹೆದ್ದಾರಿ, ಹೆದ್ದುಂಬಿ, ಹೆದ್ದೆವರು, ಹೆದ್ದೊಡೆ, ಹೆದ್ದೊರೆ, ಹೆಬ್ಬರ, ಹೆಬ್ಬಾಗಿಲು, ಹೆಬ್ಬಾವು, ಹೆಬ್ಬುಲಿ, ಹೆಬ್ಬೆರಲು, ಹೆಮ್ಮರ, ಹೆಮ್ಮಳೆ, ಹೆಮ್ಮಾರಿ, ಹೆಮ್ಮೀಸು, ಹೆದ್ದೆರೆ, ಹೆದ್ದಿಂಡಿ, ಹೆದ್ದೀನಿ, ಹೆಮ್ಮೊರಡಿ.

ಸವಿ— (ತಿನ್ನು, ರುಚಿನೋಡು.) ಸವಿಸು, ಸವಿಗಾರ, ಸವಿಹ, ಸವಿಗುಳಿ, ಸವಿಗೋಲು (ಕಬ್ಬು), ಸವಿಯುಣಿ, ಸವಿಗಡಲು, ಸವಿಗಡಲಣುಗ, ಸವಿಗಲೆ, ಸವಿಗಾಣಿಸು, ಸವಿಗಾಣು, ಸವಿಗೊಳ್ಳು, ಸವಿಗೊಳಿಸು, ಸವಿದೋರು, ಸವಿದುತ್ತು, ಸವಿಸೀರು, ಸವಿನುಡಿ, ಸವಿನೋಟ, ಸವಿಮಾಡಲ, ಸವಿಮಾತು, ಸವಿಮಾವು, ಸವಿಯೂಟ, ಸವಿವಣ್ಣು, ಸವಿವೆರ್ಚು, ಸವಿವೆಸನು, ಸವಿವೇಟ-ಕಣ್ಸವಿ, ಕಳ್ಸವಿ, ಮೆಯ್ಸವಿ.

ಬೀಸು— (ಆಡು, ತಿರುಗು, ಚಲಿಸು) ಬೀಸಣಿಗೆ, ಬೀಸಣಿಕೆ, ಬೀಸಿಸು, ಬೀಸ, ಬೀಸುಗಲ್ಲು, ಬೀಸುಗೆಯ್, ಬೀಸುದೋಳು, ಬೀಸುವಲೆ, ಬೀಸಾಡು-ಕೆಯ್ಬೀಸು, ಬಲೆವೀಸು.

ನಗು— (ಹಸನೇ) ನಗೆ, ನಗಿಸು, ನಗೆವಡಿ, ನಗೆವಳಿ, ನಗೆಗಾರ, ನಗೆವಳಿಕಾರ, ನಗೆವಡಿಕಾರ, ನಗುಗೇಡು, ನಗುವೊಗ, ನಗೆಯಾಡು, ನಗಾಡು, ನಗೆಗಡಲು, ನಗೆಗಣ್ಣು, ನಗೆಗೂಡು, ನಗೆಗೇಡಿ, ನಗೆಗೇಡು, ನಗೆದೋರು, ನಗೆನೋಟ, ನಗೆಮಾತು, ನಗೆಮುಖ, ನಗೆವೊಗ, ನಗೆವೋರೆ, ನಗೆವೆಣ್ಣು, ನಗೆವೆರಸು, ನಗೆವೆಳ್ಸು-ನಸುನಗೆ, ಕಿರುನಗೆ, ಪೆರ್ನಗೆ, ಮುಗುಳ್ನಗೆ, ಮೆಲ್ನಗೆ.

ಹಿಡಿ— (ಕೈಯಲ್ಲಿ ಧರಿಸು, ಗ್ರಹಿಸು.) ಹಿಡಿಕೆ, ಹಿಡಿತ, ಹಿಡಿಹ, ಹಿಡು, ಹಿಡುಹು, ಹಿಡ್ಲು, ಹಿಡುವಳಿ, ಹಿಡುವಳಿದಾರ, ಹಿಡಿಪು, ಹಿಡಿಕಿ, ಹಿಡತ. ಹಿಡಲು (ಕಸಬರಿಕೆ), ಹಿಡಿಗಲು (ಪೊರಕೆ), ಹಿಡಿಲು (ಕಸಬರಿಕೆ, ಪೊರಕೆ), ಹಿಡಿಮ್ಸಗ, ಹಿಡಿಯಾಳು, ಹಿಡಿಸು, ಹಿಡಿದಾಟ, ಹಿಡಿದಾಡು, ಹಿಡಿಕೊಳ್ಳು, ಹಿಡಕೊಳ್ಳು, ಹಿಡಿ(ಡ)ತರಿಸು, ಹಿಡಿತರು, ಹಿಡಿಗೆಯ್, ಹಿಡಿಕೆಯ್ಸು, ಹಿಡಿವಿಡಿ, ಹಿಡಿಸೂಡಿ-ತಲೆಹಿಡಿಕಿ.

ಸಾಗು— (ಹಸನುಮಾಡು) ಸಾಗವಳಿ, ಸಾಗಿಸು, ಸಾಗ, ಸಾಗುವಳಿ-ಸಾಗವಾಗು, ಸಾಗುಬೀಳು, ಸಾಗುಮಾಡು, ಸಾಗುಸಂತು-ಸಾಗುವಳಿಕಾಲ, ಸಾಗುವಳಿಮಾಡು, ಸಾಗುವಳಿಯಾಗು.

ನಡೆ— (ಹೋಗು, ಚಲಿಸು) ನಡ, ನಡಗೆ, ನಡಿಕೆ, ನಡಿಗೆ, ನಡತೆ, ನಡತೆವಂತ, ನಡಪು, ನಡಸು, ನಡಿಸು, ನಡೆಯಿಸು, ನಡೆಸು, ನಡವಳಿ, ನಡಾವಳಿ, ನಡವಳಿಕೆ, ನಡವಳಿತ, ನಡೆವಳಿ, ನಡೆವಳಿತ, ನಡವಡಿಕೆ, ನಡವಳಿಕಾರ, ನಡವೆ, ನಡಸುವಿಕೆ, ನಡಹ, ನಡೆವಳಿಕಾರ, -ನಡೆದಾಡು, ನಡೆದಾಟ, ನಡೆಯಗೊಡು-ನಡಪಾಡು, ನಡಪಾಡುಹ-ನಡತೆಗೆಡು, ನಡೆತೆಯಿಂದಿರು-ನಡಿಸಿತರು -ನಡೆಗಲಿ, ನಡೆಗಿಡು, ನಡೆಗುಂಗು, ನಡೆಗೆಡಿಸು, ನಡೆಗೆಡು, ನಡೆಗೋಟೆ, ನಡೆಚಪ್ಪರ, ನಡೆತೋರಣ, ನಡೆನಡೆಗೆ, ನಡೆಮಾಡ, ನಡೆಮಾಡು, ನಡೆವೆಣ, -ಕಾಲುನಡೆ, ಕಾಲ್ನಡೆ, ಬಿಗುನಡೆ, ಬಿರುನಡೆ, ಮೆಲ್ನಡೆ.

ಬೆಳೆ— (ವೃದ್ಧಿಯಾಗು, ಅಭಿವೃದ್ಧಿಹೊಂದು, ಹೆಚ್ಚಾಗು) ಬೆಳಸು, ಬೆಳಯಿಸು, ಬೆಳವಣಿಗೆ, ಬೆಳವಳಿಗೆ, ಬೆಳಿವಣಿಗೆ, ಬೆಳುವಣಿಗೆ, ಬೆಳವಿಗೆ, ಬೆಳಿಸು, ಬೆಳೆಸು, ಬೆಳೆಯುವಿಕೆ-ಬೆಳೆಗೆಯ್, ಬೆಳೆಗೇಡು, ಬೆಳೆನೆಡು, ಬೆಳೆಬಿತ್ತು, ಬೆಳೆಮಾಡು, ಬೆಳೆಯಿಡಿಸು, ಬೆಳೆಯಿಡು, ಬೆಳೆಪೊಲ.

ಹಬ್ಬು— (ಪಸರಿಸು) ಹಬ್ಬಿಸು, ಹಬ್ಬುಗೆ, ಹಬ್ಬುವಿಕೆ, -ಹಬ್ಬುಗಿಡಿ.

ಮೂಡು— (ಹುಟ್ಟು, ಉದಯಿಸು) ಮೂಡಿಸು, ಮೂಡ, ಮೂಡಿ, ಮೂಡಿಗೆ-ಮೂಡಣ, ಮೂಡಗಡೆ, ಮೂಡವೆಟ್ಟು, ಮೂಡಲು, ಮೂಡುಗಡೆ.

ನಲಿ— (ಮೆಚ್ಚು, ಸಂತೋಷಪಡು) ನಲ್, ನಲ, ನಲವು, ನಲಿಪು, ನಲುವು, ನಲಿ, ನಲಿವು, ನಲ್ಮೆ, ನಲ್ಮೆಗಾರ್ತಿ, ನಲ್ಲ, ನಲ್ಲೆ,-ನಲ್ಕಳಲು, ನಲ್ಗಾದೆಗಾರ, ನಲ್ಗುಟುಕು, ನಲ್ಗುದುರೆ, ನಲ್ಗೆಳೆಯ, ನಲ್ನುಡಿ, ನಲ್ಪರಕೆ, ನಲ್ಮೆಸುನಿ, ನಲ್ಲುಣಿಸು, ನಲ್ವೆರೆ, ನಲ್ವೊಗ-ನಲವಾನು, ನಲವೆಚ್ಚು, ನಲವೇರು, ನಲವೇರು, -ನಲಿದಾಡು, ನಲಿವರಿ, ನಲಿವಾರು-ನಲ್ಲತೈಲ, ನಲ್ಲವಸ್ತು.

ಮುತ್ತು— (ಸುತ್ತುಗಟ್ಟು, ಆವರಿಸು.) ಮುತ್ತಿಸು, ಮುತ್ತಲು, ಮುತ್ತಿಗ, ಮುತ್ತಿಗೆ, ಮುತ್ತುಹ, ಮುತ್ತೆ, ಮುತ್ತುವಿಕೆ-ಮುತ್ತಿಗೆಇಕ್ಕು, ಮುತ್ತಿಗೆಹಾಕು, ಮುತ್ತಿಗೆತೆಗೆ-ಸುತ್ತಮುತ್ತಲು, ಸುತ್ತುಮುತ್ತಲು,— ಪರಿಮುತ್ತೆ.

ನುಡಿ— (ಮಾತಾಡು, ಹೇಳು) ನುಡಿಸು, ನುಡಿಹ, ನುಡಿತ, ನುಡಿಯಿಸು, ನುಡಿಯುವಿಕೆ, ನುಡಿಕಾ(ಗಾ)ರ, ನುಡಿವಳಿ, ನುಡಿವಳಿಕಾರ, ನುಡಿಸುಹ (ಆಭಾಷಣ, ಆಲಾಪ- Making speak, addressing), -ನುಡಿಗಲಿ

ನುಡಿಗಲಿಸು, ನುಡಿಗೇಡು, ನುಡಿಗೊಡು (ಭಾಷೆಕೊಡು), ನುಡಿಜಾಣ (Talkative), ನುಡಿಮೇಳ (A wind-instrument), ನುಡಿವಡೆ. ನುಡಿವೆಣ್ (ಸರಸ್ವತಿ), ನುಡಿವೆಣ್ಣಾಳ್ವ (ಬ್ರಹ್ಮ), ನುಡಿವೆಣ್ಣೆನಿಯ (ಬ್ರಹ್ಮ) -ಆಗುನುಡಿ, ಊರುಗನುಡಿ, ಎಡೆನುಡಿ, ಒಳ್ನುಡಿ, ಚುನ್ನನುಡಿ, ಜವಳಿನುಡಿ, ತಪ್ಪುನುಡಿ, ತಳರ್ನುಡಿ, ತೊದಳ್ನುಡಿ, ನಾಣ್ನುಡಿ, ಬಲುನುಡಿ, ಬಿನುಗುನುಡಿ, ಬಿರುನುಡಿ, ಬಿರುಸುನುಡಿ, ಬೇಸರ್ನುಡಿ, ಮರುಳಾಟನುಡಿ, ಮೆಲ್ನುಡಿ, ಹೊಳಹುನುಡಿ.

ಹಾರು— (ಜಿಗಿ, ನೆಗೆ) ಹಾರಿಕೆ, ಹಾರಿಸು, ಹಾರುವಿಕೆ, ಹಾರುಗಾಲಿ (ಕಾಲಿ) (-ಹಾರುವ ಕಾಲುಳ್ಳವಳು- ಅತ್ತಿತ್ತ ಓಡಾಡುವ ಹೆಂಗಸು), -ಹಾರತೆಗೆ, ಹಾರಬಡಿ, ಹಾರಾಡು, ಹಾರುಗುಪ್ಪೆ (ಹಾರುಗುಪ್ಪೆ ಆಟವೆಂದು ಮಕ್ಕಳಾಡುವ ಒಂದು ತರದ ಆಟ), ಹಾರುಗೆಯ್ತ.

ಸೋಲು— (ಪರಾಜಯಹೊಂದು) ಸೋಲಿಸು, ಸೋಲ, ಸೋಲುವಿಕೆ, ಸೋಲುವೆ, ಸೋಲ್ಮೆ, ಸೋಲ್ವಿಕೆ-ಸೋಲ ಗೆಲವು, ಸೋಲಪಡೆ, ಸೋಲು ಗೆಲವು, ಸೋಲ ಗೆಲ.

ಬಾಳು— (ಜೀವನೇ, ಬದುಕಿರು) ಬಾಳಿ, ಬಾಳಿಕೆ, ಬಾಳ್ಕೆ, ಬಾಳಿವೆ, ಬಾಳ್ವೆ, ಬಾಳಿಸು, ಬಾಳುವಿಕೆ, ಬಾಳುವೆ, ಬಾಳ್ವಿಕೆ, ಬಾಳಕ (ಬಾಳುಕ) (ಸೀಳ್ದು ಒಣಗಿಸಿಟ್ಟ ಕಾಯಿಪಲ್ಯ- ಹಣ್ಣುಹಂಪಲುಗಳು), -ಬಾಳ್ದಲೆ, ಬಾಳ್ತೊದಲು, ಬಾಳ್ವಣ, ಬಾಳ್ವೆಳೆ (A thriving crop), -ಬಂಡು ಬಾಳು, ಬಾಳುಗೆಡಿಸು (To ruin one's married state), ಬಾಳುವೆ ಗೆಡು, ಮರುವಾಳು-ಪುದುವಾಳು, ಮರೆವಾಳು, ಜೊಂಳವಾಳ (An associate, a partner), ಜೋಳವಾಳು (Joint-living or concern, partnership).

ಸುಳಿ— (ಸುತ್ತ ತಿರುಗು) ಸುಳಿವು, ಸುಳಿಹು, ಸುಳುವು, ಸುಳುಹು, ಸುಳಿಸು, —ಸುಳಿದಾಡು, ಸುಳಿದಾಟ, ಸುಳಿಗಾಳಿ, ಸುಳಿಗುಂಡಿ, ಸುಳಿಗುರುಳು, ಸುಳಿಗೊಳ್ಳು, ಸುಳಿದಲೆ, ಸುಳಿನಡಿಕೆ, ಸುಳಿನಾಭಿ, ಸುಳಿ ಮುಂಗುರುಳು, ಸುಳಿಯೆಲೆ, ಸುಳಿವರು.

ನೋಡು— (ದೃಷ್ಟಿಸು, ಕಾಣು) ನೋಡಿಸು, ನೋಡುವಿಕೆ, ನೋಟ,

ನೋಟಕ, ನೋಟಕಾ(ಗಾ)ರ– ಕಣ್ಣೋಟ, ಬಿರುನೋಟ, ಮೆಯ್ನೋಟ, ಸವಿನೋಟ, ನೋಟಬೇಟ, ಕಿರಿನೋಟ, ಓರೆನೋಟ, ನಲ್ನೋಟ.

ಸಲ್, ಸಲ್ಲು — (ಮುಟ್ಟು, ಸೇರು) ಸಲೆ, ಸಲಿಕೆ, ಸಲ್ಲಿಕೆ, ಸಲ್ಲಿಸು, ಸಲಿಸು, ಸಲ್ವಳಿ, ಸಲುವಳಿ, ಸಲುವು, ಸಲುವಾಗಿ (ಮುಟ್ಟುವುದಕ್ಕಾಗಿ— ಉದ್ದೇಶದಿಂದ).

ಹಂಚು— (ಪಾಲುಮಾಡು, ವಿಭಾಗಿಸು) ಹಂಚುವಿಕೆ, ಹಂಚಿಕೆ, ಹಂಚಿಗಾರ (ಪಾಲು ಮಾಡುವವ),

ಸುತ್ತು— ಸುತ್ತ, ಸುತ್ತುವಿಕೆ, ಸುತ್ತಲು, ಸುತ್ತಲೆ, ಸುತ್ತಾಲೆ (ಪ್ರಕಾರ), ಸುತ್ತಿಸು, ಸುತ್ತು, ಸುತ್ತಳತೆ (ಪರಿಘ)- ಸುತ್ತಮುತ್ತು, ಸುತ್ತಮುತ್ತಲು, ಸುತ್ತ ಬರು, ಸುತ್ತಿ ಬರು, ಸುತ್ತು ತಿರುಗು, ಸುತ್ತಿರುಗು, ಸುತ್ತಿರಿ, ಸುತ್ತುಗಟ್ಟು, ಸುತುಮುತ್ತಲು, ಸುತ್ತುವಳಯ, ಸುತ್ತೋಲೆ,— ಅದು ಸುತ್ತ (thence, from that time).

ಮುಚ್ಚು— (ಅಡಗಿಸು, ಆವರಿಸು, ಹೊದಿಸು) ಮುಚ್ಚಕ, ಮುಚ್ಚಲು, ಮುಚ್ಚಳ, ಮುಚ್ಚಳಿಕೆ, ಮುಚ್ಚಿಕೆ, ಮುಚ್ಚಿಗೆ, ಮುಚ್ಚಿಸು, ಮುಚ್ಚುವಿಕೆ, ಮುಚ್ಚೆ, ಮುಚ್ಚುಗಣ್ಣು, ಮುಚ್ಚುಗಣೆ, ಮುಚ್ಚುಗದಹು, ಮುಚ್ಚುಗಲ್ಲು, ಮುಚ್ಚುಮರೆ— ಕಣ್ಣಮುಚ್ಚಳಿಕೆಯಾಟ, ಕಣ್ಣಮುಚ್ಚಿಕೆಯಾಟ— ಎಸಮುಚ್ಚೆ (A cover).

೧೪. ಮೂಲರೂಪ.

ಅಕ್ (ಧಾ)— ಗುರುತು ಮಾಡು. **ಅಂಕ**— ಗುರುತು, ಕಲೆ. **ಅಂಕನ**— ಗುರುತು ಹಾಕೋಣ, ಮುದ್ರೆ ಒತ್ತೋಣ. **ಅಂಕಿತ**— ಗುರುತು ಹಾಕಿದ, ವಶವಾಗಿರೋಣ-ಆಳು, ದಾಸ. (ಪ್ರಾಚೀನ ಕಾಲದಲ್ಲಿ ದನಕರುಗಳಿಗೆ ಬರೆ ಹಾಕಿ ಗುರುತು ಮಾಡುವಂತೆ ಆಳು ಮಕ್ಕಳಿಗೆ ಸಹ ಗುರುತು ಮಾಡುವ ರೂಢಿ ಇತ್ತಂತೆ).

ಅಗ್ (ಧಾ)— ಹೋಗು; ಚಲಿಸು. **ಅಂಗ**— (ಚಲಿಸು-ಹೋಗುವಂಥಾದ್ದು)-ದೇಹ, ಅವಯವ, ಮನಸ್ಸು. **ಅಂಗಣ**— ಆವಾರದ ಗೋಡೆಯೊಳಗಿನ (ಸಂಚರಿಸುವ) ಪ್ರದೇಶ. **ಅಂತರಂಗ**— ಒಳಗಿನ ಮನಸ್ಸು. **ಬಹಿರಂಗ**— ಹೊರಗಿನ ಸ್ಥಳ, ಹೊರ ಮೈ. **ಅಂಗನಾ**— ಸುಂದರವಾದ

ಅಂಗದಿಂದ ಶೋಭಿಸುವವಳು-ಸ್ತ್ರೀ, ಹೆಂಗಸು. **ವ್ಯಂಗ**— ಅವಯುವ ಕಡಿಮೆ ಯಾದವ--ಅಂಗಹೀನ. **ಸಾಂಗ**— ಸಂಪೂರ್ಣ ಅಂಗ ಇಲ್ಲವೆ ಭಾಗಗಳು ಉಳ್ಳ-ಸಂಪೂರ್ಣ. **ಅಪಾಂಗ**— ಕಡೆಗಣ್ಣು.

ಅಂಜ್ (ಧಾ)— ಸ್ಪಷ್ಟ ಮಾಡು, ಜೋಡಿಸು, ಪ್ರದರ್ಶಿಸು, ಹೊಳೆ. **ಅಂಜಲಿ**— ಎರಡೂ ಕೈಗಳನ್ನು ಜೋಡಿಸಿದ ಮಧ್ಯದ ಪೊಳ್ಳು ಪ್ರದೇಶ-ಬೊಗಸೆ. **ವ್ಯಂಜನ**- ಸ್ವರರಹಿತ ಅಕ್ಷರ; ಸ್ಪಷ್ಟಪಡಿಸುವಿಕೆ. **ವ್ಯಂಜಕ**— ಸ್ಪಷ್ಟಪಡಿಸುವ, ಲಕ್ಷಣವುಳ್ಳ. **ಅಂಜನ**— ದೇಹವನ್ನು ಚಂದವಾಗಿ ಪ್ರದರ್ಶಿಸುವುದಕ್ಕಾಗಿ ಅಥವಾ ದೇಹದ ಶೋಭೆಗಾಗಿ (ಕಾಡಿಗೆ ಮುಂತಾದುವನ್ನು) ಹಚ್ಚೋಣ-ಕಾಡಿಗೆ, ಕಜ್ಜಳ.

ಅಟ್ (ಧಾ)— ತಿರುಗು. **ಅಟನ**— ತಿರುಗೋಣ, ಸಂಚಾರ. **ಅಡವಿ**— ಅಟವಿ-ಕಾಡು, ಅರಣ್ಯ. **ಪರ್ಯಟನ**— ಹೆಚ್ಚಾಗಿ (ನಾಲ್ಕು ಕಡೆಗೆ) ತಿರುಗೋಣ-ಅಲೆಯುವಿಕೆ.

ಅತ್ (ಧಾ)— ಸಂಚಾರ ಮಾಡು. **ಆತ್ಮಾ**— ದೇಹದಿಂದ ಬೇರೆಯಾಗಿ ಮರಣವಿಲ್ಲದೆ ಸಂಚರಿಸುವುದು-ಜೀವ. **ಆತ್ಮೀಯ**— ತನ್ನ ಜೀವದವ, ತನ್ನವನೇ ಆದ-ಬಾಂಧವ. **ಅತಿಥಿ**— ಆಕಸ್ಮತ್ತಾಗಿ ಬಂದು ಒಂದು ದಿನದ ಮಟ್ಟಿಗೆ ನಿಂತು ಹೋಗುವವ-ಅಭ್ಯಾಗತ. **ಜೀವಾತ್ಮ. ಪರಮಾತ್ಮ.** (ಆತಿಥ್ಯ-ಬಂದವನನ್ನು ಮರುದಿನವೇ ಮನೆಯಿಂದ ಹೊರಡಿಸುವ ಪಿತೂರಿ-ಅ. ಕೋಶ).

ಅದ್ (ಧಾ)- ತಿನ್ನು. **ಅನ್ನ**— ಆಹಾರ. (ಅನ್ನ ಮೂಲಂ ಬಲಂ ಪುಂಸಾಂ; ಆದರೆ, ಸ್ತ್ರೀಯರಿಗೆ? .... 'ಅನ್ನಾತುರಾಣಾಂ ನಮತಂ ನ ಜಾತೀ'. ಅನ್ನವಿದ್ದಾಗಲೆ ತನ್ನನ್ನು ತೊಂ, ಇನ್ನು ಅನ್ನವಿಲ್ಲದಿದ್ದರೆ, ತಾಳ ಕೇಳಬೇಕೆ?- ಅನರ್ಥ ಕೋಶ). **ಅದನ**— ತಿನ್ನೋಣ. **ಕದನ್ನ**—(ಕದ್- ಕೆಟ್ಟ) ಕೀಳಾದ ಅನ್ನ; ರುಚಿಯಿಲ್ಲದ ಆಹಾರ. (ಕದನ್ನ ಪ್ರಸಂಗ-ಹೋಟಲೂಟ-ಅ. ಕೋಶ). **ಪರಾನ್ನ**— ಬೇರೆಯುವರು ನೀಡಿದ ಅನ್ನ. (ಪರಾನ್ನಂ-ಪ್ರಾಣರಕ್ಷಣಂ-ಅ. ಕೋಶ) **ಪರಮಾನ್ನ**— ಹೆಚ್ಚಿನ ಎಲ್ಲಾ ಅನ್ನಗಳಲ್ಲಿ ಶ್ರೇಷ್ಠವಾದುದು-ಪಾಯಸ. **ಪಕ್ವಾನ್ನ**— ಚೆನ್ನಾಗಿ ಬೇಯಿಸಿದ ಆಹಾರ. (ರೂಢಿಯಲ್ಲಿ ಹಬ್ಬ ಹುಣ್ಣಿವೆಗಳಿಗೆ ಮಾಡತಕ್ಕ ಪದಾರ್ಥಗಳಿಗೆ ಈ ಶಬ್ದವನ್ನು ಉಪಯೋಗಿಸು

ತ್ತಾರೆ)-ಸವಿತಿನಿಸು, ಮೃಷ್ಟಾನ್ನ. **ಮಿಷ್ಟಾನ್ನ**— (ಮಿಷ್ಟ-ಸವಿ) ಸವಿಗೂಳು, ರಸದೂಟ. **ಕ್ರವ್ಯಾದ**— ಹಸಿ ಮಾಂಸ ತಿನ್ನುವವ-ರಾಕ್ಷಸ.

ಅನ್ (ಧಾ)— ಬದುಕು. **ಅನಿಲ**— ಬದುಕುವ ಮೂಲತತ್ವ— ವಾಯು, ಗಾಳಿ. **ಪ್ರಾಣ**— ಬದುಕು, ಜೀವ. **ಪ್ರಾಣಿ**- ಬದುಕುವಂಥಾದ್ದು- ಪಶು, ಮನುಷ್ಯ.

ಅಪಾನ, ಉದಾನ, ವ್ಯಾನ, ಸಮಾನ.

ಅಪ್ (ನಾಮ)— ನೀರು. **ಅಬ್ಜ**— ನೀರಲ್ಲಿ ಹುಟ್ಟುವುದು— ಕಮಲ. **ಅಬ್ದ**— ನೀರನ್ನು ಕೊಡುವುದು—ಮೋಡ. **ಅಂತರೀಪ**— ಅಂತರ್— ಒಳಗೆ. ಈಪ—ನೀರು. (ಅಪ್ ಶಬ್ದಕ್ಕೆ ವಿಕಾರದಿಂದ ಈಪ ಎಂಬ ರೂಪ ಉಂಟಾಗುವುದು). ನೀರಿನ ನಡುವೆ ಇರುವ ಭೂಭಾಗ—ನೀರು ಸುತ್ತಿಕೊಂಡ ನೆಲ—ನಡುಗಡ್ಡೆ. **ದ್ವೀಪ**— ದ್ವಿ ಎರಡು. ಈಪ—ನೀರು—ಎರಡು ಕಡೆಗಳಲ್ಲಿ ನೀರು ಆವರಿಸಿರುವ ಭೂಭಾಗ—ಕುದುರು. (ಅಂತರೀಪ ಮತ್ತು ದ್ವೀಪಗಳ ಅರ್ಥವನ್ನು ಚೆನ್ನಾಗಿ ಮನನ ಮಾಡಿರಿ).

ಅಯ್ (ಧಾ—) ಹೋಗು. **ಅಯನ**— ಹೋಗೋಣ, ಮಾರ್ಗ. **ಉತ್ತರಾಯಣ**— (ಮಕರ ಸಂಕ್ರಮಣದಿಂದ ಕರ್ಕ ಸಂಕ್ರಮಣದ ವರೆಗಿನ- ಆರು ತಿಂಗಳ ಅವಧಿಯು) ಸೂರ್ಯನ (ಉತ್ತರಕ್ಕೆ) ಹೋಗುವಿಕೆ. (ಉತ್ತರಾಯಣ— ಪರೀಕ್ಷೆ ಋತು, ಮಾರ್ಚಿ ತಿಂಗಳಿಂದ ಜೂನ್ ವರೆಗೆ- ಅ. ಕೋಶ)

ಅರ್ಚ್ (ಧಾ)— **ಪೂಜಿಸು. ಅರ್ಚನ**— ಪೂಜೆ. **ಅರ್ಚಕ**- ಪೂಜೆ ಮಾಡುವವ, ಪೂಜಾರಿ. **ಅರ್ಚಿತ**— ಪೂಜಿಸಲ್ಪಟ್ಟ, ಪೂಜಿಸಿದ. **ಅರ್ಚ್ಯ**- ಪೂಜ್ಯ, ಮಾನ್ಯ. **ಅರ್ಚೆ (ಅರ್ಚಾ)**— ಪೂಜೆ. **ಅಭ್ಯರ್ಚನ**— (ಅಭಿ+ ಅರ್ಚನ) ಹೆಚ್ಚಿನ ಪೂಜೆ ಪುರಸ್ಕಾರ. **ಪ್ರಾರ್ಚನ**— (ಪ್ರ-ಆಧಿಕ್ಯ+ಅರ್ಚನ).

ಅರ್ಜ್ (ಧಾ)— ಗಳಿಸು. **ಅರ್ಜನ**- ಗಳಿಕೆ, ಸಂಪಾದನೆ. **ಅರ್ಜಿತ**- ಗಳಿಸಿದ, ಸಂಪಾದಿಸಿದ. **ಉಪಾರ್ಜನ**— (ಉಪ+ಅರ್ಜನ) (ಉಪ+ಆದಿಕ್ಯ) ಹೆಚ್ಚಿನ ಗಳಿಕೆ, ಪಡೆ. **ದೈವಾರ್ಜಿತ**— ದೈವದಿಂದ ಗಳಿಸಿದ್ದು. **ಪಿತ್ರಾರ್ಜಿತ**- ತಂದೆಯಿಂದ ಗಳಿಸಿದ್ದು— ತಂದೆ ಗಳಿಸಿದ್ದು. **ಪೂರ್ವಾರ್ಜಿತ**— ಹಿಂದಿನವ ಗಳಿಸಿದ್ದು— ಮೊದಲಿನಿಂದಲೇ ಬಂದುದು. **ಸ್ವಾರ್ಜಿತ**— (ಸ್ವ—ಸ್ವಂತ, ತಾನು) —ತಾನು ಗಳಿಸಿದ, ತಾನು ಸ್ವಂತ ಗಳಿಸಿದ್ದು.

ಅರ್ಥ್ (ಧಾ) —ಬೇಡು, ಕೇಳು. **ಅರ್ಥ**— ಕೇಳತಕ್ಕ ತಾತ್ಪರ್ಯ —ಉದ್ದೇಶ, ಹೇತು, ಕಾರಣ, ಪ್ರಾರ್ಥನೆ, ಬಿನ್ನಹ— ಎಲ್ಲರೂ ಬೇಡತಕ್ಕ ವಸ್ತು—ಹಣ, ಸಂಪತ್ತು. (ಅರ್ಥಕೋಶ— ಕ್ಲಿಷ್ಟ ಪದಾರ್ಥಗಳಿಗೆ ಕ್ಲಿಷ್ಟ ತರವಾದ ಅರ್ಥಗಳನ್ನು ಕೊಟ್ಟು, ವಾಚಕರನ್ನು ಕಂಗೆಡಿಸುವ ವಿಧಾನ; ಅಶ್ಲೀಲ ಪದಗಳನ್ನು ಒಂದೂ ಬಿಡದೆ ಉಪಯೋಗಿಸುವ ಏಕಮಾತ್ರ ಗ್ರಂಥ— ಅ. ಕೋಶ. ಅರ್ಥಶಾಸ್ತ್ರ— ಇದನ್ನು ಹೇಳಿಕೊಟ್ಟು ಕೆಲವರು ಅರ್ಥ ಗಳಿಸುತ್ತಾರೆ— ಅ. ಕೋಶ). **ಅರ್ಥಿ**— ಬೇಡುವವ—ಭಿಕ್ಷುಕ. **ಪ್ರಾರ್ಥಕ**— ಬೇಡುವವ, ಕೇಳಿಕೊಳ್ಳುವವ, ಅರಿಕೆ ಮಾಡುವವ. **ಪ್ರಾರ್ಥನೆ**— (ಪ್ರ+ ಅರ್ಥನಾ) —ಬೇಡಿಕೆ, ಅಪೇಕ್ಷೆ, ಅರಿಕೆ. (ಈಗಿನ ಸಭೆಗಳಲ್ಲಿ, ಭಾಷಣಕಾರರು ಭಾಷಣ ಪ್ರಾರಂಭ ಮಾಡುವ ಮೊದಲೇ, ಮಾಡಲೇ ಬೇಕಾದ ಕೆಲಸ— ಅ. ಕೋಶ). **ಯಥಾರ್ಥ**— (ಯಥಾ—ಹೇಗೆ+ಅರ್ಥ) ಅರ್ಥ ಹೇಗೆ ಅದೆಯೋ ಹಾಗೆ— ಇದ್ದ ರೀತಿ— ಅರ್ಥಕ್ಕೆ ಸರಿಯಾಗಿ— ಸತ್ಯವಾಗಿ— ಸತ್ಯ, ನಿಜ. **ವ್ಯರ್ಥ**— ಅರ್ಥವಿಲ್ಲದೆ, ಬರಿ, ಸುಮ್ಮನೆ. (ವ್ಯರ್ಥಕಾಸ್ತ್ರ—ಮುಕ್ಕಾಲು ಮೂರು ವೀಣೆ, ಎಲ್ಲವೂ— ಅ. ಕೋಶ). **ಸಮರ್ಥ**— (ಸಮ್+ಅರ್ಥ)— ಶಕ್ತಿಯುಳ್ಳವ, ಬಲಶಾಲಿಯಾದ. (ಹಿಂದುಳಿದವ— ಅ. ಕೋಶ). **ಅನ್ವರ್ಥ**— (ಅನು+ಅರ್ಥ) ಅರ್ಥವನ್ನು ಅನುಸರಿಸಿದ್ದು— ಅರ್ಥಕ್ಕೆ ಅನುಸಾರವಾದ. **ಸಮರ್ಥನ**— (ಸಮ್+ಅರ್ಥನ) ಸಂದರ್ಭಕ್ಕೆ ಯೋಗ್ಯವಾಗುವಂತೆ ಸ್ಪಷ್ಟಗೊಳಿಸುವಿಕೆ— ಪುಷ್ಟೀಕರಣ— ಪ್ರತಿಪಾದನ. **ಸ್ವಾರ್ಥ**— (ಸ್ವ+ಅರ್ಥ)— ತನ್ನ ಹಿತಸಾಧನೆ— ತನ್ನ ಲಾಭಕ್ಕಾಗಿಯೇ ಕೆಲಸಮಾಡುವ ಗುಣ. (ಸ್ವಾರ್ಥಪರ— ನಮ್ಮ ತಾಪತ್ರಯಗಳನ್ನು ಪರಿಹರಿಸುವ ಆಕಾಂಕ್ಷೆ ಇಲ್ಲದವ, ಸ್ವಾರ್ಥಿ— ಉಳಿದವರ ಸ್ವಾರ್ಥಕ್ಕೆ ಗಮನಕೊಡದವ— ಅ. ಕೋಶ)

ಅಲಂ (ಅವ್ಯಯ) —ಭೂಷಿಸೋಣ, ಶೃಂಗರಿಸೋಣ. **ಅಲಂಕಾರ**— ಶೃಂಗರಿಸುವಿಕೆ— ಭೂಷಣ, ಆಭರಣ ತೊಡವು. **ಅಲಂಕರಣ**— ಅಲಂಕರಿಸಿಕೊಳ್ಳೋಣ— ಆಭರಣ ಇಟ್ಟುಕೊಳ್ಳೋಣ— ಆಭರಣ. (ಅಲಂಕಾರ— ಡಾರ್ವಿನ್ ಹೇಳಿಕೆಯನ್ನು ಕೇಳುವ ಮುನ್ನವೇ ಕನ್ನಡಿಯ ಹೇಳಿಕೆಯಿಂದ ತಾವು ಕಪಿ ಸಂತತಿ ಎಂದು ಪತ್ತೆ ಹಚ್ಚಿಕೊಂಡ ಸ್ತ್ರೀ ಪುರುಷರು ಅದನ್ನು ಮರೆಮಾಚಲು ಅನುಸರಿಸುವ ಆತ್ಮವಂಚನೆಯ ವೈಖರಿ— ಅ. ಕೋಶ).

ಅವ್— (ಧಾ) —ಕಾಪಾಡು— ತೃಪ್ತಿಪಡಿಸು, ಸಂತೋಷಕೊಡು.

ಒಳ್ಳೆಯದನ್ನು ಮಾಡು.

ಅವನಿ— ಎಲ್ಲರನ್ನೂ ಕಾಪಾಡುವಂಥವಳು- ಎಲ್ಲರನ್ನು ತೃಪ್ತಿ ಪಡಿಸುವವಳು- ಭೂಮಿ. **ಅವನ**— ರಕ್ಷಣೆ. **ಅವನಿಪತಿ**— ಭೂಮಿಯ ಒಡೆಯ -ರಾಜ. **ಅವನಿಸುತೆ**— ಭೂಮಿಯ ಮಗಳು- ಸೀತೆ.

ಅಶ್ (ಧಾ) —ತಿನ್ನು. **ಅಶನ**— ಆಹಾರ, ಊಟ. **ಪ್ರಾಶನ**— (ಪ್ರ+ಅಶನ) -ತಿನ್ನುವಿಕೆ, ಕುಡಿಯುವಿಕೆ (ಪಂಚಗವ್ಯ ಪ್ರಾಶನ; ಅನ್ನಪ್ರಾಶನ –ಇ.) **ನಿರಶನ**— (ನಿರ್+ಅಶನ) -ತಿನ್ನದೆ ಇರೋಣ, ಉಪವಾಸ. **ಅಮೃತಾಶನ**— ಅಮೃತವನ್ನು ತಿನ್ನುವವ (ಕುಡಿಯುವವ) -ದೇವತೆ. **ಪವನಾಶನ** -ಗಾಳಿಯನ್ನು ತಿನ್ನುವವ- ಸರ್ಪ.

ಅಸ್ (ಧಾ) —ಇರು. **ಸತ್ಯ**— ಇರುವ ಸ್ಥಿತಿ, ಇದ್ದ ರೀತಿ, ದಿಟ. (ವ್ಯಾಪಾರ ಕ್ಷೇತ್ರಗಳಲ್ಲಿ ಸಿಗದ ವಸ್ತು; ಯುದ್ಧ ಪ್ರಾರಂಭವಾದಾಗ, ಮೊದಲು ಹತವಾಗುವುದು ಇದೇ; ಸತ್ಯವಂತನ ಹೆಂಡತಿ ಬೆತ್ತಲೆ (ಗಾದೆ). ಸತ್ಯನಾರಾಯಣ ಪೂಜೆ- ಸಾವಿರ ಸುಳ್ಳು ಹೇಳಿ, ಒಂದು ಸತ್ಯನಾರಾಯಣ ಪೂಜೆ ಮಾಡು; ಅದು ವರೆಗೂ ಎಣಿಸುತ್ತಾ ಹೋಗು. ಸತ್ಯಮಾರ್ಗ- ಬಹು ಸುಲಭವಾದ ಮಾರ್ಗ; ಏಕೆಂದರೆ ಇಲ್ಲಿ ಇತರ ಪ್ರಯಾಣಿಕರ ಗಲಾಟೆಯೇ ಇರುವುದಿಲ್ಲ. ಸತ್ಯಲೋಕ- ಮರ್ತ್ಯಲೋಕಕ್ಕೂ ಇದಕ್ಕೂ ಏನೇನೂ ಸಂಬಂಧವಿಲ್ಲ- ಅ. ಕೋಶ). **ಅಸ್ತಿತ್ವ**— ಇರೋಣ, ಇರುವಿಕೆ. **ಆಸ್ತಿಕ**—ದೇವರು ಇದ್ದಾನೆಂದು ನಂಬುವವ, ದೈವ-ದೇವ ಮೊದಲಾದುವುಗಳಲ್ಲಿ ನಂಬಿಕೆಯುಳ್ಳವ. (ಓಡಿ ಬರುವ ಹಾವುಗಳು ಇದನ್ನು ಕಾಣುತ್ತಲೂ ಓಡಿ ಹೋಗುವುವು- ಅ. ಕೋಶ) **ಆಸ್ತಿಕ್ಯ**— ದೇವರು ಇದ್ದಾನೆ ಎಂಬ ಭಾವನೆ. **ಆಸ್ತಿ**— ಇರುವಂಥಾದ್ದು- ಸಂಪತ್ತು. (ನಾವು ಬಿಟ್ಟು ಹೋಗಲೇಬೇಕಾದದ್ದು, ಲಾಯರುಗಳಿಗಾಗಿ- ಅ.) **ಸತ್**— ಇರುವ. **ಸತಿ**— ಹೆಂಡತಿ, ಸಾಧ್ವಿ. (ಸತಿ- ಆಗಲುಂ ಉಲಿವ ಸತಿ ಹೊಲ್ಲ. (ಸರ್ವಜ್ಞ). ಸತಿಯರು- ಪತಿಯರ ಕಷ್ಟಗಳನ್ನು ಅರ್ಧವಾಗಿಸುವರು, ಸುಖವನ್ನು ಇಮ್ಮಡಿಸುವರು, ಖರ್ಚನ್ನು ಮುಮ್ಮಡಿಸುವರು. ಸತಿ- ಸತಿ ಸಪ್ತಮಿ; ಅಂದರೆ, ಮಿಕ್ಕ ಆರು ಯಾವುವು? ಅರಿಷಡ್ವರ್ಗಗಳಿರಬಹುದೆ? ಸತ್ಪಾತ್ರ- ಸತ್ಪಾತ್ರ ದೊರೆತಿಲ್ಲ ಎಂಬುದೇ ದಾನಮಾಡದವರ ಸೋಗು- ಅ.) **ಅಸತ್ಯ**— ಇಲ್ಲದ್ದು, ಸುಳ್ಳು. **ಸತ್ವ**— ಇರೋಣ; ಬದುಕು, ಇರುವಿಕೆ, ಜೀವ, ಶಕ್ತಿ, ಸಾರ. **ಸತ್ಯಧರ್ಮ**— ನಿಜವಾದ ಧರ್ಮ. **ಸತ್ಯನಿಷ್ಠ**—

ನಿಜವಾದ ಭಕ್ತಿಯುಳ್ಳವ. **ಸತ್ಯವಾಕ್ಯ**— ನಿಜವಾಗಿರುವ ಮಾತು. **ಸತ್ಯ ಸಂಧ**— (ಸಂಧಾ- ಪ್ರತಿಜ್ಞಾ). ಮಾತಿಗೆ ತಪ್ಪದವ, ಕೊಟ್ಟ ಮಾತನ್ನು ನಡೆಸುವವ.

ಅಸ್ (ಧಾ) —ಚಲ್ಲು. **ಅಸ್ತ್ರ**— ಚಲ್ಲಲ್ಪಡುವ ಆಯುಧ ವಿಶೇಷ-ಬಾಣ. **ನಿರಸನ**— (ನಿರ್+ಅಸನ) (ನಿರ್-ಅತ್ಯಂತ). ಹೊರಗೆ ಚಲ್ಲು, ಕಿತ್ತು ಹಾಕೋಣ, ತ್ಯಾಗ ಮಾಡೋಣ. **ವ್ಯಸನ**— ನಾನಾ ಮುಖಗಳಲ್ಲಿ ಹೊರಗೆ ಚಲ್ಲು. (Throwing in different directions, away, or about; Falling away). ಅಟ್ಟುವಿಕೆ, ಪತನ, ಅತ್ಯಾಸಕ್ತಿ, ಕೆಟ್ಟ ಚಾಳಿ, ದುಃಖ, ಕಳವಳ, ಚಿಂತೆ.

ಆಪ್ (ಧಾ) —ದೊರೆ, ಪಡೆ. **ಆಪ್ತ**- ತನಗೆ ದೊರೆತವ, ತನ್ನನ್ನು ಪಡೆದವ, ತನ್ನವ- ಹಿತವಂದಿಗ. **ಪ್ರಾಪ್ತ**- (ಪ್ರ+ಆಪ್ತ) ದೊರೆತ, ಪಡೆದ, ಹೊಂದಿದ, ಗಳಿಸಿದ, ಬಂದ. **ಪ್ರಾಪ್ಯ**— (ಪ್ರ+ಆಪ್ಯ) ದೊರೆಯತಕ್ಕ, ಪಡೆಯತಕ್ಕ **ಆಪ್ಯ**— ಹೊಂದಬಹುದಾದ, ದೊರೆಯಬಹುದಾದ, ಹೊಂದುವಂಥ, ದೊರಕಿಸಲು ಯೋಗ್ಯ. **ಆಪ್ತಿ**— ಹೊಂದುವಿಕೆ, ದೊರಕುವಿಕೆ. **ವ್ಯಾಪಕ**- ನಾಲ್ಕು ಕಡೆ ದೊರೆಯುವ, ಹೋದಲ್ಲಿ ಇರುವವ, ತುಂಬಿರುವ. **ಸಮಾಪ್ತ**— (ಸಮ್+ಆಪ್ತ) ಪೂರಾ ದೊರೆದ, ಕೊನೆಗೊಂಡ, ಮುಗಿದ. **ಅವಾಪ್ತ**— ದೊರೆತ, ಸಿಕ್ಕಿದ, ಪಡೆದ. **ಪ್ರಾಪ್ತಿ**— (ಪ್ರ+ಆಪ್ತಿ). **ಸಮಾಪ್ತಿ**- (ಸಮ್+ಆಪ್ತಿ). **ಪರ್ಯಾಪ್ತ** (ಪರಿ+ಆಪ್ತ) **ಪರ್ಯಾಪ್ತಿ** (ಪರಿ+ಆಪ್ತಿ). **ವ್ಯಾಪ್ತಿ.**

ಆಸ್ (ಧಾ) —ಕೂಡು. **ಆಸನ**— ಕುಳಿತುಕೊಳ್ಳುವ ಸ್ಥಳ-ಸಾಧನ -ಗದ್ದಿಗೆ. **ಸಿಂಹಾಸನ**— ಸಿಂಹದ ಆಕಾರದ ಗದ್ದಿಗೆ. (ಸಿಂಹಾಸನಾರೋಹಣ- ಒಂದು ಮಹಾ ಸಾಹಸಿ; ನಾಲ್ಕು ಸಿಂಹಗಳನ್ನು ನಿಲ್ಲಿಸಿ, ಅವುಗಳ ಮೇಲೆ ಪೀಠವನ್ನಿರಿಸಿ, ಅದರ ಮೇಲೆ ಕೂರುವುದು; ಸಿಂಹಗಳಿಗೆ ತಮ್ಮ ಶಕ್ತಿ ಗೊತ್ತಾದ ಕೂಡಲೇ ಅಪಾಯ- ಅ.) **ಶರಾಸನ**— (ಶರ+ಆಸನ) -ಬಾಣದ ಆಸನ- ಬಿಲ್ಲು. **ನೃಪಾಸನ**— (ನೃಪ+ಆಸನ) ಅರಸನ ಗದ್ದಿಗೆ. **ಆಸನ್ನ**— ಕುಳಿತಂಥ.

ಇ (ಧಾ) —ಹೋಗು. **ಅಯನ**— ಹೋಗುವಿಕೆ. **ಉದಯ**— ಕಣ್ಣಿಗೆ ಕಾಣಿಸಲು ಹೋಗುವಿಕೆ, ಏಳ್ಗೆ, ಮೂಡು. **ಸಮಯ**— ಕೂಡಿ

ಹೋಗೋಣ, ಪ್ರಸಂಗ, ಹೊತ್ತು. **ಉಪಾಯ**— (ಉಪ+ಅಯ) –ಹಂಚಿಕೆ. **ಸಹಾಯ**— (ಸಹ+ಅಯ) ಒಡನೆ ಹೋಗೋಣ, ಜತೆ, ಬೆಂಬಲ, ನೆರವು. **ಪರ್ಯಾಯ**— (ಪರಿ+ಅಯ) –ಸುತ್ತು–ಪಾಳಿ–ಒಂದರ ಹಿಂದೆ ಒಂದು ಹೋಗುವಿಕೆ ಇಲ್ಲವೆ ಬರುವಿಕೆ. **ಅವ್ಯಯ**— (ಅ+ವ್ಯಯ) –ವೆಚ್ಚವಾಗದು. **ಅಭ್ಯುದಯ** (ಅಭಿ+ಉದಯ). **ವ್ಯಯ, ಆಯ, ಸಹಾಯಕ, ಸಹಾಯಿಗ, ಸಾಮಯಿಕ**— ಹೊತ್ತಿಗೆ ತಕ್ಕ.

ಇಷ್ (ಧಾ) —ಬಯಸು. **ಇಷ್ಟ**— ಬಯಸಲ್ಪಟ್ಟ, ಬಯಕೆ, ಪ್ರೀತಿ. **ಇಚ್ಛಾ-ಇಚ್ಛೆ**— ಬಯಕೆ. **ಸ್ವೇಚ್ಛೆ (ಚ್ಛಾ)**— (ಸ್ವ+ಇಚ್ಛೆ) ತನ್ನ ಇಚ್ಛೆ; ಮನಬಂದಂತೆ ಇರುವಿಕೆ. (ಸ್ವಿಚ್ಚ್– ಇಲೆಕ್ಟ್ರಿಕ್ ದೀಪದ ರಹಸ್ಯವನ್ನು ಅರಿಯದವ 'ಕರುಣಾಳು ಬಾ ಬೆಳಕೆ,' ಎಂದು ಕೈಮುಗಿದು ಬೇಡಿದಾಗ, 'ಹುಚ್ಚಾ, ಹಾಕು, ಸ್ವಿಚ್ಚಾ'– ಎಂಬ ಅಶರೀರಿ ಕೇಳಿಸಿತಂತೆ.– ಅ.) **ಅನಿಷ್ಟ**— (ಅನ್+ ಇಷ್ಟ) - ಬಯಸಲಾಗದ, ಇಷ್ಟವಲ್ಲದ, ಕೆಡುಕು. **ಅನಿಷ್ಟಕಾರಕ** (ಕಾರಕ— ಮಾಡುವವ, ಮಾಡಿಸುವವ, ಮಾಡೋಣ). **ಇಷ್ಟಕಾರಕ. ಇಚ್ಛಿತ.**

ಈಕ್ಷ್ (ಧಾ) —ನೋಡು, ಪರಿಶೀಲಿಸು. **ಈಕ್ಷಣ**— ನೋಡುವಿಕೆ, ನೋಟ, ಕಣ್ಣು. **ಅಪೇಕ್ಷೆ**— (ಅಪ+ಈಕ್ಷೆ) –ದೂರ ನೋಡುವಿಕೆ, ಕೆಟ್ಟ ನೋಟ– ಇಚ್ಛೆ, ಆಸೆ, ಲೋಭ. **ಉಪೇಕ್ಷೆ** (ಉಪ+ಈಕ್ಷೆ) —ಆಸಕ್ತಿಯಿಲ್ಲದಿರುವಿಕೆ, ಅನಾದರ, ತಿರಸ್ಕಾರ, ತಾತ್ಸಾರ. **ಪರೀಕ್ಷೆ** (ಪರಿ+ಈಕ್ಷೆ) — ಹೆಚ್ಚಿನ ಪರಿಶೀಲನೆ, ವಿಷಯ ವಿಮರ್ಶೆ. (–ಚಿಕ್ಕದೇವರಾಜನ ಆಳ್ವಿಕೆಯಲ್ಲಿ ದೀಪದೊಳ್ ಸ್ನೇಹಹಾನಿ, ರತ್ನದೊಳ್ ಪರೀಕ್ಷೆ; ಅಂದರೆ ರತ್ನಗಳಿಗೆ ಮಾತ್ರ ಪರೀಕ್ಷೆ; ಅಂದರೆ ಸೆಲೆಕ್ಷನ್ ಎಕ್ಸಾಮಿನೇಷನ್ ಇತ್ತು ಎಂದಾಯಿತು:- ಅ. ಕೋ. ಪರೀಕ್ಷುಬ್ಧ— ಪರೀಕ್ಷೆಯಿಂದ ಕಳವಳಗೊಂಡ- ಅ. ಕೋಶ). **ಸಮೀಕ್ಷಣ**- (ಸಮ್+ಈಕ್ಷಣ) —ವಿಚಾರಿಸಿ ನೋಡೋಣ. **ನಿರೀಕ್ಷೆ**— ಎದುರು ನೋಡುವಿಕೆ, ಕಾಯುತ್ತಿರುವಿಕೆ, ಮುನ್ನೋಟ— ಹಾದಿ ನೋಡೋಣ. **ಪ್ರೇಕ್ಷಕ**- (ಪ್ರ+ಈಕ್ಷಕ) ಹೆಚ್ಚಾಗಿ—ಅಧಿಕವಾಗಿ ನೋಡುವವ, ನೋಟಕ. **ಈಕ್ಷೆ**— ನೋಡುವಿಕೆ, ನೋಟ. **ಪರೀಕ್ಷಕ**— (ಪರಿ+ಈಕ್ಷಕ) ನಿರೀಕ್ಷಣೆ. **ಈಕ್ಷಕ. ಈಕ್ಷಣಿಕ. ಪ್ರತೀಕ್ಷೆ**— (ಪ್ರತಿ+ಈಕ್ಷೆ). **ಪ್ರೇಕ್ಷಣ**— (ಪ್ರ+ಈಕ್ಷಣ). **ಪ್ರೇಕ್ಷೆ**— (ಪ್ರ+ಈಕ್ಷೆ). **ಸಮೀಕ್ಷಿತ** (ಸಮ್+ಈಕ್ಷಿತ). **ಸಂವೀಕ್ಷಣ.**

ಈರ್ — (ಧಾ) —-ಹೋಗು, ಏಳು, ಮೂಡು, ಹಾರು. **ಪ್ರೇರಕ**—- (ಪ್ರ+ಈರಕ) —-ಯಾವುದಾದರೂ ಕಾರ್ಯ ಮಾಡುವುದಕ್ಕಾಗಿ 'ಹೋಗು' ಎಂಬ ಸೂಚನೆ ಕೊಡುವವ—ಹುರುಪು ಕೊಡುವವ, ಹುರುಪುಗೊಳಿಸುವವ. **ಸಮೀರ**—- (ಸಮ್+ಈರ) ನಾಲ್ಕೂ ಕಡೆ ನೆಟ್ಟಗೆ ಸುತ್ತಾಡುವವ- ವಾಯು, ಮಾರುತ. **ಈರಿತ**— ಹೋಗಲಿಕ್ಕೆ ಹೇಳಿದಂಥ. **ಪ್ರೇರಣೆ**— (ಪ್ರ+ಈರಣೆ) —ಯಾವುದಾದರೂ ಕಾರ್ಯಮಾಡುವುದಕ್ಕಾಗಿ ಹೋಗೆಂಬ ಸೂಚನೆ—- ಹುರಿದುಂಬಿಸುವಿಕೆ. **ಪ್ರೇರಿತ— (ಪ್ರ+ಈರಿತ). ಸಮೀರಣ** (ಸಮ್+ಈರಣ) **ಪ್ರೇರೇಪಣೆ.**

ಈಶ್ — (ಧಾ) —ಸಮರ್ಥನಾಗು, ಆಳು, ವಶದಲ್ಲಿಡು, ಅಧಿಕಾರ ನಡಿಸು, ಶಾಸನಮಾಡು. **ಈಶ್ವರ**— ಒಡೆಯ, ಯಜಮಾನ- ಶಿವ. **ಈಶ**— ಸಾಮರ್ಥ್ಯವುಳ್ಳವ, ಆಳುವವ, ಒಡೆಯ. **ನಿರೀಶ್ವರ**- (ನಿರ್+ಈಶ್ವರ) ದೇವರು ಇಲ್ಲ ಎಂದು ವಾದಿಸುವವ. **ಸೇಶ್ವರ—** (ಸ+ಈಶ್ವರ) -ದೇವರು ಇದ್ದಾನೆಂದು ಒಪ್ಪಿಕೊಳ್ಳುವವ. **ಅಧೀಶ** (ಅಧಿ+ಈಶ). **ಅಧೀಶ್ವರ** (ಅಧಿ+ಈಶ್ವರ). **ಜಗದೀಶ, ಜಗದೀಶ್ವರ** (ಜಗತ್+ಈಶ್ವರ). **ಪರಮೇಶ್ವರ** (ಪರಮ+ಈಶ್ವರ) **ಮಹೇಶ, ಮಹೇಶ್ವರ** (ಮಹಾ+ಈಶ್ವರ). **ಸರ್ವೇಶ್ವರ** (ಸರ್ವ+ಈಶ್ವರ). (ಈಶ್ವರ—-ಜಗತ್ತಿನಲ್ಲಿ ಆಗುತ್ತಿರುವ ಅನಿಷ್ಟಗಳಿಗೆಲ್ಲ ಹೊಣೆಗಾರ— ಅ.)

ಉಷ್ (ಧಾ) —ಸುಡು. **ಉಷ್ಣ**— ಸುಡುವಂಥದ್ದು—-ಬಿಸಿ, ಕಾವು, ಕುದಿ. **ಕೋಷ್ಣ**— (ಕ—-ಕೊಂಚ, ತುಸು+ಉಷ್ಣ) —-ಸಸು ಬಿಸಿಯಾದ, ಉಗುರು ಬೆಚ್ಚಗಿನ. **ಉಷ್ಮ(ಷ್ಮೆ)**—- ಸೆಕೆ, ಹಬೆ, ಜೇಗೆ. **ಉಷಿತ**—- ಸುಟ್ಟ. **ಉಷ್ಮಿಕ**—- ಸೆಕೆ. **ಊಷ್ಮ(ಷ್ಮೆ)**—- ಬಿಸಿ, ಹಬೆ, ಸೆಕೆ. **ಉಷ್ಮನ್, ಮಂದೋಷ್ಣ, ಉಷರ.**

ಊರ್ಜ್ (ಧಾ) —ಕಸುವಾಗು. **ಊರ್ಜ**—- ಕಸುವು. **ಊರ್ಜಿತ** —ಕಸುವಾದ, ಪ್ರಬಲ. **ಊರ್ಜಸ್ವಿ**— ಕಸುವಾದವ, ಪ್ರಬಲ, ದೈವವುಳ್ಳವ.

ಋ (ಧಾ) —ಹೋಗು, ತಿರುಗು, ಚಲಿಸು. **ಋತು**— ವರ್ಷಕ್ಕೊಮ್ಮೆ ತಿರುಗಿ ಬರುವ ಕಾಲ- ಎರಡು ತಿಂಗಳು ಅವಧಿಯ ಕಾಲಗಳು (ಆರು ಋತುಗಳು) -ಸ್ತ್ರೀಯರ ಮುಟ್ಟು. **ಆರ್ತವ**— ಋತು ಸಂಬಂಧದ. **ಋಣ**—- ತಿರುಗಿ ಕೊಡಬೇಕಾದುದು- ಸಾಲ. (— ತುಪ್ಪ ಕುಡಿಯಲು ಹಿರಿಯರು ನಮಗೆ

ಹೇಳಿಕೊಟ್ಟಿರುವ ಒಂದು ಸುಲಭ ಮಾರ್ಗ, ಋಣಕರ್ತೃ— ಸಾಲ ವಸೂಲು ಮಾಡುವುದಕ್ಕಾಗಿ ನಮ್ಮ ಬಾಗಿಲಿಗೆ ಬರುವವ. ಋಣಾನುಬಂಧ— ಹೋದ ಜನ್ಮದಲ್ಲಿ ಸಾಲ ತೀರಿಸದೆ ಇದ್ದದ್ದರಿಂದ ಈ ಜನ್ಮದಲ್ಲಿ ಪಶು ಪತ್ನಿ ಸುತಾಲಯಗಳು; ಆದ್ದರಿಂದ, ಮುಂದಿನ ಜನ್ಮದಲ್ಲಿ ಇವು ಬೇಕಾದವರು ಈ ಜನ್ಮದಲ್ಲೂ ಸಾಲ ತೀರಿಸಕೂಡದೆಂಬುದು ಸಿದ್ಧ- ಅ. ಕೋಶ) **ಋಣಿ**— ಸಾಲ ಕೊಂಡವ, ತಿರುಗಿ ಸಲ್ಲಿಸಬೇಕಾದವ. **ಋಣಸ್ಥ**— ಸಾಲ ಕೊಟ್ಟವ; ಸಾಲ ತೆಗೆದುಕೊಂಡವ. (ಸಾಲ ಕೊಟ್ಟವನು- ಉತ್ತಮರ್ಣ; ಸಾಲ ತೆಗೆದುಕೊಂಡವ- ಅಧಮರ್ಣ.) **ಋತುಸ್ನಾನ**— ಋತುಕಾಲದ ಬಳಿಕ ಮಾಡುವ ಸ್ನಾನ- ಐನೀರು. **ಋಣಿಗಾರ**— ಸಾಲ ಸಲ್ಲಿಸಬೇಕಾದವ. **ಋಣಬಾಧೆ. ಋಣಮುಕ್ತ. ಋಣಮುಕ್ತಿ. ಋಣವಿಮೋಚನೆ. ಋಣಾದಾನ. ಋಣಾನುಬಂಧ. ಋಣಋಣೀಭಾವ. ಋಣತ್ರಯ.**

ಋಧ್ (ಧಾ) —ಬೆಳೆ; ಏಳಿಗೆಯಾಗು, ವೃದ್ಧಿಹೊಂದು. **ಋದ್ಧ**— ಪೂರ್ಣವಾಗಿ ಬೆಳೆದ; ಅಭಿವೃದ್ಧಿ ಹೊಂದಿದ. **ಸಮೃದ್ಧ**— (ಸಮ್+ಋದ್ಧ) –ಪೂರ್ಣವಾಗಿ ಬೆಳೆದ, ತುಂಬಿದ, ಊರ್ಜಿತ ಸ್ಥಿತಿಯುಳ್ಳ. **ಋದ್ಧಿ**— ಏಳಿಗೆ, ಅಭಿವೃದ್ಧಿ- ಕ್ಷೇಮ. **ಸಮೃದ್ಧಿ**— (ಸಮ್+ಋದ್ಧಿ) ತುಂಬುವಿಕೆ, ಪರಿಪೂರ್ಣತೆ, ಅಭಿವೃದ್ಧಿ–ಸಂಪತ್ತು, ಸುಖ.

ಕಟ್ (ಧಾ) –ಹೋಗು. **ಪ್ರಕಟ**— (ಪ್ರ+ಕಟ) ಹೊರಗೆ ಹೋಗುವ, ಪ್ರಸಿದ್ಧಿ ಪಡುವ. **ಉತ್ಕಟ**— (ಉತ್+ಕಟ) ಸೂಸಿ ಹೋಗುವ, ಏರಿ ಹೋಗುವ–ಏರಿದ, ಸೊಕ್ಕಿದ. **ವಿಕಟ**— (ವಿ+ಕಟ) ವಿಶೇಷವಾಗಿ ಹೋಗುವ– ಭಯಂಕರ. **ನಿಕಟ**— (ನಿ+ಕಟ) ದೂರ ಹೋಗದ- ಸಮೀಪ, ಹತ್ತಿರ. **ಪ್ರಕಟನೆ** (ಪ್ರ+ಕಟನೆ). **ಪ್ರಕಟಿತ. ಕಟಿ**— ಶರೀರದಿಂದ ಹೋಗುವುದು– ನಡು, ಸೊಂಡ, ನಿತಂಬ.

ಕಟ್ (ಧಾ) —ಮುಚ್ಚು, ಸುತ್ತು. **ಕಟ**— ಸುತ್ತುವುದು- ಚಾಪೆ. **ಕಟಕ**— ಕೈಯನ್ನು ಸುತ್ತುವುದು–ಕಡಕ, ಬಳೆ. –ಭೂಮಿಯನ್ನು ಸುತ್ತುವುದು–ಸಮುದ್ರ. ದೇಶವನ್ನು ಸುತ್ತುವುದು–ಸೈನ್ಯ. ಹೆಂಗಸರ ಶರೀರವನ್ನು ಮುಚ್ಚುವುದು-ನಿತಂಬ. **ಕಟಿ**— ಸುತ್ತುವಿಕೆಯಿಂದ ಪೇಚಿಗೊಳಗಾಗಿ ಕುಗ್ಗಿ ಸಪುರವಾದ ಭಾಗ–ನಡು, ಸೊಂಟ. **ಸಂಕಟ**— ನಾಲ್ಕು ಕಡೆಯಿಂದ ಸುತ್ತಿ ಬರುವಿಕೆ– ಪೇಚು, ಕಷ್ಟ, ದುಃಖ, ಆಪತ್ತು, (ತಮ್ಮಷ್ಟು ಸಂಕಟಪಡುವವರು

ತಮ್ಮ ದೃಷ್ಟಿಗೆ ಬೀಳದಿರುವಾಗ; ತಾವು ಬಳಸಬಹುದಾದ್ದಕ್ಕಿಂತ ಹೆಚ್ಚು ಶ್ರೀಮಂತತನ ಒದಗಿದಾಗ--- ಅ. ಕೋಶ).

೧೫. ಸಂಧಿ—ಸಮಾಸ.

ಕಿರುಗೂಸು– ಕಿರಿ+ಕೂಸು (ಕಂ. ವ್ಯಂ. ಸ). ಕಿರಿದು ಕೂಸು (ಕ. ಸ). ತೆಂಗಾಳಿ— ತಣ್ಣಿತು+ಗಾಳಿ (ಕಂ. ವ್ಯಂ. ಸ) (ಕ. ಸ). ಬೆಳ್ದಾವರೆ ಬೆಳ್+ತಾವರೆ (ಕಂ. ವ್ಯಂ. ಸ). ಬಿಳಿದು ತಾವರೆ (ಕ. ಸ). ಮೆಲ್ನುಡಿ— ಮೆಲ್ಲಿತು+ನುಡಿ (ಕಂ. ವ್ಯಂ. ಸ) (ಕ. ಸ). ಕನ್ನಡವಕ್ಕಿ--- ಕನ್ನಡ+ಪಕ್ಕಿ (ಆದೇಶ) (ಕ. ಸ). ಮೆಲ್ಲಡಿ— ಮೆಲ್ಲಿತು+ಅಡಿ (ಆದೇಶ) (ಕ. ಸ). ಕಬ್ಬುವಿಲ್ಲ—ಕಬ್ಬು+ಬಿಲ್ಲ (ಆದೇಶ) (ಬ. ಸ). ಸುಡುಗಾಡು— ಸುಡು+ಕಾಡು (ಆದೇಶ) ಸುಡುವ ಕಾಡು (ಗ. ಸ). ಮನಗಾಣು--- ಮನ+ಕಾಣು (ಆದೇಶ) ಮನವನ್ನು ಕಾಣು, ಮನದಿಂದ ಕಾಣು (ಕ್ರಿ. ಸ). ಎದೆಗುಂದು— ಎದೆ+ಕುಂದು (ಆದೇಶ) ಎದೆಯಿಂದ ಕುಂದು (ಕ್ರಿ. ಸ). ಸುಖಬಡು— ಸುಖ+ಪಡು (ಆದೇಶ). ಸುಖವನ್ನು ಪಡು (ಕ್ರಿ. ಸ). ಹಿರಿಗೆಲಸ--- ಹಿರಿ+ಕೆಲಸ (ಆದೇಶ) ಹಿರಿಯು ಕೆಲಸ (ಕ. ಸ). ಷಡ್ಗುಣ– ಷಟ್+ಗುಣ (ಸಂ. ವ್ಯಂ. ಸ) (ದ್ವಿ. ಸ). ಕೆಂದಾವರೆ–ಕೆನ್ (ವರ್ಣ)+ತಾವರೆ (ಆದೇಶ) ಕೆಚ್ಚನೆ ತಾವರೆ (ಕ. ಸ). ಗತಿಗೆಡು--- ಗತಿ+ಕೆಡು (ಆದೇಶ) ಗತಿಯನ್ನು (ಯಿಂದ) ಕೆಡು (ಕ್ರಿ. ಸ). ಬಳಿದೊಡು– ಬಳಿ+ತೊಡು (ಆದೇಶ) ಬಳಿಯನ್ನು ತೊಡು (ಕ್ರಿ. ಸ). ಮೂವಾಳ್— ಮೂ(ರ್)+ಬಾಳ್ (ಆದೇಶ) ಮೂರು ಬಾಳುಗಳ ಸಮೂಹವು (ದ್ವಿ. ಸ). ಕಾರ್ಮೋಡ–ಕರಿದು+ಮೋಡ– ಕಾರ್+ಮೋಡ (ಕಂ. ವ್ಯಂ. ಸ) (ಕ. ಸ). ರಣಧೀರ—ರಣದಲ್ಲಿ ಧೀರ (ಸ. ತ. ಸ.) ಕೈಗೆಲಸ--- ಕೈ+ಕೆಲಸ (ಆದೇಶ) ಕೈಯ ಕೆಲಸ (ತ. ಸ). ಆಡುಂಬೊಲ--- ಆಡುಂ+ಪೊಲ (ಆದೇಶ) ಆಡುವ ಪೊಲ (ಗ. ಸ). ಖಡಾಖಡ್ಗಿ--- ಖಡ್ಗದಿಂದ ಹೊಡೆದಾಡುವ ಯುದ್ಧವು (ಬ. ಸ). ತೂಗುಂಜೊಡರ್— ತೂಗುಂ+ಸೊಡರ್ (ಕಂ. ವ್ಯಂ. ಸ) ತೂಗುವ ಸೊಡರ್ (ಗ. ಸ) ಕರಿಗೊರಲ— ಕರಿ+ಕೊರಲ (ಆದೇಶ) ಕರಿದಾದ ಕೊರಲು ಯಾವನದೋ ಅವನು (ಬ. ಸ). ಕಮಲಮುಖಿ--- ಕಮಲದಂತೆ ಮುಖ (ಕ. ಸ). ಅಂಗಾಲು–ಕಾಲ (ಕಾಲಿನ) ಅಡಿ (ಅಂ. ಸ). ಗಜಾಶ್ವರಥಗಳು— ಗಜ+ಅಶ್ವ (ಸ. ಸ). ಗಜವೂ ಅಶ್ವವೂ ರಥವೂ (ದ್ವಂ. ಸ). ತುದಿಗಾಲು— ತುದಿ+ಕಾಲು (ಆದೇಶ)

ಕಾಲ (ಕಾಲಿನ) ತುದಿ (ಅಂ. ಸ). ನಿಡುಮೂಗ— ನಿಡಿದು ಮೂಗು ಉಳ್ಳ ವನು (ಬ. ಸ). ತರುಲತೆ— ತರುಗಳೂ ಲತೆಗಳೂ (ದ್ವಂ. ಸ).

೧೬. ಸಂ.—ತದ್ಭವಗಳು.

ರಾಜ್ಞಿ–ರಾಣಿ. ಧಾತ್ರಿ–ದಾದಿ. ತಾತ–ತಂದೆ. ಸುಭಗ—ಸೊಬಗ. ಪೃಥ್ವೀ (ಪೃಥಿವಿ)– ಪೊಡವಿ. ಪತ್ತನ–ಪಟ್ಟಣ. ಶರ್ಕರಾ–ಸಕ್ಕರೆ. ಮುಗ್ಧಾ –ಮುದ್ದು. ಸ್ವರ–ಸರ. ವರ್ಣ–ಬಣ್ಣ. ಧ್ವನಿ–ದನಿ. ಸಂಘಟನ–ಸಂಗಡ. ಗೂಢಾಗಾರ–ಗೂಡಾರ. ಮಲ್ಲಿಕಾ–ಮಲ್ಲಿಗೆ. ರಮ್ಯ–ರಯ್ಯ. ಜ್ಯೋತ್ಸ್ನಾ–ಜೊನ್ನ. ಕಸ್ತೂರಿ–ಕತ್ತುರಿ. ಶೃಂಗಾರ–ಸಿಂಗಾರ, ಸಿಂಗರ. ಆಶ್ಚರ್ಯ— ಅಚ್ಚರಿ. ರಾಕ್ಷಸ–ರಕ್ಕಸ. ಕೋಕಿಲ–ಕೋಗಿಲೆ. ವನ–ಬನ.

ಅಭ್ಯಾಸ ೨.

೧. ಧ್ವನಿಸಾಮ್ಯ ಶಬ್ದಗಳು.

ಕರ— ಮಾಡೋಣ, ಮಾಡುವಿಕೆ; ಕೈ; ಆನೆಯ ಸೊಂಡಿಲು; ತೆರಿಗೆ, ಕಂದಾಯ; ಕಿರಣ, ಕಾಂತಿ; ಮೋಡ; ಆಲಿಕಲ್ಲು; ನಕ್ಷತ್ರ. –ಮಾಡುವ. –ಕರು. (ಕರಗ್ರಾಹಿನ್–ಅಳಿಯ; ಕರ ವಸೂಲು ಮಾಡುವವ, ಮಾವನಿಂದ. ಕರತಲಾಮಲ—ಲಂಚ— ಅ.) **ಅರ**— ಅರೆ-ಅರಕೆ- ಅರ್ಧ; ವಸ್ತುಗಳನ್ನು ತಿಕ್ಕಿ ತೆಗೆಯುವ ಸಾಧನ (ಅರ್ನ). —ಅರಬು- ಬರ, ದುಷ್ಕಾಳ (ಲ), ನೀರಿನ ಕೊರತೆ. **ಖರ**— ಬಿರುಸಿನ, ಕಠಿಣ, ಒರಟ, ಚೂಪಾದ, ಹದನವಾದ.–ಕತ್ತೆ; ಮುಳ್ಳುಗಳುಳ್ಳ ಮರ, –ಒಬ್ಬ ರಾಕ್ಷಸ. **ಗರ**— (ಸಂ) ಗ್ರಹ–ಗೃಹ; ಗಿರ– ಪಿಶಾಚಿ, ದೆವ್ವ; ವಿಷ. **ಚರ**— ಸರಿದಾಡುವ, ಅಲ್ಲಾಡುವ, ನಡೆದಾಡುವ; ಪಶು, ಪ್ರಾಣಿ; ಚಾರ, ಗುಪ್ತಚಾರ, ಹೇರ. **ಜರ**— (ಸಂ) ಜ್ವರ—ಉರಿ, ಮೈ ಕಾಯೋಣ; ಮುಪ್ಪು. ಜರತಾರಿ ವಸ್ತ್ರ. ತುಸು, ಸ್ವಲ್ಪ. ಕೃಷ್ಣನನ್ನು ಬಾಣ ಹೊಡೆದು ಕೊಂದ ಒಬ್ಬ ಬೇಡನ ಹೆಸರು. **ಝರ**— ದಬದಬಿ, ಅಬ್ಬಿ, ತಡ ಸಲು, ಧಬೆಧಬೆ, ಜೋಗು; ಸಣ್ಣ ಜಲಪಾತ. **ತರ**— ತರಹ–ಕ್ರಮ, ಬಗೆ, ರೀತಿ, ಜಾತಿ, ದರ್ಜೆ, ವ್ಯವಸ್ಥೆ, ಸಮತೆ. –ಥರ, ರಾಶಿ, ಗುಂಪು, ಒಂದರ ಮೇಲೊಂದು ಇದ್ದ ಪದರು. **ಥರ**— (ಹಿಂ) –ತರ, ತರಹ. **ದರ**— ಧಾರಣೆ,

ಜಿಲೆ, ಕಿಮ್ಮತ್ತು; ಗವಿ, ಪೊದರು; ತೊರೆ, ಶಂಖ; ಸ್ವಲ್ಪ, ಕಿರಿದು; ಭಯ, ಭೀತಿ. **ಧರ**— ಧರಿಸಿರುವ, ಹೊತ್ತುಕೊಂಡಿರುವ; ಧರಿಸಿದವ; ಕಾಯುವವ; ಪರ್ವತ; ವಸುಗಳಲ್ಲಿ ಒಬ್ಬ; ಇರಿಸಿದವ; ಹಿಡಿದವ. **ನರ**— ಮನುಷ್ಯ; ಒಬ್ಬ ಋಷಿ; ಅರ್ಜುನ; ಸ್ನಾಯು. **ಪರ**— ಬೇರೆ, ತನ್ನದಲ್ಲದ; ದೂರದ; ಮುಂದಿನ, ಭವಿಷ್ಯದ; ವೈರಿ; ಉತ್ತಮ, ಶ್ರೇಷ್ಠ; ಮಗ್ನ, ತತ್ಪರ; ಬ್ರಹ್ಮ, ಮೋಕ್ಷ. (ಪರವಾಗಿ ವಾದಿಸುವವರು, ಇಹವಾಗಿ ಏನು ಮಾಡುತ್ತಿದ್ದಾರೆ, ಎಂಬುದೇ ಪ್ರಶ್ನೆ- ಅ.) **ಫರ**— ಡಾಲು, ಗುರಾಣಿ. **ಬರ**— ಕ್ಷಾಮ, ಆರುವಿಕೆ, ಆಗಮನ, ನಾಶ; -(ಸಂ) ವರ- ಮೇರೆ, ವರಿಗೆ, ಶ್ರೇಷ್ಠ; ಸಲ್ಲ; ಹರಕೆ. **ಭರ**— ಅತಿಶಯ, ಬಹಳ, ರಭಸ, ಉದ್ವೇಗ, ಕಾಪಾಡುವವ. **ಮರ**— ದೊಡ್ಡ ಗಿಡ, ವೃಕ್ಷ; ಸ್ಮೃತಿಯಿಲ್ಲದಿರುವಿಕೆ, ಮರೆವು. **ವರ**— ಬಯಕೆ; ಅನುಗ್ರಹ, ಆಶೀರ್ವಾದ, ಇನಾಮು; ವರದಕ್ಷಿಣೆ; ಪ್ರಿಯ, ಗಂಡ, ಮದುಮಗ; ವರಹ (ನಾಲ್ಕು ರೂಪಾಯಿ); ಶ್ರೇಷ್ಠ, ಅತ್ಯುತ್ತಮ. (ವರದಕ್ಷಿಣೆ— ಅಳಿಯನ ತಪಸ್ಸಿಗೆ ಮೆಚ್ಚಿ, ಮಾವ ಕೊಡುವ ವರ; ಕೆಲವು ಕನ್ಯಾರತ್ನಗಳನ್ನು ವರದಕ್ಷಿಣೆಗಾಗಿಯೇ ಮರಿಸಬೇಕಾಗಬಹುದು. ವರಪೂಜೆ— ಇದನ್ನು ಮಾಡುವುದು ವಿವಾಹದ ತನಕ, ಮಾವ ಮಾಡುತ್ತಾನೆ; ವಿವಾಹದ ನಂತರ ಮಗಳು- ಅ.) **ಶರ**— ಒಂದು ಜಾತಿಯ ಹುಲ್ಲು; ಬಾಣ, ಗಾಯ; ಕೆನೆ; ನೀರು; ಸರೋವರ; ಸದ್ದು, ಸಪ್ಪಳ. **ಸರ**— (ಸಂ) ಸ್ವರ, ಧ್ವನಿ, ಸಪ್ಪಳ; ಹಾರ, ಬಾಣ. **ಹರ**— ಹರಣ, ಅಪಹರಿಸೋಣ, ಒಯ್ಯುವಿಕೆ; ಶಿವ, ಭಕ್ತರನ್ನು ಪರಿಪಾಲಿಸುವವ; ಹರವಾದ, ಅಗಲ, ವಿಸ್ತಾರವಾದ.

ಧಾತು— ಮೂಲ ವಸ್ತು; ಕ್ರಿಯಾಪದದ ಮೂಲರೂಪ; ವೀರ್ಯ; ಹತ್ತನೆಯ ಸಂವತ್ಸರದ ಹೆಸರು. **ಆತು**— ಆಂತು, ಧರಿಸಿ, ಹೊಂದಿ; ತೆಪ್ಪ, ಉಡುಪ; ಜುತಿ, ಜತೆ, ಪಕ್ವಾಸು. **ಕಾತು**— ಕಾಯ್ತು. (ಕಾಯಾದುದಕೆ ಕಾತುದು ಅಕ್ಕಂ; ಕಾತುದು ಎನಲ್ಕೆ ಕಾಯಾದುದು; ಕಾತು ಒರಗುವ ಫಲಾಳಿ: ಕಾಯ್ತುದೆನೆ ಫಲಿಸಿದುದು). **ಜಾತು**— ಒಮ್ಮೊಮ್ಮೆ, ಎಂದೋ, ಥೇ ಥೇ. **ನಾತು**— ನಾತು, ಕೆಟ್ಟ ನಾತ, ವಾಸನೆ ಬರು, ನಾತ. (ನಾನು) ತೋಯಿಸಿಕೊಳ್ಳು, ಒದ್ದೆಯಾಗು. **ಬಾತು**— ಒಂದು ಜಲ ಪಕ್ಷಿ, ಬಾತುಕೋಳಿ: ಬಾತು-ಬಾದು-ಬಾಯು-ಬಾತುದು (=ಬೀಗಿ, ಬೀಗು). **ಭಾತು**— ಬತ್ತ. (Rice in the husk; -boiled rice. ಬಕಾಳಭಾತು- Shop

keeper's rice; rice mixed with curds, butter, and milk). **ಮಾತು**— ನುಡಿ, ವಚನ, ವಾಕ್ಯ; ನಿಂದೆ. (ಖರ್ಚಿಲ್ಲದ ಉಪಚಾರ; ನಿಜಾಭಿಪ್ರಾಯವನ್ನು ಮರೆಮಾಚಲು ಒದಗುವ ಉಪಕರಣ- ಅ.) **ಯಾತು**— ಹೋಗುವವ, ಪಥಿಕ, ಪ್ರಯಾಣಿಕ, ಹಾದಿಹೋಕ; ಒಬ್ಬ ರಾಕ್ಷಸ, ಭೂತ, ಪಿಶಾಚಿ; ನೋವು, ದುಃಖ, ಪೀಡೆ, ಹಿಂಸೆ. **ಲಾತು**- ಲತ್ತೆ, ಒದೆ, ಒದಿಕೆ, ಕಾಲಿನ ಪೆಟ್ಟು. **ಹಾತು**— ಕೈ.

ಮಾನ- ಅಳತೆ; ಪ್ರಮಾಣ; ಆತ್ಮಗೌರವ; ಮರ್ಯಾದೆ, ಸುಮ್ಮಾನ; ಚಿತ್ತಪಲ್ಲಟ; ಲಿಂಗ. (ಅನೇಕರು ಎಚ್ಚರಿಕೆ ತಪ್ಪಿ ಕಳೆದುಕೊಳ್ಳುವ ವಸ್ತು- ಅ.) **ಆನ**— ಬದುಕು, ಉಸಿರು ಎಳೆದುಕೊಳ್ಳುವಿಕೆ; ಆದ (ಆಗು- ಭೂ. ನ್ಯೂ.) **ಕಾನ**— ಕಿವಿ, (ಕಾನ ಬಾವಲಿ- An ornament for the ear) -ಕಾನಕಾನ ಉತ್ತುತ್ತಿಯಾಟ (A play of boys at which one is to jump over another's feet, etc.) **ಖಾನ**— ನಾಯಕ, ಅರಸು. (ಖಾನ-ಖಾಣ) -ಹುಲ್ಲು, ಮೇವು. **ಗಾನ**— ಹಾಡು, ಪದ, ಸ್ತುತಿ. (ಗಾನನ-ಅರಣ್ಯರೋದನ- ಅ.) **ಚಾನ**— (ಚಾಣ) ಕಬ್ಬಿಣ ಇಲ್ಲವೆ ಕಲ್ಲನ್ನು ಕಡೆಯುವ ಉಳಿ. **ಜಾನ**- (ಸಂ) ಧ್ಯಾನ, ಚಿಂತನೆ, ಯೋಚನೆ, ತಪಸ್ಸು. (ಜಾನಾಚಾರ್ಯ- ಗಿಳಿ). (ಜಾನ-ಜೇಣ, ಜೇನ-A woolen rug or blanket). **ತಾನ**— (ಸಂ) ಸ್ನಾನ. ಸ್ವರಭೇದ, ಆಲಾಪ; ಎಳೆದುದು. ವಿಸ್ತಾರ, ವಿಶಾಲತೆ; ನೂಲು, ನಾರು; ವಿಷಯ; ಸಮೂಹ; ರೋಗ. **ದಾನ**— ಕಾಣಿಕೆ, ಕೊಡುಗೆ; ಆನೆಯ ಮದೋದಕ; ಲಂಚ. (ಪಾಪಿಗಳು ಸ್ವರ್ಗದ ದ್ವಾರಪಾಲಕರಿಗೆ ಹಂಚುವ ಲಂಚ; ಮಕ್ಕಳ ಮೇಲೆ ಸೇಡು ತೀರಿಸಲು ಹಲವರು ಹೂಡುವ ಉಪಾಯ; ಸಮಾಧಾನವೇ ಅತಿ ಮುಖ್ಯ ದಾನ- ಅ.) **ಧಾನ**— ಹಿಡಿಯುವಿಕೆ, ಇರಿಸುವಿಕೆ, ಆದರಿಸುವಿಕೆ, ಆಸಿಸುವಿಕೆ, (ಅಭಿಧಾನ, ಆಧಾನ, ಉಪಧಾನ, ತಿರೋಧಾನ, ನಿಧಾನ. ಪರಿಧಾನ, ಪ್ರಧಾನ) **ಪಾನ**— ಕುಡಿಯೋಣ, ಕುಡಿಯುವ ಪದಾರ್ಥ; ಕಾಲುವೆ; ಹೆಂಡ ಕುಡಿಯೋಣ, ಮದ್ಯಪಾನ- ಕುಡಿದಾಗಿನ ಖುಷಿಗಿಂತ, ಅಮಲು ಇಳಿದಾಗ, ಮತ್ತೆ ಜಗತ್ತು ಮುತ್ತಿಕೊಳ್ಳುವಾಗಿನ ಸಂಕಟ ತುಂಬ ಹೆಚ್ಚಂತೆ. ಮದ್ಯಪಾನಿ— ನೀರು ಬೆರಸಿದ ಹೆಂಡ; ಶೇಕಡ ೨ರ ಬೀರ್; ದುಃಖದಲ್ಲಿ ಹುಳಿ ಹಿಂಡಿ, ಹೆಪ್ಪು ಹಾಕಿ, ಅದನ್ನು ಕಡೆದು, ಅದರೊಳಗಿನ ನವನೀತವನ್ನು ತಿನ್ನ ಬಯಸುವವ-

ಅ.) **ಬಾನ**— ಆಕಾಶ, ಕುರುಳು, ಬಿತಣಿ, ಬಾಣ. **ಭಾನ**— ಎಚ್ಚರಿಕೆ, ಲಕ್ಷ್ಯ; ಹೊಳೆಯುವಿಕೆ, ಕಾಣುವಿಕೆ. **ಯಾನ**— ಹೋಗುವಿಕೆ, ಗಮನ, ಪ್ರಯಾಣ, ಸಂಚಾರ; ಪ್ರಯಾಣದ ಸಾಧನ, ವಾಹನ. **ವಾನ**— ಊದಿದ-ಒಣ ಅಥವಾ ಒಣಗಿದ ಹಣ್ಣು; ಅಲ್ಲಾಡುವ, ಚಲಿಸುವ, ಉರುಳಾಡುವ; ಸುವಾಸನೆ, ಪರಿಮಳ, ಸುಗಂಧ; -ನೇಯುವ, ಹೊಲಿಯುವ; ಕರ್ಮಫಲ; ಅಕ್ಷೀಣ, ಕೊರತೆಯಿಲ್ಲದಂತಹುದು; -ವನಕ್ಕೆ (ಕಾಡಿಗೆ) ಸಂಬಂಧಿಸಿದ. -ಪೊದೆಗಳ ಸಮೂಹ; ಮರಗಳ ರಾಶಿ; ಸಾನು ಭೂಮಿ, ಬೆಟ್ಟದ ತಪ್ಪಲು. **ಸಾನ**— ನಾಶ, ಹಾನಿ, ಮೃತ್ಯು; ಕೊನೆ, ಮೇರೆ, ಎಲ್ಲೆ. **ಹಾನ**— ಬಿಟ್ಟು ಹೋಗುವಿಕೆ, ತೊಲಗುವಿಕೆ.

ಹಾರು — ಹುಡುಕು, ಇಚ್ಛಿಸು; ನೆಗೆ, ಜಿಗಿ, ಓಡಾಡು, ನೆಗೆದು ದಾಟು. **ಆರು**— ಯಾರು; ಎಷ್ಟೋ (ನೂರಾರು, ಸಾವಿರಾರು); ನೇಗಿಲಿಗೆ ಹೂಡಿದ ಎತ್ತುಗಳ ಜೋಡು; ಕೂಗು, ಕಿರಿಚಿಕೊಳ್ಳು; ಏಡಿ, ಹಂದಿ; ನದಿ, ಕಾಲುವೆ; ಹೊರಗೆ ಹೋಗು, ನಂದಿಸಲ್ಪಡು; ತಣ್ಣಗೆ ಆಗು; ಒಣಗಿಸು; ಮಾಯು; ಒಂದು ಅಂಕೆ. **ಕಾರು**— ಕಪ್ಪು ಬಣ್ಣ; ಮಳೆಗಾಲ; ವಾಂತಿಮಾಡಿಕೊಳ್ಳು, ಕಕ್ಕು; ಶಿಲ್ಪಿ. (ಕಾರೋಹಣ- ಕಾರು ಹತ್ತುವ ಸಮಾರಂಭ. ಕಾರುಪತ್ಯ-ಮಾವನ ಕಾರಿನ ಮೇಲೆ ಅಳಿಯ ನಡೆಸುವ ಪಾರುಪತ್ಯ. -ಅ). **ಗಾರು**— ಕಾಡು; ಅಪರಾಧ, ತಪ್ಪು; ಹಸಿವೆಯಿಂದಾಗುವ ಸಂಕಟ; ಒರಟಾದ, ನೀರಿಲ್ಲದ, ಗಟ್ಟಿಯಾದ; ಒರಟು. **ಚಾರು**— ಸುಂದರ, ಚೆಲುವಿನ, ಮನೋಹರ, ಮೋಹಕವಾದ; ಬೃಹಸ್ಪತಿ. (ಸಾರು) ರಸ, ಹಿಂಡಿ ತೆಗೆದ ರಸ. **ಜಾರು**— ತಪ್ಪು, ತಪ್ಪಿ ಬೀಳು, ಸರಿದು ಬೀಳು, ಸ್ಥಳ ತಪ್ಪು, ಸ್ಖಲನವಾಗು, ಅದೃಶ್ಯವಾಗು. **ತಾರು**— ತಂತಿ, ತಂತಿ ಸಮಾಚಾರ; ಒಣ ಅಡಿಕೆ, ಅಡಿಕೆ ಗೊಂಚಲು; ಒಣಗು, ಅತ್ತಿತ್ತ ಓಡಾಡು. **ದಾರು**— ಯಾರು; ಕಟ್ಟಿಗೆ, ಮರ, ಮರದ ತುಂಡು, ಒಣ ಮರ. **ನಾರು**— ಗಿಡದ ತೊಗಟೆಯಿಂದ ಹೊರಡುವ ಎಳೆ; ನನೆಯಿಸು; ವಾಸನೆ ಬರು, ಕೆಟ್ಟ ನಾತ. **ಪಾರು**— ಹಾರೈಸು, ನಿರೀಕ್ಷಿಸು, ಬಯಸು, ನೋಡು; ಪಾರಾಗಿ ಹೋಗುವ ಸ್ಥಳ; ನೆಗೆ, ಜಿಗಿ, ಓಡಾಡು; (ಎದೆ) ಮೇಲೆ ಕೆಳಗಾಗು; ಓಡಿ ಹೋಗೋಣ, ವ್ಯಭಿಚಾರ, ದೋಣಿ. **ಬಾರು**— ಚರ್ಮ, ಚರ್ಮದ ಪಟ್ಟಿ, ನಡುಕ, ಅಳತೆಯ ಮಾರು, ಬಾಸುಂಡಿ. **ಮಾರು**— ನಾಲ್ಕು ಮೊಳಗಳ ಒಂದು ಅಳತೆ; ಅದಲಬದಲು ಮಾಡು; ಗುಣಮಾಡು,

ಗುಣಪಡಿಸು; ವಿಕ್ರಯಿಸು, ವ್ಯಾಪಾರ. **ಯಾರು**— ಯಾವನು, ಎಂಥವನು, ಎಂಥವಳು, ಎಂಥವರು ಮು. **ವಾರು**— ಗಜ, ಮೂರು ಅಡಿ ಅಳತೆ. -(ಸಂ) ವಾರ್. (ವಾರುಧಿ). (Like, in, with, or after the faseion of detail, etc.) (ದಿನವಾರು-ದಿನಂಪ್ರತಿ). **ಶಾರು**— ನೋಯಿಸುವುದು, ಕೆಡುಕು ಮಾಡುವುದು. (ಕಿಂಶಾರು- ಭತ್ತದ ದಾಡಿ, ಊಬು, ಸುಂಕು; ಬಾಣ; ಕೊಕ್ಕರೆ, ಕ್ರೌಂಚ. **ಸಾರು**— ಒದರಿ ಹೇಳು, ಪ್ರಕಟ ಮಾಡು, ಜಾಹೀರಪಡಿಸು; ಹತ್ತಿರ ಹೋಗು-ಬರು, ಹೊಂದು, ಪಡೆ, ಮುಟ್ಟು; ರಸವತ್ತಾದ ಒಂದು ಓಗರ.

ಕುಚ್ಚು— ಕುದಿಸು, ಬೇಯಿಸು; ಕುಂಚು; ಗೊಂಚಲು; ಗುಂಪು, ಮೂಟೆ. **ಉಚ್ಚು**— ಸಡಿಲಾಗು, ಹೊರಗೆ ಹೊರಡು, ಬಿಚ್ಚು, ಬೇರೆ ಬೇರೆ ಮಾಡು; (ಬಾಣದಂತೆ) ಹಾರಿ ಹೋಗು; ಸ್ವತಂತ್ರವಾಗು. **ಗುಚ್ಚು**— ಗುಜ್ಜು, ಕುಳ್ಳ, ಗಿಡ್ಡಾದ; ಚುಚ್ಚು. **ನುಚ್ಚು**— ಜೋಳದ ಜೋನ, ಕಣ; ಚೂರು, ಪುಡಿ. **ಪುಚ್ಚು**— ಪೆಚ್ಚು, ಎಗ್ಗ, ಪೆಂಗ, ಹುಚ್ಚುತನ, ಹುಚ್ಚು-ಪುಚ್ಚು. **ಮುಚ್ಚು**— ಆವರಿಸು, ಹೊದಿಸು, ಮರೆಮಾಡು, ಮುಡಿಚು. **ಹುಚ್ಚು**— ಮರುಳು, ಮಂಕು, ಭ್ರಾಂತಿ. (ರಾಷ್ಟ್ರಗಳಿಗೂ ಕೋಮುಗಳಿಗೂ ಈ ಬಾಯಲೆ ಆಗಾಗ ಬರುವುದುಂಟು. ಹುಚ್ಚಾಟನೆ- ಹುಚ್ಚ ಎಂದು ಆಸ್ಪತ್ರೆಗೆ ಕಳುಹಿಸುವಿಕೆ; ವಿಪರೀತ ಕೋಪದಿಂದ ಒಬ್ಬರನ್ನು ಹೊರದೂಡುವುದು. ಹುಚ್ಚಾತುರ್ಯ- ವಿಪರೀತ ಸಾಮರ್ಥ್ಯ. ಹುಚ್ಚಾರಣೆ- ಯದ್ವಾ ತದ್ವಾ ಉಚ್ಚಾರಣೆ- ಅ.)

೨. ಮೇಳ ನುಡಿಗಳು.

ಬಾನು— ಆಗಸ, ಆಕಾಶ, ನಭ, ನಭಸ್, ನಭಸ್ಸು, ಅಂಬರ, ಅಂತರಿಕ್ಷ, ಗಗನ, ವಿಯತ್ತು, ಮುಗಿಲು, ದ್ಯು, ದಿವ, ಅಭ್ರ, ವ್ಯೋಮ, ಪುಷ್ಕರ, ಅನಂತ, ಖ, ವಿಷ್ಣುಪದ, ಸುರವರ್ತ್ಮ, ವಿಹಾಯಸ, ಅಲರ್ವಟ್ಟೆ, ಎಲರ್ವಟ್ಟೆ, ಅರಿಲ್ವಟ್ಟೆ, ಮಿನ್ನವಟ್ಟೆ, ಸಗ್ಗಿಗವಟ್ಟೆ, ಬಾಂದಳ.

ಇಳೆ— ಭೂ ಭೂಮಿ, ಅವನಿ, ಉರ್ವಿ, ಕ್ಷಿತಿ, ಕ್ಷೋಣಿ, ನೆಲ, ಪೊಡವಿ, ವಸುಧೆ, ಧರಣಿ, ಧರಾ, ಧಾರುಣಿ, ಪೃಥ್ವಿ, ಪೃಥಿವಿ, ಮಹಿ, ಧಾತ್ರಿ, ಭೂಮಂಡಲ, ಧರಿತ್ರಿ, ಕು, ಮೇದಿನಿ, ಭುವನ, ಅಚಲೆ, ಅನಂತೆ, ರಸೆ, ವಿಶ್ವಂಭರೆ, ಸ್ಥಿರೆ, ಧರೆ, ಜ್ಯಾ, ಕಾಶ್ಯಪಿ, ಸರ್ವಂಸಹೆ, ವಸುಮತಿ,

ವಸುಂಧರೆ, ಗೋತ್ರೆ, ಕ್ಷ್ಮಾತಿ.

ಸತಿ— ಹೆಂಡತಿ, ಭಾರ್ಯೆ, ಕ್ಷೇತ್ರ, ದಾರ, ಕಲತ್ರ, ತಲ್ಪ, ದ್ವಿತೀಯೆ, ಜಾಯೆ, ಸಾಧ್ವಿ, ಸಹಧರ್ಮಿಣಿ, ಪಾಣಿಗೃಹೀತಿ.

ನಲ್ಮೆ— ಪ್ರೀತಿ, ಒಲ್ಮೆ, ಪ್ರಮುದ, ಹರ್ಷ, ಸಂತೋಷ, ಪ್ರಮೋದ, ಆಮೋದ, ಸಮ್ಮುದ, ಆನಂದ, ಸಾತ, ಸುಖ, ಶರ್ಮ.

ಬನ— ವನ, ಕಾನನ, ಕಾಡು, ಗಹನ, ವಿಪಿನ, ಅರಣ್ಯ, ಅಟವಿ, ಪಳು, ಪಳುವ, ಹಳು, ಹಳುವ, ಬಿಂಜ.

ನೀರು— ಜಲ, ಅಂಬು, ವಾರಿ, ಪಾನೀಯ, ವನ, ಶರ, ಉದಕ, ಜಡ, ಸಲಿಲ, ಆಪ, ಅಂಭ, ಅಂಭಸ್ಸು, ಜೀವನ, ವಾಃ, ಕಮಲ, ಪಯ, ಕೀಲಾಲ, ಅಮೃತ, ಭುವನ, ಕಬಂಧ, ಪಾಥ, ಪುಷ್ಕರ, ಅರ್ಣ, ತೋಯ, ಸರ್ವತೋಮುಖ, ನೀರ, ಕ್ಷೀರ, ಶಂಬರ, ಘನರಸ, ಮೇಘಪುಷ್ಪ, ವಿಷ.

ಟಕ್ಕು— ಠಕ್ಕು, ಠವಳಿ, ಠೌಳಿ, ಟವಳಿ, ಟವುಳಿ, ಮಾಟ, ಕವಡು, ಅಟಮಟ, ವಂಚನೆ, ಮೋಸ, ಬೂಟಾಟಿಕೆ.

ಹೊಳೆ— ತೊರೆ, ಹೊನಲು, ಸರುವು, ಪೊನಲು, ಒನಲು, ಹಳ್ಳ, ಒಳ್ಕು, ಸ್ರೋತ, ಸ್ರೋತಸ್ಸು, ಪೊಜ್ಜ, ಸ್ರವಂತಿ, ತಟನಿ, ತರಂಗಿಣಿ, ನದಿ, ಧುನಿ, ದ್ವೀಪವತಿ, ವಾಹಿನಿ.

ಸೋಜಿಗ— ಅಚ್ಚರಿ, ಆಶ್ಚರ್ಯ, ಚೋದ್ಯ, ಬೆರಗು, ಬೆಕ್ಕಸ, ಅಕ್ಕಜ, ಬಿಸವಂದ.

ಸೂರ್ಯ— ಇನ, ರವಿ, ಭಾಸ್ಕರ, ತರಣಿ, ಅರ್ಕ, ಆದಿತ್ಯ, ಭಾನು, ದಿನಪ, ಮಿತ್ರ, ನೇಸರ, ದಿನಕರ, ದ್ಯುಮಣಿ, ಕಮಲಮಿತ್ರ, ಗಗನಮಣಿ, ಬಿಸರುಹ ಪ್ರಿಯ, ಜಲಜ ಮಿತ್ರ, ಪ್ರಭಾಕರ, ವಿಭಾಕರ, ಉಷ್ಣರಶ್ಮಿ, ಸೂರ, ಅರಿಯಮ, ದಿವಾಕರ, ದ್ವಾದಶಾತ್ಮ, ಅಹಸ್ಕರ, ಬ್ರಧ್ನ, ಭಾಸ್ವಂತ, ವಿವಸ್ವಂತ, ಹರಿದಶ್ವ, ಸಪ್ತಾಶ್ವ, ಪಗಲೊಡೆಯ, ಬಿಸಿಗದಿರ, ಬೆಂಗದಿರ, ಸವಿತೃ, ವಿಕರ್ತನ, ಮಾರ್ತಾಂಡ, ಮಾರ್ತಂಡ, ಮಿಹಿರ, ಅರುಣ, ಪೂಷ, ಚಿತ್ರಭಾನು, ವಿರೋಚನ, ವಿಭಾವಸು, ಗ್ರಹಪತಿ, ತ್ವಿಷಾಂಪತಿ, ಅಹರ್ಪತಿ, ಹಂಸ, ಸಹಸ್ರಾಂಶು, ತಪನ.

ಗಾಳಿ— ವಾಯು, ಮಾರುತ, ಪವನ, ಪವಮಾನ, ಅನಿಲ, ವಾತ,

ಎಲರು, ಸದಾಗತಿ, ಮರುತ್, ಮರುತ, ಮರುತ್ತು, ಶ್ವಸನ, ಸ್ಪರ್ಶನ, ಪೃಷದಶ್ವ, ಗಂಧವಹ, ಗಂಧವಾಹ, ಮಾತರಿಶ್ವ, ಆಶುಗ, ಸಮೀರ, ಸಮೀರಣ, ಜಗತ್ಪ್ರಾಣ, ಪ್ರಭಂಜನ, ನಭಸ್ವಂತ, ಹವ್ಯವಾಹನಸಖ.

ವಿಪ್ರ— ಬ್ರಾಹ್ಮಣ, ದ್ವಿಜ, ಭೂಸುರ, ಪಾರ್ವ, ಪಾರುವ. ಹಾರುವ, ಭೂದೇವ, ಬಾಡವ, ಅಗ್ರಜನ್ಮ, ಧರೆಯ ವೃಂದಾರಕ, ಇಳೆಯ ಪಿರಿಯ, ಗನಹ, ನೇರಿದ, ಸಯ್ದ, ದಿಮ್ಮಿದ, ನೆಲನಮರ್ದುಣಿ.

ಚಂದ್ರ— ಇಂದು, ಶಶಿ, ಸೋಮ, ಇಂಗದಿರ, ಉಡುರಾಜ, ರಜನೀಪತಿ, ತಂಗದಿರ, ಹಿಮಕರ; ಅಮೃತಕರ, ಕಡಲಣುಗ, ಸುಧಾಕರ, ಕಲಾನಿಧಿ, ಕುಮುದಬಂಧು, ತಿಂಗಳ, ಮೃಗಧರ, ರಾಜ, ಶಶಾಂಕ, ಪರಪ್ರಕಾಶಕ, ಹಿಮಾಂಶು, ಚಂದ್ರಮ, ವಿಧು, ಸುಧಾಂಶು, ಶುಭ್ರಾಂಶು, ಓಷಧೀಶ, ನಿಶಾಪತಿ, ಅಬ್ಜ, ಗ್ಲೌ, ಮೃಗಾಂಗ, ಜೈವಾತೃಕ, ದ್ವಿಜರಾಜ, ಶಶಧರ, ಏಣಧರ, ನಕ್ಷತ್ರೇಶ, ಕ್ಷಪಾಕರ, ಚಳಿಗದಿರ, ಕುಳಿರ್ಗಯ್ಯ, ಪೆರೆ, ರಜನಿಕರ, ರಜನೀಕರ, ರಜನೀಚರ, ರಜನೀಚಾರಿ, ರಜನೀಪಾಲ, ರಜನೀಶ, ರಜನೀಕಾಂತ, ಏಣಲಾಂಛನ, ಏಣಾಂಕ, ಉಡುದೇವ, ಉಡುಪ, ಉಡುಪತಿ, ಅಮೃತಾರ್ಚಿ, ಶಶಲಕ್ಷ್ಮ, ಶಶಲಾಂಛನ.

ಕೋಗಿಲೆ - ಕೋಕಿಲ, ಪಿಕ, ಕಲಕಂಠ, ವನಪ್ರಿಯ, ಪರಭೃತ, ಕೆಂಗಣ್ಣಲರ್ವಕ್ಕಿ, ಕೆಂಗಣ್ಣಕ್ಕಿ, ಪರಪುಟ್ಟ, ಪಡಿಯಱವಕ್ಕಿ, ಪೊಕ್ಕುಳವಕ್ಕಿ, ಪೊಕ್ಕುಳಿವಕ್ಕಿ.

ಕಿರಾತ— ಬೇಡ, ಶಬರ, ವ್ಯಾಧ, ಲುಬ್ಧಕ, ಭಿಲ್ಲ, ಪುಳಿಂದ, ಶಾಬರ, ಪುಲಿಂದ. ಕಂಟಕ.

ಗಿಳಿ— ಶುಕ, ಕೀರ, ಕನ್ನಡವಕ್ಕಿ, ಪಂಡಿತವಕ್ಕಿ, ಪುರುಳಿ, ಜ್ಞಾನಾಚಾರ್ಯ.

ಸರೋವರ— ಕೊಳ, ತಟಾಕ, ಕಾಸಾರ, ಜಲಾಶಯ, ಸರ, ಸರಸಿ, ಪದ್ಮಾಕರ, ಕಮಲಾಕರ, ಹೆಗ್ಗೆರೆ, ಜಲಾಧಾರ, ನೀರೇರುಹಾಕರ.

೩. ವಿವಿಧಾರ್ಥಗಳು.

ಪದ— ಚರಣ, ಕಾಲು, ಪಾದ, ಹಜ್ಜೆ, ಹಾವಟಿಗೆ, ಹಜ್ಜೆಯ ಗುರುತು; ಪದ್ಯ, ಹಾಡು; ಸ್ಥಾನ, ಅಧಿಕಾರ, ಪದವಿ; ಆಶ್ರಯ, ಮನೆ, ಸ್ಥಳ; ಸಂದರ್ಭ

ವನ್ನು ಕೊಡತಕ್ಕ ಅಕ್ಷರಗಳ ಗುಂಪು, ಶಬ್ದ+ಪ್ರತ್ಯಯ-ಪದ; ಕಲೆ, ಗುರುತು; ಎಡೆ, ಇಂಬು; ಕಾರಣ; ವಸ್ತು; ಉದ್ಯೋಗ, ಕೆಲಸ; ಸಿಧಿ; ನೆವನ; ಪಾಲು, ಭಾಗ; ರಕ್ಷಣೆ; ಚತುರಂಗದ ಕಳ; ಕಿರಣ; ಹಟ, ಛಲ; ವೇಷ, ಸೋಗು; ವ್ಯವಸಾಯ; ಲಕ್ಷಣ; ಸಮಯ, ಪಥ, ಪ್ರಸಂಗ; ಹದ, ತಕ್ಕಷ್ಟು.

ದ್ವಿಜ— ಎರಡು ಬಾರಿ ಹುಟ್ಟಿದ; ಬ್ರಾಹ್ಮಣ; ಪಕ್ಷಿ; ಹಲ್ಲು; ಹಾವು; ನಕ್ಷತ್ರ; ಮನೆ; ತುಂಬುರುಮರ; ಕ್ಷತ್ರಿಯ; ವೈಶ್ಯ; ಚಂದ್ರ; ಧಾನ್ಯ ಸಮೂಹ; ಹಲ್ಲಿ.

ಸೋಮ— ಚಂದ್ರ; ಅಮೃತ; ಶಿವ; ನೀರು; ಕರ್ಪೂರ; ಸೋಮವಲ್ಲಿ (ರಸವನ್ನು ಹಿಂಡುವ ಒಂದು ಬಳ್ಳಿ); ಕುಬೇರ; ಯಮ; ವಾಯು; ವಸು; ಕಿರಣ; ಸುಗ್ರೀವ; ಆಕಾಶ; ಶ್ರೇಷ್ಠ; ಕಾಲ; ಮುನಿ; ಕೃತಯುಗ; ಯಾಗ; ನೃಪ; ಏಳು ದಿನಗಳಲ್ಲಿ ಎರಡನೆಯ ದಿನದ ಹೆಸರು.

ಪ್ರಚಾರ— ನಿರಂತರ ವ್ಯವಹಾರ ಅಥವಾ ಉಪಯೋಗ, ರೂಢಿ, ಚಾಲತಿ; ರೀತಿ, ನಡತೆ, ಕ್ರಮ; ಪ್ರಯೋಜನ; ಸಂಚಾರ; ಹೊರಗೆ ಬರೋಣ; ಪ್ರಕಟನೆ, ಪ್ರಸಿದ್ಧಿ ಪಡಿಸುವಿಕೆ; ವಿನೋದಸ್ಥಾನ, ಆಡುಂಬೊಲ; ಹಸುರಿಕೆ, ಹುಲ್ಲುಗಾವಲು; ತೆರಹು, ಮಾರ್ಗ; ತಿರುಗಾಟ; ದರ್ಶನ.

ಅಕ್ಷಯ— ನಾಶವಿಲ್ಲದ, ಅಂತ್ಯವಿಲ್ಲದ, ಮುಗಿಯದ; ಜೇನು; ನೀರು; ಅಮೃತ, ಸೊದೆ; ಪ್ರಸಿದ್ಧ; ವಿಷಯ; ಮುಕ್ತಿ; ಸಂವತ್ಸರದ ಹೆಸರು.

ಕಮಲ— ತಾವರೆ; ನೀರು; ಚಂದ್ರ; ಸಾರಸ ಪಕ್ಷಿ; ಒಂದು ತರಹದ ಜಿಂಕೆ; ತಾಮ್ರ; ಔಷಧ, ಮದ್ದು; ಮೂತ್ರ ಕೋಶ; ಲಕ್ಷ್ಮಿ; ನೈದಿಲೆ; ಕಿರಣ; ಹಾವಸೆ.

ಉಲ್ಲಾಸ— ವಿನೋದ, ಹರ್ಷ, ಸುಖ, ಸಂತೋಷ, ವಿಲಾಸ, ಹಾರಾಟ; ಕಾಂತಿ, ಬೆಳಕು; ಕಾವ್ಯ ವಿಭಾಗ, ಸಂಧಿ; ತಮಾಷೆ, ಆಟ.

ಕಾಲ— ಸಮಯ, ವೇಳೆ, ಅವಧಿ; ಕರಿದು, ಕಪ್ಪು ಬಣ್ಣ; ಯಮ; ಜೀವಮಾನ; ಉಗ್ರ, ಭಯಂಕರ; ಸಾವು, ಮರಣ, ಮೃತ್ಯು; ಅದೃಷ್ಟ, ದೈವ; ಸಂವತ್ಸರ; ಶಕ್ತಿ; ಕ್ರಿಯಾಪದದ ವೇಳೆಯ ಹೇಳಿಕೆ; ಕೋಗಿಲೆ; ಶನಿ; ಭಾಗ, ಅಂಶ; ಶಿವ; ಕಪ್ಪು ಸೀಸ; ಗೋಂದು, ಹಗಿನು; ಕಬ್ಬಿಣ; ಎಮ್ಮೆ, ಕೋಣ.

ಆನಂದ— ಸುಖ, ಸಂತೋಷ, ಕ್ಷೇಮ, ನಲವು, ಹರ್ಷ.

ಕರಣ— ಮಾಡುವಿಕೆ, ಮಾಡೋಣ; ಕ್ರಿಯಾಸಾಧನ, ಮಾಡುವ ಸಾಮಾಗ್ರಿ, ಜ್ಞಾನೇಂದ್ರಿಯ, ಬರೆಹ, ಬರೆಹಗಾರ; ಶರೀರ, ದೇಹ, ಕ್ಷೇತ್ರ; ಉದ್ದೇಶ, ಹೇತು, ಕಾರಣ; ವ್ಯಾಪಾರ, ವ್ಯವಹಾರ; ಕೃತ್ಯ, ಕೆಲಸ; ನೆಗಳ್ತೆ, ಗೈಮೆ; ಗುಮಾಸ್ತ; ಪಂಚಾಂಗಗಳಲ್ಲಿ ಒಂದು; ಪರಮಾತ್ಮ; ಉಚ್ಚಾರ; ಹೊಲ; ಮೂಲ; ಭೇದಿಸಲ್ಪಟ್ಟವನು; ಶೂದ್ರ ಸ್ತ್ರೀಗೆ ವೈಶ್ಯನಿಂದ ಹುಟ್ಟಿದವನು.

ಹದನ— ಹದನು; ಕ್ರಮ, ರೀತಿ, ಮಾರ್ಗ, ಸ್ಥಿತಿಗತಿ; ಮೂಲ, ಕಾರಣ, ನಿಜಸ್ಥಿತಿ; ಯೋಗ್ಯ; ಹರಿತ, ಚೂಪಾದ; ವಾರ್ತೆ, ವೃತ್ತಾಂತ, ಸಮಾಚಾರ, ಸಂಗತಿ, ಸುದ್ದಿ; ಕಥೆ, ಚರಿತ್ರೆ; ತೀವ್ರ, ಚುರುಕು; ಪರಿಹಾರ, ಪ್ರತೀಕಾರ; ಅಭಿಪ್ರಾಯ, ತಾತ್ಪರ್ಯ, ಉದ್ದೇಶ.

ದಾನ— ಕೊಡುವಿಕೆ, ಕೊಡುಗೆ, ಕಾಣಿಕೆ; ಆನೆಯ ಮದೋದಕ; ಲಂಚ; ಉದಾರ; ಕಡೆಯುವಿಕೆ; ಶುದ್ಧೀಕರಣ; ರಕ್ಷಣೆ; ಮೇವು; ಸಂಕಲನ; ಪಾಲು, ಹಂಚುವವ; ಎರಡನೇ ಉಪಾಯ.

ಪ್ರಯೋಜನ— ಉದ್ದೇಶ, ಹೇತು, ಕಾರಣ, ಮೂಲ; ಲಾಭ, ಆದಾಯ; ಸಂದರ್ಭ; ಕಾರ್ಯದ ಫಲ; ಉದ್ಯೋಗ, ಕೆಲಸ; ಉತ್ತರ ಕ್ರಿಯೆ ಶ್ರಾದ್ಧಾದಿಗಳು; ಮದುವೆ ಉಪನಯನಾದಿ ಕೆಲಸ.

ಪಲ್ಲವ— ಚಿಗುರು, ಚಿಗುರೆಲೆ, ತಳಿರು; ಮೊಳಕೆ, ಮೊಗ್ಗೆ, ಹೂವು, ಸಣ್ಣ ಕೊಂಬೆ; ವಿಸ್ತರಿಸುವಿಕೆ, ವಿಸ್ತಾರ; ವಿಕಸನ, ಅರಳು; ಸೆರಗು; ವಿದ್ರುಮ, ಹವಳ; ರತ್ನ, ಮಣಿ; ಕಂಕಣ, ಬಳೆ; ತ್ರಾಣ, ಬಲ; ಅಲಕ್ತ; ಪುಲ್ಗರಿ; ಮೋಹ, ವಿಷಯ ಕೇಳಿ; ಚಾಪಲ್ಯ; ಇಚ್ಛಾನುಸಾರ ನಡಿಯುವವ, ವಿಟ, ಪಟಿಂಗ; ವಲ್ಲಕಿ, ವೀಣೆ; ಲಾಂಗೂಲ, ಬಾಲ; ಕೇಶ, ಕೂದಲು; ಕಳಭ, ಆನೆಮರಿ; ಶಬ್ದ ಸಮೂಹ; ಬಾಲಕರು; ಒಂದು ಅರಸು ಮನೆತನದ ಹೆಸರು.

ದಳ— ಸೇನಾ ವಿಭಾಗ, ಸೈನ್ಯ; ಎಲೆ, ಎಸಳು, ಪಕಳೆ; ಯುದ್ಧ; ಭಾಗ, ಪಾಲು, ಚೂರು, ಸಣ್ಣಭಾಗ; ಧಾನ್ಯಗಳ ಬೇಳೆ; ದಪ್ಪ, ತೋರ.

ಹೋಕೆ— ಹೋಗುವಿಕೆ; ದಾರಿ, ಮಾರ್ಗ; ಆರೋಪ, ದೋಷ ಹಚ್ಚುವಿಕೆ; ಅವಸ್ಥೆ, ಗತಿ; ನಿರ್ಲಜ್ಜೆ; ಕಪಟ; ಒಣಜಂಭ; ಉಚ್ಚತನ; ತಂಟಲಮಾರಿತನ; ವಿಪರೀತ ಗುಣ, ಮುರುಕ.

ಜವ— ಜವನ, ವೇಗ, ತ್ವರೆ; ಯಮ, ಅಂತಕ; ಜಾಗ್ರತೆ; ನಿಶ್ಚಯ, ದಿಟ; ತ್ರಾಣ, ಬಲ.

ದೊರೆ— ಮುಂಭಾಗದಲ್ಲಿದ್ದವನು, ನಾಯಕ, ಒಡೆಯ, ಯಜಮಾನ, ಅರಸು; ಹೋಲಿಕೆ, ಸಮಾನತೆ, ಸರಿ, ಸಮತೆ; ಲಾಭ, ಆದಾಯ; ಕೈದೊಡವು, ದೋರೆ; ಪ್ರಸಿದ್ಧ; ಹೊಳೆ.

ರಸ— ದ್ರವ; ಸಾರ, ತಿರುಳು; ನೀರು, ಹಾಲು, ಎಣ್ಣೆ, ತುಪ್ಪ ಮುಂತಾದ ಪ್ರವಾಹಿ ಪದಾರ್ಥ; ಉಪ್ಪು, ಕಾರ, ಹುಳಿ ಮುಂತಾದ ರುಚಿ ಪದಾರ್ಥ; ದೇಹದಲ್ಲಿ ಹರಿದಾಡುವ ದ್ರವ ಪದಾರ್ಥಗಳು; ನವರಸಗಳು; ಪಾದರಸ; ರುಚಿ; ಭಾವದ ಪರಿಪಾಕ; ವಿಷ; ಸ್ವರಮುಖ್ಯ; ಅಮೃತ; ಉತ್ಸವ, ಸಂತೋಷ; ವಿಷಯ; ವೀರ್ಯ; ದ್ರಾಕ್ಷೆ; ಇಚ್ಛೆ; ಬಯಕೆ, ಕಾಮೋದ್ರೇಕ; ಸ್ವಾರಸ್ಯ, ಲಾಲಿತ್ಯ, ಸಿಹಿ, ಹಾಸ್ಯ, ಲಹರಿ; ಶೈಲಿ; ಆಸವ; ಲಾವಣ್ಯ; ನಾಲಿಗೆ; ರೋಗಭೇದ.

ವೀರ— ಕಲಿ, ಶೂರ, ಪರಾಕ್ರಮಿ, ಅದಟ; ನಟ; ಅಗ್ನಿ; ಮಗ; ಗಂಡ; ಅರ್ಜುನನ ವೃಕ್ಷ; ಜೈನ; ಕರವೀರ ವೃಕ್ಷ; ವಿಷ್ಣು; ಚಿತ್ತ; ಮೆಣಸು; ಗಂಜಿ; ತಾಯಿ; ಹೆಂಡತಿ; ಬಾಳೆ.

ಶ್ಯಾಮ— ಕಪ್ಪಾದ, ಕಪ್ಪು ಬಣ್ಣ, ನೀಲ; ಹಸುರು; ಮೇಘ, ಕಪೋತ; ಕೋಗಿಲೆ; ವೃಕ್ಷ; ಸಮುದ್ರ ಲವಣ; ರಾತ್ರಿ; ನೆರಳು; ಕಪ್ಪು ಹೇಗಸು; ಕೃಷ್ಣ; ಬಂಜೆ; ಆವು; ನೀಲಿ ಗಿಡ; ಕಮಲ ಬೀಜ; ಯಮುನಾ ನದಿ.

ಆಕರ— ಖನಿ, ಗಣಿ; ಮೂಲ, ಉತ್ಪತ್ತಿ ಸ್ಥಾನ; ಮೊತ್ತ, ಸಮೂಹ; ಸ್ಥಾನ, ಅಧಿಕಾರ; ಗ್ರಾಮ, ಊರು; ಯೋಗಿ; ಆಧಾರ, ಆಸ್ಪದ; ಜೀವನೋಪಾಯ.

ಕಡೆ— ಬದಿ, ಅಂಚು; ಮುಗಿತಾಯ, ತೀರಿಕೆ; ಅಂತ್ಯ, ತುದಿ, ಮೇರೆ; ಇಂಬು, ಎಡೆ, ಪಕ್ಷ, ಪಾರ್ಶ್ವ; ದಿಕ್ಕು; ಅವಸಾನ, ಸಾವು; ರಂಗವಲ್ಲಿ;–ಕಡೆ (ಖಡೆ)–ಬಳೆ;–ಕಟೆ, ಮಥಿಸು, ಕಳೆ, ತಿಕ್ಕು, ದಾಟು; ಕಡಿ, ಕಡಿದುಹಾಕು; ಕೆತ್ತು, ಕೆತ್ತನೆಯ ಕೆಲಸಮಾಡು.

ಆಸನ— ಕುಳಿತುಕೊಳ್ಳುವ (ಸ್ಥಳ) ಸಾಧನ, ಪೀಠ, ಮಣೆ; ಠಾಣ್ಯ ಮಾಡುವುದು; ಆನೆಯ ಭುಜ; ಮುಕುಳಿ, ಕುಂಡೆ; ರಥ, ತೇರು; ಕುಳಿತು

ಕೊಳ್ಳುವ ರೀತಿ (ಪದ್ಮಾಸನ-ಇ); ಯುದ್ಧದಲ್ಲಿ ತಮ್ಮ ಸ್ಥಳವನ್ನು ಕಾಪಾಡಿ ಕೊಳ್ಳುವುದು; ತಾಟಸ್ಥ್ಯ.

ಕಾಂತ— ಪ್ರಿಯ, ಇನಿಯ; ಗಂಡ; ಸುಂದರ, ಮನೋಹರ; ಸ್ವಾಮಿ, ಒಡೆಯ; ಚಂದ್ರ; ವಸಂತ; ಸೂಜಿಕಲ್ಲು; ಕಾರ್ತಿಕೇಯ; ಕೃಷ್ಣ; ಕುಂಕುಮ ಕೇಸರ; ಉಪಲ, ಕಲ್ಲು, ಹರಳು; ಹುಟ್ಟಿದ ಸ್ಥಳ, ಮನೆ; ಯೋಗಿ: ವ್ರಾತ, ಸಮೂಹ.

ಚಿತ್ರ— ರಮ್ಯ, ಸುಂದರ, ಆಶ್ಚರ್ಯಕರ, ಅದ್ಭುತ, ಸೋಜಿಗ: ನಾನಾ ಬಣ್ಣ, ವಿವಿಧ ಬಣ್ಣದ; ನಕ್ಷೆ, ತಸಬೀರು; ವಿವಿಧ; ತಿಲಕ, ಬೊಟ್ಟು; ಶುಭ, ಭದ್ರ, ಮಂಗಳ; ಆಕಾಶ; ಕಲೆ, ಮಚ್ಚೆ; ವಾಯು; ಚಿತ್ರಗುಪ್ತ; ಚಿತ್ತಾರ; ಕಬ್ಬಿಣ; ಕುಷ್ಠಭೇದ; ಚಿತ್ರಮೂಲ; ಸಾಧನ; ಚಿತ್ತಾನಕ್ಷತ್ರ.

ಕಲಹ— ಜಗಳ, ಯುದ್ಧ; ವೈಮನಸ್ಯ; ಸುಳ್ಳು, ದಗೆ, ಮೋಸ; ಬಲಾತ್ಕಾರ; ದಾರಿ, ಹಾದಿ; ಒರೆ, ಕೋಶ; ಕೂಗು, ಧ್ವನಿ; ತೊಂದರೆ, ಕಷ್ಟ, ಕಂಟಕ.

ಎದೆ— ಎರ್ದೆ, ಹೃದಯ; ಧೈರ್ಯ, ಶೌರ್ಯ.

ಆರ್ಯ— ಶ್ರೇಷ್ಠ; ಪೂಜ್ಯ, ಹಿರಿಯ, ವೃದ್ಧ; ಯೋಗ್ಯ, ಯೋಗ್ಯ, ಸ್ನೇಹಿತ; ಸ್ವಾಮಿ, ಒಡೆಯ; ಗುರು; ಉತ್ತಮ ಕುಲದಲ್ಲಿ ಹುಟ್ಟಿದವ, ಕುಲೀನ; ಸೂರ್ಯ; ತಾಪಸ: ಭೋಗ; ಭೂಮಿ; ಸಜ್ಜನ, ಮಾನಸ್ಥ; ಒಂದು ಜನಾಂಗದ ಹೆಸರು.

ಕರೆ— ಅಂಚು, ಬದಿ, ಸೆರಗು; ದಂಡೆ, ತೀರ; ಅಂತ್ಯ, ತೀರಿಕೆ, ಮುಗಿತಾಯ; ಕಲೆ, ಮೈಲೆ, ಕೊಳೆ; ಮಚ್ಚೆ, ಕಂದು; ದೋಷ, ಕಲಂಕ, ಕಪ್ಪು, ಕುಂದು; ಹಿಂಡು, ಸುರಿಸು, ಹರಿಯಿಸು, ಇಳಿಸು; ಬರುವಂತೆ ಹೇಳು, ಕೂಗು; ಆಮಂತ್ರಿಸು; ಆಮಂತ್ರಣ; ದನ ಕೂಡಿಸುವ ಹಟ್ಟಿ.

೪. ಮಾರು ನುಡಿಗಳು.

ಆಸೆ-ನಿರಾಸೆ. ಮಲ-ನಿರ್ಮಲ. ಲಾಭ-ನಷ್ಟ. ಲಾಭ-ಹಾನಿ. ಚಂಚಲ-ಅಚಲ. ಚಂಚಲ-ಸ್ಥಿರ. ರಾತ್ರಿ-ಹಗಲು. ಸುರ-ಅಸುರ. ಜಡ-ಹಗುರು. ಹಿರಿ-ಕಿರಿ. ಹಿರಿಯ-ಕಿರಿಯ. ಉದ್ದ-ಅಗಲ. ಉದ್ದ-ಗಿಡ್ಡ. ಏರು-ಇಳಿ. ಇಳಿ-ಹತ್ತು. ಅಂದು-ಇಂದು. ಶತ್ರು-ಮಿತ್ರ. ಹಸಿ-ಒಣ. ಹಸಿ-ಬಿಸಿ. ಆಡು-ಆನೆ. ಅಜ-ಗಜ. ಜಾಣ-ಮೂರ್ಖ. ಉಪ್ಪು-ಖಾರ.

೫. ಅನ್ವಯಾರ್ಥ.

ಅನಂತ— ಅನ್-ಇಲ್ಲ.+ಅಂತ-ಕೊನೆ, ಅಂತ್ಯ—ಅಂತ್ಯವಿಲ್ಲದವನು-ಕೊನೆಯಿಲ್ಲದವನು-ವಿಷ್ಣು.

ದಿವಾಕರ— ದಿವಾ-ಹಗಲನ್ನು + ಕರ - ಮಾಡುವವನು - ಹಗಲನ್ನು ಉಂಟುಮಾಡುವವನು-ಸೂರ್ಯ.

ಅಂಬುಧಿ— ಅಂಬು-ನೀರು+ಧಿ-ಆಧಾರ, ಧರಿಸಿಕೊಂಡದ್ದು - ನೀರಿಗೆ ಆಧಾರವಾದುದು-ಸಮುದ್ರ.

ಗಜಪುರ— ಗಜ-ಹಸ್ತಿ+ಪುರ-ಪಟ್ಟಣ. ಚಂದ್ರವಂಶದ ಹಸ್ತೀ ಎಂಬ ರಾಜನು ಕಟ್ಟಿಸಿದ ಊರು-ಹಾಸ್ತಿನಪುರ. (ಹಸ್ತಿನಾಪುರ, ಹಸ್ತಿನಗರ, ಹಸ್ತಿನಾವತಿ, ಗಜನಗರ).

ಅರಮನೆ— ಅರ-ಅರಸು+ಮನೆ—ರಾಜನ ಮನೆ.

ಆತ್ಮಜ— ಆತ್ಮ-ಶರೀರ+ಜ-ಹುಟ್ಟಿದ- ತನ್ನ ಶರೀರದಿಂದ ಹುಟ್ಟಿದವನು—ಮಗ.

ವಿಪ್ರ— ವಿ-ವಿಶೇಷವಾಗಿ+ಪ್ರ- ಪಾಪದಿಂದ ಪರಿಪಾಲಿಸುವವನು—ಬ್ರಾಹ್ಮಣ.

ಫಲುಗುಣ— ಉತ್ತರಾ (ಫಲ್ಗುನೀ) ನಕ್ಷತ್ರದಲ್ಲಿ ಜನಿಸಿದವನು—ಅರ್ಜುನ.

ಪರಮಾತ್ಮ— ಪರಮ-ಉತ್ಕೃಷ್ಟವಾದ+ಆತ್ಮ-ಸ್ವರೂಪ ಉಳ್ಳವನು-ಭಗವಂತ.

ಅನಿಮಿಷ— ಅ-ಇಲ್ಲ + ನಿಮಿಷ - ರೆಪ್ಪೆ ಹೊಡೆಯುವಿಕೆ- ರೆಪ್ಪೆಯ ಹೊಡೆತ ಇಲ್ಲದವ—ದೇವತೆ.

ಮಹೀಜ— ಮಹೀ-ಭೂಮಿಯಲ್ಲಿ+ಜ-ಹುಟ್ಟಿದ್ದು—ಮರ.

ಕಮಲ— ಕಂ-ನೀರು+ಅಲ-ಅಲಂಕರಿಸು — ನೀರನ್ನು ಅಲಂಕರಿಸುವುದು—ತಾವರೆ.

ವಿಹಗ— ವಿಹಸ್-ಆಕಾಶದಲ್ಲಿ+ಗ-ಗಮಿಸುವುದು—ಹಕ್ಕಿ.

ಮೂಷಕ— (ಮುಷ್-ಕದ್ದುಕೋ.) ಕದ್ದು ತಿನ್ನುವ ಪ್ರಾಣಿ—ಇಲಿ.

ಉರಗಾಶನ— ಉರ-ಎದೆ (ಹೊಟ್ಟೆ) +ಗ-ಗಮಿಸು—ಹೊಟ್ಟೆಯಿಂದ ಗಮಿಸುವುದು—ಹಾವು. ಉರಗ-ಸರ್ಪ+ಅಶನ—ಆಹಾರ. ಸರ್ಪವೇ ಆಹಾ

ರವಾಗಿರುವುದು—ಗರುಡ.

ಪನ್ನಗ— ಪತ್-ಪಾದ, ಹಜ್ಜೆ+ನ-ಇಲ್ಲ+ಗ-ಗಮಿಸು—ಪಾದಗಳು ಇಲ್ಲದೆ ಚಲಿಸುವುದು— ಸರ್ಪ.

ಭೂಪ— ಭೂ-ಭೂಮಿಯನ್ನು+ಪ-ಪಾಲಿಸುವವನು—ರಾಜ.

ವಾಜಿ— ವಾಜ-ವೇಗ, ತ್ವರೆ.—ವೇಗವುಳ್ಳದು— ಕುದುರೆ.

ಮಾನವ— ಮನುವಿನ ಅಂಶದಲ್ಲಿ ಹುಟ್ಟಿದವ—ಮನುಷ್ಯ.

ಸುಭಾಷಿತ— ಸು-ಒಳ್ಳೆಯ+ಭಾಷಿತ- ಮಾತು- ಸೂಕ್ತಿ, ಸದುಕ್ತಿ, ನೀತಿವಚನ.

ಇಂದುಧರ— ಇಂದು-ಚಂದ್ರ+ಧರ- ಧರಿಸಿದವನು— ಚಂದ್ರನನ್ನು ತಲೆಯಲ್ಲಿ ಧರಿಸಿಕೊಂಡವನು—ಶಿವ.

ಆರಾಮ— (ರಮ್ - ರಮಿಸು, ಕ್ರೀಡಿಸು). ಮನೋಹರವಾಗಿ ಸಂತೋಷವನ್ನು ಕೊಡುವಂಥಾದ್ದು—ತೋಟ, ಉದ್ಯಾನ.

ಅಗ್ರಗಣ್ಯ— ಅಗ್ರ-ತುದಿ, ಮೊದಲು+ಗಣ್ಯ-ಎಣಿಸಲ್ಪಡುವವನು- ಮೊದಲಲ್ಲಿ ಲೆಕ್ಕಿಸಲ್ಪಡುವವನು—ಮೊದಲಿಗ, ಮಾನ್ಯ, ಶ್ರೇಷ್ಠ.

ವನಧಿ— ವನ-ನೀರನ್ನು+ಧಿ-ಆಧಾರ, ಧರಿಸಿಕೊಂಡದ್ದು-ಸಮುದ್ರ.

ಸಹಜಾತ— ಸಹ-ಜೊತೆಗೆ, ಒಟ್ಟಿಗೆ+ಜಾತ-ಹುಟ್ಟಿದವ, ಸಹೋದರ.

ಶ್ರೀಕರ— ಶ್ರೀ-ಸಂಪತ್ತು, ಅಭಿವೃದ್ಧಿ, ಶುಭ+ಕರ—ಮಾಡುವ— ಶ್ರೀಯನ್ನು ಉಂಟುಮಾಡುವ, ಶುಭಕರ, ಸಂಪತ್ತನ್ನು ಒದಗಿಸುವ, ಶೋಭೆಯನ್ನು ಉಂಟುಮಾಡುವ.

೬. ಕಿರುನುಡಿಗಳು.

ಮಿರ್ರನೆ ಮಿಂಚು— ಕಾರ್ಗಾಲದ ವಿದ್ಯುಲ್ಲತೆಯು ಮಿರ್ರನೆ ಮಿಂಚಿ ನೋಟಕರ ಕಣ್ಣನ್ನು ಕುಕ್ಕುವುದು. **ಬೆಮ್ಮನೆ ಬೆರೆ**— ದೇಹದಾರ್ಢ್ಯ ಮತ್ತು ಮನೋ ನೈರ್ಮಲ್ಯವು ಮಾನವನಲ್ಲಿ ಬೆಮ್ಮನೆ ಬೆರೆಯುವುದು ಅತ್ಯವಶ್ಯಕ ವೆಂದು ಉಪನಿಷತ್ತುಗಳಲ್ಲಿ ಮೇಲಿಂದ ಮೇಲೆ ಒತ್ತಾಯ ಮಾಡಿದ್ದಾರೆ. **ತೆಕ್ಕನೆ ತೀವು**— ಹತ್ತುಸಾವಿರ ವಿದ್ಯಾರ್ಥಿಗಳಿಂದಲೂ ಬೌದ್ಧ ಸಂನ್ಯಾಸಿಗಳಿಂದಲೂ ತೆಕ್ಕನೆ ತೀವಿದ್ದ ನಳಂದ ವಿಶ್ವವಿದ್ಯಾನಿಲಯದಲ್ಲಿ ಹುಯೆನ್‌ತ್ಸಾಂಗನು ನ್ಯಾಯಶಾಸ್ತ್ರ ಪಾರಮ್ಯತೆಯನ್ನು ಪಡೆದು ಕೊನೆಗೆ ಅದೇ ವಿಶ್ವವಿದ್ಯಾನಿಲಯದಲ್ಲಿ ಉಪಸ್ಥಾನಪತಿಯಾದನು. **ಬೆಂದು ಬೆಂಡಾಗು**— ಬ್ರೂಷ್ಟಿಕನ್

ಎಂದು ಪ್ರಸಿದ್ಧನಾದ ಮಹಮ್ಮೂದನು ಅಮೀರನಾಗಿ ಭಾರತಗೆ ಐಶ್ವರ್ಯ ವನ್ನು ಸೂರೆಮಾಡಲು ಕೈಕೊಂಡ ಅಮಾನುಷ ಕೃತ್ಯದಿಂದಾಗಿ ಭಾರತವು ಬೆಂದು ಬೆಂಡಾಯಿತು. **ದುರದುರನೆ ಉರಿ**— ಘಜ್ನಿ ಮಹಮ್ಮದನ ಕೋಪಾಗ್ನಿಯಲ್ಲಿ ಕಾಥೇವಾಡದ ಸೋಮನಾಥ ದೇವಾಲಯವು ದುರದುರನೆ ಉರಿದುಹೋಯಿತು.

೭

ಧಪಧಪ ಹೊಡೆ— ಪಶುಗಳನ್ನು ಧಪಧಪ ಹೊಡೆದು ಅಟ್ಟುವವನು ಮಾನವನೊ ಕಟುಕನೊ? **ಪರಪರ ಹರಿ**— ಮಗುವು ವಸ್ತ್ರವನ್ನು ಪರಪರ ಹರಿಯಿತು. **ತುರುತುರು ನಡೆ**— ತುಂಬುರನು ತುರುತುರು ನಡೆದು ಬೆಟ್ಟದ ಶಿಖರವನ್ನಡರಿದನು. **ಗಸಗಸನೆ ಮಾಡು** — ಆಕೆಯು ಗಸಗಸ ತಿಕ್ಕುವ ಕೆಲಸವನ್ನು ಗಸಗಸನೆ ಮಾಡಿ ಮುಗಿಸಿದಳು. **ವಿರ್ರನೆ ಮಿಂಚು**— ಆಕಾಶದಲ್ಲಿ ಸೌದಾಮಿನಿಯು ವಿರ್ರನೆ ಮಿಂಚಿ ಮಾಯವಾಯಿತು. **ಡಿಮಿಡಿಮಿ ಕುಣಿ**— ರಂಗಭೂಮಿಯ ಮೇಲೆ ನರ್ತಕಿಯು ಡಿಮಿಡಿಮಿ ಕುಣಿದಳು. **ಸೂಸಿ ಹರಿ**— ವರ್ಷ ಋತುವಿನಲ್ಲಿ ತೊರೆಗಳು ಸೂಸಿ ಹರಿಯುತ್ತವೆ. **ಬಿಲ್ಲು ಬೆರಗಾಗು**— ಬಕಾಸುರನನ್ನು ಕೊಂದ ಭೀಮನ ಶಕ್ತಿಯನ್ನು ಕಂಡು ಏಕಚಕ್ರ ನಗರದ ನಿವಾಸಿಗಳು ಬಿಲ್ಲು ಬೆರಗಾದರು. **ದಡದಡ ಹರಿ**— ಮಳೆಗಾಲದಲ್ಲಿ ದಡದಡ ಹರಿಯುವ ಹೊನಲಲ್ಲಿ ಹರಿಗೋಲನ್ನು ನಡೆಸಲು ಸಾಧ್ಯವೆ?

೮

ಹುಳಿ ಜೊಟ್ಟ— ನಾನು ತಿಂದ ಮಾವು ಹುಳಿ ಜೊಟ್ಟವಾಗಿತ್ತು. **ಪೆರೆನೊಸಲು**— ಆಕೆಯ ಪೆರೆನೊಸಲಲ್ಲಿ ತಿಲಕವು ಎದ್ದು ಕಾಣಿಸುತ್ತಿದೆ. **ಹಚ್ಚಗೆ ಹಸುರು**— ವಸುಂಧರೆಯು ವರ್ಷಕಾಲದಲ್ಲಿ ಹಚ್ಚಗೆ ಹಸುರಾಗಿ ನಿತ್ಯ ಸೌಂದರ್ಯಶಾಲಿನಿಯಾಗಿ ಮೆರೆಯುತ್ತಾಳೆ. **ನಗೆಗಣ್ಣು**— ಸ್ತ್ರೀಯರ ನಗೆಗಣ್ಣ ಕುಡಿನೋಟಕ್ಕೆ ಸಿಲುಕದವರು ಇದ್ದಾರೆಯೆ? **ಉಪ್ಪಿನ ಕಟಿ**— ಇಂದಿನ ಪದಾರ್ಥವು ಉಪ್ಪಿನ ಕಟಿಯಾದ ನಿಮಿತ್ತ ಊಟಕ್ಕೆ ಸೊನ್ನೆಯಾಯಿತು.

೯

ಮುತ್ತಿನಂತೆ ಮಾತು. ಸೀಸದಂತೆ ಎರಕ. ಸೂರ್ಯನಂತೆ ಪ್ರಕಾಶ (ತೇಜ). ಬೆಂಕಿಯಂತೆ ಉಗ್ರ. ಅಗ್ನಿಯಂತೆ ತೇಜಸ್ಸು. ವಜ್ರದಂತೆ ಕಠೋರ.

ವಜ್ರದಂತೆ ಗಟ್ಟಿ. ಹಿಮದಂತೆ ಶುಭ್ರ. ಹಿಮದಂತೆ ಘಟ್ಟಿ. ಸಕ್ಕರೆಯಂತೆ ಸವಿ (ಸಿಹಿ). ಗಿಳಿಯಂತೆ ಸವಿಗಾರ. ನರಿಯಂತೆ ಕಾಪಟ್ಯ (ಕಪಟತನ). ಕಾಗೆಯಂತೆ ಕಪ್ಪು.

೧೦. ಜೋಡುನುಡಿಗಳು.

ತಿಂಡಿ-ತೀರ್ಥ— ಅನ್ಯರ ಮನೆಯ ತಿಂಡಿ-ತೀರ್ಥಗಳಿಗೆ ಆಸೆ ಪಡಬಾರದು. **ತಂದೆ-ತಾಯಿ**— ಇಹದಲ್ಲಿ ನಮಗೆ ತಂದೆ-ತಾಯಿಗಳನ್ನು ಮಿಕ್ಕಿದ ದೇವರು ಇದ್ದಾರೆಯೆ? **ಕಾಗದ-ಪತ್ರ**— ಪಾಶ್ಚಾತ್ ವಿದ್ಯಾಭ್ಯಾಸವು ಭಾರತವನ್ನು ಕಾಗದ-ಪತ್ರಗಳಿಂದ ಜೀವಿಸುವ ಕಾರಕೂನರನ್ನು ತಯಾರಿಸುವ ಒಂದು ಯಂತ್ರಶಾಲೆಯನ್ನಾಗಿ ಮಾರ್ಪಡಿಸಿದೆ. **ತಪ್ಪು-ತಡೆ**- ಮಾನವನು ಅಪೂರ್ಣನಾದುದರಿಂದ ಆತನೊಂದು ತಪ್ಪುತಡೆಗಳ ಕೋಶವಾಗಿದ್ದಾನೆ. **ಮಂದಿ-ಮಕ್ಕಳು**— ಮಂದಿ-ಮಕ್ಕಳನ್ನು ಸಾಕದೆ ಅಂದಣವನ್ನೇರಿದವನ ಮುಖಕ್ಕೆ ಕಿಚ್ಚು ಹಚ್ಚು. **ಆಚಾರ-ಪ್ರಚಾರ**— ಆಚಾರ-ಪ್ರಚಾರದಿಂದ ಅರಸು ಆದ, ಅದು ಕೆಟ್ಟು ಭ್ರಷ್ಟನಾದ. **ಸಂದಿ-ಗೊಂದಿ**— ಆ ವರ್ತಮಾನವು ಸಂದಿ-ಗೊಂದಿಗಳಲ್ಲಿಯೂ ಹರಡಿದೆ. **ನಡೆ-ನುಡಿ**— ನಡೆ-ನುಡಿಗಳಲ್ಲಿ ಕೀರ್ತಿಯನ್ನು ಸಂಪಾದಿಸಿದವರು ಗತಿಸಿದ್ದರೂ ಜೀವದಿಂದ ಇದ್ದಂತೆಯೇ ಇರುವರು. **ನುಚ್ಚು-ನುರಿ**— ಹೋರಿಗಳೆರಡರ ಮಧ್ಯದಲ್ಲಿ ಸಿಲುಕಿದ ಗಿಡವೊಂದು ನುಚ್ಚು-ನುರಿಯಾಯಿತು. **ಮಣಿತ-ಕುಣಿತ**— ಆ ನರ್ತಕಿಯು ಮಣಿತ-ಕುಣಿತಗಳಿಂದ ಸಭಿಕರನ್ನು ಬೆರಗುಗೊಳಿಸಿದಳು. **ಕತ್ತೆ-ಕುದುರೆ**— ಕತ್ತೆ-ಕುದುರೆಗಳ ಮೊಲೆಯಲ್ಲಿ ಕಂಡುಗ ಹಾಲಿದ್ದರೇನು? **ಕಾಳು-ಕಡಿ**— ಹಕ್ಕಿಗಳು ಕಾಳು-ಕಡಿಗಳನ್ನು ಹೆಕ್ಕಿ ಜೀವಿಸುತ್ತವೆ.

೧೧

ಊಳಿಡು— ನರಿ ಊಳಿಟ್ಟರೆ ಸುರಲೋಕ ಹಾಳಾದೀತೆ? **ಎರಡಿಡು**— ತನ್ನ ಸೈನ್ಯವನ್ನು ಎರಡಿಟ್ಟು, ಇಕ್ಕಡೆಗಳಲ್ಲಿ ಮುತ್ತಿ ವೈರಿ ಪಟ್ಟಣವನ್ನು ರಾಜನು ನಾಶಮಾಡಿದನು. **ಒಟ್ಟಿಡು**— ಮಣಿಪುರದ ಅರಸನಾದ ಗಯನೆಂಬ ಗಂಧರ್ವನು ವಿಮಾನದಲ್ಲಿ ಕುಳಿತು ವಿಹರಿಸುವಾಗ ಉಗುಳಿದ ಕರ್ಪೂರ ವೀಳೆಯವು, ಸೂರ್ಯನಿಗೆ ಅರ್ಘ್ಯವನ್ನು ಕೊಡುವ ಕೃಷ್ಣನ ಬೊಗಸೆಯಲ್ಲಿ ಬೀಳಲು, ಕೃಷ್ಣನು ಕ್ರುದ್ಧನಾಗಿ "ಇಂತಹ ಅಪರಾಧವನ್ನು ಮಾಡಿದವ

ನನ್ನ ಕೊಲ್ಲದೆ ಬಿಡೆನು'' ಎಂದು ಒಟ್ಟೆಟ್ಟುಕೊಂಡನು. **ಒಡೆಯಿಡು**— ಯುದ್ಧದಲ್ಲಿ ಹನುಮಂತನು ಧೂಮ್ರಾಕ್ಷನ ಶಿರವನ್ನು ಒಡೆಯಿಟ್ಟು ಮುಂದೆ ನಿಕುಂಭನ ಬಳಿಗೆ ಹಾರಿದನು. **ಕಾಪಿಡು**— ಹಿಂದೆ ಹವಿರ್ಧಾನವೆಂಬಲ್ಲಿ ಜಲ ಕ್ರೀಡೆಯನ್ನಾಡುತ್ತಿದ್ದ ಘೃತಾಚಿಯೆಂಬ ಅಪ್ಸರೆಯನ್ನು ಕಂಡ ಭರದ್ವಾಜ ಮುನಿಗೆ ವೀರ್ಯ ಸ್ಖಲನವಾಗಲು, ಅದನ್ನು ಅವನು ಒಂದು ಕಳಶ (ದ್ರೋಣ) ದಲ್ಲಿ ಕಾಪಿಡಲು, ಅದರಿಂದ ದ್ರೋಣನು ಹುಟ್ಟಿದನು. **ಕೂಗಿಡು**— ದ್ರೋಣನ ಮಗನು ಹುಟ್ಟಿದ ಕೂಡಲೆ ದೇವೇಂದ್ರನ ಉಚ್ಚೈಃಶ್ರವವೆಂಬ ಕುದುರೆಯ ಧ್ವನಿಯಂತೆ ಕೂಗಿಟ್ಟುದರಿಂದ ಅವನಿಗೆ ಅಶ್ವತ್ಥಾಮನೆಂಬ ಹೆಸರು ಬಂತು. **ಗುರುಕಿಡು**- ಗುರುಕಿಡುವವನ ಮಡದಿಗೆ ಸುಖನಿದ್ದೆ ಬಂದೀತೆ? **ಗೋಳಿಡು** — ದಶರಥನು ಮಡಿದಾಗ ಗೋಳಿಡುವ ಮಡದಿಯರೆಷ್ಟು ಮಂದಿ? **ದಾಳಿಡು**— ಲಂಕೆಗೆ ದಾಳಿಡಲು ಕಪಿ ಸೈನ್ಯವು ಸಮುದ್ರಕ್ಕೆ ಸೇತುವೆಯನ್ನು ಬಲಿಯಿತು. **ಪುಯ್ಯಲಿಡು**— ಯುದ್ಧಭೂಮಿಯಲ್ಲಿ ಪುಯ್ಯಲಿಡುವ ಜನರಿಗೆ ಮಿತಿಯಿ ದೆಯೆ? **ಬೊಬ್ಬಿಡು**— ಬೊಬ್ಬಿಟ್ಟರೆ ಸತ್ತ ಅಜ್ಜಿ ಮತ್ತೆ ಬರುವಳೆ? **ಭುಗಿ ಲಿಡು**— ಇಪ್ಪತ್ತೊಂದು ದಿವಸಗಳ ವರೆಗೆ ಭುಗಿಭುಗಿಲೆಂದು ಭುಗಿಲಿಡುತ್ತಾ ದಹಿಸುತ್ತಿದ್ದ ಖಾಂಡವ ವನದಿಂದ, ಕೃಷ್ಣನಿಂದ ಜೀವದಾನ ಪಡೆದು ಹೊರ ಬಂದ ಮಯಾಸುರನು ಇಂದ್ರಪ್ರಸ್ಥದಲ್ಲಿ ಪಾಂಡವರಿಗೆ ಒಂದು ಅರಮನೆಯನ್ನು ಕಟ್ಟಿಕೊಟ್ಟನು. **ಮೊರೆಯಿಡು**— ದೆಸೆಗೆಟ್ಟು ನಾಡದೈವಗಳಿಗೆ ಮೊರೆಯಿ ಡಲು ನೊಸಲ ಬರೆಹವ ತೊಳೆದು ತಿದ್ದಲಳವೆ? **ಸಾಲಿಡು**— ದೂರದಲಿ ಸಾಲಿಟ್ಟು ಧಾವಿಸಿ ಬರುತ್ತಿದ್ದ ರಾಕ್ಷಸರನ್ನು ಕಂಡು ದೇವೇಂದ್ರನು ಪಲಾ ಯನ ಮಂತ್ರವನ್ನು ಪಠಿಸಿದನು. **ಸಯ್ಪಿಡು**— ಮೂರ್ಖರ ಕೂಟದಲ್ಲಿ ಜಾಣ ಸಯ್ಪಿಡುವುದೇ ಲೇಸು. **ಎಡೆಗೊಡು**— ದೇಶೀಯ ರಾಜರುಗಳೂ ಇತರ ಪಾಳೆಯಗಾರರೂ ತಾಟಸ್ಥ್ಯ ಉಳಿದುದರಿಂದ ಮತ್ತು ಕೆಲವರು ಪ್ರತ್ಯಕ್ಷ ಇಂಗ್ಲೀಷರಿಗೆ ಸಹಾಯಮಾಡಿ ಎಡೆಗೊಟ್ಟ ಕಾರಣ ಸಿಪಾಯಿ ದಂಗೆಯನ್ನು ಅಡಗಿಸಲು ಬ್ರಿಟಿಷರಿಗೆ ಸಾಧ್ಯವಾಯಿತು. **ಎಡೆಗೆಡಿಸು**— ನಿದ್ರೆ, ಸೋಮಾರಿತನ, ಭೀತಿ, ಕೋಪ, ಬೇಸರ, ತಾಮಸ ಸ್ವಭಾವ ಇವಾರು ದೋಷಗಳನ್ನು ಮಾನವನು ತ್ಯಜಿಸದಿದ್ದರೆ ಅವು ಅವನನ್ನು ಎಡೆಗೆಡಿಸುವುದರಲ್ಲಿ ಸಂಶಯವಿಲ್ಲ. **ಎಡೆಗೆಡಹು**— ಸೋಮಾರಿತನ, ಮದ, ಮೋಹ, ಚಪಲತೆ, ವ್ಯರ್ಥ ಕಾಲಹರಣ, ಗರ್ವ, ಒರಟುತನ,

ಲೋಭತ್ವ— ಇವೇಳೂ ವಿದ್ಯಾರ್ಥಿಗಳನ್ನು ಎಡೆಗೆಡಹುವ ಸಾಧನಗಳು. **ಎಡೆಗೆಡು**— ಯುದ್ಧಭೂಮಿಯಲ್ಲಿ ಎಡೆಗೆಡೆದ ಸೈನಿಕರಿಗೆ ಮಿತಿಯಿಲ್ಲ. **ಎಡೆಗೊಳ್ಳು**— ಎಡೆಗೊಂಡ ಕಷ್ಟವನ್ನು ಸಹಿಸಿಕೊಳ್ಳುವುದೆ ಲೇಸು. **ಎಡೆನುಡಿ**— ದುರ್ಗುಣಿಯು ಸದ್ಗುಣಿಯನ್ನು ಕಂಡೊಡನೆ ಎಡೆನುಡಿಯದೆ ಬಿಡನು. **ಎಡೆಮಾಡು**— ಭಾರತದ ರಾಜರುಗಳು ಅಂತಃಕಲಹದಿಂದಾಗಿ ತಮ್ಮಲ್ಲಿ ಎಡೆಮಾಡಿದ್ದರಿಂದ ಅನ್ಯರ ಪಾದಾಘಾತಕ್ಕೆ ಸಿಲುಕಬೇಕಾಯಿತು. **ಎಡೆಯಾಡು**— ತಿರುಕನ ಎಡೆಯಾಟಕ್ಕೆ ಸೀಮೆಯಿದೆಯೆ? ಹೊರೆಯ ಹೊತ್ತು ಎಡೆಯಾಡುವುದು ಬಹು ಕಷ್ಟ. **ಎಡೆಯುಡುಗು**— ಕೆಟ್ಟ ಚಾಳಿಗಳಿಗೆ ಎಡೆಯುಡುಗದವನೇ ಸದ್ಗುಣಿಯು. **ಎಡೆವರಿ**— ಅರ್ಜುನನ ಮುಂದೆ ಕರ್ಣನ ಬಿಲ್ಗಾರಿಕೆಯು ಎಡೆವರಿಯದು. **ಎದೆಗೆಡು**— ಆಪತ್ಕಾಲದಲ್ಲಿ ಎದೆಗೆಡುವುದು ಪುರುಷ ಲಕ್ಷಣವಲ್ಲ. **ಎದೆಗೊಡು**— ಚಕ್ರ ಪರಿವರ್ತನೆಯಂತೆ ಬರುವ ಸುಖದುಃಖಗಳನ್ನು ಎದೆಗೊಟ್ಟು ಸಹಿಸಬೇಕಾದುದು ನಿಜ ಮಾನವ ಧರ್ಮ. **ಎದೆಬಿರಿ**— ಯುದ್ಧರಂಗದಲ್ಲಿ ಅರ್ಜುನನು ವೈರಿಗಳ ಎದೆಬಿರಿಯುವಂತೆ ತನ್ನ ದೇವದತ್ತವೆಂಬ ಶಂಖವನ್ನು ಊದಿದನು. **ಎದೆಗಿಚ್ಚು**— ಪ್ರಿಯು, ನಿನ್ನ ಅಗಲುವಿಕೆಯಿಂದಾಗಿ ಭುಗಿಲಿಟ್ಟ ನನ್ನ ಎದೆಗಿಚ್ಚು ಇನ್ನೆಂದಿಗೆ ಆರುವುದೊ ನಾನರಿಯೆ! **ಎದೆಮುರಿ**— ಎದೆ ಮುರಿಯುವಂತೆ ದುಡಿದರೂ ಭಾರತೀಯರಿಗೆ ಸುಖ ಜೀವನ ಸಾಗಿಸಲು ಸಾಧ್ಯವೆ? ಭೀಮಸೇನನ ಗದೆಯನ್ನು ಕಂಡೊಡನೆ ವೈರಿಗಳ ಎದೆಮುರಿಯಿತು. **ಎದೆವೊಡಕ**— ಎದೆವೊಡಕರಿಗೆ ಯುದ್ಧದ ಮಾತೇಕೆ? **ಎದೆ ಹಣ್ಣಾಗು**— ಕೊಟ್ಟು ಕೊಟ್ಟು ನಿನ್ನ ಎದೆ ಹಣ್ಣಾಯಿತೇ? **ಎದೆ ಹಾರು**— ಕೌರವನ ಸೇನೆಯನ್ನು ಕಂಡೊಡನೆ ಉತ್ತರನ ಎದೆ ಹಾರತೊಡಗಿತು.

೧೨. ಪಡೆನುಡಿಗಳು.

ಕೈ ತೋರಿಸು— ಚಾಣಕ್ಯನು ನಂದರಿಗೆ ಚೆನ್ನಾಗಿ ಕೈತೋರಿಸಿದನು. **ಕಾಲಕಸ**— ಅಮರಾವತಿಯಲ್ಲಿ ಐಶ್ವರ್ಯವೆಂಬುದು ಕಾಲಕಸ. **ಬೆನ್ನು ತೋರಿಸು**— ಯುದ್ಧದಲ್ಲಿ ಬೆನ್ನು ತೋರಿಸುವುದು ಹೇಡಿಗಳ ಲಕ್ಷಣ. **ಕೈನೀಡು**— ದುಃಖಾರ್ತರನ್ನು ಕೈನೀಡಿ ಉಪಚರಿಸುವವನೆ ಋಷಿಯು. **ಹಲ್ಲು ಮಸೆ**— ತುಂಬಿದ ಸಭೆಯಲ್ಲಿ ದುರ್ಯೋಧನನು ದ್ರೌಪದಿಯನ್ನು

ಕರೆದು ತನ್ನ ತೊಡೆಯನ್ನೇರೆಂದು ತೊಡೆ ತಟ್ಟಿಕೊಳ್ಳಲು ಭೀಮಸೇನನು ಹಲ್ಲು ಮಸೆದು ಕೇಗಿಡಿ ಕಾರಿದನು. **ಬೇರುಬಿಡು**— ಮಾನವನಲ್ಲಿ ಬೇರು ಬಿಟ್ಟ ದುಶ್ಚಟಗಳನ್ನು ಬಿಡಿಸುವುದು ಸುಲಭಸಾಧ್ಯವೆ? **ಬಾಲಬಿಚ್ಚು**— ಪಲಾಯನ ಪಂಡಿತನಾದರೂ ನಿಜ ನೆಲೆಯಲ್ಲಿ ಬಾಲಬಿಚ್ಚುವುದು ಸ್ವಾಭಾವಿಕ. **ಕೈಯೆತ್ತಿ ಕೊಡು**— ಲೋಭಿಯು ಭಿಕ್ಷುಕನಿಗೆ ಭಿಕ್ಷೆಯನ್ನು ಕೈಯೆತ್ತಿ ಕೊಡು (ಮನಃಪೂರ್ವಕವಾಗಿ) ವನೆ? **ತಳಕೀಳು**— ಹುಲಿಯನ್ನು ಕಂಡ ಕೂಡಲೆ ನರಿಯು ತಳಕೀಳುವುದು ಸಹಜ. **ನೀರುಬಿಡು**— ದಾನಕೊಟ್ಟು ನೀರು ಬಿಟ್ಟಮೇಲೆ ನಮಗೂ ದಾನಕ್ಕೂ ಸಂಬಂಧ ಉಳಿಯುವುದೆ? **ಗಿಳಿಯೋದು**— ವಿದ್ಯಾರ್ಥಿಗಳ ಗೀಳಿಯೋದು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಸಹಕಾರಿಯಾದೀತೆ? ಮನಸ್ಸಿಟ್ಟು ಓದದವನ ಓದು ಗಿಳಿಯೋದು. **ನಾಲಿಗೆ ಬಿಗಿ ಹಿಡಿ**— ಸಿಟ್ಟು ಬಂದಾಗ ಯದ್ವಾತದ್ವಾ ಮಾತಾಡದೆ ನಾಲಿಗೆ ಬಿಗಿ ಹಿಡಿಯುವವನೆ ಜಾಣ. **ಗೆದ್ದ ಎತ್ತಿನ ಬಾಲ ಹಿಡಿ**— ಗೆದ್ದ ಎತ್ತಿನ ಬಾಲ ಹಿಡಿಯುವ ಬ್ರಿಟಿಷ್ ಧೋರಣೆಯು ಭಾರತದಲ್ಲಿ ಅವರಿಗೆ ರಾಜ್ಯ ಕಟ್ಟಲು ಸಹಕಾರಿಯಾಯಿತು. **ನೀರಲ್ಲಿ ಹೋಮ ಮಾಡು**— ಮೂರ್ಖನಿಗೆ ಬುದ್ಧಿ ಹೇಳ ಹೊರಟರೆ ನೀರಲ್ಲಿ ಹೋಮ ಮಾಡಿದಂತೆಯೇ ಸರಿ. **ಉದ್ದ ನೀರಿಗೆ ಹೋಗು**— ಪ್ರಾಜ್ಞರು ಎಂದಿಗೂ ಉದ್ದ ನೀರಿಗೆ ಹೋಗಿ ಇದ್ದುದನ್ನು ಕಳೆದುಕೊಳ್ಳಲು ಸಿದ್ಧರಿಲ್ಲ. **ಉಂಡ ಮನೆಗೆರಡು ಬಗೆ**— ಉಂಡ ಮನೆಗೆರಡು ಬಗೆದಾತನು ನರಕದ ನಾಯಕನಾಗುವುದರಲ್ಲಿ ಸಂದೇಹವಿದೆಯೆ? **ಬಾಯಿಗೆ ಬಾಯಿ ಹತ್ತು**— ಬಾಯಿಗೆ ಬಾಯಿ ಹತ್ತಿ ಕೈಗೆ ಕೈ ಹತ್ತುವುದೇ ಜಗಳ. **ಕೊಡಲಿಯೇಟು**— ಅಹಂಕಾರಕ್ಕೆ ಅಲಕ್ಷ್ಯವೇ ಕೊಡಲಿಯೇಟು. **ನುಂಗಿ ನೀರು ಕುಡಿ**— ಜೋರಪ್ಪನು ಜಾರಪ್ಪನಿಂದ ಸಾಲವಾಗಿ ಪಡೆದ ಹಣವನ್ನು ನುಂಗಿ ನೀರು ಕುಡಿದು ಜಾರಪ್ಪನಿಗೆ ತಿರುಪತಿ ಬೆಟ್ಟ ತೋರಿಸಿದನು. **ಕೈ ತೊಳೆದುಕೊಂಡು ಬೆನ್ನು ಹತ್ತು**— ಕರ್ಣ ಶಕುನಿಯರ ಒಡನಾಟಗೊಂಡು ದುರ್ಯೋಧನನು ಪಾಂಡವರ ನಾಶಕ್ಕಾಗಿ ಒಂದೇಸವನೆ ಕೈ ತೊಳೆದುಕೊಂಡು ಬೆನ್ನು ಹತ್ತಿದನು.

೧೩. ಶಬ್ದ ಸಂಗ್ರಹ.

ಎಳೆ— ಎಳೆತ. ಎಳವು. ಎಳಸು. ಎಳೆತಟ. ಎಳೆತರು. ಎಳೆಕುಳಿ.

ಎಳತರು. ಎಳದಾಡು. ಎಳೆದಾಡು. ಎಳತಟ. **ಜಡಿ**— ಜಡಿತ. ಜಡತ. ಜಡಿಸು. **ಕಾ**— ಕಾಪಾಡು. ಕಾಪಿಡು. ಕಾಪು. ಕಾವಲು. ಕಾವಲುಗಾರ. ಕಾಹು. ಕಾಪಿ. ಕಾವಲ. ಕಾವಲಿ. ಕಾವಲಿಗಾರ. ಬೇಗಾವಲ. ಮೈಗಾವಲಿ. ಮೆಯ್ಗಾಹು. ಕರುಗಾಪಿ. ತುರುಗಾಹಿ. ಕಾಪಕ. **ಅಳೆ**— ಅಳತೆ. ಅಳಿತ. ಅಳ್ತೆ. ಅಡ್ಡಳತೆ. ಕಾಣ್ಕಳತೆ. ಕೂಗಳತೆ. ಸುತ್ತಳತೆ. ಹರದಾರಿಯಳತೆ. ಕಟ್ಟಳೆ. ಕುತ್ತಳೆ. **ಒರೆ**— ಒರಸು. ಒರಿಸು. ಒರೆತ. ಒರೆಗಲ್ಲು. ಒರೆಗಾರ. ಒರಳು. **ತೆಗಳು**— ತೆಗಳಿಸು. ತೆಗಳಿಕೆ. ತೆಗಳ್ಕೆ. **ಕೈ**— ಕೈಗಾರ. ಕೈಗಾರಿಕೆ. ಕೈದು. ಕೈಯಾಳು, ಕೈದುಡಿತ. ಕೈತಿಂಡಿ. ಕೈಮುಟ್ಟು. ಕೈಸನ್ನೆ. ಕೈಕಸೆ. ಕೈಕೂಲಿ. ಕೈಗೂಸು. ಕೈಗೊಡಲಿ. ಕೈಗೊಡು. ಕೈಕೊಳ್ಳು. ಕೈಕೋಲು. ಕೈಗಂಬಿ. ಕೈಗಡ. ಕೈಗಂಟು. ಕೈಗಂಡ. ಕೈಗತ್ತಿ. ಕೈಗಳೆ. ಕೈಗಾಣಿಕೆ. ಕೈಗಾಯು. ಕೈಗುಣ. ಕೈಗುದಿಕೆ. ಕೈಗುಂದು. ಕೈಗೂಡಿಸು. ಕೈಗೂಡು. ಕೈಗೆಡು. ಕೈಗೆಡೆ. ಕೈಗ್ಗೈ. ಕೈಗೊಂಬೆ. ಕೈಚಳಕ. ಕೈಜೋಡಿಸು. ಕೈತ. ಕೈತಟ್ಟು. ಕೈತವಕ. ಕೈತಾಳ. ಕೈತಾಳು. ಕೈತು. ಕೈದುಡುಕು. ಕೈದೆಗೆ. ಕೈದೋರಿಕೆ. ಕೈನೀಡು. ಕೈನೀರು. ಕೈನೆಗಹು. ಕೈಪರೆ. ಕೈಪಾವುಡ. ಕೈಪಿಡಿ. ಕೈಪೊಡೆ. ಕೈಬಾಳು. ಕೈಬೀಡು. ಕೈಬೀಸು. ಕೈಮುಸಕು. ಕೈಮಾಟ. ಕೈಮಾಡು. ಕೈಮಿಗು. ಕೈಮಿಂಚು. ಕೈಮೀರು. ಕೈಮುಗಿ. ಕೈಮುಂಚು. ಕೈಮುರಿ. ಕೈಮೆ. ಕೈಯಳವಿ. ಕೈಯಾನು. ಕೈಯಾರೆ. ಕೈಯಾಸೆ. ಕೈಯಿಕ್ಕು. ಕೈರಾಟಣ. ಕೈಲಾಗು. ಕೈವರ್ತ. ಕೈವರ್ತಿಸು. ಕೈವರು. ಕೈವಶ. ಕೈವಾಡ. ಕೈವುಗು. ಕೈಸಾಗು. ಕೈಸಾರು. ಕೈಸೂರೆ. ಕೈಸೆರೆ. ಕೈಸೊಡರು. ಕೈಹಚ್ಚು. ಕೈಹಾಕು. ಕೈಹಿಡಿ. ಕೈಹೊಡೆ. ಕೈಕರಣ. ಕೈಕಷ್ಟ. ಕೈಕಾಗದ. **ಅಂಟು**— ಅಂಟಿಸು. ಅಂಟವಾಳ. ಅಂಟರಳೆ ಅಂಟರು. ಅಂಟಿಕಲ್ಲು. ಅಂಟುಗಳ (ತುದಿಗೆ ಜಿಗಿ ಹತ್ತಿದ ಗಳ). ಅಂಟುಗೋಲು. ಅಂಟಿಳೆ. **ಇರು**— ಇರವು. ಇರಿವು. ಇರುವಿಕೆ. ಇರುಹ. **ಏಳು**— ಏಳಿಗೆ. ಏಳ್ಗೆ. ಏಳುಹ. ಏಳುವಿಕೆ. ಏಳ್ವಿಕೆ. ಏಳಿಸು. ಎಚ್ಚರ. ಎಚ್ಚರಿಕೆ. ಎಚ್ಚರಿಸು. ಎಚ್ಚರು. ಎಚ್ಚತ್ತು. ಎಚ್ಚರು ಎಬ್ಬಿಸು. ಎಬ್ಬು. ಎಳ್ಬಿಸು. **ಗೆಲ್ಲು**— ಗೆಲ. ಗೆಲವು. ಗೆಲು. ಗೆಲುಗೆ. ಗೆಲುಗೆಯ್. ಗೆಲ್ಗವೆಣ್. ಗೆದಿ. ಗೆಲಿ. ಗೆಲಿತು. ಗೆಲಿಸು. ಗೆಲಿದು. ಗೆದ್ದು. ಗೆಲುವಿಕೆ. ಗೆಲುಹ. ಗೆಲುವು. ಗೆಲ್ಲ. ಗೆಲ್ಲಪೇಸೆ. ಗೆಲ್ಲಿಸು. ಗೆಲ್ಲಿಸುವಿಕೆ.

ತೂಗು— ತೂಕ; ತೂಕು, ತೂಂಕು, ತೂಕಿಕೆ, ತೂಗಿಕೆ, ತೂಗಿಸು,

ತೂಗಡಿಕೆ, ತೂಗಡಿಸು, ತೂಕಡಿಸು, ತೂಂಕಡಿಸು, ತೂಗಕಟ್ಟು, ತೂಗ ಹಾಕು, ತೂಗಾಡು, ತೂಗುಕೋಲು, ತೂಗುಂಜೊಡರು, ತೂಗುದೀವಿಗೆ, ತೂಗುದೊಲೆ, ತೂಗುದಲೆ, ತೂಗುಂದೆನೆ, ತೂಗುಂದೊಟ್ಟಿಲು, ತೂಗುಂದೊಲೆ, ತೂಗುಮಂಚ, ತೂಗುಮಣೆ, ತೂಗುಯ್ಯಾಲೆ, ತೂಂಕಡ, ತೂಂಕಡಿಸು. **ಅಟ್ಟು**— ಅಟ್ಟುಳಿ, ಅಟ್ಟಿಸು, ಅಟ್ಟಾಳು, ಅರೆಯಟ್ಟು, ಎಳ್ಬಟ್ಟು, ಬೆನ್ನಟ್ಟು, ಹಿಂದಟ್ಟು, ಅಟ್ಟಾಡು. **ಉಲಿ**— ಉಲಿವು, ಉಲಿಪು, ಉಲಿಹ, ಉಲುಹು, ಉಲಿಪ, ಉಲುವು, ಉಲಿಗುಡು, ಮೆಲ್ಲುಲಿ. **ಕಳು**— ಕಳವು, ಕಳಹು, ಕಳವಳಿಗ (ಕಳ್ಳ), ಕಳ್ಳ, ಕಳ್ಳತನ, ಕಳ್ಳತಿ, ಕಳ್ಳೆ, ಕಳ್ಳಿ, ವೈಗಳ್ಳ, ಕಳ್ಳಮಳ್ಳೆ, ವೈಗಳ್ಳಿ, ಕೆಲಸಗಳ್ಳತಿ, ಬಾಸೆಗಳ್ಳ, ಕಳ್ಳಕಾಗದ, ಕಳ್ಳಕಿಂಡಿ, ಕಳ್ಳಕುಣಿಕೆ, ಕಳ್ಳಕೊರವ, ಕಳ್ಳಗಂಟು, ಕಳ್ಳಟಿಪ್ಪಣಿ, ಕಳ್ಳದಾರಿ, ಕಳ್ಳದಾಳಿ, ಕಳ್ಳಬಂಟ, ಕಳ್ಳವೆಳ್ಳಿ, ಕಳ್ಳಂಗಡಲೆ, ಕಳ್ಳಚ್ಚು, ಕಳ್ಳಾಟ, ಕಳ್ಳೊಡಲೆ. **ತೀರು**— ತೀರ, ತೀರಮೆ, ತೀರಿಕೆ, ತೀರಿಸು, ತೀರಿಸುವಿಕೆ, ತೀರಿತ, ತೀರ್ಚು, ತೀರ್ಪಡಿ, ತೀರುಪಡಿ, ತೀರ್ವಾನ, ತೀರುವಾನ, ತೀರ್ಪು, ತೀರುವಿಕೆ, ತೀರ್ವಿಕೆ, ತೀರುವೆ, ತೀರ್ವೆ, ತೀರಗಡೆ, ತೀರುಗಡೆ, ತೀರ್ಗಡೆ, ತೀರುಪಡಿ, ತೀರುಪಾಟು, ತೀರಪತನ, ತೀರ್ಕೆ. **ಕೊಯ್**— ಕೊಯಿಸು, ಕೊಯಿ, ಕೊಯ್ಯು, ಕೊಯ್ಕ, ಕೊಯ್ತ, ಕೊಯ್ಲು, ಕೊಯ್ಗಾರ, ಕೊಯ್ತರು, ಕೊಯಿಕ, ಕೊಯಿಕತನ, ಕೊಯಿತ, ಕೊಯಿಲು, ಕೊಯ್ಕಿ, ಕೊಯ್ಕೆ, ಎದೆಗೊಯಿಕತನ, ಎದೆಗೊಯಿಕ, ಕೊರಳುಗೊಯಿಕ, ಗಂಟುಗೊಯ್ಕ, ಗೋಣುಗೊಯ್ಕ, ಕಿವಿಗೊಯ್ಕಿ, ಮನಗಂಟುಗೊಯ್ಕೆ. **ಆರು**— ಆರಿಸು, ಆರಿಕೆ, ಆರ್ಚು, ದಣುವಾರು, ಬಾಯಾರಿಕೆ. **ತಿದ್ದು**— ತಿದ್ದಿಸು, ತಿದ್ದಿಕೆ, ತಿರ್ದಿಸು, ತಿರ್ದು, ತಿದ್ದುವಿಕೆ, ತಿದ್ದುಪಡಿ, ತಿದ್ದುಪಾಟ. **ಕುಂಟು**— ಕುಂಟ, ಕುಂಟಿ, ಕುಂಟತನ, ಕುಂಟಿಗೆ, ಕುಂಟಿಸು, ಕುಂಟಣಿಕೆ, ಕುಂಟಗಾಲು, ಕುಂಟುಗಾಲು, ಕುಂಟಮುರುವ, ಕುಂಟಸುದ್ದಿ. **ಒಲಿ**— ಒಲ, ಒಲವು, ಒಲಪಿಸು, ಒಲಪು, ಒಲಿಮೆ, ಒಲುಮೆ, ಒಲ್ಮೆ, ಒಲಿಸು, ಒಲುಮೆ, ಒಲಗಾರ, ಒಲಗಾರ್ತಿ, ಒಲಪುಗಾತಿ, ಒಲಪುಗಾರ, ಒಲಪುಗಾರ್ತಿ, ಒಲವರ, ಒಲಿಸೆ, ಒಲಸೆ. **ತಿರುಗು**— ತಿರಕ, ತಿರುಕ, ತಿರಕಿ, ತಿರುಕಿ, ತಿರಗಣಿ, ತಿರಗಣೆ, ತಿರುಗಣಿ, ತಿರುಗಣೆ, ತಿರುಗುಣಿ, ತಿರಗಿಸು, ತಿರಿಗಿಸು, ತಿರುಗಿಸು, ತಿರಗು, ತಿರಿಗು, ತಿರು, ತಿರಪ, ತಿರಪೆ, ತಿರುಪ, ತಿರುಪೆ, ತಿರಿ, ತಿರಿಕೆ, ತಿರಿಪು, ತಿರಿವು.

ತಿರಿಹು, ತಿರುಪುಳಿ, ತಿರುಪೆಗಾರ, ತಿರುಪೆಗಾರ್ತಿ, ತಿರುಬೋಕಿ, ತಿರಿಕುಳಿ, ತಿರಗಂಚಿ ಮುರಗಂಚಿ, ತಿಗ್ಗಾ ಮುಗ್ಗಾ, ತಿರುವು ಮುರುವು, ತಿರು ಮುರು, ತಿರುಗಾ ಮುರುಗಾ, ತಿರುಗಿ ಬೀಳು. **ಕೂಡು**— ಕೂಡಿಸು, ಕೂಡ, ಕೂಟ, ಕೂಡಲು, ಕೂಟಕ, ಕೂಡಿಡು, ಕೂಡಿಕ್ಕು, ಕೂಡಲಿಕ್ಕು, ಕೂಡಲೆ, ಕೂಡಿಕೆ, ಕೂಡುಗೆಳೆಯ, ಕೂಡಿಬರು, ಕೂಡಿ ಬೀಳು, ಕೂಡೆ, ಒಡಗೂಡು, ಒಂದುಗೂಡು, ಒಬ್ಬುಳಿಗೂಡು, ಕೆಯ್ಗೂಡು, ಬಟ್ಟೆಗೂಡು, ಮೆಯ್ಗೂಡು. **ಉಣ್ಣು**— ಉಣಿ, ಊಟ, ಊಣ್ಣ, ಉಣಿಕೆ, ಉಣಿಗ, ಉಣಿಸು, ಉಣ್ಣಿಸು, ಉಣಿಸಿ, ಉಣಿಸಿಗ, ಉಣಬಡಿಗ, ಉಂಡಾಡಿ, ಉಂಡಾಡಿಗ, ಉಣ್ಣದಿರುಹ, ಅಮರ್ದುಣಿ, ಕಳ್ಳುಣಿ, ತುಡುಗುಣಿ, ಎಲರುಣಿ, ಬಂಡುಣಿ, ಅಲರುಣಿ, ಮಣ್ಣುಣಿ, ಎಲರುಣಿಗ, ನೆಲನಮರ್ದುಣಿಸಿ, ಕಲ್ಲುಣಿಸು, ನಲ್ಲುಣಿಸು, ಉಂಡಿಗ, ಮೆಚ್ಚುತುಣ್ಣ, ಉಂಬ, ಉಂಬಳಿ, ಉಂಬಳಿಗೆ, ಉಂಬಳಿಗಾರ, ಉಂಬುಳಿ, ಉಮ್ಮಳಿ, ಉಮ್ಮಳಿಗೆ, ಉಮ್ಮುಳಿ, ಉಮ್ಮುಳಿಗೆ. **ತಗಲು**— ತಗಲಿಸು, ತಗಿಲಿಸು, ತಗುಲಿಸು, ತಗಿಲು, ತಗುಲು, ತಗಲುವಿಕೆ, ತಗುಲಿಸು, ತಗಳು, ತಗುಳು, ತಗುಳ್ಚು, ತಗಲುಗಾರ, ತಗಲಗೊಡು, ತಗಲುಹಾಕು, ತಗು. **ಕಲಿ**— ಕಲಿಕೆ, ಕಲಿತ, ಕಲಿಯುವಿಕೆ, ಕಲಿವು, ಕಲಿಸು. **ತಳ್ಳು**— ತಳ್ಳಿ, ತಳ್ಳುವಿಕೆ, ತಳ್ಳಿಕೆ, ತಳ್ಳಿಗಾರ, ತಳ್ಳಕ್ಕರು, ತಳ್ಳುಪಡಿ, ತಳ್ಳಡಿ. **ಹೊಳೆ**— ಹೊಳಿಸು, ಹೊಳಿವಿಕೆ, ಹೊಳಹು, ಹೊಳಪು, ಹೊಳವು, ಹೊಳಪಿಸು, ಹೊಳತ, ಹೊಳೆತ, ಹೊಳಕು, ಹೊಳಕಿಸು, ಹೊಳ, ಹೊಳ್ತು. **ನಂಬು**— ನಂಬಿಸು, ನಂಬಿಸುಹ, ನಂಬಿಗೆ, ನಂಬಿಕೆ, ನಂಬುಗೆ, ನೆಂಬುಗೆ, ನೆಮ್ಮುಗೆ, ನಂಬಿಗಸ್ತ, ನಂಬಿಗಸ್ತಿಕೆ, ನಂಬುವಿಕೆ. **ಸುಲಿ**— ಸುಲಿಗೆ, ಸುಲಿಹ, ಸುಲಿಗೆಗೊಡು, ಸುಲಿಗೆಮಾಡು. **ಬರು**— ಬರುವ, ಬರ್ವ, ಬಪ್ಪ, ಬಹ, ಬಾಹ, ಬರುವಿಕೆ, ಬಾ, ಬನ್ನಿ, ಬಂತು, ಬರ್ಕೆ, ಬರ್ಪ, ಬರ್ಕು, ಬಕ್ಕು, ಬರವು, ಬರಗೊಡು, ಬರಮಾಡು. **ನಾಟು**— ನಾಟಿಸು, ನಾಟಿಕೆ, ನಾಂಟು, ನಾಟುಕೋಲು, ನಾಟುಬೀಳು. **ಹೊಡೆ**— ಹೊಡ, ಹೊಡತ, ಹೊಡೆತ, ಹೊಡಸು, ಹೊಡಿಸು, ಹೊಡಪ, ಹೊಡಚೆಂಡು, ಹೊಡಕೊಳ್ಳು, ಹೊಡದಾಟ, ಹೊಡಗುಳು, ಹೊಡೆದಾಡು, ಹೊಡೆಮುಚ. **ಬಿಗಿ**— ಬಿಗಿಸು, ಬಿಗಿತ, ಬಿಗುತ, ಬಿಗುಹು, ಬಿಗಿಪು, ಬಿಗಿಹು, ಬಿಗಿಯುಪ್ಪು, ಬಿಗಿದಪ್ಪು, ಬಿಗಿಯಾಗು, ಬಿಗಿಯೊಳಗೆ ಇಡು, ಬಿಗಿಮಾಡು, ಬಿಗಿಹಿಡಿ, ಬೀಗ, ಬೀಗ

ಮುದ್ರೆ. **ಲಾಗು**— ಲಾಗ, ಲಾಗಿಸು, ಲಾಗ ಹಾಕು, ಲಾಗ ಹೊಡೆ, ಲಾಗಾಟ, ಲಾಗುವೇಗ, ಹಸ್ತಲಾಗ. **ಮುನಿ**— ಮುನಿಸು, ಮುನಿಯಿಸು, ಮುನಿಯು (ಮುಟ್ಟಿದರೆ ಮುನಿಯ=ಮುಟ್ಟಿದರೆ ಮುನಿವ.) ಮುನಿಪು, ಮುನಿಪ್ಪ, ಮುನಿಸುಗುಟ್ಟು, ಮುನಿಸು ತಿಳಿ, ಮುನಿಸು ತಿಳಿಹು (ತಿಳುಹು). ಮುನಿಸು ಹರಿ, ಮುನಿಸುಗಾರ. **ಬರೆ**— ಬರಹ (ಅಕ್ಷರ), ಬರಿಹ (ಲೇಖನ), ಬರವಣಿಗೆ, ಬರಸು, ಬರಿಸು, ಬರೆಯಿಸು, ಬರೆಸು, ಬರಪ, ಬರಾವು, ಬರೆಪ, ಬರಿ, ಬರೆಯುವಿಕೆ, ಬರೆಗುಡ, ಬರೆಗುಳ, ಬರೆಹಾಕು, ಬರವಿಗೆ, ಬರಹಿಕೆ, ಬರವಣಿಗಸ್ತ, ಬರೆಕೊಡು, ಬರೆವ, ಕೈಬರಹ, ಹಣೆಬರಹ. **ಪಡು**— ಪಡುವಲು, ಪಡುವಣ, ಪಡುಶಿಲೆ, ಪಟ್ಟು, ಪಟ್ಟೆ, ಪಟ್ಟತನ, ಪಟ್ಟಗೆ, ಪಟ್ಟರಿಸು, ಪಡಲ್, ಪಡಲಿಡು, ಪಡಲ್ಪಡಿಸು, ಪಡಲ್ಪಡು, ಪಡುವ, ಪಡುವೆಟ್ಟ, ಪಡುಗಡಲು, ಪಡುಗಡೆ, ಪಡುನೇಸರು, ಪಡುಮಿಗ. **ಹಿಂಡು**— ಹಿಂಡಿ, ಹಿಂಡೆ, ಹಿಂಡೆಕೂಳು. **ಸುಡು**— ಸುಡ, ಸುಡನಾಸ, ಸುಡನಾಸಿ, ಸುಡಿಸು, ಸುಟ್ಟು, ಸೊಡ, ಸೊಡರು, ಸುಡುಗರ, ಸುಡುಗಾಡು, ಸುಡುಗಾಡ, ಸುಡುಗಾಡಿ, ಸುಡುಸುಡಿ, ಸುಡುಬಲಿ, ಸುಡುಬಾಡು, ಸುಡುಕ, ಸುಡುವಿಕೆ, ಸುಡುಹ, ಸುಂಟಗೆ, ಸುಂಟಿಗೆ, ಸುಡುಬಾಳ್ವೆ. **ಹೆರು**— ಹೆರಿಗೆ, ಹೆರುವಿಕೆ, ಹೆರುಹ, ಹೆರಿಗೆಕಾಲ, ಹೆರಿಗೆ ತಿಂಗಳು, ಹೆರಿಗೆಮನೆ, ಹೆತ್ತಬ್ಬೆ, ಹೆಪ್ಪು. **ಬೀಳು**— ಬಿಳ್, ಬಿಳ್ತು, ಬಿಳ್ದು, ಬಿದ್ದು, ಬಿಳಲು, ಬೀಳಲು, ಬೀಳಿಲು, ಬೀಳುಲು, ಬೀಳಿಸು, ಬೀಳುವಿಕೆ, ಬೀಳಗೆಡಹು, ಬೀಳಸದೆ, ಬೀಳಹೊಡೆ, ಬೀಳಿಕೆ, ಬೀಳಿಗೆ, ಬೀಳ, ಕಿಡಿವೀಳು, ಜರ್ಗುವೀಳು, ಬೆಂಬೀಳು. **ಹಸಿ**— ಹಸಿವಿ, ಹಸಿವು, ಹಸಿವೆ. **ಸಾಲು**— ಸಾಲ, ಸಾಲಗಾರ, ಸಾಲಗಾತಿ, ಸಾಲಗಾರ್ತಿ, ಸಾಲಗುಳಿ, ಸಾಲಬಡಕ, ಸಾಲವಣಿಗ, ಸಾಲ ಬೀಳು, ಸಾಲ ಮುಟ್ಟು, ಸಾಲ ಸಲ್ಲು, ಸಾಲ ಹರಿ, ಸಾಲ ಸೋಲ. **ಮೆಚ್ಚು**— ಮೆಚ್ಚಿಸು, ಮೆಚ್ಚಿಕೆ, ಮೆಚ್ಚಿಗೆ, ಮೆಚ್ಚುವಣಿಗೆ, ಮುಚ್ಚಿಸು, ಮುಚ್ಚು, ಮುರ್ಚಿಸು, ಮುರ್ಚು, ಪಡಿಮೆಚ್ಚು, ಪಡಿಮುಚ್ಚು, ಮುಚ್ಚಿನಾಟ, ಮುಚ್ಚುಗೊಡು, ಮುಚ್ಚುವಡೆ, ನಚ್ಚುಮುಚ್ಚು, ಮುಚ್ಚುಮುದ್ದು (ಮುಚ್ಚು ಮುದ್ದು ಎಂದು ಕೊಟ್ಟದ್ದು ಹುಚ್ಚು ಮುದ್ದಾಯಿತು), ಮೆರ್ಚಿಸು, ಮೆಚ್ಚುಮುದ್ದು, (ನಚ್ಚುಮುಚ್ಚಿನ ದಾದಿಯರ್ಗಂ ಮೆಚ್ಚಸೀವುತಿರ್ದಳು ಮೋಹಿಸೀದೇವಿ). ಮೆಚ್ಚುತು, ಮೆಚ್ಚುತುಣ್ಣೆ, ಮೆಚ್ಚುವಿಕೆ. **ಹುಟ್ಟು**— ಹುಟ್ಟಿಸು, ಹುಟ್ಟಿಸುಹ (ಹಗೆಯುರಿಬ್ಬರೊಳಗೆ ವಿರೋಧವ ಹುಟ್ಟಿ

ಸುಹ), ಹುಟ್ಟ, ಹುಟ್ಟಗಿವಡಿ (ಹುಟ್ಟುಕಿವುಡಿ), ಹುಟ್ಟಗುರಡ (ಹುಟ್ಟು ಕುರುಡ), ಹುಟ್ಟಳಿ, ಹುಟ್ಟುಗೆಡು, ಹುಟ್ಟುಗುಣ, ಹುಟ್ಟುಚಾಳಿ, ಹುಟ್ಟು ಬಂಜೆ, ಹುಟ್ಟುಬುದ್ಧಿ, ಹುಟ್ಟುಮಚ್ಚೆ, ಹುಟ್ಟುಮನೆ, ಹುಟ್ಟೂರು, ಹುಟ್ಟುವಳಿ, ಹುಟ್ಟಾವಳಿ, ಹುಟ್ಟುವಿಕೆ, ಹುಟ್ಟುಹ. **ಸೋರು**— ಸೋರಿಸು, ಸೋರುವಿಕೆ, ಸೋರುಹ, ಸೋರಾಟ, ಸೋರಿಕೆ, ಸೋರೋಡು, ಸೋರ್ಮುಡಿ, ಸೋರ್ಚು, ಸೋರುಬಾರು. **ಮರೆ**— ಮರಸು, ಮರವು, ಮರವೆ, ಮರಪು, ಮರಹು, ಮರೆತು, ಮರೆಯುವಿಕೆ, ಮರಿಸು, ಮರಸುಂದು, ಮರವಹಾಚು, ಮರೆಮಾಜು, ಮರಪ್ಪು, ಮೆಯ್ಮರಪು, ಮರಪಿಕ್ಕು, ಪೆರ್ಮರವೆ, ಮರುಕುಳಿ, ಮರೆಕಟ್ಟು, ಮರೆಗೆ ನಿಲ್ಲು, ಮರೆಗೊಳ್ಳು, ಮರೆ ಬೀಳು, ಮರೆ ಬಿಡು, ಮರೆ ಮಾತು, ಮರೆಯೊಗು, ಮರೆವಾಳು, ಮರೆ ಹೊಗು, ಮರೆ ಮೊಗ, ಮರುಳ, ಮರುಳಾಟ, ಮರುಳಾಡು, ಮರುಳಿ, ಮರುಳು, ಮರುಳಾಗು, ಮರುಳ್ತನ, ಮರುಳುತನ. **ಹತ್ತು**— ಹತ್ತಿ, ಹತ್ತಿಸು, ಹತ್ತರ, ಹತ್ತಿರ, ಹತ್ತ, ಹತ್ತಡಿ, ಹತ್ತಗಡೆ, ಹತ್ತೆ, ಹತ್ತಿಹ, ಹತ್ತೆಹ, ಹತ್ತಿಗ, ಹತ್ತಿರು, ಹತ್ತುಗೆ, ಹತ್ರ, ಹತ್ತೆವಿಡಿ, ಹತ್ತಗೊಡು, ಹತ್ತೊತ್ತು, ಹತ್ತುಗೋಂಟೆ, ಹತ್ತೆ ಬರು, ಹತ್ತೆವಿಡಿ, ಹತ್ತೆಸಾರು, ಹತ್ತಣಿ, ಹತ್ತಿಕೆ, ಹತ್ತಿಗೆ, ಹತ್ತುಳಿ. **ಮೊಳೆ**— ಮೊಳಕೆ, ಮೊಳಿಕೆ, ಮೊಳತು, ಮೊಳೆತ, ಮೊಳಸು, ಮೊಳೆದೋರು, ಮೊಳೆ ಮೊಲೆ, ಮೊಳೆವಲ್ಲು, ಮೊಳೆವೋಗು, ಮೊಳೆಹೊಮ್ಮು. **ಬೇಸರು**– ಬೇಸರ, ಬೇಸರಿ, ಬೇಸರಿಸು, ಬೇಸರಿಕೆ, ಬೇಸರ್ಮುಡಿ, ಬೇಸತ್ತು, ಬೇಸರುಗೊಳ್ಳು. **ಬಾಗು**— ಬಾಗಿಸು, ಬಾಗಿಲು, ಬಾಗಲ, ಬಾಗಿಲುವಾಡ, ಬಾಗುವಿಕೆ, ಬಾಗಲು, ಬಾಗುವತನ, ಬಾಗುಹ (ತಲೆವಾಗುಹ), ತಲೆವಾಗು, ತಾಗುಬಾಗು. **ಪೊಳೆ**— ಪೊಳಪು, ಪೊಳಯಿಸು, ಪೊಳೆಪು, ಪೊಳ್ತಡೆ, ಪೊಳ್ತರ್, ಪೊಳ್ತರೆ, ಪೊಳ್ತು, ಪೊತ್ತರೆ, ಪೊತ್ತಾರೆ, ಪೊಳ್ತಾರೆ, ಪೊತ್ತು, ಕಣ್ಬೊಳಪು, ಕೆಂಬೊಳಪು, ಮಾರ್ಪೊಳಪು, ತೆರಂಬೊಳೆ, ಮಾರ್ಪೊಳೆ, ಪಿಂಬೊಳ್ತು, ಮುಂಬೊಳ್ತು.

೧೪. ಮೂಲರೂಪ.

ಕಥ್ (ಧಾ)— ಹೇಳು. **ಕಥನ**— ಹೇಳುವಿಕೆ. **ಕಥಿಸು**— ಹೇಳು; ಕತೆ ಹೇಳು. **ಕಥೆ**— ಹೇಳಿಕೆ, ಹೇಳಿಕೆಯ ಮಾತು, ಕತೆ. **ಕಥಿತ**— ಹೇಳಿದ ಕತೆ ಹೇಳಿದ. **ಕಥಕ-ಕಥಿಕ**— ಕತೆ ಹೇಳುವವ. **ಕಥಾನಕ**— ಕತೆಯ,

ವಸ್ತು, ಕತೆ ಹೇಳುವಿಕೆ. **ಸಂಕಥಾ**— (ಸಂ+ಕಥಾ) –ತಮ್ಮ ತಮ್ಮೊಳಗೆ ಹೆಚ್ಚಾಗಿ ಮಾತಾಡೋಣ. **ಸಂಕಥಿತ**— (ಸಂ+ಕಥಿತ).

ಕಪ್ (ಧಾ) –ನಡುಗು. **ಕಂಪ-ಕಂಪನ**— ನಡುಗುವಿಕೆ, ನಡುಕ. **ಕಂಪಾಯಮಾನ**— ನಡುಗುವ. **ಕಂಪ್ರ**— ನಡುಗುವ, ಚಲಿಸುವ. **ಅನುಕಂಪ- ಅನುಕಂಪಾ- ಅನುಕಂಪೆ**— (ಅನು+ಕಂಪ-ಕಂಪಾ-ಕಂಪೆ) –ಎರಡನೆಯವರ ದುಃಖ ನೋಡಿ ಹುಟ್ಟುವ ಮನಸ್ಸಿನ ನಡುಕ- ಕನಿಕರ, ದಯೆ, ಕರುಣೆ, ಸಹಾನುಭೂತಿ. **ಕಂಪಿತ**— ನಡುಗಿದ. **ಅನುಕಂಪಿತ**— ದಯೆ ತೋರಿಸಿದ. **ಪ್ರಕಂಪಿತ**— (ಪ್ರ+ಕಂಪಿತ) ವಿಶೇಷವಾಗಿ-ಹೆಚ್ಚಾಗಿ-ನಡುಗಿದ. **ಪ್ರಕಂಪನ**- ಹೆಚ್ಚಾಗಿ ನಡುಗುವಿಕೆ- ಬಿರುಗಾಳಿ. **ವಿಕಂಪ**- (ವಿ+ಕಂಪ). **ವಿಕಂಪನ, ವಿಕಂಪಿತ.**

ಕಮ್ (ಧಾ) –ಬಯಸು. **ಕಾಮ**— ಬಯಕೆ, ಇಚ್ಛೆ. **ಕಾಮಿತ**— ಬಯಸಿದ, ಇಚ್ಛಿಸಿದ. **ಕಾಮನ-ನಾ-ನೆ**— ಬಯಕೆ, ಇಚ್ಛೆ. **ಕಾಮುಕ**— ಸ್ತ್ರೀಯರನ್ನು ಬಯಸುವವ. **ಕಾಮಿನಿ**- ಬಯಕೆಯುಳ್ಳವಳು-ಸ್ತ್ರೀ. **ಕಾಂತ** –ಇಚ್ಛೆಯುಳ್ಳವನು, ಗಂಡ. **ಕಾಮ್ಯ**- ಬಯಸತಕ್ಕ. **ನಿಷ್ಕಾಮ**- (ನಿಷ್+ಕಾಮ) –ಬಯಕೆ ಇಲ್ಲದ, ಇಚ್ಛೆ ಇಲ್ಲದ- ನಿಸ್ವಾರ್ಥ. **ಸಕಾಮ, ಕಲಂತೆ, ಕಾಮಿತಾರ್ಥ.**

ಕಲ್ (ಧಾ) —ಹೋಗು. **ಕಾಲ**— ಹೋಗುವುದು- ಹೊತ್ತು. **ಪ್ರಾತಃಕಾಲ**— (ಪ್ರಾತಃ, ಪ್ರಾತರ್-ಮುಂಜಾನೆ). –ಬೆಳಗ್ಗೆ, ಮುಂಜಾವು. **ಸಂಧ್ಯಾಕಾಲ**— (ಸಂಧಿ-ಕೂಡುವಿಕೆ), ಎರಡು ಹೊತ್ತುಗಳು ಕೂಡುವ ಕಾಲ- ಸಂಜೆ, ಸಾಯಂಕಾಲ. **ಸುಕಾಲ**— ಒಳ್ಳೆಯ, ಚೆನ್ನಾದ, ಉತ್ತಮ-ಕಾಲ. **ಕಾಲಜ್ಞ**— ವೇಳೆ ತಿಳಿಯುವವ- ಜೋಯಿಸ, ಚತುರ. **ಸಾಯಂಕಾಲ, ದುಷ್ಕಾಲ, ಸುಕಾಲಿಕ.**

ಕಷ್ (ಧಾ) –ತಿಕ್ಕು. **ಕಷಾಯ**— ತಿಕ್ಕಿ ಇಲ್ಲವೆ ಅರೆದು ತೆಗೆದ ರಸ. **ಕಷ್ಟ**— ತಿಕ್ಕಾಟ-ದುಃಖ, **ಕಷ**— ತಿಕ್ಕುವ, ಅರೆಯುವ. **ನಿಕಷ**- ಒರೆಗಲ್ಲು. **ಕೂಲಂಕಷ**— (ಕೂಲ- ದಡ, ದಂಡೆ) ದಡವನ್ನು ತಿಕ್ಕುವ-ಕೊರೆಯುವ-ಸಂಪೂರ್ಣ, ಸಮಗ್ರ.

ಕಾಂಕ್ಷ್ (ಧಾ) –ಸಂದೇಹ ಪಡು, ಬಯಸು. **ಕಾಂಕ್ಷೆ**— ಬಯಕೆ,

ಇಚ್ಛೆ. **ಆಕಾಂಕ್ಷೆ**— ಸಂಶಯ, ಇಚ್ಛೆ, ಬಯಕೆ. **ನಿರಾಕಾಂಕ್ಷೆ**- ಸಂದೇಹ ವಿಲ್ಲದೆ ಇರೋಣ; ಅಪೇಕ್ಷೆ-ಬಯಕೆ ಇಲ್ಲದಿರೋಣ. **ಸಾಕಾಂಕ್ಷ**— ಸಂದೇಹ ವುಳ್ಳ.

ಕಾಚ್ (ಧಾ) -ಹೊಳೆ (ಅಕರ್ಮಕ). ಬಂಧನ (ಸಕರ್ಮಕ). **ಕಾಂಚನ**— ಹೊಳೆಯುವಂಥಾದ್ದು- ಬಂಗಾರ. **ಕಾಂಚಿ**— ಹೊಳೆಯುವಂಥ, ಶೋಭಿಸುವಂಥ ಆಭರಣ- ಸ್ತ್ರೀಯರ ಸೊಂಟವನ್ನು ಬಂಧಿಸುವ ಆಭರಣ- ಮೇಖಲೆ, ಒಡ್ಯಾಣ, ಪಟ್ಟಿ. **ನಿಷ್ಕಾಂಚನ**— ಬಂಗಾರ ಇಲ್ಲದವ- ಬಡವ. **ಸಕಾಂಚನ**— ಬಂಗಾರುಳ್ಳವ-ಶ್ರೀಮಂತ. **ಕಾಚ**— ಗಾಜು.

ಕೀಲ್ (ಧಾ)— ಮೊಳೆ-ಹೊಡೆ, ಗೂಟಾ ನಡಿಸು, ಕಟ್ಟು, ಬಿಗಿ, ಬಂಧಿಸು. **ಕೀಲಿ**— ಕೀಲು, ಚಿಲಕ, ಅಗಣಿ, ಗೂಟ. **ಕೀಲಕ**— ಕೀಲಿ. **ಕೀಲ**— ಕೀಲಿ, ಕೀಲಕ; ಶಿವ.

ಕು (ಧಾ)— ಶಬ್ದ ರಚನೆಯ ಮಾಡು. **ಕವನ**— ಶಬ್ದಗಳಿಂದ ರಚಿಸಿದ್ದು-ಕವಿತೆ, ಪದ್ಯಕೃತಿ. **ಕವಿ**— ಕವಿತೆಯನ್ನು ರಚಿಸುವವ. **ಕವಿತ್ವ**— ಶಬ್ದ ರಚನೆಯ ಶಕ್ತಿ-ಕವಿತೆ ಬರೆಯುವ ಶಕ್ತಿ. **ಕಾವ್ಯ**— ಕವಿಯ ರಚನೆ-ಕವಿತೆ, ಕವನ, ಕಬ್ಬ, ಸಾಹಿತ್ಯ. **ಕುಕವಿ**— (ಕು+ಕವಿ) ಕೆಟ್ಟಕವಿ. **ಶೀಘ್ರ ಕವಿ**— ಕೂತ-ಕೂತಲ್ಲೆ ಬೇಗನೆ ಕವಿತೆ ಮಾಡುವವ-ಆಶುಕವಿ. **ಸತ್ಕವಿ**- (ಸತ್+ಕವಿ). **ಸುಕವಿ. ಮಹಾಕವಿ. ಕವಿತೆ (ತಾ)**— ಕವಿಯ ರಚನೆ, ಕವಿಯ ಕೃತಿ, (ಭಾವನಾ ವೈಖರಿ)-ಪದ್ಯ. **ಕವನಿಸು**— ಶಬ್ದ-ಪದ್ಯ-ರಚಿಸು.

ಕುಟ್ (ಧಾ)— ಡೊಂಕಾಗು; ತುಂಡು ಮಾಡು; ಬಿಸಿ ಮಾಡು, ಬೆಚ್ಚಗಾಗು. **ಕುಟಿಲ**— ಡೊಂಕಾದ, ಬಾಗಿದ, ವಕ್ರ; ಕೆಟ್ಟ ನಡತೆಯ; ಅನ್ಯಾಯ, ಮೋಸ. **ಕುಟ್ಮಲ**— ಡೊಂಕಾದುದು-ಮೊಗ್ಗು, ಮುಗುಳು. **ಕುಟಿಲೆ. ಕುಟಿಲಾಂಗ. ಕುಟ್ಟಿತ. ಕುಟ್ಟಿಮ. ಕುಟ್ಟುಹ.**

ಕುಠ್ (ಧಾ)— ನಿಲ್ಲಿಸು; ವೇಷ್ಟನ(-ಸುತ್ತು ಹೊದೆಸು), ಪ್ರತಿಘಾತ. **ಕುಂಠ**— ನಿಲ್ಲಿಸಿದ, ಹದನವಲ್ಲದ, ಮೊಂಡ; ಅಶಕ್ತ, ಮೂರ್ಖ. **ಕುಂಠಿತ**- ನಿಲ್ಲಿಸಿದ, ತಡೆಹೊಂದಿದ, ನಿಂತುಹೋದ; ಮೊಂಡಾದ, ಬಡ್ಡು; ಮೂರ್ಖ,

ದಡ್ಡ. ಅಕುಂಠ— ನಿಲ್ಲಿಸಲಾಗದಂಥ; ಸೋಲಿಲ್ಲದ. **ಕುಂಠನ. ಅಕುಂಠಿತ. ವಿಕುಂಠ.**

ಕುತ್ಸ್ (ಧಾ)— ಜರೆ, ನಿಂದಿಸು. **ಕುತ್ಸಿತ**— ಜರೆಯತಕ್ಕ, ದೋಷ ಇಡತಕ್ಕ-ಕೆಟ್ಟ, ದುಷ್ಟ, ಹಾಳು, ನಿಂದ್ಯ, ಹೀನ, ತುಚ್ಛ. **ಕುತ್ಸೆ**— ನಿಂದೆ. **ಕುತ್ಸಕ**— ನಿಂದಿಸುವವ; ದುಷ್ಟ, ನೀಚ. **ಕುತ್ಸನೆ**— ತಿರಸ್ಕಾರ, ನಿಂದೆ. **ಅಕುತ್ಸಿತ**— ಉತ್ತಮ.

ಕುಪ್ (ಧಾ)— ಸಿಟ್ಟಾಗು. **ಕುಪಿತ**— ಸಿಟ್ಟಾದ, ರೇಗಿದ. **ಕೋಪ**- ಸಿಟ್ಟು. **ಕೋಪನ**— ಸಿಟ್ಟಗೇಳುವವ. **ಕೋಪಿ (ಪು)**— ಸಿಟ್ಟಗೇಳುವ, ಯಾವಾಗಲೂ ಸಿಟ್ಟನಿಂದ ಇರುವ ಸ್ವಭಾವದವನು. **ಪ್ರಕೋಪ**-(ಪ್ರ+ಕೋಪ) -ವಿಶೇಷ ಸಿಟ್ಟು. **ವಿಕೋಪಿ**— (ವಿ+ಕೋಪಿ) ವಿಶೇಷ ಕೋಪವುಳ್ಳವನು. **ವಿಕೋಪ. ಸಂಕೋಪ.**

ಕೃ (ಧಾ)— ಮಾಡು. **ಕರ**— ಮಾಡುವ ಸಾಧನ-ಕೈ. **ಕರಣ**- ಮಾಡುವಿಕೆ, (ಮಾಡುವ) ಸಾಧನ; ಇಂದ್ರಿಯ. **ಕರ್ತೃ**— ಮಾಡುವವ; ಯಜಮಾನ. **ಕರ್ಮ**— ಮಾಡೋಣ; ಕೆಲಸ. **ಕಾರಣ**— ಮಾಡುವ ಉದ್ದೇಶ. **ಕಾರ್ಯ**— ಮಾಡೋಣ, ಮಾಡಲು ಯೋಗ್ಯವಾದ-ಕೆಲಸ, ಉದ್ಯೋಗ. **ಕೃತಿ**— ಮಾಡುವ ರೀತಿ, ಮಾಡುವಿಕೆ, ಮಾಡಬೇಕಾದುದು- ಕೆಲಸ, ಕರ್ತವ್ಯ, ರಚನೆ, (-ಗ್ರಂಥ). **ಕೃತ್ಯ**— ಮಾಡತಕ್ಕ, ಮಾಡಬೇ ಕಾದುದು-ಕೆಲಸ, ಕಾರ್ಯ. **ಕೃತ್ರಿಮ**— ಮಾಡಿದ-(ಮೋಸ, ಮಾಟ). **ಕ್ರಿಯಾ (ಯೆ)**— ಮಾಡುವಿಕೆ-ಕೆಲಸ, ಕಾರ್ಯ. **ಅನುಕರಣ**— ಒಬ್ಬ ನಂತೆ ಮತ್ತೊಬ್ಬ ಮಾಡೋಣ. **ಅಧಿಕಾರ**— (ಅಧಿ+ಕಾರ) ಮೇಲಿನ- ಮೇಲೆ-ಶ್ರೇಷ್ಠ-ಉತ್ತಮ+ಮಾಡೋಣ-ಅಂಕೆ, ಹುದ್ದೆ. **ಅಪಕಾರ**- ಕೆಡುಕು ಮಾಡೋಣ. **ಉಪಕಾರ**— ಒಳಿತು ಮಾಡೋಣ. **ಬಹಿಷ್ಕಾರ**— (ಬಹಿರ್-ಹೊರಗೆ). ಕುಲದ ಹೊರಗೆ ಮಾಡೋಣ. **ವ್ಯಾಕರಣ**— ಶಬ್ದ ಗಳನ್ನು ಭೇದ ಮಾಡುವ ಶಾಸ್ತ್ರ. **ಆಕಾರ**— ಮಾಟ. **ಪ್ರಾಕೃತ**— ಪ್ರಕೃತಿಯ ಸಂಬಂಧವುಳ್ಳ-ಮೂಲರೂಪದ. **ಸಂಕರ**— (ಸಮ್+ಕರ) ಒಟ್ಟುಮಾಡೋಣ-ಬೆರಿಕೆ. **ಸಂಸ್ಕೃತ**— (ಸಮ್+ಕೃತ) ನೆಟ್ಟಗೆ ಮಾಡಿದ, ತಿದ್ದಿದ, ಸುಧಾರಿಸಿದ. **ಸಂಸ್ಕಾರ**— ತಿದ್ದುವಿಕೆ-ಉತ್ತಮ ಸ್ಥಿತಿಗೆ ತರುವಿಕೆ,

ಅಭಿವೃದ್ಧಿಗೊಳಿಸುವಿಕೆ. **ಸತ್ಕಾರ**— ಆದರ ಮಾಡೋಣ. **ಸ್ವೀಕಾರ**— (ಸ್ವ-ತಾನು) ತನ್ನದೆಂದು ಮಾಡೋಣ, ಗ್ರಹಿಸೋಣ. **ಆಕೃತಿ. ಪ್ರಕೃತಿ. ವಿಕಾರ. ಅನುಕಾರ. ಉಪಕೃತಿ. ನಿಕಾರ. ಪ್ರಕಾರ.**

ಕೃಪ್ (ಧಾ)— ದಯೆ ಮಾಡು, ಲೋಭ ಮಾಡು. **ಕೃಪೆ** (ಪಾ)— ದಯೆ ಮಾಡೋಣ, ಕರುಣೆ, ಕನಿಕರ, ಅನುಕಂಪ, ಸಹಾನುಭೂತಿ. **ಕೃಪಾಕರ**— ದಯೆ ಮಾಡುವವ, ದಯಾಳು. **ಕೃಪಣ**— (ದ್ರವ್ಯದ ಮೇಲೆ ಬಹು) ಲೋಭ ಮಾಡುವವ; ಜಿಪುಣ, ಜೀನ. **ಕಾರ್ಪಣ್ಯ**— ಜೀನತನ, ಜಿಪುಣತ್ವ. **ನಿಷ್ಕೃಪಣ**— (ನಿಷ್+ಕೃಪಣ) - ಉದಾರ. **ಕೃಪಾಂಗ. ಕೃಪಾಲು (ಳು). ಕೃಪಾನಿಧಿ. ಕೃಪಾಕಟಾಕ್ಷ. ಕೃಪಾವಲೋಕನ.**

ಕೃಷ್ (ಧಾ)— ಜಗ್ಗು, ಎಳೆಯು, ಹರಗು. **ಆಕರ್ಷಣ**— ಎಳೆತ, ಸೆಳೆತ. **ಅಪಕರ್ಷ**— ಇಳಿಸೋಣ, ಅಪನತಿ ಉಂಟುಮಾಡೋಣ, ಸೋಲುವಿಕೆ. **ಉತ್ಕರ್ಷ**— ಮೇಲೆ ಎಳೆಯುವಿಕೆ, ಏರಿಕೆ; ಹೆಚ್ಚಳ; ಆನಂದ. **ಕೃಷಿ**— ಭೂಮಿಯನ್ನು ಹರಗು ಮಾಡೋಣ-ವ್ಯವಸಾಯ, ಬೇಸಾಯ. **ಕೃಷ್ಟ**— ಎಳೆಯಲ್ಪಟ್ಟ, ಉಳಲ್ಪಟ್ಟ. **ಆಕೃಷ್ಟ**— ಎಳೆಯಲ್ಪಟ್ಟ, ಸೆಳೆಯಲ್ಪಟ್ಟ. **ಆಕರ್ಷ. ಆಕರ್ಷಣೆ. ಆಕರ್ಷಿಸು. ಆಕರ್ಷಕ. ಆಕರ್ಷಣೀಯ. ಕೃಷಿಕ. ಕೃಷೀವಲ. ಕೃಷ. ಕೃಷ್ಟಿ. ಉತ್ಕೃಷ್ಟ. ಪ್ರಕೃಷ್ಟ.**

ಕೄ (ಧಾ)— ಬೀರು, ಹಬ್ಬು. **ಕಿರಣ**— ಬೀರುವುದು, ಹಬ್ಬುವುದು-ಪ್ರಕಾಶದ ರೇಖೆ, ಕದಿರು. **ಕೀರ್ಣ**— ಹಬ್ಬಿದ, ಚದರಿದ, ತುಂಬಿದ, ವ್ಯಾಪ್ತ. **ಆಕೀರ್ಣ**— ಹಬ್ಬಿದ, ಬೀರಿದ. **ವಿಕೀರ್ಣ**— (ವಿ+ಕೀರ್ಣ) ವಿಶೇಷವಾಗಿ ಹಬ್ಬಿದ, ಪಸರಿಸಿದ. **ಪ್ರಕೀರ್ಣ**— (ಪ್ರ+ಕೀರ್ಣ) ಹೇಚ್ಚಾಗಿ ಬೀರಿದ. **ಸಂಕೀರ್ಣ**— (ಸಮ್+ಕೀರ್ಣ) ಕಲೆತುಹೋದ, ಮಿಶ್ರ, ಬೆರೆತ.

ಕೄತ್ (ಧಾ)— ಹೇಳು, ಹೊಗಳು, ಸ್ತುತಿಸು. **ಕೀರ್ತನ(ನೆ)**- ಹೊಗಳುವಿಕೆ, ಕೊಂಡಾಡುವಿಕೆ; ಸ್ತುತಿ. **ಕೀರ್ತಿ**— ಹೊಗಳಿಕೆ, ಪ್ರಶಂಸೆ, ಗುಣಗೌರವ. **ಕೀರ್ತಿಸು**— ಹೊಗಳು, ಪ್ರಶಂಸಿಸು, ಸ್ತುತಿಸು. **ಸಂಕೀರ್ತನ**- ಹಲವರು ಒಟ್ಟುಕೂಡಿ ಮಾಡುವ ಸ್ತುತಿ. **ಕೀರ್ತಿಶೇಷ. ಕೀರ್ತಿವಂತ. ಅಕೀರ್ತಿ. ಅಪಕೀರ್ತಿ. ದುಷ್ಕೀರ್ತಿ.**

ಕ್ಲಪ್ (ಧಾ)— ಸಮರ್ಥನಾಗು. **ಕಲ್ಪ**— ಮಾಡಲು ಸಮರ್ಥನಾಗು–ನಿಯಮ, ಕಟ್ಟು, ಕಟ್ಟಳೆ; ನಿರ್ಧಾರ; ಪ್ರಳಯ; ವೇದದ ಒಂದು ಅಂಗ. **ಕಲ್ಪನ (ನೆ–ನಾ)**– ಮಾಡುವಿಕೆ, ಉಂಟು ಮಾಡುವಿಕೆ–ಆಲೋಚನೆ; ತರ್ಕ; ಊಹೆ, ಕಟ್ಟು, ಕೃತಿ, ಯೋಜನೆ. **ಕಲ್ಪಕ**— ಉಂಟುಮಾಡಲು ಸಮರ್ಥ–ಉಪಮೆ, ಪ್ರಮಿತಿ, ಆದರ್ಶ. **ಕಲ್ಪಿಸು**— ಉಂಟುಮಾಡು, ತರ್ಕಮಾಡು, ಊಹಿಸು. **ಕಲ್ಪಿತ**— ತರ್ಕಿಸಿದ, ಊಹಿಸಿದ. **ಕಲ್ಪಿ**— ಕಲಿಯುವಿಕೆ, ವಿದ್ಯೆ. **ಕ್ಲಪ್ತಿ**– ನೆನಪು. **ವಿಕಲ್ಪ**– ನಿರ್ಣಯವಾಗದಿರುವಿಕೆ, ಸಂದಿಗ್ಧತೆ, ಸಂಶಯ–ತಪ್ಪು ಕಲ್ಪನೆ. ಕೆಟ್ಟ ವಿಚಾರ, ಅಜ್ಞಾನ. **ಸಂಕಲ್ಪ**— ಕೆಲಸವನ್ನು ಪ್ರಾರಂಭಿಸುವ ಮೊದಲು ಮಾಡುವ ಪ್ರತಿಜ್ಞೆ, ನಿರ್ಣಯ, ದೃಢನಿಶ್ಚಯ–ಉದ್ದೇಶ, ಇಚ್ಛೆ, ವಿಚಾರ; ಮನಸ್ಸು. **ಸಂಕಲ್ಪಜ**— ಮನ್ಮಥ. **ಕಲ್ಪಕುಜ. ಕಲ್ಪತರು. ಕಲ್ಪದ್ರುಮ. ಕಲ್ಪವೃಕ್ಷ. ಕಲ್ಪಭೂಜ. ಕಲ್ಪಭೂಜಾತ. ಕಲ್ಪಭೂರುಹ. ಕಲ್ಪಾಗ್ನಿ. ವಿಕಲ್ಪಿಸು. ಸಂಕಲ್ಪಿಸು. ಸಂಕಲ್ಪಿತ.**

ಕ್ರುದ್ (ಧಾ)— ಅಳು; ಕರೆ **ಕ್ರಂದನ**— ಅಳುವಿಕೆ, ಕೂಗುವಿಕೆ, ಕರೆಯುವಿಕೆ. **ಆಕ್ರಂದ**— ಅಳುವಿಕೆ, ಕೂಗುವಿಕೆ, ಕರೆಯುವಿಕೆ. **ಆಕ್ರಂದನ**— ಅಳುವಿಕೆ, ಕೂಗುವಿಕೆ, ಕರೆಯುವಿಕೆ–ದುಃಖ, ಗೋಳು. **ಕ್ರಂದಿತ. ಆಕ್ರಂದಿತ. ಆಕ್ರಂದಿಸು. ವಿಕ್ರಂದನ. ವಿಕ್ರಂದಿತ.**

ಕ್ರಮ್ (ಧಾ)— ಹೋಗು. **ಕ್ರಮ**— ಹೋಗುವಿಕೆ; ನಡಿಗೆ, ಹಜ್ಜೆ, ಮಾರ್ಗ, ನಿಯಮ, ಕಟ್ಟಳೆ. **ಕ್ರಮಣ**— ಹೋಗುವಿಕೆ, ನಡೆಯುವಿಕೆ, ದಾಟುವಿಕೆ. **ಕ್ರಮಿಸು**— ಹೋಗು, ನಡೆಯು, ದಾಟು. **ಕ್ರಮಿಕ**— ಕ್ರಮದಿಂದ ಹೋಗುವ. **ಕ್ರಮಾಗತ**— ಕ್ರಮದಿಂದ ಬಂದ, (ವಂಶ ಪಾರಂಪರ್ಯವಾಗಿ ಬಂದ). **ಕ್ರಾಂತಿ**— ಹೋಗುವಿಕೆ, ಮುಂದರಿಸುವಿಕೆ–ತೀವ್ರವಾದ ಮಾರ್ಪಾಟು, ಬದಲಾವಣೆ, ಚಳವಳ. **ಅತಿಕ್ರಮ**— ಮೀರಿ ಹೋಗೋಣ, ಉಲ್ಲಂಘನೆ. **ಅನುಕ್ರಮ**— ಒಂದರ ಹಿಂದೆ ಒಂದು ಹೋಗೋಣ, ಕ್ರಮದಿಂದ ಹೋಗೋಣ–ರೀತಿ, ಪರಂಪರೆ, ವಂಶಾವಳಿ. **ಅಪಕ್ರಮ**– ದೂರ ಹೋಗೋಣ, ಹಿಂದೆ ಸರಿಯೋಣ, ಕೆಟ್ಟುಹೋಗೋಣ, ಅವ್ಯವಸ್ಥೆ. **ಉಪಕ್ರಮ**–ಹತ್ತಿರ ಹೋಗುವಿಕೆ, ಸಮೀಪಿಸುವಿಕೆ–ಆರಂಭಿಸೋಣ, ಪ್ರಾರಂಭ. **ನಿಷ್ಕ್ರಮಣ**— ಹೊರಗೆ ಹೋಗೋಣ. **ಪರಾಕ್ರಮ**— ಬೇರೆಯವರ ಮೇಲೆ ಏರಿ ಹೋಗೋಣ; ಪ್ರಯತ್ನ, ಸಾಹಸ, ಶಕ್ತಿ, ಶೂರತನ. **ಸಂಕ್ರಮ**—

ಕೂಡಿ ಹೋಗೋಣ; ಒಟ್ಟಿಗೆ ಚಲಿಸುವಿಕೆ. ಸಂಕ್ರಮಣ— ಸಂಕ್ರಾಂತಿ— ನೆಟ್ಟಗೆ ದಾಟುವಿಕೆ; ಹಾಯ್ದು ಹೋಗುವಿಕೆ; ಸೂರ್ಯನು ಒಂದು ರಾಶಿಯಿಂದ ಮತ್ತೊಂದು ರಾಶಿಗೆ ಹೋಗುವ ಸಮಯ. ಕ್ರಮೇಣ. ವಿಕ್ರಮ. ಅಕ್ರಮ. ಅತಿಕ್ರಮಿಸು. ಉಪಕ್ರಮಿಸು. ಉತ್ಕ್ರಮ. ಉತ್ಕ್ರಮಣ. ಉತ್ಕ್ರಮಿಸು. ಉತ್ಕ್ರಾಂತಿ. ಸಾಂಕ್ರಾಮಿಕ.

ಕ್ರೀ (ಧಾ)— ಕೊಳ್ಳು; ದ್ರವ್ಯ ವಿನಿಮಯ. ಕ್ರಯ— ಕೊಳ್ಳೋಣ; ಬೆಲೆ. ವಿಕ್ರಯ— ಕೊಂಡದ್ದು ತಿರುಗಿ ಕೊಡೋಣ; ಮಾರಾಟ. ಕ್ರೇಯ— ಕೊಳ್ಳತಕ್ಕ. (ಕ್ರೇತವ್ಯ). ಕ್ರೇತ್ಯ— ಕೊಂಡುಕೊಳ್ಳುವವ. ಕ್ರೇತವ್ಯ— ಕೊಂಡುಕೊಳ್ಳಲು ಯೋಗ್ಯವಾದ. ಕ್ರೀತ— ಕೊಂಡುಕೊಂಡ; ಬೆಲೆಗೆ ಪಡ ಕೊಂಡ. ಕ್ರೇಣಿ— ಕೊಂಡುಕೊಳ್ಳುವಿಕೆ; ವ್ಯಾಪಾರ. ವಿಕ್ರೀತ— ಕೊಂಡದ್ದು ತಿರುಗಿ ಕೊಟ್ಟ; ಮಾರಿದ, ಮಾರಲ್ಪಟ್ಟ. ಅಕ್ರೀತ. ವಿಕ್ರೇತೃ.

ಕ್ರೀಡ್ (ಧಾತು)— ಆಡು. ಕ್ರೀಡೆ (ಡಾ)—ಆಟ, ವಿನೋದ; ವಿಲಾಸ, ರತಿ. ಆಕ್ರೀಡ— ವಿನೋದದ ಆಟ; ವಿಹಾರಕ್ಕಾಗಿ ಮಾಡಿದ ತೋಟ; ಉದ್ಯಾನ. ವಿಕ್ರೀಡಿತ— ವಿಶೇಷವಾಗಿ ಆಟವಾಡಿದ, ಆಟ. ಕ್ರೀಡನ. ಕ್ರೀಡಿತ. ಸಂಕ್ರೀಡೆ.

ಕ್ರುಧ್ (ಧಾ)— ಸಿಟ್ಟಾಗು. ಕ್ರುದ್ಧ— ಸಿಟ್ಟುಗೊಂಡ, ರೇಗಿದ, ಕೆರಳಿದ. ಕ್ರೋಧ— ಸಿಟ್ಟು, ಮುನಿಸು, ಕೋಪ. ಕ್ರೋಧನ— ಸಿಟ್ಟುಳ್ಳ, ಕೋಪವುಳ್ಳ, ಬಲುಬೇಗ ಸಿಟ್ಟಿಗೇಳುವವ. ಸಂಕ್ರುದ್ಧ— ಬಹು ಸಿಟ್ಟುಗೊಂಡ, ತುಂಬಾ ರೇಗಿದ. ಅಕ್ರೋಧ— ಸಿಟ್ಟು ಇಲ್ಲದ. ಅಕ್ರೋಧನ— ಸಿಟ್ಟು ಇಲ್ಲದ; ಶಾಂತ.

ಕ್ರುಶ್ (ಧಾ)— ಅಳು; ಕರೆ. ಕ್ರೋಶ— ಕೂಗುವಿಕೆ, ಅಳುವಿಕೆ, ಕರೆಯುವಿಕೆ, ಬೊಬ್ಬೆ; $\frac{1}{4}$ ಯೋಜನ, ಹರದಾರಿ. ಆಕ್ರೋಶ— ಕೂಗುವಿಕೆ; ಗರ್ಜನೆ. ಕ್ರೋಶಿತ. ವಿಕ್ರೋಶ.

೧೫. ಸಂಧಿ; ಸಮಾಸ.

ಆವ ಮಾತು— ಆವುದು+ಮಾತು (ಲೋಪ). (ಗ. ಸ). ಮುಖ ಚಂದ್ರ— ಮುಖ ಚಂದ್ರನಂತೆ- (ಕ. ಸ). ಇತ್ತಂಡ— ಇರ್ (ಎರಡು) ತಂಡ— (ದ್ವಿ. ಸ). ಮುಂಬಗಲು— ಮುನ್ +ಪಗಲು (ಆದೇಶ) ಪಗಲ ಮುಂದು (ಅಂಶಿ).

ಮೂವತ್ತಾರು— ಮೂರು+ಪತ್ತು—ಮೂ+ಪತ್ತು (ಆದೇಶ) ಮೂರು ಬಾರಿ ಹತ್ತು (ಬ. ಸ). ಹಿರಿಕಿರಿದು— ಹಿರಿದು+ಕಿರಿದು (ಲೋಪ), ಹಿರಿದೂ ಕಿರಿದೂ (ದ್ವ. ಸ). ಚತುರಬಲಂ— ಚತುರವಾದ ಬಲಂ (ಕ. ಸ). ತ್ರಿಕರಣ (ದ್ವಿ. ಸ). ಮಹಾಬಾಹು— ಮಹತ್ ಬಾಹು (ಕ. ಸ). ಬಲೆ ಬೀಳು— ಬಲೆಗೆ ಬೀಳು (ಕ್ರಿ. ಸ). ವೇದಮತಿ— ವೇದದಂತೆ ಮತಿ (ಕ. ಸ). ಹಾಣಾಹಾಣಿ— ಹಣೆಯಿಂದ ಹಣೆಯಿಂದ ಒಬ್ಬರನ್ನೊಬ್ಬರು ತಾಡಿಸಿ ಆಗುವ ಜಗಳ (ಬ. ಸ). ಪಾರುಂಬಳೆ— ಪಾರುವ ಬಳೆ (ಗ. ಸ). ಎಡೆನುಡಿ— ಎಡೆಯ ನುಡಿ (ಕ. ಸ). ನೀರ್ಗುಡಿದಂ— ನೀರು+ಕುಡಿದಂ (ಆದೇಶ), ನೀರನ್ನು ಕುಡಿದಂ (ಕ್ರಿ. ಸ). ಇಗ್ಗೆಲಸ— ಇರ್ (ಎರಡು)+ಕೆಲಸ (ಆದೇಶ) (ದ್ವಿ. ಸ). ಮುಷ್ಟಾಮುಷ್ಟಿ— ಮುಷ್ಟಿಯಿಂದ ಮುಷ್ಟಿಯಿಂದ ಹೊಡೆದು ಮಾಡುವ ಯುದ್ಧ (ಬ. ಸ). ತುದಿನಾಲಗೆ— ನಾಲಗೆಯ ತುದಿ (ಅಂಶಿ). ಮುಂಜೆರಗು— ಮುಂದು+ಸೆರಗು (ಆದೇಶ) ಸೆರಗ ಮುಂದು (ಅವ್ಯಯೀ). ತಪೋಬಲ— ತಪಃ+ಬಲ (ವಿಸರ್ಗ) ತಪಸ್ಸಿನ ಬಲ (ಕ. ಸ). ತಾಪಸೋತ್ತಮ— ತಾಪಸ+ಉತ್ತಮ (ಗುಣ) ತಾಪಸರಲ್ಲಿ ಉತ್ತಮ (ತ. ಸ). ಹಿಮಕರಕುಲೇಂದ್ರ— ಹಿಮಕರ ಕುಲ+ಇಂದ್ರ (ಗುಣ) ಹಿಮಕರವೆಂಬ ಕುಲ (ಕ. ಸ.) ಹಿಮಕರ ಕುಲದಲ್ಲಿ ಇಂದ್ರ (ತ. ಸ). ಇಂಚರ— ಇನಿದು+ಸರ (ಕಂ. ವ್ಯಂ.) (ಕ. ಸ). ಕಣ್ದೆರೆ— ಕಣ್+ತೆರೆ (ವ್ಯಂ.) ಕಣ್ಣನ್ನು ತೆರೆ (ಕ್ರಿ. ಸ). ನಗೆಗಣ್ಣು— ನಗೆ+ಕಣ್ಣು (ಆದೇಶ) (ಕ. ಸ). ಕಣ್ಬನಿ— ಕಣ್+ಪನಿ (ವ್ಯಂ.) ಕಣ್ಣಿನ ಪನಿ (ತ. ಸ). ಕೆಂದಳಿರು— ಕೆಚ್ಚನೆ+ತಳಿರು (ವ್ಯಂ.) (ಕ. ಸ). ಪೂದೋಟ— ಪೂ+ತೋಟ (ಆದೇಶ) ಪೂವಿನ ತೋಟ (ತ. ಸ). ಕರಾಗ್ರ— ಕರ+ಅಗ್ರ (ಸ. ಧೀ.) (ತ. ಸ). ಸದಮಲ— ಸತ್+ಅಮಲ (ಸಂ. ವ್ಯಂ.) (ದ್ವ.ಸ.) ಶರಾಸನ— ಶರ+ಆಸನ (ಸ. ಧೀ.) ಶರದ ಆಸನ (ತ. ಸ). ಅಬ್ಜಾಕ್ಷ— ಅಪ್+ಜ (ಸಂ. ವ್ಯಂ.) ಅಬ್ಜ+ಅಕ್ಷ (ಸ.ಧೀ.) ಅಬ್ಜದಂತೆ ಅಕ್ಷಿಗಳುಳ್ಳವನು. (ಬ ಸ.) ರಾಘವೇಶ್ವರ ರಾಘವ+ಈಶ್ವರ (ಸ. ಧೀ.) (ತ. ಸ). ಬಾಂದಳ— ಬಾನ್+ತಳ (ಆದೇಶ) ಬಾನಿನ ತಳ (ತ. ಸ). ಮಹೇಶ್ವರಾಭರಣ- ಮಹಾ+ಈಶ್ವರ+ಆಭರಣ (ಸ. ಧೀ.) ಮಹತ್ ಈಶ್ವರ (ಕ. ಸ.) ಮಹೇಶ್ವರನ ಆಭರಣ (ತ. ಸ). ಪಣೆಗಣ್ಣು— ಪಣೆ+ಕಣ್ಣು (ಆದೇಶ) ಪಣೆಯ ಕಣ್ಣು (ತ. ಸ). ಇನೋಪಮ— ಇನ+ಉಪಮ (ಗುಣ) (ತ. ಸ). ಮನೋಹರ— ಮನಃ ಹರ (ವಿಸರ್ಗ) ಮನಸ್ಸನ್ನು ಹರಿಸುವುದು

(ಬ. ಸ). ಅಂಗೋಪಾಂಗ– ಅಂಗ+ಉಪಾಂಗ (ಗುಣ) ಉಪ+ಅಂಗ (ಸ. ಧೀ.) ಅಂಗವೂ ಉಪಾಂಗವೂ (ಧ್ವ. ಸ). ಬಾಣಾಂಧಕಾರ– ಬಾಣ+ಅಂಧಕಾರ (ಸ. ಧೀ.) ಬಾಣದ ಅಂಧಕಾರ (ತ. ಸ). ಕುಲಾದ್ರಿ– ಕುಲ+ಅದ್ರಿ (ಸ. ಧೀ) ಕುಲವೆಂಬ ಅದ್ರಿ (ಕ. ಸ). ದಿಗ್ದಂತಿ– ದಿಕ್+ದಂತಿ (ಆದೇಶ) ದಿಕ್ಕಿನ ದಂತಿ (ತ. ಸ). ಪಡೆವೆರಸಿ– ಪಡೆ+ಬೆರಸಿ (ಆದೇಶ) ಪಡೆಯನ್ನು ಬೆರಸಿ (ಕ್ರಿ. ಸ). ಪ್ರಿಯೋಕ್ತಿ– ಪ್ರಿಯ+ಉಕ್ತಿ (ಗುಣ) ಪ್ರಿಯವಾದ ಉಕ್ತಿ (ಕ. ಸ). ಅತ್ಯುತ್ತಮ– ಅತಿ+ಉತ್ತಮ (ಯಣ್) ಅತಿಯೂ ಉತ್ತಮವೂ (ಕ. ಸ). ತಲೆವಾಗಿ– ತಲೆ+ಬಾಗಿ (ಆದೇಶ) ತಲೆಯನ್ನು ಬಾಗಿ (ಕಿ. ಸ).

೧೬. ಸಂಸ್ಕೃತ— ತದ್ಭವ.

ಮುಖ– ಮುಕ, ಮೊಕ, ಮೊಗ. ಮಾನ್ಯತಾ, ಮಾನನ–ಮನ್ನಣೆ. ಪಕ್ಷಿ— ಪಕ್ಕಿ, ಹಕ್ಕಿ. ಹಂಸ— ಅಂಚೆ. ಆರ್ಭಟ— ಅಬ್ಬರ. ಪಾಶ–ಪಾಸ, ಹಾಸು. ಮುಕ್ತಾ–ಮುತ್ತು. ಅಟವಿ–ಅಡವಿ. ವಾಲ–ಬಾಲ. ಸಿಂಹ–ಸಿಂಗ. ವ್ಯಾಧ—ಬಿಯದ, ಬೇಡ. ಹರ್ಷ—ಹರುಷ. ಅರ್ಘ್ಯ–ಅಗ್ಗ. ವಂಧ್ಯಾ— ಬಂಜೆ. ವಿಸ್ತಾರ—ಬಿತ್ತರ. ಬ್ರಹ್ಮ—ಬೊಮ್ಮ. ರತ್ನ–ರನ್ನ. ಸಂತೋಷ–ಸಂತಸ. ಸ್ಥಲ–ತಳ. ನಿಯಮ–ನೇಮ. ಸ್ಥಾನ—ತಾಣ. ಕ್ರೌಂಚ–ಕೊಂಚೆ. ವಕುಳ—ಬಕುಳ. ಅಕ್ಷರ—ಅಕ್ಕರ. ನಿತ್ಯ—ನಿಚ್ಚ. ಮಾಘ—ಮಾಗಿ. ವೇಗ—ಬೇಗ. ಆಶಾ— ಆಸೆ. ಹೃದಯ—ಎರ್ದೆ. ಪರ್ವ—ಹಬ್ಬ.

ಅಭ್ಯಾಸ ೩.

೧ ಧ್ವನಿಸಾಮ್ಯವುಳ್ಳ ಶಬ್ದಗಳು

ಆಟ— ಕ್ರೀಡೆ. **ಕಾಟ**—ಉಪದ್ರವ, ತೊಂದರೆ. **ಗಾಟ**—ಅತಿಶಯ, ಬಹಳ, ದೊಡ್ಡ. **ಝಾಟ**— ಕಾಡು, ಬಂದರು. **ತಾಟ**— ಊಟ ಮಾಡುವ ಬಟ್ಟಲು, ತಾಟು; ಬಿಗುವು, ಸಡಿಲಲ್ಲದುದು, ಒರಟುತನ, ಬಾಗದಿರುವಿಕೆ, ಹೆಮ್ಮೆ. **ನಾಟ**— ತೊಲೆ, ಅಂಟು, ಮುಂಡಿಗೆ, ಮೋಪು, ನಾಡು. **ಪಾಟ**— ಅಗಲ, ವಿಸ್ತಾರ, ನಡವಳಿಕೆ, ರೂಢಿ, ಅಭ್ಯಾಸ; ಹಾಡು. **ಭಾಟ**— ಕೂಲಿ, ಮಜೂರಿ, ವೇತನ, ಬಾಡಿಗೆ. **ಮಾಟ**— ಮಾಡುವಿಕೆ, ಕೆಲಸ; ಸೌಂದರ್ಯ, ಚೆಲುವಿಕೆ; ಮೋಸ, ದಗೆ, ವಂಚನೆ, ಕಪಟ; ಉಪದ್ರವಕಾರಕ ಮಂತ್ರ ತಂತ್ರ.

ಲಾಟ— ಹಳೆ, ನಾಶವಾದ, ಹಾಳಾದ; ಒಂದು ದೇಶದ ಹೆಸರು. **ವಾಟ**— ಬೇಲಿ, ಆವರಣ; ಅಂಗಳ; ತೋಟ; ದಾರಿ, ಮಾರ್ಗ; ಬೀದಿ, ಕೇರಿ; ಇಳುಕಲು ಪ್ರದೇಶ. **ಶಾಟ**— ಅರಿವೆ, ವಸ್ತ್ರ.

ಜಡ— ಚಟುವಟಿಕೆಯಿಲ್ಲದಿರುವ, ಮಂದ; ದಡ್ಡ, ಮೂಢ, ಆಲಸ; ಹಿಮ, ತಂಪು, ಚಳಿ; ಯಜ್ಞ; ಮೂಕ; ನೀರು. **ಅಡ**— ಅಡ್ಡ; ಅಡವು; ಕೆಳಗೆ ಬೀಳು; ಅವಸರ (ಅಡಬಡ, ಅಡಹಡ, ಅಡಹಡಿಸು); ಸಂಬೋಧಕಾವ್ಯಯ (ಅಡಅಡಾ ಎಂಬವನನ್ನು ಅಡವಿಯಲ್ಲಿ ನೀಗು). **ಕಡ**— ಸಾಲ, ಋಣ, ಎರವಲು, ಕರ್ತವ್ಯ; ದೋಣಿ; ತುದಿ, ಮೂಲೆ. (ಕಡ ಸಿಕ್ಕುವ ಹಾಗಿದ್ದರೆ, ನಾನೂ ಕೊಂಚ ಬಡಕೊಂಡೇನು— ಗಾದೆ. -ಅ. ಕೋ.) **ಗಡ**— ಅಂತೆ, ಸರಿ, ಸಹಜ, ನಿಜ; ತ್ವರೆ, ಬೇಗನೆ; ಗಲಿಬಿಲಿ; ರಾಟೆ; ಕಿಲ್ಲೆ, ದುರ್ಗ. (ಗಡಗಡ, ಗಡಗಡನೆ; ಗಡಬಡ, ಗಡಬಡಿ, ಗಡಬಿಡಿ) (ಅಸುಹೃತ್ ಸೇನೆಗೆ ಸಾಲ್ಪನೊರ್ವನೆ ಗಡಂ— ಅ. ಕೋ.) **ತಡ**— ತಡೆ, ಪ್ರತಿಬಂಧ, ಅಡ್ಡಿ; ಹೆದರಿಕೆ, ಗಲಿಬಿಲಿ, ಗೊಂದಲ; ಸಾವಕಾಶ. **ದಡ**— ತೀರ, ದಂಡೆ. **ನಡ**— ನಡೆ, ಹೋಗು (ನಡಕೊಳ್ಳು, ನಡಚಪ್ಪರ); ನಡು (ನಡಪ್ರಾಯ); ನಡುಗು. **ಪಡ**— ಪಡೆ (ಪಡಕೊಳ್ಳು), ಭಾವಬೋಧಕಾವ್ಯಯ (ಪಡಪಡ); ಪಟ (ಪಚ್ಚಪಡ); ಪಡು (ಪಡಸಾಲೆ). **ಫಡ**— ಭಾವಬೋಧಕಾವ್ಯಯ (ಫಡಫಡ). **ಬಡ**— ತೆಳು, ಸಪುರ; ಬಲಹೀನ, ಅಶಕ್ತ; ವಿನೀತ, ದರಿದ್ರ; ದುಃಖದಾಯಕ; ಉತ್ತರ ದಿಕ್ಕು. **ಮಡ**— ಚಿಕ್ಕ ಸೇತುವೆ, ಒಡ್ಡು, ಏರಿ; ಪಾದದ ಹಿಂಭಾಗ, ಹಿಮ್ಮಡಿ; ತೇರಿನ ಪಾರಿ; ಮಠ. **ವಡ**— ವಾಟ, ತೋಟ, ಉಪವನ, ಉದ್ಯಾನ.

ಆಳಿ— ಉದ್ದ; ಯುಕ್ತಿ, ತಂತ್ರ, ಚಮತ್ಕಾರ; ಅಸಮಧಾನ, ದುಃಖ; ವಂಚನೆ; ಅವಮಾನ, ತಿರಸ್ಕಾರ; ಉರುಟು; ಸಖಿ, ತೊತ್ತು, ಗೆಳತಿ; ಸಮೂಹ. **ಕಾಳಿ**— ದುರ್ಗೆ; ಕಪ್ಪಾದುದು; ಕಳವಳ, ಕಾತರ. **ಗಾಳಿ**— ಹವೆ, ವಾಯು, ಮಾರುತ. (ತಾಪಸಿಗಳ ಆಹಾರಕ್ಕಾಗಿ ದೇವರು ನಿರ್ಮಿಸಿರುವ ಪದಾರ್ಥ; ಇಂಗ್ಲೀಷಿನಲ್ಲೂ ಗಾಳಿ ಎಂದೇ ಬರೆಯುತ್ತಾರೆ- ಅ. ಕೋಶ). **ಚಾಳಿ**— ನಡತೆ, ರೂಢಿ; ಚಟ, ಅಭ್ಯಾಸ; ಕೆಟ್ಟ ನಡತೆ. **ಡಾಳಿ**— ಕಾಂತಿ, ಪ್ರಕಾಶ, ಹೊಳಪು; ಚೆಲುವು, ಮನೋಹರತೆ, ಲಾವಣ್ಯ. **ತಾಳಿ**— ಮಂಗಳಸೂತ್ರ; ತಾಳೀಮರ; ತಾಯಿತ, ರಕ್ಷೆ. (ತಾಳಿ ಕಟ್ಟಬೇಕೋ, ಬೇಡವೋ,

ಎಂಬ ನಮ್ಮ ಪ್ರಶ್ನೆಗೆ, ನಮ್ಮ ಉತ್ತರವೂ ಇದೇ: ತಾಳಿ.— ಅ. ಕೋಶ). **ದಾಳಿ—** ಮುತ್ತಿಗೆ, ಲಗ್ಗೆ; ಒಮ್ಮೆಲೆ ರಭಸದಿಂದ ಮೇಲೆ ಬೀಳುವಿಕೆ; ಗದ್ದಲ. **ಧಾಳಿ**- ದಾಳಿ. **ನಾಳಿ**- ನಾಡಿ; ನಳಿಗೆ; ಕಾಲುವೆ; ಕಿರಿಯಗಲವಾದ ಸಮುದ್ರ; ಲಾಳಿ. **ಪಾಳಿ**- ಸರತಿ, ಬಾರಿ; ಕ್ರಮ; ಸಾಲು; ಸಮೂಹ; ಧ್ವಜ; ಸೈನ್ಯ. **ಬಾಳಿ**- ಬದುಕುವಿಕೆ. (ಜೋಳವಾಳಿ). **ಮಾಳಿ**- ಅಗಸ, ಮಡಿವಳ; ತೋಟಗಾರ್ತಿ; ಮಾಲೆಗಾರ್ತಿ. **ಲಾಳಿ**- ಜೇಡರ ನೂಲೆಸೆಯುವ ದೋಣಿ; ಇಕ್ಕಾಳ. **ವಾಳಿ**- ವಾಹಳಿ, ವಾಹ್ಯಾಳಿ, ವೈಹಾಳಿ; ಕುದುರೆ ಸವಾರಿ, ಕುದುರೆಗಳ ಪ್ರದರ್ಶನ. **ಹಾಳಿ**- ಪಾಳಿ, ಪಂಕ್ತಿ; ಕ್ರಮ, ರೀತಿ; ಸರತಿ, ಬಾರಿ; ತಾವು, ತಗಡು; ಬತ್ತದ ಗದ್ದೆಯ ಭಾಗ.

ದಾಯ- ದಾನ, ಬಹುಮಾನ, ಮೆಚ್ಚು, ಉಡುಗೊರೆ, ಕೊಡುಗೆ; ಭಾಗ, ಪಾಲು, ಹಿಸೆ; ಜಾಗ, ಸ್ಥಳ, ಆಸ್ತಿ; ಜೂಜಿನ ಲೆತ್ತ ಎಸೆಯುವಿಕೆ; ಸುಸಂಧಿ, ಸುಸಂದರ್ಭ; ಯೋಗ; ಯುಕ್ತ ಸಮಯ; ಸ್ವೀಕಾರ; ಸಾಧನ; ಅರಣ್ಯ; ಲಾಭ. **ಆಯ**- ಲಾಭ, ಉತ್ಪತ್ತಿ; ಅಳತೆ, ಪ್ರಮಾಣ; ಮರ್ಮ; ವಿವರ; ಆಕಾರ, ನಕಾಶೆ; ಅನುಕೂಲ; ಪಾಯ; ವಿಸ್ತೀರ್ಣ, ವಿಶಾಲ ಸಿದ್ಧತೆ; ಏಕಾಂತ; ನಿಜವಸ್ತು; ಸಾಮರ್ಥ್ಯ; ಬ್ರಹ್ಮ; ತೆರಿಗೆ. **ಕಾಯ**- ದೇಹ, ಶರೀರ; ಗುಂಪು. **ಗಾಯ**- ಹೊಡೆತ, ಪೆಟ್ಟು; ಇರಿದ ನೋವು; ಸರ್ತಿ, ಸಲ. (ಏಳು ಗಾಯ ತೊಳೆ- ಏಳು ಸಲ ಗಾಯ ತೊಳೆ). **ಚಾಯ**— ನೆರಳು, ಚಹರೆ; ಚಹಾ ಎಂಬ ಪಾನೀಯ. **ತಾಯ**— ತಾಯಿಯ. (ತಾಯಿ-ತಾಈ). (ಕುಡಿದೆ ತಾಯ ಮೊಲೆಯ). **ನಾಯ**— ತೋರಿಸುವ, ನಿರ್ದೇಶಿಸುವ, ನಡಿಸುವ; ನ್ಯಾಯ. **ಪಾಯ**— ಪಾದ, ಅಡಿ; ತಳಹದಿ; ಅಡಿಗಟ್ಟು, ನೆಲಗಟ್ಟು. **ಬಾಯ**- ಬಾಯಿಯ, (ಬಾಯ ತುತ್ತು). **ಮಾಯ**— ಮೋಹ, ಭ್ರಮೆ, ಅಜ್ಞಾನ; ಇಂದ್ರಜಾಲ; ದೇವರ ಲೀಲೆ—ಶಕ್ತಿ; ಮಮತೆ; ಲಕ್ಷ್ಮಿ, ಸಂಪತ್ತು. **ರಾಯ**— ಒಡೆಯ, ರಾಜ; ಗೌರವವಾಚಕ ಶಬ್ದ. **ಲಾಯ**— ಕುದುರೆ ಕಟ್ಟುವ ಗೋದಲೆ; ಆನೆಯ ಮನೆ. **ವಾಯ**— ವ್ಯಾಜ್ಯ; ನೆವನ: ಜಗಳ; ಸುಳ್ಳು; ಕಪಟ, ಮೋಸ. **ಶಾಯ**— ಮಲಗಿದ, ಒರಗಿದ, ನಿದ್ರಿಸಿದ. (ಉಪಶಾಯ, ವಿಶಾಯ). **ಸಾಯ**— ಸಹಾಯ; ಕೊನೆ, ಅಂತ್ಯ, ಸಮಾಪ್ತಿ; ದಿನದ ಅಂತ್ಯ, ಸಾಯಂಕಾಲ (ಅವಸಾಯ). **ಹಾಯ**— ಪಟ, ದೋಣಿ ನಡಿಸಲಿಕ್ಕೆ ಗಾಳಿಗೆ ಒಡ್ಡಿದ ವಸ್ತ್ರ.

ಸಾರ— ತಿರುಳು, ರಸವತ್ತಾದ ಅಂಶ; ಮರ್ಮ, ಗುಟ್ಟು; ರಸ; ಸತ್ವ, ನಿಜಾಂಶ; ಅಮೃತ, ನೀರು; ಬಲ, ಶಕ್ತಿ, ತ್ರಾಣ; ನಿರ್ಣಯ, ಸಿದ್ಧಾಂತ; ಕ್ಷಾರ; ಸಂಕ್ಷಿಪ್ತ ವಿಷಯ ವಿವರಣೆ; ಐಶ್ವರ್ಯ; ತೊರೆಯನ್ನು ದಾಟಲು ಹಾಕುವ ಮರದ ಗಳ (ಸೇತುವೆ); ಶ್ರೇಷ್ಠ, ಉತ್ತಮ. **ಆರ**— ಹಾರ; ಪೂರ್ಣವಾಗಿ. (ಕಣ್ಣಾರ, ಕಿವಿಯಾರ). **ಕಾರ**— ಉಪ್ಪು; ಕಟುವಾದುದು; ಮಾಡುವವ. **ಗಾರ**— ರೂಢನಾಮಗಳನ್ನು ಮಾಡುವ ಪ್ರತ್ಯಯ. (ಕಂಚುಗಾರ); ಭಾವೋದ್ರೇಕದಿಂದ ಹೊರಡುವ ಮಾತು ಇಲ್ಲವೆ ಶಬ್ದ (ಉದ್ಗಾರ); ನುಂಗುವಿಕೆ, ಕಬಳಿಸುವಿಕೆ (ನಿಗಾರ). **ಘಾರ**— ಚಿಮುಕಿಸೋಣ, ಸಿಂಪಡಿಸೋಣ, ಪ್ರೋಕ್ಷಿಸೋಣ. (ಅಭಿಘಾರ, ಪ್ರಾಘಾರ). **ಚಾರ**— ಹೋಗುವ, ಚಲಿಸುವ; ಹೋಗುವಿಕೆ; ಸೇವಕ, ದೂತ; ಸೆರೆಮನೆ; ಬಂಧನ; ಕಂಬಳಿ; ಕೃತ್ರಿಮ ವಿಷ. **ಜಾರ**— ವ್ಯಭಿಚಾರಿ. **ತಾರ**— ದಾಟುವಿಕೆ, ಪಾರಾಗುವಿಕೆ; ಬೆಳ್ಳಿ; ಮುತ್ತು; ಶುಭ್ರ; ನಕ್ಷತ್ರ; ಕಣ್ಣಿನ ಬೊಂಬೆ; ಸಂಗೀತದಲ್ಲಿ ಉಚ್ಚ (ಏರಿಕೆಯ) ಸ್ವರ; ಆಕಾಶ; ಪರ್ವತ; ದುಗ್ಗಾಣಿ; ತರವಾದ. **ದಾರ**— ಬಿರುಕು, ರಂಧ್ರ, ತೂತು; ಹೆಂಡತಿ; ಹಗ್ಗ, ನೂಲು; ಬಾಗಿಲು; ಪ್ರತ್ಯಯ (ಕಾಮದಾರ, ಚೌಕಿದಾರ); ಯಾರ. **ಧಾರ**— ಹಿಡಿಯುವ, ಆಧರಿಸುವ, ಹರಿಯುವ; ಮಳೆ, ಹಿಮ; ಬೇನೆ; ಭೀತಿ. **ನಾರ**— ನರನಿಗೆ ಸಂಬಂಧಿಸಿದ; ಮಾನವರ ಗುಂಪು; ಬಾಲ. **ಪಾರ**— ಆಚೆಯ ದಡ; ಎಲ್ಲೆ, ಸೀಮೆ; ಅಂತ್ಯ, ಕೊನೆ; ಸಂರಕ್ಷಣೆ; ಗಂಡಾಂತರದಿಂದ ದಾಟಿಸುವಿಕೆ. **ಬಾರ**— ಬಾಗಿಲು; ಬರು- ಇದರ ನಿಷೇದಾರ್ಥಕ ರೂಪ; ಒಂಬತ್ತನೆಯ ಚಾಂದ್ರಮಾನ ತಿಂಗಳು. **ಭಾರ**— ತೂಕ; ಗುರುತ್ವ; ಪರಿಣಾಮ. (ಭಾರವಾದ ಪಾಪಕ್ಕೆ ಘೋರವಾದ ನರಕ; ಆದ್ದರಿಂದ ದೇಹದ ಭಾರವನ್ನು ಕಡಿಮೆಮಾಡಿಕೊಳ್ಳಲೇ ಬೇಕು- ಅ. ಕೋ). **ಮಾರ**— ಮನ್ಮಥ; ಕೊಲ್ಲುವವ, ನಾಶಮಾಡುವವ; ವಿಘ್ನ, ತಡೆ; ಪಿಡುಗು; ಮಾಟ. **ಯಾರ**— ಯಾರು- ಷಷ್ಠೀ ವಿಭಕ್ತಿ ರೂಪ. **ವಾರ**— ಸಾರಿ, ಸರ್ತಿ; ವೇಳೆ; ದಿನ; ಹಪ್ತೆ; ತಡೆ; ಪ್ರಸಂಗ; ಕ್ಷಣ; ಕೂಟ, ಗುಂಪು; ಅವಸರ; ದಂಡೆ; ಸೂಳ್ನು ಇಳುಮೆ; ಮುಸುಕು. **ಶಾರ**— (ಬಣ್ಣಗಳಿಂದ) ಚಿತ್ರವಿಚಿತ್ರಗೊಳಿಸಿದ, ವಿವಿಧವಾಗಿ ಚಿತ್ರಿಸಿದ; ಬೆರಕೆಯಾದ; ಕಲಬೆರಿಕೆಯಾದ; ಹವೆ, ಗಾಳಿ. **ಹಾರ**— ಸರ, ಮಾಲೆ; ಅಪಹರಣ; ಆಕರ್ಷಣ; ಮನೋಹರತೆ; ಆಹಾರ; ಬಲಿ.

೨. ಮೇಳನುಡಿಗಳು.

ಭ್ರಮರ— ಅಳಿ, ತುಂಬಿ, ಆರಡಿ, ಭೃಂಗ, ಮಧುಕರ, ರೋಲಂಬ, ಚಂಚರೀಕ, ಬಂಭರ, ಇಂದಿಂದಿರ, ಮಧುಪ, ಪರಮೆ, ಮೇಳಂಬ, ಶಿಲೀಮುಖ, ಅಲರ್ವಕ್ಕಿ, ದ್ವಿರೇಫ, ಮುಯ್ಯೊರಡಿ, ಷಟ್ಚರಣ, ಮಧುಲಿಟ್, ಪುಷ್ಪಲಿಟ್, ಮಧುವ್ರತ, ಮಧುಪ್ರಿಯ, ಗುಂಗಿಹುಳ, ಪರಿಮಳದಿರುಕ, ಅಲರುಣಿ, ಬಂಡುಣಿ, ನೆಲಬಂಡುಣಿ, ಬಿಂಗ, ಬವರ, ಮಲ್ಲಳಿ, ಷಟಂದ, ಚಿತ್ರವಿಹಗ, ಚಿತ್ರವಿಹಂಗ.

ಕುಸುಮ— ಹೂ, ಪುಷ್ಪ, ಸುಮ, ಅಲರು, ಅರಲು, ಅರಳು, ಮಲರು, ಮರಲು, ಪ್ರಸೂನ, ಲತಾಂತ, ಸುಮನ, ಸುಮನಸ, ಪ್ರಸವ, ಪ್ರಸೂನಕ, ಪುಲ್ಲ, ಉದ್ಗಮ.

ಸೀತೆ— ಜಾನಕಿ, ವೈದೇಹಿ, ಅವನಿಜೆ, ಭೂಮಿಜೆ, ಕ್ಷಿತಿಜೆ, ನೆಲವೆಣ್ಣ ಮಗಳು.

ಗಣಪತಿ— ವಿನಾಯಕ, ಬೆನಕ, ಗಜಾನನ, ವಿಘ್ನೇಶ್ವರ, ವಿಘ್ನರಾಜ, ಲಂಬೋದರ, ಹೇರಂಬ, ಗಣಾಧಿಪ, ಏಕದಂತ, ದ್ವೈಮಾತುರ, ಆನೆಮೊಗ, ಗಣಪ, ಎಲರುಣಿವಸಿರ, ಎಡರ್ಗೇಡಿ, ಪೆರ್ಬೊಡೆಯ, ಸುಂಡಿಲಮೊಗ, ಗಣನಾಥ, ಗಣನಾಯಕ, ಪ್ರಮಥನಾಥ, ಪ್ರಮಥನಾಯಕ, ಪ್ರಮಥಾಧಿಪ.

ಶಿವ— ಈಶ್ವರ, ಶಂಭು, ಶಂಕರ, ಪಿನಾಕಿ, ಈಶ, ಶೂಲಿ, ಗಿರಿಶ, ಗಿರೀಶ, ಹರ, ಉಗ್ರ, ಕಪರ್ದಿ, ಮಹೇಶ್ವರ, ಪಶುಪತಿ, ಶರ್ವ, ಈಶಾನ, ರುದ್ರ, ಮೃಡ, ಮೃತ್ಯುಂಜಯ, ಚಂದ್ರಶೇಖರ, ಚಂದ್ರಮೌಳಿ, ಭೂತೇಶ, ಖಂಡ ಪರಶು, ಕೃತ್ತಿವಾಸ, ಪ್ರಮಥಾಧಿಪ, ಪ್ರಮಥನಾಯಕ, ಪ್ರಮಥನಾಥ, ಶ್ರೀಕಂಠ, ಶಿತಿಕಂಠ, ಮಹಾದೇವ, ವಾಮದೇವ, ವಿರೂಪಾಕ್ಷ, ತ್ರಿಲೋಚನ, ಮುಕ್ಕಣ್ಣ, ಧೂರ್ಜಟಿ, ನೀಲಲೋಹಿತ, ಸ್ಮರಹರ, ಮಾರಾರಿ, ಭರ್ಗ, ತ್ರ್ಯಂಬಕ, ತ್ರಿಪುರಾಂತಕ, ಪುರಾರಿ, ಗಂಗಾಧರ, ಅಂಧಕರಿಪು, ಮಹಾನಟ, ಗಜಾರಿ, ಗಜಚರ್ಮಧಾರಿ, ಗಜಚರ್ಮಾಂಬರ, ಈಶ್ವರೇಶ್ವರ, ಭವ, ಭೀಮ, ಸ್ಥಾಣು, ಉಮೇಶ, ಉಮಾಪತಿ, ಅಷ್ಟಮೂರ್ತಿ, ವ್ಯೋಮಕೇಶ, ಸರ್ವಜ್ಞ, ಕ್ರತುಧ್ವಂಸಿ, ವೃಷಧ್ವಜ, ಕೃಶಾನುರೇತ, ಅಹಿರ್ಬುಧ್ನ್ಯ, ಕಪಾಲಧರ, ಕಪಾಲಭೃತ್, ಕಪಾಲಹಸ್ತ, ಕಪಾಲಿ, ವಿಶಾಲಾಕ್ಷ, ಗೋಪಧ್ವಜ.

ಪಾರ್ಥ— ಅರ್ಜುನ, ಫಲ್ಗುಣ, ಜಿಷ್ಣು, ಶ್ವೇತವಾಹನ, ಗಾಂಡೀವಿ, ಸವ್ಯಸಾಚಿ, ಕಿರೀಟಿ, ಧನಂಜಯ, ಭೀಭತ್ಸು, ಕಪಿಧ್ವಜ, ಮಧ್ಯಪಾಂಡವ, ಶಕ್ರನಂದನ, ಕರ್ಣಶೂಲಿ, ಶಬ್ದಭೇದಿ, ಕಾರ್ಮುಕಿ, ನಿರ್ಮೋಕ್ಷ, ದೈತ್ಯಾರಿ, ವಿಜಯ, ಇಂದ್ರಜ.

ಲಕ್ಷ್ಮಿ— ಇಂದಿರೆ, ಶ್ರೀ, ಪದ್ಮೆ, ಪದ್ಮಾಲಯೆ, ಕಮಲೆ, ಕಮಲಾಲಯೆ, ರಮೆ, ಗೋವಿನಿ, ಭಾರ್ಗವಿ, ಲೋಕಮಾತೆ, ಲೋಕಜನನಿ, ಮಾ, ಕ್ಷೀರೋದ ತನಯೆ, ಕ್ಷೀರಸಾಗರಕನ್ನಿಕೆ, ಹರಿಪ್ರಿಯೆ.

ಕೃಷ್ಣ— ಹರಿ, ಮುಕುಂದ, ಗೋವಿಂದ, ಅಸುರಾರಿ, ಮುರಾರಿ, ದನುಜ ರಿಪು, ಜನಾರ್ದನ, ಮಾರಪಿತ, ಶ್ರೀಧರ, ಮುರಹರ, ಅಚ್ಯುತ, ಗೋಪಾಲ, ಕೇಶವ, ಮಾಧವ, ದಾಮೋದರ, ಶೌರಿ, ಚಕ್ರಪಾಣಿ, ವಾಸುದೇವ, ನಗಧರ, ತ್ರಿವಿಕ್ರಮ, ಗೋವರ್ಧನ, ಅಂಬುರುಹನಾಭ, ಮಧುಸೂಧನ, ದಾನವಾಂತಕ, ಅಸುರಾಂತಕ, ಕೌಸ್ತುಭಧಾರಿ, ಕಮಲಾಕ್ಷ, ಕಂಜನಾಭ, ಪಕ್ಷಿವಾಹನ, ರಂಗ.

ಬೆಂಕಿ— ಅಗ್ನಿ ಅನಲ, ಪಾವಕ, ವಹ್ನಿ, ಚಿತ್ರಭಾನು, ಕೃಶಾನು, ಹುತಾಶನ, ಚಿತೆ, ವೈಶ್ವಾನರ, ಧನಂಜಯ, ಜ್ವಲನ, ಬರ್ಹಿ, ದಹನ, ದಮುನ, ಶುಕ್ರ, ಶುಚಿ, ವಾಯುಸಖ, ಶಿಖಾವಂತ, ಶುಷ್ಮ, ಆಶ್ರಯಾಶ, ಹವ್ಯವಾಹನ, ಸಪ್ತಾರ್ಚಿ, ವಿಭಾವಸು, ರೋಹಿತಾಶ್ವ, ಹಿರಣ್ಯರೇತ, ವೀತಿ ಹೋತ್ರ, ಕೃಪೀಟಯೋನಿ, ಮರಗೂಳ, ಜಾತವೇದ, ಬೃಹದ್ಭಾನು, ಉಷ ರ್ಬುಧ, ಆಶುಶುಕ್ಷಣಿ, ಕೃಷ್ಣವರ್ತ್ಮ, ಶೋಚಿಷ್ಕೇಶ, ಅಪ್ಪಿತ್ತ, ಹುತಭುಕ್, ತನೂನಪಾತ್.

ಕೆಲಸ— ಕಾರ್ಯ, ಕರ್ಮ, ಕ್ರಿಯೆ, ದುಡಿಕೆ, ದುಡಿತ, ದುಡಿಮೆ, ಕಾಯಕ, ಹೋರೆ, ಉದ್ಯೋಗ, ವೃತ್ತಿ, ಧಂದೆ.

ಊರು— ಕೇರಿ, ಬೀಡು, ಬಾಡ, ಬಾಳು, ವಾಡ, ವಾಡಿ, ಹಟ್ಟಿ, ಪಟ್ಟಿ, ಪಾಳ್ಯ, ಪಟ್ಟಣ, ಪತ್ತನ, ಪೊಳಲು, ಹೊಳಲು, ಹಳ್ಳಿ, ಕಟ್ಟೆ, ಕೊಪ್ಪಲು, ಕೊಪ್ಪಳು, ಕೊಂಡ, ಕುಂದ, ಕುಂಡ, ಕುಡಿ, ಕೋಟೆ.

ಆಟ— ಕ್ರೀಡೆ, ಕೇಳಿ, ಕೇಲಿ, ಕೇಲನ, ಖೇಲೆ, ಖೇಲನ, ಚಿಣ್ಣಾಟ (ಕೂಸಾಟ), ಹುಡುಗಾಟ, ನಲ್ಲಾಟ.

ಒಡೆಯ— ದೊರೆ, ಸ್ವಾಮಿ, ಆಳ್ದ, ಅಣ್ಮ, ಉಳ್ಳವ, ಎರೆಯ,

ಅರಸು, ಯಜಮಾನ, ಆಳ್ಮ, ಅರ್ಯ, ಪರಿವೃಢ, ಪ್ರಭು, ನೇತ್ರ, ನಾಯಕ, ಅಧಿಭು, ಅಧಿಪ, ಅಧೀಶ, ಅಧಿಪತಿ, ಈಶ್ವರ, ಪತಿ, ಕರ್ತ, ಕರ್ತಾರ, ಕರ್ತೃ, ಮನ್ಯು.

ಕಾಡು— ಅರೆ, ಹಿಂಡು, ಪಿಳಿ, ಸುಲಿ, ಪೀಡಿಸು, ಅಂಡಲೆ, ಗೋಳಾಡಿಸು, ಕಾಟ, ಕಾಟಕ, ಉಪಟಳ, ಉಪದ್ರವ, ಕೋಟಲೆ, ಕಿರುಕುಳ.

ಚಿಕ್ಕ— ಕಿರಿ, ಎಳೆ, ಸಣ್ಣ, ಅಲ್ಪ, ಕಿಗ್ (ಕಿಗ್ಗಟ್ಟು, ಕಿಗ್ಗಣ್ಣು), ಕಿರ (ಕಿರಗುಂಟೆ), ಕಿತ್ತು (ಕಿತ್ತಡಿ), ಕಿರು, ಕೀಟು, ಕೀಸ, ಕೊಂಚ, ಕೊರೆ (ಕೊರೆಪ್ರಾಣ), ಗುಜುರು, ಚಿಟ (ಚಿಟಗುಬ್ಬಿ), ಚಿಟಿ (ಚಿಟಿಗಿಣಿ, ಚಿಟಿಮಿಟಿ), ಚಿರು (ಚಿರುಪುಲಿ), ಸಿಡಿ (ಸಿಡಿಸೋನೆ).

೩. ವಿವಿದಾರ್ಥ.

ಅಕ್ಷರ- ನಾಶವಿಲ್ಲದ; ವರ್ಣ, ಶಬ್ದ, ಭಾಷೆ; ಕಟ್ಟು, ಕಟ್ಟಳೆ, ನಿಯಮ, ಶಾಸನ; ತಪಸ್ಸು; ವಿಷ್ಣು; ಶಿವ; ಪರಬ್ರಹ್ಮ; ಯಜ್ಞ; ನೀರು; ಆಕಾಶ; ಮೋಕ್ಷ; ಶಾಶ್ವತ; ನೀತಿ; ಖಡ್ಗ; ಶುಭ್ರ, ಬಿಳುಪು; ಕೀರ್ತಿ; ಧರ್ಮ. **ಆದರ**— ಸತ್ಕಾರ, ಸನ್ಮಾನ, ಗೌರವ, ಮರ್ಯಾದೆ, ಮನ್ನಣೆ, ಪೂಜೆ; ಸಮಾಧಾನ, ಶಾಂತಿ; ದಯೆ, ಕರುಣೆ, ದಯಾಭಾವ; ಸಹಾಯ, ರಕ್ಷಣೆ, ಆಶ್ರಯ. **ಒಗರು**— ಸವುಳು ರುಚಿ, ಚೊಗರು; ಕಷಾಯ; ಹೊಗರು, ಕಾಂತಿ; ಬುಗ್ಗೆ. **ಕಂದ**— ಮರಿ, ಕರು, ಮಗು; ಕುತ್ತಿಗೆ; ಒಂದು ಜಾತಿಯ ಪದ್ಯ; ಗೆಡ್ಡೆಗೆಣಸು; ಬೇರು; ಬೆಳ್ಳುಳ್ಳಿ; ಗಂಟು, ಬಾವು; ಮುಗಿಲು; ಕರ್ಪೂರ. **ಸೊಂಪು**— **ಸೊಗಸು**, ಚೆಂದ, ಚೆಲುವು, ಸೌಂದರ್ಯ; ಗರ್ವ, ಅಹಂಕಾರ; ಹೊಟ್ಟೆಬಾಕತನ; ಕಾಂತಿ, ಹೊಳಪು; ಮನೋಜ್ಞ; ಇಂಪು. **ಪಾವಕ**— ಪಾವನಗೊಳಿಸುವ, ಪವಿತ್ರಮಾಡುವ; ಬೆಂಕಿ; ಚಿತ್ರಮೂಲ; ಆಚಾರ, ಸದ್ವೃತ್ತಿ; ವರುಣ; ನೆಲ್ಲಿಗಿಡ; ನರುವಲು; ಗೇರುಮರ; ವಾಯುವಿಳಂಗ; ಸಂಪೂರ್ಣ; ಯತಿ. **ದಾಮ**- ನೂಲು, ಹಗ್ಗ, ದಾರ, ಕಣ್ಣಿ; ಡಾಬು, ಪಟ್ಟಿ, ಉಡಿದಾರ; ಸರ ಮಾಲೆ; ತಲೆಗೆ ಮುಡಿಯುವ ಮಾಲೆ; ಸಾಲು; ದೊಡ್ಡ ಕಟ್ಟು; ದಾನ; ಪಾಲು, ಅಂಶ; ರಚನೆ; ಕಿರಣ; ಮನೆ. **ಮಂಡಲ**- ವರ್ತುಲ; ಸೂರ್ಯ ಚಂದ್ರರ ಬಿಂಬ; ಪರಿವೇಷ; ಸಮೂಹ, ಗುಂಪು, ಕೂಟ; ಸಂಘ; ಗ್ರಹಪಥ; ವ್ಯೂಹ ಭೇದ; ರಾಜ್ಯವಿಭಾಗ, ಜಿಲ್ಲೆ,

ದೇಶ, ಆಡಳಿತೆ; ನಾಯಿ; ಒಂದು ಜಾತಿಯ ಸರ್ಪ; ಚಕ್ರ; ಚಕ್ರವಾಳ; ಕುಷ್ಠ ಭೇದ; ಸುರಭಿಭೇದ; ಲಡ್ಡು; ದೂರ್ವೆ; ನಾಲ್ವತ್ತೆಂಟು ದಿನಗಳ ಅವಧಿ. **ಪ್ರಭಾವ**— ಗೌರವ, ಕೀರ್ತಿ, ವೈಭವ; ಕಾಂತಿ, ಹೊಳಪು, ತೇಜಸ್ಸು; ಮಹಿಮೆ, ಪ್ರತಾಪ; ಶಕ್ತಿ, ಬಲ, ಪರಾಕ್ರಮ, ಸತ್ವ, ಸಾಮರ್ಥ್ಯ; ಅಮಾನುಷ ಸತ್ವ, ಮಹಾತ್ಮತೆ, ಪ್ರಭುಶಕ್ತಿ; ವಿಸ್ತಾರ; ಸುತ್ತು; ಅಧಿಕಾರ. **ಜಾತಿ**— ಹುಟ್ಟು, ಉತ್ಪತ್ತಿ; ಕುಲ, ಕುಟುಂಬ, ಮನೆತನ, ವಂಶ; ಪಂಗಡ, ವರ್ಗ, ವಿಧ, ವರ್ಣ; ಬಗೆ, ಭೇದ, ರೀತಿ; ಮಾದರಿ, ನಮೂನೆ; ಜಾಯಿಕಾಯಿ; ಜಾಜಿ ಹೂ; ಸಮೂಹ, ಗುಂಪು; ಸಾಹಿತ್ಯ-ವಿಶೇಷ; ನಯದಿಂದ ಕೂಡಿದ್ದು; ನೆಲ್ಲಿಗಿಡ. **ಒಲವು**- ಪ್ರೀತಿ; ಆನಂದ; ದಯೆ; ಉಪಕಾರ; ಉದಾರತ್ವ; ಮೆಚ್ಚು. **ಅಮರ**— ಮರಣವಿಲ್ಲದ; ದೇವತೆ, ದೇವಲೋಕಕ್ಕೆ ಸಂಬಂಧಪಟ್ಟ; ಪಾರದ; ಬಂಗಾರ; ಎಲುಬಿನ ರಾಶಿ; ಸಂಸ್ಕೃತ ಕೋಶದ ಹೆಸರು. **ಅಂಕ**— ಗುರುತು, ಕಲೆ, ಕಳಂಕ; ತೊಡೆ; ಶರೀರ; ಮಡಿಲು; ಕೊಕ್ಕೆ, ಕೊಂಡಿ; ದೋಷ, ತಪ್ಪು, ಅಪರಾಧ; ಸ್ಥಳ, ಎಡೆ; ಸಂಖ್ಯೆಯಲ್ಲಿ ಅಂಕೆ; ಬದಿ, ಪಾರ್ಶ್ವ, ನೆರೆ; ನಾಟಕದ ವಿಭಾಗ; ಜಗಳ, ಯುದ್ಧ; ಸಹಕಾರಿ; ಪಾಪ, ವಕ್ರತೆ, ಡೊಂಕು; ಪರ್ವತ; ಕಾಂತಿ; ವಿಚಿತ್ರ; ಇರವು, ವಾಸ್ತವ್ಯ; ಪ್ರಸಿದ್ಧಿ; ಕೊರತೆ; ಬಿರುದು. **ಇಂಗಿತ**— ಆಲೋಚನೆ, ಅಭಿಪ್ರಾಯ, ಉದ್ದೇಶಭಾವ; ವಿಚಾರ, ಶೋಧನೆ; ಸೂಚನೆ, ಸನ್ನೆ ಊಹೆ; ಮನಸ್ಸಿನ ಚಲವಲನ. **ಕಳಂಕ**— ಕಪ್ಪು, ಕರೆ, ಕಲೆ; ಲಾಂಛನ, ಗುರುತು; ಕುಂದು, ಕೊರತೆ; ಪಾಪ, ದೋಷ; ಅಪಕೀರ್ತಿ; ಅವಗುಣ; ಅತಿ ನಿಷ್ಠುರ; ಮೇಘ. **ಎಡೆ**— ಇರವು, ಇಕ್ಕೆ, ವಾಸ್ತವ್ಯ; ಸ್ಥಳ, ಜಾಗ, ಇಂಬು; ಅವಕಾಶ, ಅಂತರ; ದೂರ; ಮಧ್ಯ, ನಡುವು; ಅಧಿಕ; ಭೂಮಿ; ದಾರಿ, ಹಾದಿ; ಗುರಿ; ಕಾಲ, ಸಮಯ; ಅನು, ಆಸ್ಪದ; ಎಲೆ; ಬಲಿದಾನದ ಅನ್ನ, ಆಹಾರ, ಊಟ. **ಆಲಿ**- ಕಣ್ಣು; ಕಣ್ಣಿನ ಕರಿಯ ಗುಡ್ಡೆ; ಆಣೆಕಲ್ಲು, ಮಂಜುಕಲ್ಲು, ಸಖಿ, ಗೆಳತಿ; ಸಾಲು, ಶ್ರೇಣಿ; ಚೇಳು; ತುಂಬಿ; ಇಚ್ಛೆ, ಕೋರಿಕೆ; ಸಂಕ, ಸೇತು; ಗೆರೆ, ರೇಖೆ; ಕಟ್ಟೆ, ದಂಡೆ; ಸಂತತಿ, ಕುಲ. **ಕಣ**- ಸಣ್ಣ ಚೂರು, ತುಂಡು; ತಟಕು, ಹನಿ; ತೆನೆ ಒಕ್ಕುವ ನೆಲ, ಕಳ, ಅಂಗಳ; ಯುದ್ಧರಂಗ, ರಣಾಂಗಣ; ಚೌಕವಸ್ತ್ರ; ಬೆಂಕಿಯ ಕಿಡಿ; ಧಾನ್ಯದ ಕಣ್ಣು, ಕಾಳು; ಅಣು, ಪರಮಾಣು; ಧಾನ್ಯದ ತೆನೆ; ರತ್ನಗಳ ಝಳ; ಹಿಮದ ಪರೆ; ಎವೆಯಿಕ್ಕುವಷ್ಟು ಸಮಯ;

ಕೋಲು; ಜೀರಿಗೆ; ಒಂದು ತರವ ನೊಣ. **ಹೊಲಬು**– ದಾರಿ, ಮಾರ್ಗ; ಕ್ರಮ, ರೀತಿ; ವಿಚಾರ; ಸ್ಥಳ; ಗೊತ್ತು; ಪದ್ಧತಿ; ದಿಕ್ಕು; ಪರಿಚಯ; ಗುರುತು; ಗಡಿ, ಮಿತಿ; ಮನೆ; ಸುದ್ದಿ; ಸಾಗುವಳಿ ನೆಲ, ಗದ್ದೆ. **ಸ್ಥಿತಿ**— ಇರುವ ರೀತಿ, ಇರುವಿಕೆ; ನಿಲುಗೆ, ನಿಲ್ಲುವಿಕೆ; ಅವಸ್ಥೆ; ಆಸ್ತಿ, ಸಂಪತ್ತು, ಶ್ರೀಮಂತಿಕೆ; ಯೋಗ್ಯತೆ, ನೆಲೆ; ಗೌರವ, ಮರ್ಯಾದೆ; ಜೀವನ, ಬದುಕು; ವಿದ್ಯಾಮಾನ; ಕ್ರಮ; ಪದವಿ; ವಿಶ್ರಮ; ಕ್ಷೇಮ; ಹೊಂದಿಕೆ; ಗಡು; ಸರಹದ್ದು; ಲಕ್ಷ್ಯ, ಗಣ್ಯ. **ಪಶು**— ಹಸು; ಮೃಗ, ಎಲ್ಲಾ ಪ್ರಾಣಿಗಳು; ಹೆಡ್ಡ, ಮೂಢ, ಅಜ್ಞಾನಿ; ಪ್ರಮಥ ಗಣ; ಅಗ್ನಿ; ಯಜ್ಞಭೇದ; ಆತ್ಮ; ಪರಮಾತ್ಮ; ಇಂದ್ರಿಯ ವಿಕಾರ. **ಪಡೆ**– ಹಡೆ, ಹೆರು; ದೊರಕಿಸು, ಗಳಿಸು, ಹೊಂದು; ಅನುಭವಿಸು, ಸಹಿಸು; ಗುಂಪು, ಸೈನ್ಯ, ದಂಡು; ಸೆರೆ; ಸರ್ಪದ ಹೆಡೆ; ವಿಮಾನ. **ನಂದನ**— ಸಂತೋಷಪಡಿಸುವವ; ಮಗ; ಸ್ನೇಹಿತ, ಗೆಳೆಯ; ಅರಸು; ಯುವರಾಜ; ಇಂದ್ರನ ತೋಟ; ಸಂತೋಷ; ಇಪ್ಪತ್ತಾರನೆಯ ಸಂವತ್ಸರ. **ರಾಜ**— ಅರಸ, ಒಡೆಯ; ಚಂದ್ರ; ಶ್ರೇಷ್ಠ; ಯತಿ; ಕ್ಷತ್ರಿಯ; ಮನೆ; ಇಂದ್ರ; ಬಿಳುಪು; ಕಪ್ಪು; ಯಕ್ಷ; ಯುಧಿಷ್ಠಿರ; ಪೃಥು. **ಫಲ**— ಕಾಯಿ, ಹಣ್ಣು; ಉತ್ಪತ್ತಿ, ಬೆಳೆ; ಪ್ರತಿಕಾರ; ಲಾಭ, ಬಡ್ಡಿ. ಪ್ರಯೋಜನ; ಪರಿಣಾಮ; ಹಲಗೆ; ಸಂತತಿ; ಬಾಣದ ತುದಿ; ಡಾಲು; ಉಚಿತ; ಹೆಂಗಸರ ಮುಟ್ಟು; ನೇಗಿಲ ಮೊಳೆ; ಮೋಕ್ಷ, ಮುಕ್ತಿ; ಅಭಿವೃದ್ಧಿ; ಹತ್ತಿ. **ವರ್ತನ**— ತಿರುಗುವಿಕೆ, ಹೋಗಿ ಬರುವಿಕೆ; ಇರುವಿಕೆ; ನಡತೆ, ರೀತಿ, ರೂಢಿ; ಉಪಜೀವನ; ಗಳಿಕೆ, ಸಂಬಳ, ಕೂಲಿ; ಉದ್ಯೋಗ; ನೌಕರಿ, ಚಾಕರಿ; ದಂಧೆ; ವ್ಯಾಪಾರ; ಜೀವನ; ವಾಸ್ತವ್ಯ, ಮನೆ. **ರಂಗ**— ಬಣ್ಣ, ವರ್ಣ; ನರ್ತನ, ನಾಟ್ಯ; ನಾಟಕವನ್ನಾಡುವ ಸ್ಥಳ, ಪ್ರದರ್ಶನ ಶಾಲೆ; ರಣಭೂಮಿ, ಕಳ; ಕೃಷ್ಣ; ಸಡಗರ, ಡೌಲು; ಸಿಟ್ಟು; ಚೆಲ್ವಿಕೆ, ಮನೋಹರ; ತವರ. **ಮಡಿ**— ಸಾರಿ, ಬಾರಿ, ಸರ್ತಿ; ಶುದ್ಧ, ಪವಿತ್ರ, ನಿರ್ಮಲ; ಶುದ್ಧ ಬಟ್ಟೆ; ರೇಶ್ಮೆಯ ವಸ್ತ್ರ; ನಿರಿಗೆ, ಗಳಿಗೆ; ಪದರು, ಮಡಿಕೆ; ಗದ್ದೆ, ಹೊಲ; ಒತ್ತಾಗಿ ಬೀಜಗಳನ್ನು ಹಾಕುವ ಸ್ಥಳ; ಕಳ; ಉಡಿ, ತೊಡೆ; ಹಿಮ್ಮಡ; ಚಂಚಿ, ಚೀಲ; ಪಾತೆ, ಕಟ್ಟೆ; ಮಡಿಲು; ಸಾಯು. **ಬಲಿ**– ಆಹುತಿ; ಅರ್ಚನೆ, ಪೂಜೆ; ಕಪ್ಪ, ಕಾಣಿಕೆ; ಆಹಾರ ಸಮರ್ಪಣೆ; ಬಲಿಚಕ್ರವರ್ತಿ; ಸೂರು; ಕೋಣ; ಹಂದಿ; ಒಂಟೆ; ಎತ್ತು; ಕಾಗೆ; ಸೈನಿಕ; ಸಮರ್ಥ, ಬಲವುಳ್ಳ;

ಬಲರಾಮ; ಸಜ್ಜನ; ಶಕ್ತಿ; ಸಂತೋಷ, ಉತ್ಸಾಹ; ಪ್ರಕೃತಿ, ಸ್ವಭಾವ; ಕೀರ್ತಿ, ಯಶಸ್ಸು; ಗಂಧಕ; ಅಗಸ, ರಜಕ; ಪರ್ವತ; ಬಾರುಕೋಲು; ನಿರಿಗೆ, ಸುಕ್ಕು; ಬೆಳೆ; ಬಲವಾಗು, ಗಟ್ಟಿಯಾಗು, ದೃಢವಾಗು; ಬಲಪಡಿಸು; ಹೆಚ್ಚಾಗು; ಉಪದ್ರವ ಕೊಡು; ತನ್ನನ್ನು ತಾನೆ ಒಪ್ಪಿಸಿಕೊಡು. **ರೂಪ**– ಆಕಾರ; ತೋರಿಕೆ; ಮೂರ್ತಿ; ಚೆಲುವಿಕೆ, ಸೌಂದರ್ಯ; ರೀತಿ, ನಡತೆ, ಶೀಲ, ಸ್ವಭಾವ; ಗುಣ, ಜಾತಿ, ತರಹ; ಕ್ರಮ, ಪದ್ಧತಿ; ಮಾದರಿ, ನಮೂನೆ; ಹೋಲಿಕೆ; ಮೃಗ ಸಮೂಹ; ತುರುಮುಂದೆ; ಕವಿತೆ; ನಾಟಕ; ದೃಶ್ಯ ಪದಾರ್ಥ. **ಶಿರ**– ತಲೆ; ಮುಖ್ಯಭಾಗ; ತುದಿ, ಕೊನೆ, ಶಿಖರ; ಹಾಸಿಗೆ; ಹೆಬ್ಬಾವು; ತಲೆಬುರುಡೆ; ನಾಡಿ, ನರ; ಮುಂಭಾಗ; ಮುಖ್ಯ; ದಿಕ್ಕು; ಪ್ರತ್ಯಕ್ಷ,

೪. ಮಾರು ನುಡಿಗಳು.

ಹೆಣ್ಣು-ಗಂಡು. ಸೋಲು–ಗೆಲವು (ಗೆಲ್ಲು). ಸಣ್ಣ-ದೊಡ್ಡ. ಸುಗುಣ (ಸದ್ಗುಣ) – ದುರ್ಗುಣ. ತಂಪು–ಕಾವು. ಇಲಿ – ಬೆಕ್ಕು. ಏಳು – ಬೀಳು. ಬೇಕು–ಬೇಡ. ಏರು–ಇಳಿ. ಕೆಲವು–ಹಲವು. ಹೊಸಬ–ಹಳಬ. ಜ್ಞಾನಿ–ಅಜ್ಞಾನಿ. ತುಸು–ಬಹಳ. ಮೂಡಣ–ಪಡುವಣ. ಆರೋಗ್ಯ–ಅನಾರೋಗ್ಯ. ಗೌರವ-ತಿರಸ್ಕಾರ (ಅಗೌರವ). ಒಳ–ಹೊರ.

೫. ಅನ್ವಯಾರ್ಥ.

ಕಮಲಾರಿ— ಕಮಲ- ತಾವರೆಗಳ+ಅರಿ–ವೈರಿ—ಚಂದ್ರ. **ಶರಧಿ**– ಶರ–ನೀರು+ಧಿ—ಆಧಾರ, ಧರಿಸಿಕೊಂಡದ್ದು—ನೀರಿಗೆ ಆಧಾರವಾದುದು—ಸಮುದ್ರ. **ನೃಪ**— ನೃ-ನರ, ಮನುಷ್ಯ–ರನ್ನು+ಪ–ಪಾಲಿಸುವವನು-ರಾಜ. **ಅಂಬುದ**— ಅಂಬು–ನೀರನ್ನು+ದ-ಕೊಡುವುದು — ಮೋಡ. **ಭೂಸುರ**— ಭೂ–ಭೂಲೋಕದ, ಭೂಮಿಯ+ಸುರ-ದೇವತೆ— ಬ್ರಾಹ್ಮಣ. **ಅಚ್ಯುತ**– ಅ+ಚ್ಯುತ–ನಾಶವಿಲ್ಲದವನು— ವಿಷ್ಣು. **ಮುಗುಳ್ನಗೆ**— ಮುಗುಳು–ಮೊಗ್ಗಿನಂತಿರುವ+ನಗೆ— ಮಂದಹಾಸ. **ತುರಗ**— ತುರ–ವೇಗವಾಗಿ+ಗ—ಗಮಿಸುವುದು—ಕುದುರೆ. **ಜನಪದ**— ಜನ-ಜನರಿಗೆ+ಪದ— ನೆಲೆಯಾದುದು—ದೇಶ, ರಾಜ್ಯ, ಜನಾಂಗ (Nation). **ಸುರಪ**– ಸು–ಚೆನ್ನಾಗಿ+ರ–ಕಾಂತಿಯಿಂದ ಪ್ರಕಾಶಿಸುವವರು—ದೇವತೆಗಳು. ಸುರ–ದೇವತೆಗಳನ್ನು+ಪ–ಪಾಲಿ

ಸುವವನು—ದೇವೇಂದ್ರ. **ಮುರಾರಿ**— ಮುರ-ಮುರನೆಂಬ ರಾಕ್ಷಸನ+ಅರಿ-ಶತ್ರು-ಕೃಷ್ಣ. **ಧನಂಜಯ**— ಧನಂ-ರಾಜಸೂಯ ಯಾಗದ ಕಾಲದಲ್ಲಿ ಹೇರಳ ದ್ರವ್ಯ (ಧನ) ವನ್ನು+ಜಯ-- ಜಯಿಸಿ ತಂದವನು— ಅರ್ಜುನ. **ಉಟಜ**-- ಉಟ-ಎಲೆ, ಹುಲ್ಲು+ಜ-ಹುಟ್ಟಿದ್ದು-- ಎಲೆಗಳಿಂದ ಕಟ್ಟಲ್ಪಟ್ಟದ್ದು--ಎಲೆಮನೆ, ಪರ್ಣಶಾಲೆ, ಕುಟೀರ. **ರತ್ನಾಕರ**— ರತ್ನ-ರತ್ನಗಳಿಗೆ+ಆಕರ—ಉತ್ಪತ್ತಿ ಸ್ಥಾನವಾದುದು— ಸಮುದ್ರ. **ಶ್ರೀಧರ**— ಶ್ರೀ-ಲಕ್ಷ್ಮಿಯನ್ನು+ಧರ—ಧರಿಸಿದವನು—ವಿಷ್ಣು. **ಅಶ್ವಮೇಧ**- ಅಶ್ವ-ಕುದುರೆ+ಮೇಧ-ಯಜ್ಞ, ಯಾಗ— ದಿಗ್ವಿಜಯಕ್ಕಾಗಿ ಪೂಜಿಸಿಬಿಟ್ಟ ಕುದುರೆಯನ್ನೇ ಅಂತ್ಯಕ್ಕೆ ಹೋಮಿಸಿ ಮಾಡುವ ಯಾಗ. **ಉಪೇಂದ್ರ**— ಇಂದ್ರ-ದೇವೇಂದ್ರನ+ಉಪ-ಹತ್ತಿರ ಬಂದವನು, ಒತ್ತಿಗೆ ಬಂದವನು-ದೇವೇಂದ್ರನ ತಮ್ಮನು-ವಾಮನರೂಪಿಯಾದ ವಿಷ್ಣು. **ಅಗಜಾತೆ**— ಅ+ಗ-ಚಲನೆಯಿಲ್ಲದುದು-ಪರ್ವತ. ಅಗ-ಪರ್ವತದಲ್ಲಿ, ಪರ್ವತ ರಾಜನಲ್ಲಿ+ಜಾತೆ-ಹುಟ್ಟಿದವಳು—ಪಾರ್ವತಿ. **ವಿಟಪಿ**-- ಗೆಲ್ಲು, ಎಲೆ ಮೊದಲಾದುವುಗಳಿಂದ ವಿಸ್ತಾರವನ್ನು ಹೊಂದುವಂಥಾದ್ದು-ಮರ. **ಆರಡಿ**— ಆರು+ಅಡಿ- ಪಾದಗಳು ಉಳ್ಳದ್ದು-ಷಟ್ಪದಿ, ತುಂಬಿ. **ಮುರಜ**-- ಮುರ-ಚರ್ಮದ ಮುಚ್ಚಳಗಳಿಂದ+ಜ-(ಹುಟ್ಟಿದ) ಉಂಟಾದುದು-ಮದ್ದಳೆ. **ಭೂಪ**-- ಭೂ-ಭೂಮಿಯನ್ನು+ಪ-ಪಾಲಿಸುವವನು-ಅರಸ. **ಪಾರ್ಥ**— (ಪೃಥೆ-ಕುಂತಿ). ಕುಂತಿಯ ಮಗ-ಅರ್ಜುನ. **ಅಗ್ರೇಸರ**— ಅಗ್ರೇ-ತುದಿಯಲ್ಲಿ+ಸರ-ಹೋಗುವವನು-ಮುಂದಾಳು. **ಅಜ**—ಅ+ಜ-ಜನನವಿಲ್ಲದವನು; ಅ-ವಿಷ್ಣುವಿನಿಂದ+ಜ-ಹುಟ್ಟಿದವನು—ಬ್ರಹ್ಮ.

೬. ಕಿರುನುಡಿಗಳು.

ಮುಮ್ಮಲನೆ ಮರುಗು— ಕುರುಭೂಮಿಯಲ್ಲಿ ವೈರಿಗಳನ್ನೇ ಹಾಸಿಗೆಯನ್ನಾಗಿ ಮಾಡಿಕೊಂಡು ಮಡಿದು ಬಿದ್ದಿದ್ದ ಅಭಿಮನ್ಯುವನ್ನು ಕಂಡೊಡನೆಯೆ ವೀರ ಸುಯೋಧನನು ಮಗುವಿನಂತೆ ಮುಮ್ಮಲನೆ ಮರುಗಿದನು. **ಕಂಗನೆ ಕನಲು**— ಕಿತ್ತೂರಿನ ದತ್ತವಿಧಾನದಲ್ಲಿ ಆಗ ಧಾರವಾಡದ ಪೊಲಿಟಿಕಲ್ ಏಜಂಟನಾದ ಥ್ಯಾಕರೆ ಸಾಹೇಬನು ಕೈಹಾಕಲು, ಚೆನ್ನಮ್ಮನು ಕಂಗನೆ ಕನಲಿ ಭಾರತದಿಂದಲೆ ಇಂಗ್ಲೀಷರನ್ನು ಹೊಡೆದಟ್ಟುವ ಸಾಹಸವನ್ನು ಕೈಗೊಂಡಳು. **ಸುಟ್ಟು ಬೂದಿಯಾಗು**— ಕಿತ್ತೂರಿನ ಮೊದಲ ಯುದ್ಧದಲ್ಲಿ

ಅನುಟೂರ ಬಾಳಪ್ಪನೆಂಬ ಕೊತ್ತಳದ ಮೇಲಿನ ಕಾವಲುಗಾರನೊಬ್ಬನ ಗುಂಡಿ ನೇಟಿಗೆ ಥ್ಯಾಕರೆ ಸಾಹೇಬನು ಬಲಿಯಾದ ಕೂಡಲೆ ಇಂಗ್ಲಿಷರ ಅಹಂಕಾರ ಅಡವಿಯು ಸುಟ್ಟು ಬೂದಿಯಾಯಿತು. **ಕತಕತ ಕುದಿ**— ಇಂಗ್ಲಿಷರು ಭಾರತೀಯರನ್ನು ಪಶುಗಳಂತೆ ಬೇಟೆಯಾಡಿದ ಪಂಜಾಬದ ಅತ್ಯಾಚಾರವನ್ನು ನೆನಸಿದ ಕೂಡಲೆ ಸಿಟ್ಟಿನಿಂದ ಕತಕತ ಕುದಿಯದ ಭಾರತೀಯನು ಇರುವನೆ? **ಗಟಗಟ ಕುಡಿ**— ತನ್ನ ಗುಡಿಸಲನ್ನು ಅಹಂಭಾವದಿಂದ ಕೊಚ್ಚಿಕೊಂಡು ಹೋಗುತ್ತಿದ್ದ ಸುರಗಂಗೆಯನ್ನು ಕಂಡು ಮುನಿಸುಗೊಂಡ ಜಹ್ನು ಋಷಿಯು ಸುರಗಂಗೆಯನ್ನು ಸಂಪೂರ್ಣವಾಗಿ ಗಟಗಟ ಕುಡಿದು ತೇಗಿದನು. **ಪಾರ್ದಾ ದುರ್ಗ**— ಯುದ್ಧರಂಗದಲ್ಲಿ ಭೀಮಸೇನನು ದುಶ್ಯಾಸನನನ್ನು ನೋಡಿದ ಕೂಡಲೆ ಪಾರ್ದಾದುರ್ಗ (ಹಾರಿಚೀರಿ) ಗದೆಯಿಂದ ಹೊಡೆದು ಕೆಡಹಾಕಿದನು. **ಕೊನೆದು ಕೊಬ್ಬಿ**— ರಾಜಮದದಿಂದ ಕೊನೆದು ಕೊಬ್ಬಿದ ದುರ್ಯೋಧನನು ಸಂಧಾನ ಕ್ಕಾಗಿ ಬಂದಿದ್ದ ಕೃಷ್ಣನನ್ನು ಬಂಧಿಸುವ ಯತ್ನವನ್ನು ಕೈಕೊಂಡನು. **ಭೋರ್ಗರೆದು**— ವರ್ಷಕಾಲದಲ್ಲಿ ಭೋರ್ಗರೆದು ಹರಿವ ನದಿಯನ್ನು ದಾಟಲು ಸುಲಭ ಸಾಧ್ಯವೆ? **ಬಳ್ಳಿವಳ್ಳಿಯಾಗಿ ಬೆಳೆದು**— ಪಾಂಡವ ಕೌರವರಲ್ಲಿ ಬಳ್ಳಿವಳ್ಳಿಯಾಗಿ ಬೆಳೆದ ವೈರತ್ವವು ಮಹಾಭಾರತ ಯುದ್ಧಕ್ಕೆ ಹೇತುವಾಯಿತು. **ಉಕ್ಕು ಸೊಕ್ಕು**— ಉಕ್ಕು ಸೊಕ್ಕಿದ ರಾವಣನು ಸೀತೆಯನ್ನು ಅಪಹರಿಸಿ ತನ್ನ ಕುಲಕ್ಕೆ ಮೃತ್ಯುವಾದನು. **ಮಾಡಿ ನೋಡು**— ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು. **ನೋಡಿ ಮಾಡು**— ನೋಡಿ ಮಾಡುವವನಿಗೆ ಕೇಡು ಬಾರದು. **ಬದುಕಿ ಸಾಯು**—ಅಲ್ಪರ ಸಂಗ ಮಾಡಿ ಅನ್ಯರಿಗೆ ಕೇಡನು ಮಾಡಿ, ಬದುಕಿ ಸಾಯುವವನ ಪಾಡು ನಾಯಿಗೂ ಬೇಡ. **ಸತ್ತು ಬದುಕು**— ಹುಲಿ ಬೇಟೆಗೆ ಹೋಗಿ ಹುಲಿಯ ಬಾಯಲಿ ಬಿದ್ದು ಸತ್ತು ಬದುಕಿದ ಬೇಟೆಗಾರನೀತ.

2

ರಪರಪ ಹೊಡೆ— ಆಚಾರ್ಯರು ಶಿಷ್ಯನಿಗೆ ರಪರಪ ಹೊಡೆದರು. **ಕಿಡಿಕಿಡಿಗುಟ್ಟು**— ಭೀಮನ ಮೂದಲಿಕೆಯನ್ನು ಕೇಳಿ ಸಹಿಸಲಾರದ ದುರ್ಯೋಧನನು ಕಿಡಿಕಿಡಿಗುಟ್ಟುತ್ತಾ ದ್ವೈಪಾಯನ ಸರೋವರದಿಂದ ಮೇಲಕ್ಕೆ ಬಂದನು. **ಗಪಗಪ ತಿನ್ನು**— ಆಹಾರವನ್ನು ಗಪಗಪ ತಿನ್ನುವುದು ಅಜೀರ್ಣಕ್ಕೆ ಮೂಲ. **ಪಿಳಿಪಿಳಿ ನೋಡು**— ಹೆದರಿ ಪಿಳಿಪಿಳಿ ನೋಡುವ ಅಂಜುಬುರು

ಕನ ಮೇಲೆ ಕೈಯೆತ್ತಬಹುದೆ? **ಚಂಗನೆ ನೆಗೆ**— ಹಾವನ್ನು ಕಂಡ ಕೂಡಲೆ ದೂಮನು ಚಂಗನೆ ನೆಗೆದು ಒಂದೇ ಸವನೆ ಓಡಿದನು. **ಧರಪರ ಕಿತ್ತು**— ಕಪಿವೀರರು ವೃಕ್ಷಗಳನ್ನು ಧರಪರ ಕಿತ್ತು ರಾಕ್ಷಸರನ್ನು ಹೊಡೆಯುತ್ತಿದ್ದರು. **ಚರಚರ ಹರಿ**— ಅವನು ಕಾಗದವನ್ನು ಚರಚರ ಹರಿದನು. **ಪಳಪಳ ಬೀಳು** —ಬಿರುಗಾಳಿಗೆ ಸಿಲುಕಿದ ಮರದ ಹಣ್ಣುಗಳು ಪಳಪಳ ಬೀಳುತ್ತವೆ. **ಚಕ್ಕನೆ ಮಿಂಚು**- ಮಿಂಚು ಚಕ್ಕನೆ ಮಿಂಚಿ ಮಾಯವಾಯಿತು. **ಸಳಮಳನೆ ಕುದಿ**- ಸಳಮಳನೆ ಕುದಿಯುವ ನೀರಿಗೆ ಕೈಹಾಕಲು ಸಾಧ್ಯವೆ?

೮

ಬಲಿತ ಬದನೆಕಾಯಿ- ಆ ತುಂಟನ ವಿಚಾರ ನಿನಗೆ ಬೇಡ; ಅವನು ಬಲಿತ ಬದನೆಕಾಯಿ. **ಕಹಿ ವಿಷ**— ಇಟ್ಟೆಯ ಹಣ್ಣು ಕಹಿ ವಿಷವಾಗದೆ ಸಿಹಿ ಸಕ್ಕರೆಯಾಗುವುದೆ? **ಸೆಳ್ಳುಗುರು**- ಅವಳ ಮೊಗವನ್ನು ತಾವರೆ, ಕಣ್ಣನ್ನು ಉತ್ಪಲದಳ, ಧಮ್ಮಿಲ್ಲವನ್ನು ಸೋಗೆ, ಸೆಳ್ಳುಗುರನ್ನು ಕೇದಗೆ, ಹುಬ್ಬನ್ನು ಅಂಗಜನ ಚಾಪ, ದಂತಾಳಿಯನ್ನು ಮುತ್ತು ಕೈಮುಗಿದು ಆರಾಧಿಸುವುವು. **ನಾಗವೇಣಿ**-- ಅರಳುವಂಬುಜವನ್ನು ಕಿಶೋರಿಯ ಮೋರೆ ಹಳಿದರೆ, ನಾಗನನ್ನು ಆಕೆಯ ವೇಣಿ ಕಳವಳಗೊಳಿಸಿತು. ಆ ನಾಗವೇಣಿಯ ತೋಳು ಸೊಂಡಿಲನ್ನು ಭಯಪಡಿಸಿದರೆ, ತೊಡೆ ಬಾಳೆಯ ಸಿಂಡನ್ನು ಬಾಳ್ಗೆಡಿಸಿತು. **ಜೊಟಜೊಟ ಹುಳಿ**--- ಆ ಜೊಟಜೊಟ ಹುಳಿ ಮಾವನ್ನು ನೀನು ಹೇಗೆ ತಿಂದೆ?

೯

ಮುತ್ತಿನಂತೆ ಮಾತು. ಮುತ್ತಿನಂತೆ ಹೊಳಪು. ಬಂಗಾರದಂತೆ ಮಾತು. ಬಂಗಾರದಂತೆ ಬೆಲೆ. ಬಂಗಾರದಂತೆ ಕಾಂತಿ. ಹಿಟ್ಟು ಚೆಲ್ಲಿದಂತೆ ಬೆಳದಿಂಗಳು. ಕೋಗಿಲೆಯಂತೆ ಸುಸ್ವರ. ಕೋಗಿಲೆಯಂತೆ ಕಂಠ. ಬೆಂಕಿಯಂತೆ ಉರಿ, ಕತ್ತೆಯಂತೆ ಮಂದ. ಕತ್ತೆಯಂತೆ ಹೆಡ್ಡ. ಮುದ್ದೆಯಂತೆ ಮೃದು. ಖಾರದಂತೆ ಉರುಪು. ಆಕಾಶದಂತೆ ವಿಶಾಲ. ಮಂಗನಂತೆ ಚಪಲ.

೧೦. ಜೋಡು ನುಡಿಗಳು.

ಕೆರೆ-ಬಾವಿ--- ಕೆರೆ-ಬಾವಿಗಳ ಮುಂದಿನ ಅರವಟ್ಟಿಗೆಯ ಸ್ಥಾನವೇನು? **ಚಾರು-ಚೂರು**--- ಚಾರು-ಚೂರುಗಳನ್ನು ಕದ್ದರೂ ಕಳ್ಳನೆಂಬ ನಾಮಕರಣ ಅಂಟದೆ ಹೋದೀತೆ? **ಟೊಳ್ಳು-ಗಟ್ಟಿ**--- ಇಂದಿನ ವಿದ್ಯಾಭ್ಯಾಸದಿಂದ ಭಾರತದ ನಾಗರಿಕರು ತಮ್ಮ ಜೀವನವನ್ನು ಟೊಳ್ಳು-ಗಟ್ಟಿ ಜೀವನ ನಾಟಕ

ವಾಗಿ ಮಾರ್ಪಡಿಸಿಕೊಂಡಿದ್ದಾರೆ. **ಪ್ರೀತಿ-ವಿಶ್ವಾಸ**— ನಶ್ವರವಾದ ಈ ಬಾಳುವೆಯಲ್ಲಿ ನಾಲ್ಕು ಜನರ ಪ್ರೀತಿ-ವಿಶ್ವಾಸಗಳಿಗೆ ಪಾತ್ರನಾಗಿ ಜನ್ಮಸಾರ್ಥಕ ಪಡಿಸಿಕೊಳ್ಳುವುದು ಲೇಸು. **ವೇದ-ಶಾಸ್ತ್ರ**— ಬಾಯಲ್ಲಿ ವೇದ-ಶಾಸ್ತ್ರ ಕಾರ್ಯದಲ್ಲಿ ದಗೆ-ಮೋಸ. **ನಯ-ಭಯ**— ನಯ-ಭಯವಿಲ್ಲದ ನರನ ಬಾಳು ವಾನರನ ಸಾಲು. **ಗೊತ್ತು-ಗುರಿ**— ಗೊತ್ತು-ಗುರಿಯಿಲ್ಲದೆ ಅಲೆವ ಹಡಗು ತೀರವನ್ನು ಸೇರುವುದೆ? **ಸೀರೆ-ಕುಪ್ಪಸ**— ಸೀರೆ-ಕುಪ್ಪಸಗಳ ಪ್ರದರ್ಶನಕ್ಕಾಗಿ ಗೃಹವನ್ನುಳಿದು ಬೀದಿವರಿವ ಗೃಹಿಣಿಯರಿಗೆ ನಮ್ಮಲ್ಲಿ ಬರಗಾಲವೆ? **ಯಂತ್ರ-ತಂತ್ರ**— ಯಂತ್ರ-ತಂತ್ರಗಳಿಂದ ಜನರನ್ನು ಮರುಳು ಮಾಡುವ ಮಂತ್ರಗಾರನ ನೆರೆ ಸಲ್ಲ. **ಪೂಜೆ-ಪುನಸ್ಕಾರ**— ಭಗವಂತನ ಧ್ಯಾನಕ್ಕೆ ದೇವಸ್ಥಾನದ ಕಲ್ಲಮೂರ್ತಿಯ ಮುಂದೆ ಪೂಜೆ-ಪುನಸ್ಕಾರ ಸಲ್ಲಿಸುವ ಸೋಗು ಬೇಕೆ? **ಮನೆ-ಮಾರು**— ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮನೆ-ಮಾರು ಕಳೆದುಕೊಂಡವರು ಬೇರೆಯೆ; ಇಂದು ಅಧಿಕಾರ ಪೀಠದಲಿ ರಾರಾಜಿಸುವವರು ಬೇರೆಯೆ. **ತಾಳ-ಮೇಳ**— ತಾಳ-ಮೇಳವಿಲ್ಲದ ದಾಂಪತ್ಯವು ತಾಳ ತಪ್ಪಿದ ಕುಣಿಕೆಯಂತೆ ತಳವೆಳಗಾಗುವುದರಲ್ಲಿ ಸಂಶಯವಿದೆಯೇ?

೧೧.

ಅಂದಗೆಡು— ಪಾಶ್ಚಾತ್ಯ ಅನುಕರಣೆಯ ಅಲಂಕಾರದಿಂದಾಗಿ ಆ ರಂಭೆಯ ಚೆಲ್ವಿಕೆಯೇ ಅಂದಗೆಟ್ಟು ಹೋಗಿದೆ. **ಅಂದಗೆಡಿಸು**— ಇಂದು ನೀನ್ ಆ ಪಾಂಡುಪುತ್ರರನ್ ಅಂದಗೆಡಿಸದೆ ಬಿಟ್ಟೆಯಾದರೆ ಮುಂದೆ ಬಿಟ್ಟತು ರಾಜಕಾರಿಯಮ್ ಎಂದನ್ ಆ ಶಕುನಿ. **ಅಂದಗೇಡಿ**— ಅಂದನಿಸಿಕೊಂಬ ಅಂದಗೇಡಿಯ ಮನೆ ಎಲ್ಲಿ? **ಅಂದಗೆಯ್**— ಅಂದಗೆಯ್ದ ಅಂಗನೆಯನ್ನು ಅಂಗನೆಯರು ವೈವಾಹ ಮಂಟಪಕ್ಕೆ ಕರೆತಂದರು. **ಅಳಿಗಂಡು**— ಹೆಂಡತಿ ಹೆಗ್ಗಡಿತಿಯಾದರೆ ಅಳಿಗಂಡ ಮೂಳನಾಯಿಗಿಂತ ಕಡೆ. ಅಳಿಗಂಡು ಅಳವಿಗೆ ಹೋದಾನೆ? **ಅಳ್ಳಾಟ**— ಬಳ್ಳಿಯ ಅಳ್ಳಾಟವು ಕೈಯೆತ್ತಿ ಕರೆವಂತೆ ಮನೋಜ್ಞನವಾಗಿತ್ತು. **ಎಡೆಯಾಟ**— ಎಡೆಯಾಡಿಸಿ ತಾಕೊಡವ ಲೋಭಿಯ ಮಾತು ಕೊಡಲಿಯ ಗಾಯ. ಹಾದರಕೆ ಎಡೆಯಾಟವ ಆಸೆ. ಹುಚ್ಚರ ಎಡೆಯಾಟಕ್ಕೆ ಎಲ್ಲಿ ಇದೆಯೆ? **ಏರಾಟ**— ಕುದುರೆ ಏರಾಟದಲ್ಲಿ ಶಿವಾಜಿಗೆ ಸರಿದೊರೆ ಯಾರು? **ಒಡನಾಟ**— ಬಲ್ಲವರ ಒಡನಾಟ ಬೆಲ್ಲವನ್ನು ಮೆದ್ದಂತೆ; ಅಲ್ಲದಹುದು ಎಂಬ ಅಜಾಣನ ಒಡನಾಟ ಕಲ್ಲು ಹಾದಂತೆ. **ಕಳ್ಳಾಟ**— ಕಳ್ಳಾ

ಟದಲ್ಲಿ ರಾಮನು ದೂಮುನಿಗಿಂತಲೂ ಪಳಗಿದ ಕೈ. **ಕೂಸಾಟ**– ಪಡೆದ ಜನನಿಯರು ಕೂಸಾಟಕ್ಕೆ ಮರುಳಾಗದೆ ಉಳಿಯುವರೆ? ಮಕ್ಕಳ ಕೂಸಾಟವೆ ತಾಯಂದಿರಿಗೆ ಮೆಚ್ಚು. **ಕೊಂಡಾಟ**– ಅರಸನು ಓಲಗಕ್ಕೆ ಬರಲು ವಂದಿ, ಮಾಗಧ, ವೈತಾಲಿಕ, ಪ್ರಬೋಧ, ಸೂತ, ಕೀರ್ತಿಪನರ ಸಮೂಹದ ಕೊಂಡಾಟವು ಮುಗಿಲನ್ನು ಮುಟ್ಟಿತು. **ಬೊಬ್ಬಾಟ**— ತಬ್ಬಲಿಯ ಬೊಬ್ಬಾಟಕ್ಕೆ ಹೆಬ್ಬುಲಿಯು ಹೆದರುವುದೆ? **ಚಯ್ಯಾಟ**— ನಲ್ಲನಲ್ಲೆಯರ ಚಯ್ಯಾಟದಲ್ಲಿ ಕೂಸು ಮರುಗಿತು. **ಚಲ್ಲಾಟ**-– ಬೆಕ್ಕಿಗೆ ಚಲ್ಲಾಟ, ಇಲಿಗೆ ಪ್ರಾಣ ಸಂಕಟ. **ಆರ್ಭಟ**— ರಾವಣನ ಆರ್ಭಟವನ್ನು ಕೇಳಿದ ಸುರರು ಕೈಕಾಲು ಕಳೆದುಕೊಂಡರು. **ತೋಳಾಟ**– ಎಳೆಯವಸೊಡನೆ ತೋಳಾಟಕ್ಕೆ ಎಪ್ಪತ್ತರವನು ನಿಂತರೆ ಒಪ್ಪೀತೆ? **ನೀರಾಟ**-– ಆನೆ ನೀರಾಟದಲಿ ಮೀನ ಕಂಡು ಅಂಜುವುದೆ? **ಬೂತಾಟ**-– ದುಷ್ಟರ ಬಾಯಿಂದ ಹೊರಡುವ ಬೂತಾಟ (ಅಶ್ಲೀಲ ಮಾತು)ಕ್ಕೆ ಸಜ್ಜನರು ಹೆದರಲೇ ಬೇಕು. **ಮರುಳಾಟ**– ಮರುಳನ ಮರುಳಾಟಕ್ಕೆ ಮರುಗುವವರೆ ವಿರಳ. **ಮಾರಾಟ**– ಮಾರಾಟದ ಒಡವೆಯನ್ನು ಪಡೆಯಲು ದಿನ ಕೇಳಬೇಕೆ? **ಮುಚ್ಚಾಟ**– ಅನಿಮಿಷರಿಗೆ ಕಣ್ಣು ಮುಚ್ಚಾಟ ಆಡಲು ಸಾಧ್ಯವೆ? **ಸೂಸಾಟ**– ಮದುವೆಯ ಚಪ್ಪರದಲ್ಲಿ ಸೇಸೆಯ ಸೂಸಾಟದಲ್ಲಿ ವಧುವರರಿಗೆ ಕಣ್ದೆರೆಯುವುದೆ ಅಸಾಧ್ಯವಾಯಿತು. **ಸೋರಾಟ**– ಮದವೇರಿದಾಗ ಆನೆಗಳ ಗಂಡಸ್ಥಲಗಳೊಳಗಿಂದ ಮದೋದಕದ ಸೋರಾಟವು ಸರಾಗವಾಗಿ ಸಾಗುತ್ತದೆ. **ಹೋರಾಟ**— ತೇರಾಟಕ್ಕೆ ಹೋಗಿ ಹೋರಾಟ ಮಾಡಿಕೊಂಡ. ನೀರುಳ್ಳಿಯುವನ ಸಂಗಡ ಹೋರಾಟಕ್ಕೆ ಹೋದರೆ ಮೋರೆಯೆಲ್ಲ ನಾರದೆ'

೧೨. ಪಡೆನುಡಿಗಳು.

ಮೂಗುಮುರಿ— ಹೇಸಿಗೆಯನ್ನು ಕಂಡು ಮೂಗುಮುರಿದುಕೊಂಡರೆ ನಾರುವುದು ತಪ್ಪೀತೆ? **ತಲೆಹಾಕು**— ಯಾವ ಕಾರ್ಯಕ್ಕಾದರೂ ಫಕ್ಕನೆ ತಲೆಹಾಕಬಾರದು. **ಕೈಗೆ ಕೈಹತ್ತು**-– ಶ್ರೀ ಕೃಷ್ಣನು ಪಾಂಚಜನ್ಯವನ್ನು ಊದಿದ ಕೂಡಲೆ ಕುರುಕ್ಷೇತ್ರದಲ್ಲಿ ಪಾಂಡವರ ಪಕ್ಷದವರಿಗೂ ಕೌರವರ ಪಕ್ಷದವರಿಗೂ ಕೈಗೆ ಕೈಹತ್ತಿತು. **ಕೈಮೀರು**— ಕೆಯ್ಮೀರಲ್ ಅರಿಯದೆ, ಸಂಧಿಗೆ ಅವನೀಶ್ವರರು (ಭೀಮನ) ವಶವಾಯ್ತು, ರಾಮುವಿನ ರೋಗವು ವೈದ್ಯರ ಕೈಮೀರಿತು. **ಹೊಳೆಯಲ್ಲಿ ಹೋಮ**— ರಾವಣನ ಪಾಲಿಗೆ

ವಿಭೀಷಣನ ನೀತಿಯು ಹೊಳೆಯಲ್ಲಿ ಹೋಮವಾಯಿತು. **ಮಾರು ಹೋಗು** ಪಂಚವಟಿಯಲ್ಲಿ ಮಾಯಾ ಮಾರೀಚನ ಹೊಮ್ಮರಿ ಕುಣಿತಕ್ಕೆ ಮಾರು ಹೋದ ಸೀತೆಯು ಆ ಮೃಗವನ್ನು ತಂದುಕೊಡಬೇಕೆಂದು ರಾಮನೊಡನೆ ಚಂಡಿ ಹಿಡಿದಳು. **ಕೈಕೂಲಿ**--- ಕೈಕೂಲಿಕಾರರು ಎಷ್ಟು ದುಡಿದರೂ ಅವರಿಗೆ ಸಿಗುವ ಕೈಕೂಲಿಯಿಂದ ಅವರ ಸಂಸಾರವನ್ನು ಪೋಷಿಸುವುದೇ ಕಷ್ಟವಾಗುವುದು. **ಕೆನ್ನೆ ಉಬ್ಬಿಸು**— ಗಂಡನು ಜೋರು ಮಾಡಿದುದರಿಂದ ಹೆಂಡತಿಯು ಕೆನ್ನೆ ಉಬ್ಬಿಸಿ ನಾಲ್ಕು ದಿನ ಮೌನವ್ರತವನ್ನಾಚರಿಸಿದಳು. **ಕೈ ಬೆಚ್ಚಗೆ ಮಾಡು**– ಅಧಿಕಾರಿ ವರ್ಗಕ್ಕೆ ಕೈ ಬೆಚ್ಚಗೆ ಮಾಡುವುದರಿಂದ ನಾವು ನಮ್ಮ ಯಾವ ಕೆಲಸವನ್ನಾದರೂ ಸಾಧಿಸಿಕೊಳ್ಳಬಹುದು. **ನಿವಾಳಿಸಿ ಒಗೆ**— ಅಂಜಿದ ಮಕ್ಕಳಿಗೆ ಓಕುಳಿ ನೀರನ್ನು ನಿವಾಳಿಸಿ ಒಗೆಯುವುದು ನಮ್ಮಲ್ಲಿ ರೂಢಿಯಾಗಿದೆ. **ನಡು ನೀರಿನಲ್ಲಿ ಕೈಬಿಡು**— ಕಾಡಿನಲ್ಲಿ ನಳ ಚಕ್ರವರ್ತಿಯು ಮಲಗಿದ್ದ ಮಡದಿಯನ್ನು ಬಿಟ್ಟು ಓಡಿದುದು ನಡು ನೀರಿನಲ್ಲಿ ಕೈಬಿಟ್ಟಂತಾಯಿತು. **ತಲೆ ಕೆದರಿಕೊಳ್ಳು**— ಕಷ್ಟಕಾಲದಲ್ಲಿ ಎಷ್ಟೊಂದು ತಲೆ ಕೆದರಿಕೊಂಡರೂ ಪಾರಾಗುವ ದಾರಿ ಕಾಣುವುದು ಬಹು ದುರ್ಲಭ. **ಉಸುಬಿನ ಮೇಲೆ ಮನೆ ಕಟ್ಟು**— ಸಜ್ಜನರನ್ನು ಕಷ್ಟಕ್ಕೆ ಗುರಿಪಡಿಸಬೇಕೆಂದು ದುರ್ಜನರು ಎಷ್ಟು ಪ್ರಯತ್ನಿಸಿದರೂ ಅದು ಉಸುಬಿನ ಮೇಲೆ ಮನೆಕಟ್ಟುವುದೇ ಸರಿ. **ಕಿವಿಯ ಮೇಲೆ ಕೈಯಿಟ್ಟುಕೋ**--- ಬಡವರು ದಾರಿದ್ರ್ಯ ಪಂಕದಲ್ಲಿ ಮುಳುಗಿ ಗೋಳಿಡುವುದನ್ನು ಕೇಳಿಯೂ ನಮ್ಮ ಶ್ರೀಮಂತರು ಕಿವಿಯ ಮೇಲೆ ಕೈಯಿಟ್ಟುಕೊಳ್ಳುವುದು ರೂಢಿಯಾಗಿದೆ. **ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡು**— ಧೂರ್ತ ಜಯಚಂದ್ರನ ಸೈನಿಕರು ವಿವಾಹ ಮಂಟಪವನ್ನು ಕಣ್ಣಲ್ಲಿ ಎಣ್ಣೆ ಹಾಕಿಕೊಂಡು ನೋಡು (ಕಾಯ) ತ್ತಿದ್ದರೂ ಪೃಥ್ವಿರಾಜನು ಅವರಿಗೆ ಚೆನ್ನಾಗಿ ಕೈಕೊಟ್ಟು ಸತೀ ಸಂಯುಕ್ತೆಯನ್ನು ಎತ್ತಿಕೊಂಡು ಹಾರಿಬಿಟ್ಟನು.

೧೩. ಶಬ್ದ ಸಂಗ್ರಹ

ಹಿಗ್ಗು--- ಹಿಗ್ಗುವಿಕೆ. ಹಿಗ್ಗಿಸು. ಹಿಗ್ಗಲಿಸು. ಹಿಗ್ಗಿಕೆ. ಹಿಗ್ಗಾಳು (ಹಿಗ್ಗು+ಆಳು– ದೃಢಾಂಗ). ಹಿಗ್ಗುದಲೆ. **ಪಳಿ**— ಪಳಿವು, ಹಳಿವು, ಪಳಿಪು. ಪಳಿಕೆಯ್, ಪಳಿಪೊರ್ದದ. ಪಳಿವೊರಿಸು, ಪೆಂಪಳಿಕೆಯ್. **ಸಿಗಿ**--- ಸಿಗಿಸು, ಸಿಕ್ಕಿಸು, ಸಿಗಿತ, ಸಿಗುರಿ (ಚಿವುರಗಾಯ), ಸಿಗುರು (ಸಿಬರು), ಸಿಗುಳು.

ಬೇ— ಬೇಯು, ಬೇಗೆ, ಬೆಯ್ಯು, ಬೇಗುದಿ, ಬೆಂಕಿ, ಬೆಂಕೆ, ಬೆಂಗೆ, ಬೆಂಕಿಕಡ್ಡಿ, ಬೆಂಕಿಪೆಟ್ಟಿಗೆ, ಬೆಂಕಿಬೀಳು, ಬೆಂಕಿಯಾಗು, ಬೆಂಕಿ ಹಚ್ಚು, ಬೆಂಕಿ ಹತ್ತು, ಬೆಂಕಿ ಹಿಡಿ, ಬನವೆಂಕೆ, ಮುಸ್ನೀರ್ವೆಂಕೆ, ಬೆಂಗೆ ಮಾಡು, ಬೇಗುದಿಗೊಳ್ಳು, ಬೇಗೆ ಗಿರ್ಚು, ಬೇಗೆಗೊಳ್ಳು, ಬೇಗೆ ಬೀಳು, ಬೇಗೆ ಹತ್ತು. **ಪಿಡಿ**— ಪಿಡಿಯಿಸು, ಪಿಡಿಸು, ಪಿಡಿಹ, ಪಿಡಿಪು, ಪಿಡಿತೆ, ಪಿಡುಗು, ಪಿಡುಗ, ಪಿಡಗು, ಪಿಟ್ಟು, (ಪಿಟ್ಟು ಪಿಡುಗನೆ ಸಾಯು. ಪಿಟ್ಟು ಪಿಡುಗಾಗಿ ಸಾಯು). ಪಿಡಿಪಿಡಿದು, ಪಿಡಿತರ್, ಪಿಡಿ ತರಿಸು, ಪಿಡಿ ಪಡೆ, ಪಿಡಿ ಪೆರು, ಇತ್ತರಂಬಿಡಿ, ಕಪ್ಪಂಬಿಡಿ, ಕಾಲ್ವಿಡಿ, ಕೆಯ್ಯುವಿಡಿ, ಕೆಯ್ವಿಡಿ, ಕ್ರಮವಿಡಿ, ತಡಿಪಡಿ, ದೀವಿಗೆವಿಡಿ, ಪಜ್ಜೆವಿಡಿ, ಪಂಜುವಿಡಿ, ಪಸುರ್ವಿಡಿ, ಬಟ್ಟೆವಿಡಿ, ಬಂದಿವಿಡಿ, ಬಳಿವಿಡಿ, ಬಿಲ್ವಿಡಿ, ಸಾಲ್ವಿಡಿ, ಸೆರೆಪಿಡಿ, ಪಿಡಿದಾಡು, ಒಪ್ಪಿಡಿ, ಒರ್ಪಿಡಿ, ಓಜೆವಿಡಿ, ಕೆಯ್ಪಿಡಿ, ಪರಿವಿಡಿ, ಪಿಡಿಕೆಯ್ಸು, ಪಿಡಿಗುದುರೆ, ಪಿಡಿ ಪಡು, ಪಿಡಿವಡೆ. **ನಾಣ್ಚು**— ನಾಚು, ನಾಣ್, ನಾಣ್ಚಿಸು, ನಾಚಿಸು, ನಾಚಿಕೆ, ನಾಂಚಿಕೆ, ನಾಚಿಗೆ, ನಾಂಚು, ನಾಚಿಕೆಗಿಡ, ನಾಚಿಕೆಗೆಡು, ನಾಚಿಕೆಗೆಲಸ, ನಾಚಿಕೆಗೇಡಿ, ನಾಚಿಕೆಗೊಳ್ಳು, ನಾಚಿಕೆಯ ಬಿಡಿಸು, ನಾಚಿಗೆ ಕೆಡಿಸು, ನಾಚಿಗೆಗೇಡು, ನಾಣಿಲಿ, ನಾಣಿಲಿತನ, ನಾಣಿಲಿವೆಣ್ಣು, ನಾಣೆಡೆ, ನಾಣ್ಗೆಡಿಸು, ನಾಣ್ಗಿಡಿಸು, ನಾಣ್ಗಿಡು, ನಾಣ್ಗೆಡಿಕ, ನಾಣ್ಗೊಳ್ಳು, ನಾಣ್ಬಳೆ, ನಾಣ್ಬಾಣ, ನಾಣ್ಮಾಣ್ಚು, ನಾಣ್ಬಿಡು, ನಾಣ್ಬೆರಸು, ನಾಣ್ಮೇಸಲು, ನಾಚಿಕೆಗೇಡಿತನ, ನಾಣು, ನಾಣಲ (ನಾಣ್+ಅಲ–ಅಲ್ಲದವ; ನಾಚಿಕೆಯಿಲ್ಲದವ.) **ಹೊರು**— ಹೊರಿಸು, ಹೊರೆ, ಹೊರೆಕಾ(ಗಾ)ರ, ಹೊರಿಗೆ, ಹೊರಿಗೆವಾಳ, ಹೊರೆಗಟ್ಟು, ಹೊರೆಗಡಿ, ಹೊರೆಯಾಳು, ಹೊತ್ತ ಬೆಲೆ. **ಸೋಗು**— ಸೋಗು, ಸೋಗೆ, ಸೋಗಿಲು, ಸೋಗು ಮಾಡು, ಸೋಗು ಹಾಕು, ಸೋಗೆಗಣ್ಣು, ಸೋಗೆದುರುಂಬು. **ಬಲಿ**— ಬಲಿಸು, ಬಲು, ಬಲುಮೆ, ಬಲುವು, ಬಲುಹು, ಬಲುಮೆಗಾರ, ಬಲಿತ. **ಹೆಣೆ**— ಹೆಣತ, ಹೆಣಪು, ಹೆಣಲು, ಹೆಳಲು, ಹೆಣಿಕೆ, ಹೆಣಿಗೆ, ಹೆರಳು, **ಸೆಳೆ**— ಸೆಳ, ಸೆಳತ, ಸೆಳವು, ಸೆಳಸು, ಸೆಳೆಮಿಂಚ, ಸೆಳೆಸೀರೆ, ಸೆಳೆಸೂರೆ. **ಬೆದರು**— ಬೆದರಿಕೆ, ಬೆದರಿಸು, ಬೆದರಿಸುವಿಕೆ, ಬೆದರ್ಕೆ, ಬೆದರು, ಬೆದರಟ್ಟು. **ಹುಸಿ**— ಹುಸಿಗ, ಹುಸಿಗಾರ, ಹುಸಿಗಾಯಿ, ಹುಸಿಗುಂಡು, ಹುಸಿಗೆಯ್, ಹುಸಿನಗು, ಹುಸಿನುಡಿ, ಹುಸಿಫಲ, ಹುಸಿಮುದ್ದು, ಹುಸಿಮಾತು, ಹುಸಿಹೂ. **ರಾವು**— ರಾಪು, ರಾವುತ, ರಾವುತಿಕೆ, ರಾವ್ತ. **ಹರಿ**— ಹರಕ, ಹರಕೆ, ಹರಕು,

ಹರಿಕು, ಹರುಕು, ಹರ್ಕು, ಹರಿತ್ತ, ಹರತ, ಹರ್ತ, ಹರದು, ಹರಿಸು, ಹರಿವು, ಹರಿವೆ, ಕಚ್ಚಿಹರಕ, ಸೋಟಿಹರಕ, ಹರಕುಅರಿವೆ, ಹರಕುಜಾಜೀಮು, ಹರಕು ತೊಗಲು, ಹರಿಗಲ್ಲು, ಹರಿಗವಿ, ಹರಿದಲೆ, ಹರಿಗೋಲು, ಕಿವಿಹರಿಕಿ, ಹರು, ಹರುಕುಗಡ್ಡ, ಹರುಕುಗಿವಿ, ಹರುಕು ತುಟಿ, ಹರುಕು ಮೂಗು, ಹರುಹೆ, ಹರಕಬರಕ. **ಮಿಗು**— ಮಿಕ್ಕು, ಮಿಗಿಸು, ಮಿಗಸು, ಮಿಗಿಲು, ಮಿಗಲು, ಮಿಕ್ಕಾಗು, (ಜೀವರತ್ನಕ್ಕೆಣೆಯೇ ಮಿಕ್ಕಾದ ಪಾಷಾಣಂ?). ಮಿಗಿಲಾಗು, (ಮಿಗಿಲಾದವನ ಹತ್ತಿರ ಹಗೆ ಸಲ್ಲ, ನಗೆಗಾರನ ಹತ್ತಿರ ವೈತ್ರಿ ಸಲ್ಲ), ಕೆಯ್ಮಿಗು, (ಆಹವದೋಹಲಂ ತನಗೆ ಕೆಯ್ಮಿಗೆ), ಮಿಗೆ, (ಮಿಗೆ ನುಡಿಯು ಬಲ್ಲಾತನು- ವಾಗೀಶ-ವಾಕ್ಪತಿ). ಮಿಗೆವೋಗು. **ಬರೆ**-- ಬರ, (ಬನವಾಸೆಗೆ ಹೋದರೂ ಬರಗಾಲ ತಪ್ಪಲಿಲ್ಲ), ಬರಟಿ, ಬೆರಟಿ, ಬೆರಣಿ, (ಬಿದ್ದ ಬಳೀಲಿ ಬೆರಣಿ ಆಯುಬೇಕು, ಇದ್ದ ಬಳೀಲಿ ಇರಬೇಕು), ಬೆಣ್ಣಿ, ಬರಡು, ಬಡ್ಡು, (ಬಡ್ಡು ಕುದುರೆಗೆ ಬಡತವೇ ಮದ್ದು), ಬರಪ, ಬರಲು, ಬರಹು, (ಮಳೆಯ ಬರಹಿನಲ್ಲಿ ಅವಗ್ರಾಹ ಅವಗ್ರಹ ಎನಿಸುಗು), ಬರಿ, ಬರು, ಬರೆ, ಬರತು, (ಬರ ಬರತು ಹೋಯಿತು), ಬರಗಾಲ, (ಅಧಿಕಮಾಸ ಬರಗಾಲದಲ್ಲಿ ಬಂದ ಹಾಗೆ), ಬರಗೆಡು, (ಬರಗೆಟ್ಟ ಬಡ ಹುಡುಗರು, ಬರಗೆಟ್ಟ ದೇವರಿಗೆ ಪರ ಮಾಡಿದ ಹಾಗೆ), ಬರಬರು (ಬರ ಬಂದರೆ ಊರ ಬಿಡಬಾರದು, ದಂಡು ಬಂದರೆ ಊರಲ್ಲಿರಬಾರದು), ಬರ ಬೀಳು, ಬರವರಾಗು, ಬರವೇಳು, ಬರಸಿಡಲು, ಬರಡ, ಬರಡಿ, ಮನಬರಡ, ಬಟ್ಟ, (ಬಟ್ಟಬಯಲು, ಬಕ್ಕ, (ಬಕ್ಕಂಬಯಲು), ಬಟಾ, ಬಟ್ಟ, ಬಟ್ಟತಲೆ, (ಬಟ್ಟತಲೆಯವನಾದರೆ ಹೆಚ್ಚಿಗೆ ಹೊತ್ತಾನೇ?), ಬರತಾಕಳು, ಬರಡು ಕೆಲಸ, ಬರಡುಪಶು, ಬರಡುಮನ, ಬರಡೆಮ್ಮೆ, (ಬರಡೆಮ್ಮೆಗೆ ಕರಡು ಹುಲ್ಲು), ಬರಲಾಗು, ಬರಲುಮಾಡು, ಬಕ್ಕಟ, (ಬಕ್ಕಟ ಬಯಲು), ಬರಿತಾರಿಗ, ಬರಿಬಾಯಿ, ಬರಿಬೇಟೆ, ಬರಿಮಾಯೆ, ಬರಿಮೆಯ್, ಬರಿವಾತುಗಾರ, ಬರುಗೆಂಡ, (ಬರುಗೆಂಡದೊಳು ಸುಟ್ಟ ಆಡಗು), ಬರುವ (ವ್ಯರ್ಥ ಮನುಷ್ಯ), ಬರೆಕೂಟ, (ಬರೆಕೂಟ ತನ್ನನ್ನೆ ಇರಿದು ಕೊಂಡಂತೆ), ಬರೆಗುಡುಹು, ಬರೆವಾತು, ಬರೆಯೊಡಲು, (ಜ್ಞಾನವುಳ್ಳವರೊಡಲು ಭಾನುಮಂಡಲದಂತೆ; ಜ್ಞಾನವಿಲ್ಲದರ ಬರೆಯೊಡಲು ಅಗಸರ ಬಾನೆಯಂತಕ್ಕು), ಬರೇ ಬಯ್ಲು, ಬರ್ಕಟ, (ಬರ್ಕಟ ಬಯಲು).

ಹಾಸು— ಹಾಸಿಗೆ, ಹಾಸಿಕೆ, ಹಾಸುಗೆ, ಹಾಸು, ಹಾಸ, ಹಾಸೆ, ಹಸೆ,

(ಹಾದರಗಿತ್ತಿಯ ಕಾಲು ಹಸೆಯ ಮೇಲೆ ನಿಲ್ಲದು. ಬಿಸಿಲಲ್ಲಿ ಹೋಗುವಾಗ ಹಸೆ ಸುದ್ದಿ ಯಾಕ?) ಹಸೆಜಗಲಿ, ಹಸೆಮಣೆ, ಹಾಸಗಲ್ಲು, ಹಾಸುಗಲ್ಲು, (ಹಾಸಿಗೆ ಹಾಸಲಿಕ್ಕೆ ತಿಳಿಯದವಳು ದೋಸೆ ಮಾಡ್ಯಾಳೇ?) (ಹಸಿವೆಗೆ ಬಾಯ್ಸವಿ ಬೇಡ, ನಿದ್ದೆಗೆ ಹಾಸಿಕೆ ಬೇಡ.) (ವಾಸ ತಪ್ಪಿದರೂ ಹಾಸಲಿಕ್ಕೆ ಸಿಗಲಿಲ್ಲ). ಹಾಸು ಹಾಸು, (ಹಾಸುವಿಲ್ಲದ ನಿದ್ರೆ, ಪ್ರೂಸುವಿಲ್ಲದ ವಿೂಹ, ಬಾಸೆಯಿಲ್ಲದನ ಗೆಳೆತನ ಮೋಟಕೆಯ್ ಬೀಸಿ ಕರೆದಂತೆ), ಹಾಸರೆಗಲ್ಲು, ಹಾಸಿಕ್ಕು, ಹಾಸಿನ ನಲಿ, ಹಾಸುಗೆಯ್, ಹಾಸುಮಣೆ, ಹಾಸು ಹೊಕ್ಕು, (Warp and woof). **ಮೆರೆ**— ಮೆರೆಸು, ಮೆರೆಯಿಸು, ಮೆರಿಸು, ಮೆರದು, ಮೆರೆದು, ಮೆರಸು, ಮೆರಪು, ಮೆರಹು, ಮೆರಯಿಸು, ಮೆರವಣಿ, ಮೆರವಣಿಗೆ, ಮೆರ, (ಮೆರಪೀಡ, ಮೆರಮಿಂಡದೇವ). **ಬಡಿ**— ಬಡ, ಬಡಿಕ, ಬಡತ, ಬಡಿತ, ಬಡಿ, ಬಡಿಗೆ, ಬಡಿಕೆ, ಬಡಿಗ, ಬಡೆ, ಬಡು, ಬಡಕ, (ಬಡಿಯೋನ ಹತ್ತಿರ ಹೋದರೆ ಬಡತನ ಹೋದೀತೇ?) ಬಡಿದಾಟ, ಬಡಿದಾಡು, (ಬಡಿದಾಡುವವರ ಹತ್ತಿರ ಬಡಿವಾರವೇ?) ಬಡಿಕೊಳ್ಳು, ಬಡಿಕೋಲು, ಬಡಿಗಲ್ಲು, ಬಡಿಬಡಿಗೆ, ಬಡಿವಡೆ, ಬಸಹೋರಿ, ಕೂಳ್ಬಡಿಕ, ಕೂಳ್ಬಡಿಕತನ, ತೊತ್ತುಬಡಿಕ, ಬಾಯ್ಬಡಿಕ, ಬಾಯ್ಬಡುಕ, ಬಾಯಿಬಡಕ, ಬಾಯಿಬಡಿಕ, ಬಾಯಿಬಡುಕ, (ನಾಲ್ವತ್ತರ ಮೇಲೆ ನಡಿಕೆ, ಎಂಬತ್ತರ ಮೇಲೆ ಬಡಿಕೆ, ತೊಂಬತ್ತಕ್ಕೆ ಶಯನ, ನೂರಕ್ಕೆ ಪಯಣ.) ಕುಂಚವಡಿಗ, ಸದೆಬಡಿಗ, ಎದೆಬಡಕ, ಬೂದಿಬಡಕ, ಬಡಗಿ, ಬಡಗಿತನ, ಬಡಿಗಿ, ಬಡಿಗಿತನ, (ಬಡಿಗೆಯಿಲ್ಲದ ಚಿನ್ನ ಕಡಗವಾಗುವದೇನೋ?) ಬಡು, (ಅತ್ತಿತ್ತಲ ಮಾರಿ ಬಂದು ಅತ್ತೆಯ ಬಡುಕೊಂಡು ಹೋಗಲಿ), ಬಡುಕತನ, ಬಡೆಗೋಲು.

ವಿೂ— ವಿೂಯು. ವಿೂಯಿಸು. ವಿೂಹ. ವಿೂಸು. **ಹುಳಿ**— ಹುಳ. ಹುಳಕಲು. ಹುಳಕು. ಹುಳುಕು. ಹುಳತು. ಹುಳವು. ಹುಳುಕಲು. ಹುಳುತು. (ಹುಳ ತಿಂದ ಅಕ್ಕಿ ಆದರೆ ಮಳೆಗೆ ನೆನೆಯದೇ?) ಹುಳ ಹುಪ್ಪಡಿ. ಹುಳಕು ಗೋಡೆ. ಹುಳುಕಡಿ. ಹುಳುಕಡ್ಡಿ. ಹುಳುಬೀಳು. (ಹಣವಿದ್ದರೆ ಹುಳುಕು ಮುಚ್ಚುತ್ತದೆ) ಹುಳುಕು ನೀತಿ. ಹುಳುಕು ಮನಸ್ಸು. ಹುಳುಕು ಮರ. ಹುಳುಕು ಮೋರೆ. ಹುಳುಕು ಹಲ್ಲು. **ಸುರಿ**— ಸುರಿಸು. ಸುರುವು. ಸುರಿವು. ಸುರಿಯುವಿಕೆ. (ಬೀದೀಲಿ ಬೆಲ್ಲ ಸುರಿದು, ಹಾದಿಯವರ ಸಂಗಡ ಜಗಳವಾಡಿದ ಹಾಗೆ, ಬೊಗಳುವ ನಾಯಿಗೆ ದಡಿ ಸುರಿದ ಹಾಗೆ). ಸೂರಿ. ಸೂರೆ. ಸೂರೆಕಾ

(ಗಾ) ರ. ಸೂರೆ ಕೊಡು. (ನೆರೆ ಬಾಲಲೀಲೆಯು ಸೊಮ್ಮ ಸೂರೆಯು ಕೊಡುತ
ಲಿರ್ದಳು ಮಾಯೆ ಮೋಹಿನಿಗೆ). ಸೂರೆಗುಡು. (ಎನಿತುಮ್ ಅನಿತುಮಂ
ಧರ್ಮಜಂ ಸೂರೆಗೊಟ್ಟಂ). ಕೊಳ್ಳೆಸೂರೆ. ಬಲ್ಸೂರೆ. (ಕೊಳ್ಳೆಯರು ಕೊಳ್ಳೆಗ
ತ್ತರು, ಸೂರೆಯರು ಸೂರೆಗತ್ತರು). ಸೂರೆಮಾಡು. ಸೂರೆಯಾಗು. (ಊರೆಲ್ಲಾ
ಸೂರೆಯಾದ ಮೇಲೆ ಬಾಗಿಲು ಹಾಕಿದರು). ಸೂರೆಯಾಡು. ಸೂರೆವಿಡು.
ಸೂರೆಹೋಗು. (ಸೆಟ್ಟಿ ಶಿಸ್ತು ಮಾಡುವದರೊಳಗೆ ಪಟ್ಣ ಸೂರೆಹೋಯಿತು.
ಸೂರೆಹೋದರೂ ಮಾರಿಬಿಡಲಿಲ್ಲ). **ಮೆಟ್ಟು**— ಮೆಟ್ಟಿಸು. ಮೆಟ್ಟಿಗೆ. ಹಿಮ್ಮೆ
ಟ್ಟಿಸು. ಹಿಮ್ಮೆಟ್ಟು. ಪೆಡಮೆಟ್ಟು. (ಪೆಡಮೆಟ್ಟೆ ಬರ್ಪ ದುರ್ಯೋಧನನ್
ಇಭಘಟೆಯುಂ.) ಪೆಡಮ್ಮೆಟ್ಟು (ಪೆಡಪ್+ಮೆಟ್ಟು) ಪೆಡಮ್ಮೆಟ್ಟದೆ ಸೂಳ್ಗೆ
ವಂದಿರಿದುದೆಲರಿದಿಭಂ ಭುವನೈಕರಾಮನಾ) ತಡಮ್ಮೆಟ್ಟು (-ನಿಧಾನವಾಗಿ
ಹೋಗು). ಮೆಟ್ಟು. (ನೆಂಟರೊಳಗಣ ಸಾಲ ಮೆಟ್ಟಿನೊಳಗಣ ಕಲ್ಲು). ನಿನ್ನ
ಹೊರೆಗೆ ನನ್ನ ಮೆಟ್ಟೇ?) ಮೆಟ್ಟಕ್ಕಿ. ಮೆಟ್ಟುಗತ್ತಿ. ಮೆಟ್ಟುಗಲ್ಲು. (ಮೆಟ್ಟು
ಗಲ್ಲೇ ಗಟ್ಟ, ಬಾವಿನೀರೇ ಭಾಗೀರಥಿ.) ಮೆಟ್ಟುಹಲಿಗೆ. ಕಲ್ಲುಮೆಟ್ಲು. ಕಲ್ಲು
ಮೆಟ್ಲು. ಮೆಟ್ಟಲು. ಮೆಟಿಕೆ. **ಬಿತ್ತು**- ಬಿತ್ತಿಸು. (ಉತ್ತ ಹೊಲ ಬಿತ್ತಿಸಿ
ಕೊಂಡೀತು.) ಬಿತ್ತು. (ಉತ್ತು ಬಿತ್ತಿದ ಬತ್ತವಾದರೂ ಮಳೆಯಿಲ್ಲದೆ ಮೊಳೆ
ಯದು) ಬಿತ್ತನೆ. ಬಿತ್ತಿಗೆ. **ಹೊದೆ**- ಹೊದಿಸು. (ಹಚ್ಚಡ ಹೊದಿಸಿದರೆ
ಹುಚ್ಚು ಹೋದೀತೇ?) ಹೊದಸು. (ಹುಲಿಯ ಚರ್ಮದಲ್ಲಿ ಹೊದಲಸು ಪಟ್ಟ
ರಥ.) ಹೊದಿ. ಹೊದಿಕೆ. ಹೊದೆ. (ಶಾಲು ಹೊದ್ದವನಾದರೂ ಹಾಲು
ಬಿಟ್ಟಾನೇ? ಅಂಗಡಿ ಮಾರಿ, ಗೊಂಗಡೀ ಹೊದ್ದ.) ಹೊದಕೆ. ಹೊದಿಗೆ.
ಬಾಚು— ಬಾಚಿಸು. ಬಾಚಣಿಗೆ. (ಬಾಚಣಿಗೆಯಿಂದ ಬಾಚದವಳು ಬಾಚಿ
ಯಿಂದ ಬಾಚ್ಯಾಳೇ?) (ಬಾಚುತಲೆ- ಬಯಿತಲೆ- ಬರ್ತಲೆ—ಬಯ್ತಲೆ.
ಬಾಚಿ. ಬಾಚೆ. ಬಾಚಣಿ. ಬಾಚರ್. **ಅಕ್ಕರು**- ಅಕ್ಕರ. (ಅಕ್ಕರವ ಅಕ್ಕ
ಬಂದಾಗ್ಯೆ ಸಕ್ಕರೆಯೆಲ್ಲಾ ಕಯ್ಯ ಆಯಿತು.) ಅಕ್ಕರತೆ. ಅಕ್ಕರಿಕೆ. ಅಕ್ಕರೆ.
ಅಕ್ಕರ್ತೆ. ಅಕ್ಕರಿಗ. **ಕಾದು**— ಕಾದಿಸು. ಕಾದುಹ. ಕಾದಾಡು. ಕಾದಾಟ.
ಕಾದಿಕೆ. (ಕಾಳಗ, ಜಗಳ.) ಕಾದುಗ. (ಕಾದುವವ.) ಕಾಳಗ. ಕಾಳಿಗ. ಕದನ
ಕದನಗಲಿ. **ದೂಡು**— ದೂಡಿಸು. (ದೂಡಿಸಿಕೊಂಡ ಮನುಷ್ಯ ಹೆಂಡತಿಗಿಂತ
ಕಡೆ. ದೂಡಿಸಿಕೊಂಡವನಿಗೆ ನಾಡಿನ ಗೊಡವೆ ಏಕೆ?) ದೂಡು. (ಕಂಡವರ
ಮಕ್ಕಳನ್ನು ಬಾವೀಲಿ ದೂಡಿ ಆಳ ನೋಡಿದ ಹಾಗೆ.) ದೂಡಿಕೆ. ದೌಡು.

ಜರೆ— (ನಿಂದಿಸು). ಜರಿ ಜರಿದಾಡು. ಜರಿದಾಟ. ಜರಿ. ಜರ. (ಜರಕೊಳ್ಳು . ಜರಹ. ಜರುಚು. ಜರಿಚು. ಜರುಪು. ಜರುಹು— (ಜಾರು) ಜರಿ. ಜರಿತ. ಜರಿಪು. ಜರಡಿ. ಜರಿಡಿ. (ಸಾಣಿಗೆ). ಜರಡು. ಜರಡೆ. **ಅಡು**– ಅಡಿಗೆ. (ಅಡಿಗೆಯು ಗುಣ ಸಾರಿನಲ್ಲಿ ನೋಡು, ಮಡಿಗೆಯು ಗುಣ ಫಲದಲ್ಲಿ ನೋಡು. ತೀರಿದ ಅಡಿಗೆ ತಿರಿಗಿ ಬಯಸಿದರೆ ಬಂದೀತೇ?) ಅಡಿಗೆಕಲ್ಲು. ಅಡಿಗೆಬಟ್ಟು. ಅಡಿಗೆಮನೆ. ಅಡಿಗೆಯಿಳಿ. ಅಡಿಗೆಯಿಳಿಸು. ಅಡಿಗೆಸಾಲೆ. ಅಡಿಕೆ. (ನೀರಡಿಕೆ). ಅಡಿಸು. (ನೀರಡಿಸು). (ಅಟ್ಟಮೇಲೆ ಉರಿಯಿತು, ಕೆಟ್ಟಮೇಲೆ ಬುದ್ಧಿ ಬಂತು. ಅಟ್ಟಿಕ್ಕುವವನಿಗೆ ಹೆಂಡತಿಯಾಗಬೇಡ, ಮೊಟ್ಟೆ ಹೊರುವವನಿಗೆ ಆಳಾಗ ಬೇಡ. ಅಟ್ಟು ಉಂಬೋದಕಿಂತ ತಿರಿದುಂಬುದೆ ಲೇಸು. ಅಟ್ಟು ಅಟ್ಟು ಪ್ರಾಣ ಹೋದರೂ ಹೊಟ್ಟೇ ಹಸಿವು ನಿಲ್ಲಲೇ ಇಲ್ಲ.) ಅಡುಗಬ್ಬು. (ಅಡಿಗಬ್ಬು.) (ತಂದ ಅಡುಗಬ್ಬಗಳಿಗೆ ಉರಿ ಹಬ್ಬಿಸುತ). ಅಡುಗೂಲಜ್ಜ (ಅಡುಗೂಳಜ್ಜಿ, ಅಡುಗೋಲಜ್ಜಿ). (ಅಡುಗೂಲಜ್ಜಿಯ ಮನೆಯಲ್ಲಿ ಅಟ್ಟಡಿಗೆ ಆಯತವಾಗಿರು ರುವುದು.) ಅಡುಗೂಳವ. (ಅಡಿಗೆಯವ). ಅಡುಬಾಣಲೆ. ಅಡುವಳ. (ಅಡು ಬಳ). ಅಡವಳ. ಅಡಬಳ. ಸಗ್ಗಿಗರಡಬಳ (-ಬೆಂಕಿ). ಅಡುಗೆ. ಅಡುಗುಳಿ. **ಉಳಿ**— ಉಳಿಸು. ಉಳಿವು. (ಅಳಿವುಳಿವು). ಉಳ. ಉಳಿ. ಉಳು. ಉಳಗ ಡಿಮೆ. ಉಳಗಡೆ. ಉಳತರ. ಉಳಪಡಿ. ಉಳಕಿ. (ಉಳಕೀ ಒಡವೆಗಳು. ಉಳಕೀ ಹಣ.) ಉಳತ. ಉಳಿತ. ಉಳುತ. ಉಳುತು. ಉಳತಾಯ. ಉಳತೆ. ಉಳವು. ಉಳಹು. ಉಳುಹು. ಉಳಸು. ಉಳಿಯುಗುಡ. ಉಳಿಯುಳಿ. ಉಳಿ ಗಡೆ. ಉಳಿಕು. ಉಳಿಕೆ. ಉಳಿರು. ಉಳಿಪು. ಉಳಿತಾಯ- ಉಳುಪು. ಉಳು ಗಡೆ. ಉಳುತು. ಉಳ್ಕೆ. **ಕೊಲ್**– ಕೊಲಿಸು. ಕೊಲ್ಲು. ಕೊಲ್ಲಿಸು. ಕೊಲು. ಕೊಲೆ. ಕಾಲ್ಗೊಲೆ. ಕೆಯ್ಗೊಲೆ. ಕೊರಲ್ಗೊಲೆ. ಬಾಯ್ಗೊಲೆ. ಮೆಯ್ಗೊಲೆ. ಕೊಲೆಗಡಿಕ. ಕೊಲೆಗೆಡುಕ. ಕೊಲೆಗೆಲಸ. ಕೊಲೆಗೊಳ್ಳು. ಕೊಲೆಪಾತಕ. ಕೊಲೆಗ. ಕೊಲೆಗಾರ- ಕೊಲ್ಲಟಿಗ. ಕೊಲ್ಲಟಿಗಿತ್ತಿ. ಕೊಲ್ಲಟಿಗೆ- ಕೋಲು. ಇಂಗೋಲು. ಎತ್ತುಂಗೋಲು. ಕಡೆಗೋಲು. ಕುಡುಗೋಲು. ಕೊಲ್ಗರೆ. ಕೋಲ್ಗೊಳ್ಳು. ಕೋಲ್ದುದಿ. ಕೋಲ್ದೊಡಿಸು. ಕೋಲ್ಮಳೆ. ಕೋಲರಗು. ಕೋಲಾಟ. ಕೋಲಾಡು. ಕೋಲುಕುದುರೆ. ಕೋಲುವಿಡಿ. ಕೋಲುಕಾರ. (A peon).

ದುಡಿ— ದುಡಿಸು. ದುಡಿಮೆ. ದುಡಿ. (ದುಡಿಯೋ ಎತ್ತು ಮಡಿದು

ಬಿತ್ತು. ನಿಮ್ಮ ಚಿತ್ತ ದುಡೀ ಬೇಕಾದರೆ ನಮ್ಮ ಸತ್ತ ಎಮ್ಮೆ ಬರಬೇಕು.) ದುಡಿತ. ದುಡು. (ದುಡುಕೊಳ್ಳು). ದುಡುಮೆ. (ದುಡುಮೆ ಇರುವ ಪರ್ಯಂತರ ಮಡದಿ). ದುಡುಮೆಗಾರ. **ಚಿಗಿ**-- ಚಿಗಿಸು. ಚಿಗರು. ಚಿಗುರು. ಚಿಗುರಾಗು. ಚಿಗುರಿಸು. (ಹಣ್ಣೆಲೆ ಉದುರುವಾಗ ಚಿಗುರೆಲೆ ನಗುವುದು). ಚಿಗತ. **ಅಳಿ**— ಅಳಿಸು. ಅಳಿಚು. ಅಳಿಯಿಸು. ಅಳುಚು. ಅಳುಸು. ಅಳಿ. (ಅಳಿದ ಊರಿಗೆ ಉಳಿದವನೇ ಗವುಡ.) ಅಸುವಳಿ. ಉರ್ಕಳಿ. ಪಾಂಗಳಿ. ಬಸವಳಿ. ಅಳಿಅಳಿ. ಅಳಿದುಳಿ. ಅಳಿಗಣ್ಣು. ಅಳಿಗಂಡ. ಅಳಿಗಬ್ಬ. ಅಳಿಗಬ್ಬಿಗ. ಅಳಿಗಾಲ. ಅಳಿಗೆಯ್ತ. ಅಳಿಯಾಸೆ. ಅಳಯಾಳು. ಅಳಿಯೂರು. (ಅಳಿಯೂರ ತಳವಾರ, ಕಳೆಯುಳ್ಳ ಸೂಳೆಯೂ, ಪೊಳಲ ಸುಂಕಿಗ, ಹಳೆ ನಾಯಿ, ಯಾಚಕನು ತೊಲಗುವರೆ?) ಅಳಿಯೆದೆ.ಯ. ಅಳಿವೆಣ್ಣು. ಅಳಿಕ. ಅಳಿಪು. ಅಳಿವು. ಅಳಿಹು. ಅಳಿವುಳಿವು. **ಓದು**— ಓದಿಸು. ಓದಿಕೆ. ಓದುವಿಕೆ. ಓದಾಳಿ. (ಓದಿದವನು ಭೇದಾ ತಿಳಿದಾನು. ಓದೋದು ಶಾಸ್ತ್ರ, ಇಕ್ಕೋದು ಗಾಳ. ಓದಿಯೋದಿ ಮರುಳಾದ ಕೋಚು ಭಟ್ಟ). ಓತ. ಓದುಗೀದು. ಓದುಗಾರ. ಓದುಂಗಾರ. **ತೆರೆ**--- ತೆರ. (ಅಷ್ಟಂತ ಹುಡುಗಿ ಆಗಬೇಕು, ಇಷ್ಟಣ ಅಷ್ಟು ತೆರ ಆಗಬೇಕು). ತೆರಗೆ. (ತೆರಗೆ ಕೊಡು. ತೆರಗೆ ದೊರೆ. ತೆರಗೆ ಬೀಳು). ತೆರವು. ತೆರಿಗೆ. (ತೆರಪಿಲ್ಲವೆಂತ ತೆರಿಗೇ ಇಟ್ಟುಕೊಂಡು, ಚರಿಗೆ ತಪಲೇ ಮಾರಿಕೊಂಡ.) (ತೆರಿಗೆ ಕೊಡು. ತೆರಿಗೆ ಕಟ್ಟು. ತೆರಿಗೆ ಬಿಡು. ತೆರಿಗೆ ಎತ್ತು.) (ಮುತ್ತು ಮುದುಕಿಗೆ ಏಕೆ? ತೊತ್ತೇಕೆ ಗುರುಗಳಿಗೆ? ಬತ್ತಿದ ಕೆರೆಗೆ ತೆರಿಗೇಕೆ? ಶ್ರವಣರಿಗೆ ಮಿಥ್ಯತನವೇಕೆ?). ತೆರಿಸು. ತೆರು. (ತೆತ್ತಷ್ಟು ಬಾಕಿ ಬಿದ್ದರೆ ಮತ್ತೇನು ಕೊಟ್ಟಾನು?- ಬರುವದು ಕಡಿಮೆಯಾದರೂ ತೆರುವದು ತಪ್ಪಲಿಲ್ಲ) **ಕಾಡು** — ಕಾಡಿಸು. ಕಾಡಿಗೆ. ಕಾಡಿಗ. ಕಾಡು. (ಆನೆಗೆ ಗುಂಗುರು ಕಾಡಿದ ಹಾಗೆ. ಕಾಡುವ ಬ್ರಾಹ್ಮಣನಿಗೆ ನಾರುವ ಉಪ್ಪಿನಕಾಯಿ.) ಕಾಡುಹ ಕಾಟ. (ಅಜ್ಞಾತವಾಸದಲ್ಲಿಯೂ ಅಜ್ಞಾನಿಗಳ ಕಾಟ ತಪ್ಪಲಿಲ್ಲ. ಅರಸನ ಅಂಕೆಯಿಲ್ಲ, ದೈವದ ಕಾಟವಿಲ್ಲ. ಊಟಕ್ಕೆ ಇಲ್ಲದವನು ಕಾಟ ಮಾಡದೆ ಇರನು. ಓಟಾ ಓಡಿದರೂ ಕಾಟ ತಪ್ಪದು.) ಕಾಟಾಚಾರ. ಕಾಟಕ. (ತಾಯಿಯಿಲ್ಲದ ತವರು, ಕಾಟಕರಿದ್ದ ಅಡವಿ.) ಅತಿಕಾಟ. ಅತಿಕಾಟಕ. (ನಾಟಕಧಾರಿಯು ಕಾಟಕಾ ಮಾಡಬಾರದು). ಕಾಟಕತನ. (ಪೀಠ ಸಿಕ್ಕಿದರೂ ಕಾಟಕತನ ಬಿಟ್ಟಾನೇ? ಬೂಟಕತನ ಮಾಡಿದರೆ ಕಾಟಕತನ ತಪ್ಪೀತೇ?)

ಕಾಟಕಾಯು. ಕಾಟಕಾಯಿ. ಕಾಟಗಾಯಿ. ಕಾಟಕಿ. **ಇಳಿ**— ಇಳ. ಇಳತರ. (ಇಳಿತರ) ಇಳವರೆ. ಇಳವಾರೆ. ಇಳವಾರ. ಇಳಿಹೊತ್ತು. ಇಳಪೊತ್ತು. ಇಳು ಹೊತ್ತು. ಇಳಕಿಸು. ಇಳಿಕಿಸು. ಇಳುಕಿಸು. ಇಳಕು. ಇಳಿಕು. ಇಳುಕು. ಇಳಿತ. ಇಳತ. ಇಳವು. ಇಳಿವು. ಇಳಿದಾರವಾರ. (ಇಳಿಭೋಗ್ಯ). ಇಳಿಯು ಜಾರು. ಇಳಿಯು ನೂಕಿಸು. ಇಳಿಯು ಬೀಳು. ಇಳಿಯುಲಿಕ್ಕು (- ಇಳಿಯು ಹಾಕು) (ಕೊರಲೊಳಗೆ ಇಳಿಯುಲಿಕ್ಕುವದು-ನಿವೀತ). ಇಳಿಯಿಕ್ಕು (ಕೊರಳಿಂದೆ ಇಳಿ ಯಿಕ್ಕಿದ ಜನಿವಾರವು.) ಇಳಿಯುವೇಳು. ಇಳಿಯಿಳಿ. ಇಳಿತರು. ಇಳಿದೆಗೆ (-- ನಿವಾಳಿಸು). ಇಳಿಬಿಡು. ಇಳಿಮುಳುಗು. ಇಳಿವಾಯ್ಕು. ಇಳಿಗೆಯ್. ಇಳಿ ಕೆಗೆಯ್. ಇಳಿಂಕೆಗೆಯ್. ಇಳಿತರ. ಇಳಿಪಾಟು. ಇಳಿಕೆಗಾಣು. ಇಳಿಸು. (ಅಡಿಗೆಯಿಳಿಸು. ಬಟ್ಟೆಯಿಳಿಸು. ಹದವಿಳಿಸು.) ಇಳಿಹ. (ನೀರಿಳಿಹ). ಇಳಿಹು. (ಮದವಿಳಿಹಿದ ಆನೆ.) ಇಳು. ಇಳುಗಡೆ. ಇಳ್ಕಳಿ. **ಕುರಿ**— (ಗುರುತು ಮಾಡು). ಕುರಿತು. (ಭಾಲಾಕ್ಷನಂ ಕುರಿತು ಪುತ್ರನಂ ಬೇಡಿ). ಕುರಿಪು. (ನಾರಾಯಣನೆಂಬಾತನ ಕುರಿಪು ಶ್ರೀವತ್ಸಮ್ ಎಂಬುದು.) ಕುರುಪು. (ಲಿಂಗಮ್ ಎಂಬುದ. ವಸ್ತುವಿನ ಕುರುಪಂ ಪೇಳ್ವುದು.) ಕುರುಪ (- ಗುರುತು ಇದ್ದವ). ಎರಳೆಗುರುಪ (- ಚಂದ್ರ.) ಕುರುಪಿಡು. ಕುರುಪೊಂದು. ಕುರುವು. ಕುರುಹು. (ಕಂಗುರುಹು. ಕಣ್ಣುಗುರುಹು.) ಕುರುಹಿಡು. ಕುರುಹುಗಾಣಿಸು. ಕುರುಹುದಾಣ. **ಒತ್ತು**— ಒತ್ತರ. ಒತ್ತಿಸು. ಒತ್ತಿಕೆ. ಒತ್ತಕ್ಕಡ. ಉಗು ರೊತ್ತು. ಕಲ್ಲೊತ್ತು. ಕವಲೊತ್ತು. ತಲೆಯೊತ್ತು. ಒತ್ತರಿಸು. ಒತ್ತಾಯ. ಒತ್ತಾಸೆ. ಒತ್ತಂಬ (-ಬಲತ್ಕಾರ). ಒತ್ತಂಬರ (-ಬಲು ಅವಸರ). ಒತ್ತಾಸೆ ಗಾರ. ಒತ್ತಾಸೆಗಾರ್ತಿ. ಒತ್ತಾಳು. ಒತ್ತುಹ. ಒತ್ತೆ. ಈರೊತ್ತೆ. ಒತ್ತಿಡು. ಒತ್ತೆಗೊಡು. ಒತ್ತೆಬಡುಹ. ಒತ್ತೆ ಬಿಡಿಸು. ಒತ್ತೆ ಸೂಳೆ. ಒತ್ತೆ ಹಿಡಿ. **ಇಡು**— ಇಡಿಸು. ಇಡುಗಲ್ಲು. ಇಡುಗಾಣ. ಇಡುಗಿಚ್ಚು. ಇಡುಗುಂಡು. ಇಡುತೊಡು. ಇಡುವಲೆ. ಇಡಿಗೆ. ಇಡುಗೆ. ಇಡಿಗೆತೊಡಿಗೆ. ಇಡುಕು. ಇಡುಂಕು. ಇಡೆ (-ಎಡೆ-ಸ್ಥಳ). ಇಡುದಿ. (ದಾರಿಕಾರರು ಇಳಿಯುವ ಸ್ಥಳ). **ತೋರು**— ತೋರಿಸು. ತೋರಿಸುವಿಕೆ. ತೋರುವಿಕೆ. ತೋರಿಕೆ. ತೋರ್ಕೆ. ಒಣಗುದೋರು. ಒಳ್ನುಡಿದೋರು. ತಿರುಳುದೋರು. ಪರಿಣತೆದೋರು. ಮತ್ತ ದೋರು. ಮೆಯ್ದೋರು. ಮೆಲ್ನಡೆದೋರು. ತೋರಡ. ತೋರಡವು. (A sort of mortgage, conditionally conveying

lands, etc. as property by putting them out as security.) ಒಳಗುದೋರು. ಕೆಂಪುದೋರು. ಚಿಬ್ಬುದೋರು. ದಾರಿದೋರು. ನರೆದೋರು. ಬೆಳ್ಪುದೋರು. ಮುಪ್ಪುದೋರು. ಸರುದೋರು. ಹಾಯಿದೋರು. ತೋರಗೊಡು ತೋರಬರು. (-ತೋರಿಬರು). (ಸ್ವರ್ಗವನ್ನು ತೋರಿಸಿಕೊಟ್ಟ ಗುರು ಏರಿಸಲಿಕ್ಕೆ ಬಲ್ಲನೇ?) ತೋರ್ಕೆವಡೆ. (ತೋರ್ಕೆವಡೆದ ಕಾಂತಿ) ತೋರ್ಪು. ತೋರ್ಪೆ. **ಕೊಂಕು**- ಕೊಂಕಿಸು. ಅತಿಕೊಂಕು. ಮೂಗೊಂಕು. ಕೊಂಕು ಕೊರತೆ. ಕೊಂಕುಗುರು. ಕೊಂಕುಗುರುಳು. (ಕೊಂಕುಗುರುಳಿನ ರಂಭೆ) ಕೊಂಕುಗೂದಲು. ಕೊಂಕುನುಡಿ. (ಅತಿಕೊಂಕುನಡಿ ಕಾಕೆನಿಕ್ಕು.) ಕೊಂಕು ಮಾಡು. ಕೊಂಕುವಿಲ್ಲ (-ಮನ್ಮಥ). ಕೊಂಕುವೆರಸು. (ಕೊಂಕುವೆರಸಿದ ನುಡಿ- ಉಲ್ಲಾಪ). ಕೊಂಕುಳು. (ಅಲ್ಲೇ ನ್ಯಾಯ ಇಲ್ಲೇ ಕಂಡಿತು; ಕೊಳ್ಳೀ, ಮಲ್ಲಿ, ಕೊಂಕುಳ ಕೂಸ!- ಕೊಂಕುಳಲ್ಲಿ ಕುರು ಸಲ್ಲ, ಕೊಂಕಣಿಗರ ನೆರೆ ಸಲ್ಲ) ಕೊಂಕಿ. ಕೊಕ್ಕೆ. ಕೊಕ್ಕೆಕೋಲು. ಕೊಕ್ಕೆ ಮನುಷ್ಯ. ಕೊಕ್ಕೆ ಮಾತು. ಕೊಕ್ಕೆಮೂಗು. (ಕೊಕ್ಕೆ ಮೂಗಿನವನು-ಖುರಣಸ. ಕೊಗ್ಗ. ಕೊಗ್ಗದನಿ. ಕೊಗ್ಗು. **ಎಡರು**-- ಎಡಗೇಡಿ (-ವಿನಾಯಕ). ಎಡವು. ಎಡಪು. ಎಡಹು. ಎಡಹುದ. (ಸ್ಖಲನ, ರಿಂಖನ.) ಎಡರಾಳು (ಶತ್ರು). ಎಡಚು. (ವಿಘ್ನ). **ತುಡುಕು**- ತುಡುಕಿಸು. ತುಡು. ತುಡುತಿನ್ನಿ (-ತುಡುಗುಣಿ) (ತುಡುತಿನ್ನಿ ಗಂಡನಾ ಬಡತನವ ಬಲ್ಲಳೇ) ತುಡಗ. (ಆನೆ ತಾ ತುಡಗಾಗೆ, ಜ್ಞಾನಿ ಮೂರ್ಖನುವಾಗೆ, ಭೂನಾಥ ಜಾರನಾದರೆ ಮಾಣಿಪುದು ಮಾನವರಿಗಳವೆ?) ತುಡಗಿ. ತುಡಗತನ. ತುಡಗು. ತುಡಿ (-ಕದ್ದ ವಸ್ತು). ತುಡುಗ. ತುಡುಗಿ. ತುಡುಗುತನ. ನಾಳ್ತುಡುಗುಣಿ. ತುಡುಗುಣಿನಾಯಿ. ತುಡುಗು ಮಾಡು. (ಬಂಗಾರ ತುಡುಗು ಮಾಡೋಣ.) **ಕೆಡು**- ಕಿಡು. ಕೆಡಿಸು. ಕಿಡಿಸು. ಕೆಡಕ. ಕಿಡುಕ. ಕೆಡಿಕ. ಕೆಡುಕ. ಕೆಡಕತನ. ಕೆಡಕುತನ. ಕೆಡುಕುತನ. ಕೆಡಕಿ. ಕೆಡಿಕೆ. ಕೆಡುಕಿ. ಕೆಡಕು. ಕೆಡುಕು. ಅಂದಗೆಡಿಸು. ಎಡೆಗೆಡಿಸು. ಕಂಗೆಡಿಸು. ಕಾಲ್ಗೆಡಿಸು. ಗತಿಗೆಡಿಸು. ನಡೆಗೆಡಿಸು. ನಾಣ್ಗೆಡಿಸು. ಕೆಟ್ಟ (ಕೆಟ್ಟ ಮುಂಡೆ ಕುಲಾ ಸೇರಳು). ಕೆಯ್ಗೆಡು. ದೆಸೆಗೆಡು. ನೆಲೆಗೆಡು. ಮನಗೆಡು. ಮುಂದುಗೆಡು. ಹದಹುಗೆಡು. ಹೊಳಹುಗೆಡು. ಕೆಡುಹ. ಕೊಲೆಗೆಡುಕ. ಬಾಸೆಗೆಡುಕ. ಕೇಡು. (ಕೇಡು ಬರುವ ಕಾಲಕ್ಕೆ ಕೊಡುವದು ದುರ್ಬುದ್ಧಿ. ಕೇಡು ಬರುವ ಕಾಲಕ್ಕೆ (ತಾನು) ಪೆಟ್ಟಿಗೆಯಲ್ಲಿ ಇದ್ದರೂ ತಪ್ಪದು). ಕೇಡುಗಾಲ. (ಕೇಡುಗಾಲಕ್ಕೆ ಬುದ್ಧಿ ಇಲ್ಲ,

ಮರಣ ಕಾಲಕ್ಕೆ ಮದ್ದು ಇಲ್ಲ.) ಕೇಡುಗ. ಅಭಿಮಾನಗೇಡುಗ. ಕೇಡಿ ಅಂದ ಗೇಡಿ. ಅಭಿಮಾನಗೇಡಿ. ಆಸೆಗೇಡಿ. ಎದರ್ಗೇಡಿ ಕಡುಗೇಡಿ. ಕುಲಗೇಡಿ. ಶೀಲಗೇಡಿ. ಬಾಯ್ಗೇಡಿ. ಬುದ್ಧಿಗೇಡಿ. ಬ್ರತಗೇಡಿ. ಮತಿಗೇಡಿ. ವಿಚಾರಗೇಡಿ. ವ್ರತಗೇಡಿ. ಕೇಡಿಗ. ಕುಲಗೇಡಿಗ. ಕೇಡಿತನ. ಎಚ್ಚರಗೇಡಿತನ. ಕಿಡಿಗೇಡಿತನ. ಶೀಲಗೇಡಿತನ. ನಾಚಿಕೆಗೇಡಿತನ. ಮಾನಗೇಡಿತನ. ಬಾಯ್ಗೇಡಿತನ. ವಿಚಾರ ಗೇಡಿತನ. ಕೆಟ್ಟತನ. (ಕೆಟ್ಟತನಕ್ಕೆ ಒಪ್ಪಿದವ ಕಟ್ಟನ್ನಕ್ಕೂ ಒಪ್ಪಬೇಕು,) **ಒಕ್ಕು**— (ಕೂಡಿಸು, ಹೆಚ್ಚಾಗು). ಒಕ್ಕಲು. (ಬಿಟ್ಟ ಮನೆಗೆ ಸುಟ್ಟ ಒಕ್ಕಲು) ಪೇರೊಕ್ಕಲು ಒಕ್ಕಲಾಗು. ಒಕ್ಕಲ. ಒಕ್ಕಲಗಿತ್ತಿ. ಒಕ್ಕಲತನ. ಒಕ್ಕಲಿಗ. ಒಕ್ಕಲಿಗಿತಿ. ಒಕ್ಕಲಿತಿ (ಕಾಡಿನಲ್ಲಿ ಹುಲಿ ಕೂಗಿದರೆ, ನಾಡಿನಲ್ಲಿ ಒಕ್ಕಲು ತೆಗೆ ದರಂತೆ.) ಒಕ್ಕಲಡಿ. ಒಕ್ಕಲುಮನೆ. ಒಕ್ಕಲು-ದಕ್ಕಲು. ಒಕ್ಕಲು-ಪಕ್ಕಲು. ಒಕ್ಕಿಕೆ. ಒಕ್ಕಲಮಗ. **ತಲಪು**— ತಲಪಿಸು. ತಲವು ತಲುಪು. ತಲಬು. ತಲಬುಗಾರ. ತಲುಬು. **ಕರೆ**— ಕರೆಸು. ಕರೆಯಿಸು. (ಬಹುಮಂದಿ ಸೇರಿ ಕರೆ ಯಿಸುವುದು -ಸಂಹೂತಿ) ಕರೆಯುವಿಕೆ. (ಹೂತಿ, ಆಕಾರಣೆ, ಹವ, ಆಹ್ವಾನ) ಕರೆಗಾರ. ಕರೆದೊಯ್. ಕರೆಯು ಕಳುಹಿಸೋಣ (-ಆಹ್ವಾನ, ಹೂತಿ). ಕರ. ಕರತರು. ಕರಸು. ಕರಹ. ಕರಿಸು ಉಸುರ್ಗರೆ. ಘಳಿಲ್ಗರೆ. ಭೋರ್ಗರೆ. ಲೊಟಿಗರೆ. ಸೂಳ್ಗರೆ. (ಕರೆವಂ-ಒಟ, ಆಹ್ವಾನಪುರುಷ. ಕರೆವುದು—ಹವ, ಹೂತಿ, ದೇಹ, ಆಹ್ವಾನ, ಕರೆವಲ್ಲಿ-ಆಕಾರಣ, ಅರ್ಚ, ಆಹ್ವಾನ.) ಕರೆವಣ. ಕರೆಯೋಲೆ. **ಉಬ್ಬು**— ಉಬ್ಬಿಸು. ಉಬ್ಬುವಿಕೆ. ಉಬ್ಬಿಕೆ. ಉಬ್ಬರ. (ಉಬ್ಬರದ ಬೊಬ್ಬೆ.) ಉಬ್ಬರಿಸು. ಉಬಿಕು. ಉಬ್ಬಟೆ. ಉಬ್ಬಟ್ಟೆ. ಉರ್ಬಟೆ. (ಬಹು ವಾದ್ಯದ ಉಬ್ಬಟೆ ಅಖಿಲ ದೆಸೆಯೊಳ್ ಆವರಿಸಲ್.) ಕಟ್ಟುಬ್ಬಟೆ. ಕಟ್ಟುಬ್ಬಟ್ಟೆ. ಉಬ್ಬಡಿಗ. ಉಬ್ಬರಿಗ. ಉಬ್ಬುದಿಗ. (ಉಬ್ಬಿದ ಕಪ್ಪೆ ಆನೆಯ ನುಂಗೀತೇ?) ಉಬ್ಬುಬ್ಬು. ಉಬ್ಬುಗಲ್ಲ. ಉಬ್ಬುಗವಳ. ಉಬ್ಬುಗುಂದು. ಉಬ್ಬು ಗೆಡು. ಉಬ್ಬುಗೊಬ್ಬು. ಉಬ್ಬು ತಗ್ಗು. ಉಬ್ಬು ಹಲ್ಲು. ಉಬ್ಬು ಹೊಳೆ. ಉಬ್ಬರಣೆ. **ತೊಡು**— ತೊಡ, ತೊಡಂಗಟ್ಟು, ತೊಡವರಿಕೆ, ತೊಡವೆಳಗು, ತೊಡವು, ತೊಡಹು, ತೊಡಿಗೆ, ಪೊಂದೊಡಿಗೆ, ಬಾಲದೊಡಿಗೆ, ಮೆಯ್ದೊಡಿಗೆ, ತೊಡಿಸು, ತೊಡುಗೊರೆ-ಉಡುಗೊರೆ. ಇಡು-ತೊಡು, ಇಡುಗೆ-ತೊಡುಗೆ, ಉಡುಗೆ-ತೊಡುಗೆ, ತುಡು, ತುಡಿಗೆ, ಅಂಗದುಡಿಗೆ, ಉಳ್ತುಡಿಗೆ, ಕಿವಿದುಡಿಗೆ, ಚಿತ್ರದುಡಿಗೆ, ತುಡಿಸು, ತುಡುಜೊಡರು, ತೊಡಿವೆ.

೧೪ ಮೂಲರೂಪ.

ಕ್ಲಿಶ್ (ಧಾ)— ದುಃಖಪಡು. **ಕ್ಲಿಷ್ಟ**— ದುಃಖಪಟ್ಟ, ಪೀಡಗೊಂಡ; ಕಷ್ಟದ. **ಕ್ಲೇಶ**— ದುಃಖ, ಸಂಕಟ, ನೋವು; ಕಷ್ಟ, ತೊಂದರೆ. **ಅಕ್ಲೇಶ**— ದುಃಖ ಇಲ್ಲದ; ತೊಂದರೆ ಇಲ್ಲದ. **ಕ್ಲಿಶಿತ**— ದುಃಖಗೊಂಡ; ಆಯಾಸಗೊಂಡ, ಬಳಲಿದ. **ಸಂಕ್ಲೇಶ**— (ಸಮ್+ಕ್ಲೇಶ) ಕಡು ದುಃಖ. **ಕ್ಲೇಶಿತ, ಅಕ್ಲಿಷ್ಟ, ನಿಷ್ಕ್ಲೇಶ** (ನಿಷ್+ಕ್ಲೇಶ). **ವಿಕ್ಲೇಶ** (ವಿ+ಕ್ಲೇಶ).

ಕ್ಷಣ್ (ಧಾ) —ಹೊಡೆ, ಗಾಯಮಾಡು. **ಕ್ಷತ**— ಗಾಯ. **ಕ್ಷತ್ರ**— ಗಾಯದಿಂದ ರಕ್ಷಿಸುವ; ಕ್ಷತ್ರಿಯ ಜಾತಿಯು. **ಕ್ಷತ್ರಿಯ**— ಗಾಯದಿಂದ ರಕ್ಷಿಸುವವನು; ಚತುರ್ವರ್ಣಗಳಲ್ಲಿ ಎರಡನೆಯದು.

ಕ್ಷಮ್ (ಧಾ) —ತಾಳು, ಸಹಿಸು; ಅನುಭವಿಸು; ಅನುಮತಿಸು, ಸಮ್ಮತಿಸು; ಯೋಗ್ಯವಾಗು, ಸಮರ್ಥವಾಗು. **ಕ್ಷಮ**— ತಾಳ್ಮೆಯುಳ್ಳ, ಸಹಿಸುವ, ತಕ್ಕ, ಯೋಗ್ಯ, ಸಮರ್ಥ. **ಕ್ಷಮಾ**— ತಾಳ್ಮೆ. ಸಹನೆ; ಭೂಮಿ. **ಕ್ಷಾಂತ**— ತಾಳ್ಮೆಯುಳ್ಳ, ಸಮಾಧಾನದ. **ಕ್ಷಾಂತಿ**— ಸಹನೆ, ಸಮಾಧಾನ. **ಅಕ್ಷಾಂತಿ**— ಅಸೂಯೆ, ಈರ್ಷ್ಯೆ.

ಕ್ಷರ್ (ಧಾ) —ಸೋರು, ಚಲಿಸು. **ಕ್ಷರ**— ಸೋರುವ, ಚಲಿಸುವ; ಕೆಡುವ, ನಾಶಹೊಂದುವ. **ಅಕ್ಷರ**— ಅವಿನಾಶಿಯಾದ. **ಕ್ಷರಣ**— ಸೋರುವಿಕೆ, ಚಲಿಸುವಿಕೆ. **ಕ್ಷಾರ**— ಉಪ್ಪು, ಉಪ್ಪಾಳ.

ಕ್ಷಲ್ (ಧಾ) —ತೊಳೆ. **ಕ್ಷಾಲ-ಕ್ಷಾಲನ**— ತೊಳೆಯುವಿಕೆ, ತೊಳೆಯೋಣ. **ಪ್ರಕ್ಷಾಲನ**— ತೊಳೆಯೋಣ. **ಕ್ಷಾಲಿತ, ಪ್ರಕ್ಷಾಲಿತ.**

ಕ್ಷಿ (ಧಾ) —ಸೊರಗು, ವಾಸಿಸು, ಹೋಗು, ಕಳೆಯು. **ಕ್ಷಯ**— ಸೊರಗೋಣ, ಶಕ್ತಿ ಕುಂದೋಣ; ನಾಶ; ಮನೆ. **ಕ್ಷೀಣ**— ಸೊರಗಿದ, ಶಕ್ತಿ ಕುಂದಿದ, ಕೃಶವಾದ. **ಅಕ್ಷಯ**— ಸೊರಗದ, ನಾಶವಾಗದ; ಯಾವಾಗಲೂ ಇರುವ. **ಅಕ್ಷೀಣ**— ಸೊರಗದ, ಬಡವಾಗದ; ಪೂರ್ಣವಾದ.

ಕ್ಷಿಪ್ (ಧಾ) —ಚಲ್ಲು, ಒಗೆ. **ಕ್ಷೇಪಣ**— ಒಗೆಯುವಿಕೆ, ಚಲ್ಲುವಿಕೆ, ಎಸೆಯುವಿಕೆ. **ಕ್ಷೇಪಣಿ**— ಮುಂದಕ್ಕೆ ಚಲ್ಲುವುದು- ಚುಕ್ಕಾಣಿ. **ಆಕ್ಷೇಪ**— ನಡುವೆ ಚಲ್ಲೋಣ, ನಡುವೆ ಎಸೆಯುವಿಕೆ; ಅಡ್ಡಿ, ತಡೆ. **ಆಕ್ಷಿಪ್ತ**— ಒಗೆದ, ಚಲ್ಲಿದ, ಎಸೆದ. **ಸಂಕ್ಷೇಪ**— ಬಹಳ ಇದ್ದುದು ಸ್ವಲ್ಪದಲ್ಲಿ ತಂದು ಚಲ್ಲೋಣ; ಸಣ್ಣದಾಗಿ ಮಾಡುವಿಕೆ; ಸಾರಾಂಶ. **ಸಂಕ್ಷಿಪ್ತ**—

ಸಣ್ಣದಾಗಿ ಮಾಡಿದ, ಕಡಿಮೆ ಮಾಡಿದ. **ವಿಕ್ಷಿಪ್ತ**— ವಿಶೇಷವಾಗಿ ಚಲ್ಲಿದ ಬುದ್ಧಿಯುವ, ವಿಶೇಷವಾಗಿ ಚಲ್ಲಲ್ಪಟ್ಟ; ಹುಚ್ಚ, ಭ್ರಾಂತ. **ನಿಕ್ಷೇಪ**- ಕೆಳಗೆ ಚಲ್ಲೋಣ; ಇಟ್ಟ ಗಂಟು; ಹುಗಿದು ಹಾಕಿದ ದ್ರವ್ಯ. **ಕಾಲಕ್ಷೇಪ**— (ಕಾಲ-ಹೊತ್ತು, ಕ್ಷೇಪ-ಚಲ್ಲೋಣ) -ಹೊತ್ತು ಕಳೆಯೋಣ. **ಕ್ಷಿಪ್ತ, ಪ್ರಕ್ಷಿಪ್ತ, ಪ್ರಕ್ಷೇಪ.**

ಕ್ಷುಧ್ (ಧಾ) —ಹಸಿವೆಯಾಗು. **ಕ್ಷುತ್-ಕ್ಷುತ್ತು**— ಹಸಿವೆ, **ಕ್ಷುಧೆ-ಕ್ಷುಧಾ**- ಹಸಿವು. **ಕ್ಷುಧ್ವತ್**- ಹಸಿವುಳ್ಳ. **ಕ್ಷುಧಿತ, ಕ್ಷುಧಾಲು.** **ಕ್ಷುಭ್** (ಧಾ) -ಹುಚ್ಚಾಗು, ಸಿಟ್ಟಾಗು. **ಕ್ಷುಬ್ಧ**— ಸಿಟ್ಟಾದ. **ಕ್ಷುಭಿತ**— ಸಿಟ್ಟಿಗೆದ್ದ, ಕ್ಷೋಭೆಗೊಂಡ. **ಕ್ಷೋಭ-ಕ್ಷೋಭೆ**- ಸಿಟ್ಟು, ಗಲಭೆ, ಗೊಂದಲ; ಉದ್ವೇಗ; ಚಳವಳ; ಹೆದರಿಕೆ. **ಪ್ರಕ್ಷೋಭ**— ಹೆಚ್ಚಾದ ಸಿಟ್ಟು. **ಕ್ಷೋಭಿ, ವಿಕ್ಷೋಭ, ಸಂಕ್ಷೋಭ, ಗುರುಕ್ಷೋಭ, ದೇವತಾಕ್ಷೋಭ.**

ಕ್ಷುರ್ (ಧಾ) —ಕೊಯ್ಯು. **ಕ್ಷುರ**— ತಲೆಕೂದಲು ಕೊಯ್ಯುವ ಕತ್ತಿ; ಕ್ಷೌರ ಮಾಡುವ ಕತ್ತಿ. **ಕ್ಷೌರ**— ತಲೆ ಕೂದಲು ಕೊಯ್ಯಿಸೋಣ. **ಕ್ಷುರಿ-ಕ್ಷುರಿಕ-ಕ್ಷುರಕ-ಕ್ಷುರಮರ್ದಿ**— ಕೆಲಸಿಗ, ಹಜಾಮು. **ಕ್ಷುರಿಕೆ-ಕ್ಷುರಿಕಾ**— ಕತ್ತಿ, ಕಠಾರಿ.

ಖಡ್ (ಧಾ) -ಕಡಿ, ಚೂರು ಮಾಡು. **ಖಂಡ**— ಕಡಿದ, ಚೂರು ಮಾಡಿದ; ತುಣುಕು, ಚೂರು. **ಖಂಡನ**— ಕಡಿಯುವಿಕೆ, ಚೂರು ಮಾಡುವಿಕೆ, ತುಂಡು ಮಾಡುವಿಕೆ; ತುಣುಕು ಮಾಡುವುದು. **ಖಂಡಿತ**— ತುಂಡು ಮಾಡಿದ; ಸಂಶಯವನ್ನು ಕಡಿದು ತೆಗೆದ; ನಿಶ್ಚಿತ. **ಖಡ್ಗ**— ಕಡಿಯುವ ಶಸ್ತ್ರ; ಕತ್ತಿ. **ಖಡ್ಗಿ, ಖಡ್ಗಹಸ್ತ, ಖಡ್ಗಪಿಧಾನ, ಖಡ್ಗಫಲ, ಖಡ್ಗಾಖಡ್ಗಿ, ಖಂಡನೆ, ಖಂಡಿಸು, ಖಂಡಣೆ, ಖಂಡೆಯ, ಖಂಡಶಶಿ, ಖಂಡಧರ, ಖಂಡಪರಶು, ಅಖಂಡ, ಮಾನಖಂಡನ, ಖಂಡಶಶಧರ, ಖಂಡಶಶಿಶೇಖರ.**

ಖನ್ (ಧಾ) -ಅಗಿ, ತೋಡು. **ಖನಿ**- ಲೋಹಗಳನ್ನು ಅಗಿದು ತೆಗೆಯುವ ಸ್ಥಳ. **ಖನಿಜ**— (ಖನಿ+ಜ) ಖನಿಯಲ್ಲಿ ಹುಟ್ಟುವ ಧಾತುಗಳು. **ಖಾತ**— ಅಗೆದ; ಹೊಂಡ, ಕೆರೆ, ದೊಡ್ಡ ಕೊಳ. **ಆಖಾತ**— ಸ್ವಾಭಾವಿಕವಾದ ಜಲಾಶಯ. **ಉತ್ಖಾತ**— ಅಗೆದು ಮೇಲಕ್ಕೆ ತೆಗೆದ. **ನಿಖಾತ**— ನೆಲದೊಳಗೆ ಅಗಿದದ್ದು. **ಖನಿತ್ರ**— ಗುದ್ದಲಿ, ಪಿಕ್ಕಾಸು. **ಖನಕ**— ಅಗೆಯುವವ;

ಇಲಿ. ಖನನ— ಅಗೆಯುವಿಕೆ.

ಖಾದ್ (ಧಾ) —ತಿನ್ನು. **ಖಾದನ**– ತಿನ್ನುವಿಕೆ; ಆಹಾರ. **ಖಾದ್ಯ**– ತಿನ್ನುವ ವಸ್ತು. **ಖಾದಕ**— ತಿನ್ನುವವ.

ಖಿದ್ (ಧಾ) -ಮನಗೆಡು. **ಖಿನ್ನ**– ಮನಗೆಟ್ಟ; ದುಃಖಿತ, ವ್ಯಥಿತ, ನೊಂದ. **ಖೇದ**— ದುಃಖ, ವ್ಯಥೆ.

ಖ್ಯಾ (ಧಾ) —ಹೇಳು. **ಖ್ಯಾತಿ**— ಹೇಳಿಕೆ; ಕೀರ್ತಿ. **ಆಖ್ಯಾ-ಆಖ್ಯೆ**– ಹೆಸರು; ಪ್ರಸಿದ್ಧಿ. **ಆಖ್ಯಾನ**— ಹೇಳೋಣ; ಕಥೆ. **ಆಖ್ಯಾಯಿಕೆ**– ಹೇಳಿಕೆಯ ಮಾತು; ದಂತ ಕಥೆ; ಕಟ್ಟುಕತೆ. **ವ್ಯಾಖ್ಯಾನ**– ಯಾವುದಾದರೊಂದು ವಿಷಯವನ್ನು ಕುರಿತು ವಿವರಿಸಿ ಹೇಳೋಣ; ವಿವರಣೆ, ಟೀಕೆ. **ಸಂಖ್ಯೆ**— ಕೂಡಿಸಿ ಹೇಳುವಿಕೆ, ಒಟ್ಟು. **ಖ್ಯಾತ**— ಹೇಳಲ್ಪಟ್ಟ; ಹೆಸರಾಂತ, ಪ್ರಸಿದ್ಧವಾದ. **ಪ್ರಖ್ಯಾತ, ಪ್ರಖ್ಯಾತಿ, ವಿಖ್ಯಾತ, ವಿಖ್ಯಾತಿ, ಆಖ್ಯಾತ, ಆಖ್ಯಾತಿ, ಆಖ್ಯಾತಿಸು.**

ಗಣ್ (ಧಾ) —ಎಣಿಸು. **ಗಣ**— ಎಣಿಸುವುದು; ಸಮೂಹ, ಮೊತ್ತ, ಹಿಂಡು, ಪಡೆ. **ಗಣಕ**— ಎಣಿಸುವವ; ಜೋಯಿಸ, ಗಣಿತಜ್ಞ. **ಗಣನ-ಗಣನೆ**— ಎಣಿಸುವಿಕೆ, ಲೆಕ್ಕ ಮಾಡುವಿಕೆ, ಎಣಿಕೆ. **ಗಣಿತ**– ಎಣಿಕೆ ಮಾಡಲ್ಪಟ್ಟ; ಲೆಕ್ಕ, ಜ್ಯೋತಿಷ. **ಅಗಣಿತ**— ಎಣಿಕೆ ಮೀರಿದ, ಲೆಕ್ಕ ಮಾಡಲು ಅಸಾಧ್ಯವಾದ; ಅಸಂಖ್ಯ. **ಅವಗಣನೆ (ನಾ)**– ಕೆಳಗೆ ಎಣಿಸೋಣ- ಅಂದರೆ ಅವಮಾನ, ತಿರಸ್ಕಾರ. **ಅವಗಣಿತ**— ತಿರಸ್ಕಾರ ಹೊಂದಿದ, ಕಡೆಗಣಿಸಲ್ಪಟ್ಟ. **ಗಣಿಕೆ (ಕಾ)**— ಹಲವು ಮಂದಿ ಗಂಡಂದಿರನ್ನು ಎಣಿಸುವವಳು; ಸೂಳೆ, ಹೆಣ್ಣಾನೆ. **ಗಣನೀಯ**— ಎಣಿಕೆಗೆ ಯೋಗ್ಯವಾದ; ಮಾನ್ಯ, ಗಮನಿಸತಕ್ಕ.

ಗದ್ (ಧಾ) —ಮಾತಾಡು. **ಗದ**— ಮಾತಾಡುವುದು; ಮಾತು. **ಗದಿತ**— ಮಾತಾಡಿದ, ಹೇಳಿದ. **ಗದ್ಯ**— ಮಾತಾಡುವ-ನುಡಿಯುವ ರೀತಿ; ಕವಿತೆಯಲ್ಲದ ಬರೆಹ; ವಾಕ್ಯಾತ್ಮಕ- ಗ್ರಂಥ ರಚನೆ. **ಗದಗದ, ಗದ್ಗದ, ಗದ್ಗದಿಕೆ.**

ಗಮ್ (ಧಾ) —ಹೋಗು. **ಗತ**— ಹೋದ; ಕಳೆದ; ಆಗಿ ಹೋದ. **ಗತಿ**— ಹೋಗುವಿಕೆ; ಚಲನ ಸ್ಥಿತಿ; ನಡಿಗೆ; ದಾರಿ, ಮಾರ್ಗ. **ಗಮನ**— ಹೋಗುವಿಕೆ, ನಡೆಯುವಿಕೆ. **ಗಮಿಸು**— ಹೋಗು, ನಡೆ. **ಅಧಿಗತ**—

ಯಾವದೊಂದು ಮಾತಿನೊಳಗೆ ಒಳತನಕ ಹೊಕ್ಕವ- ತಿಳಕೊಂಡವ; ಕಲಿತ, ಪಾಠಮಾಡಿದ. **ಆಗಮ**— ಪರಂಪರೆಯಿಂದ ಬಂದ ಜ್ಞಾನ; ಶಾಸ್ತ್ರ; ಬರುವಿಕೆ. **ಆಗಮನ**— ಬರುವಿಕೆ. **ಜಂಗಮ**— ಯಾವಾಗಲೂ ಹೋಗುವ, ನಡೆಯುವ, ಸ್ಥಾವರವಾಗದ. **ಸಂಗತಿ**— ಕೂಡಿ ಹೋಗುವಿಕೆ, ಗೆಳತನ; ಕೂಡಿದುದು, ಸಂಭವಿಸಿದುದು- ವಿಷಯ, ಮಾತು. **ಸಂಗಮ**— ಹೋಗಿ ಒಟ್ಟು ಕೂಡುವಿಕೆ, ಸೇರುವಿಕೆ; ಗೆಳತನ, ಮಿಲನ. **ಸದಾಗತಿ**— ಯಾವಾಗಲೂ ಹೋಗುವುದು; ಗಾಳಿ. **ದುರ್ಗ**— ಒಳಗೆ ಹೋಗಲು ಕಷ್ಟವಾದುದು; ಕೋಟೆ. **ಸಂಗತ, ದುರ್ಗತಿ, ಗಂಗಾ, ಗಾತ್ರ, ಸದ್ಗತಿ, ಅಧಿಗಮ, ಅಧ್ಯಾಗಮ, ಅಪಗಮ, ಅಭಿಗಮ, ಅಭ್ಯಾಗಮ, ಅವಗಮ, ಉದ್ಗಮ, ಉಪಗಮ, ಉಪಾಗಮ, ನಿರ್ಗಮ, ಪರಾಗಮ, ಪರಿಗಮ, ಪರ್ಯಾಗಮ, ಪ್ರಗಮ, ಪ್ರತಿಗಮ, ಪ್ರತ್ಯಾಗಮ, ವಿಗಮ.**

ಗರ್ಜ್ (ಧಾ) –ಗದರಿಸು. **ಗರ್ಜನ (ನೆ)**— ಗದರಿಸುವಿಕೆ; ಕೂಗುವಿಕೆ; ಆರ್ಭಟೆ. **ಗರ್ಜಿತ**- ಗದರಿಸಿದ; ಕೂಗಿದ; ಆರ್ಭಟಿಸಿದ. **ಗರ್ಜಿಸು.**

ಗರ್ವ್ (ಧಾ) —ಹೆಮ್ಮೆ ಮಾಡು. **ಗರ್ವ**- ಹೆಮ್ಮೆ; ಅಹಂಕಾರ, ಸೊಕ್ಕು. **ಗರ್ವಿತ**- ಹೆಮ್ಮೆ ಮಾಡಿದ, ಸೊಕ್ಕಿದ. **ನಿಗರ್ವಿ**- ಹೆಮ್ಮೆ ಇಲ್ಲದವ- ಸುಜನ. **ಗರ್ವಿಷ್ಠ**— ಹೆಮ್ಮೆ ಉಳ್ಳವ, ಸೊಕ್ಕುಳ್ಳವ. **ಗರ್ವಿಸು, ಸಗರ್ವ.**

ಗಲ್ (ಧಾ) –ಜಾರಿ ಹೊಗು, ಬೀಳು. **ಗಲ**- ಜಾರಿ ಹೋಗುವುದು, ಬೀಳುವುದು; ಗಂಟಲು. **ಗಲಿತ**- ಉದುರಿ ಬಿದ್ದ. **ಗಾಲನ**- ಗಾಣ. **ವಿಗಲಿತ**- ವಿಶೇಷವಾಗಿ ಉದುರಿ ಬಿದ್ದ. **ಗಾಲಿತ, ನಿರ್ಗಲಿತ.**

ಗುಣ್ (ಧಾ) –ಕರೆ, ಎಣಿಸು. **ಗುಣ**— ಮನುಷ್ಯನಲ್ಲಾಗಲಿ ವಸ್ತುವಿನಲ್ಲಾಗಲಿ ಬೇರೆಯವರನ್ನು ಕರೆಯುವಂತೆ ಅಥವಾ ಬೇರೆಯವರು ಎಣಿಸುವಂತೆ ಇದ್ದ ವಿಶೇಷ ಧರ್ಮ. **ದುರ್ಗುಣ**— (ದುರ್+ಗುಣ) –ಕೆಟ್ಟ ಗುಣ. **ಸದ್ಗುಣ**— (ಸತ್+ಗುಣ) –ಒಳ್ಳೆಯ ಗುಣ. **ಗುಣಕ, ಗುಣಿ, ಗುಣ್ಯ, ಸುಗುಣ, ಸಗುಣ, ತ್ರಿಗುಣ, ಗುಣನಾಮ, ಗುಣವಂತ.**

ಗುಪ್ (ಧಾ) —ಕಾಯು, ಜೋಕೆ ಮಾಡು. **ಗೋಪ**— (ದನ) ಕಾಯುವವ. **ಗೋಪನ**— ಜೋಪಾನ; ಸಾಕೋಣ. **ಗೋಪ್ಯ**— ಜೋಕೆ

ಮಾಡತಕ್ಕ, ಕಾಯತಕ್ಕ. ಸಂಗೋಪನ- ವಿಶೇಷವಾಗಿ ಜೋಕೆ ಮಾಡೋಣ **ಗೋಪಿ, ಗೋಪಿತ, ಗೋಪುರ, ಗೋಪ್ಯ**.

ಗುಪ್ (ಧಾ) -ಅಡಗಿಸು. **ಗುಪ್ತ**- ಅಡಗಿಸಿದ; ಗುಟ್ಟು. **ಗೋಪನ**- ಅಡಗಿಸಿಡುವಿಕೆ, ಗುಟ್ಟಿನಲ್ಲಿಡುವಿಕೆ. **ಗೋಪನೀಯ**— ಅಡಗಿಸಿಡತಕ್ಕ, ಗುಟ್ಟಾಗಿರಿಸತಕ್ಕ. **ಗುಪ್ತಕ, ಗುಪಿತ, ಗೋಪಾಯಿತ, ಗುಪ್ತಿ, ಗುಪ್ತಗಾಮಿನಿ.**

ಗುಫ್ (ಧಾ) —ಪೋಣಿಸು. **ಗುಂಫ**— ಪೋಣಿಸುವಿಕೆ; ಕಟ್ಟುವಿಕೆ; ರಚನೆ. **ಗುಂಫಿತ**— ಪೋಣಿಸಿದ, ರಚಿಸಿದ. **ಗುಂಫನ**— ಪೋಣಿಸುವಿಕೆ, ರಚನೆ; ಉತ್ತಮ ವಾಕ್ಯ ರಚನೆ. **ಗುಂಫಕ**— ಪೋಣಿಸಿದುದು, ರಚಿಸಿದ್ದು. **ಪ್ರಗುಂಫನ**— (ಪ್ರ+ಗುಂಫನ), **ಪ್ರಗುಂಫ.**

ಗುಹ್ (ಧಾ) —ಅಡಗಿಸು. **ಗುಹೆ** (ಹಾ)— ಅಡಗಿಸುವುದು; ಗವಿ. **ಗುಹ್ಯ**— ಅಡಗಿಸತಕ್ಕ ವಸ್ತು; ರಹಸ್ಯ, ಗುಟ್ಟು, ಭಗ, ನಾಣ್, ಕೌಪೀನ. **ಗೂಢ**— ಅಡಗಿದ, ಮುಚ್ಚಿದ; ಗುಟ್ಟಿನ, ಮರೆಯಾದ. **ನಿಗೂಢ, ಗೂಢಚರ, ಗೂಢಚಾರ, ಗೂಢಚಾರಿ, ಗೂಢಪುರುಷ, ಗೂಢಜ, ಗೂಢತೆ, ಗೂಢಪ, ಗೂಢಪದ, ಗೂಢಪಾದ, ಗೂಢಸಂಧಿ, ಗೂಢಸಾಕ್ಷಿ, ಗೂಢಾಂಗ.**

೧೫ ಸಂಧಿ—ಸಮಾಸ.

ಮುನಿಪೋತ್ತಮ- ಮುನಿಪ+ಉತ್ತಮ (ಗುಣ) ಮುನಿಪರಲ್ಲಿ ಉತ್ತಮ (ತ. ಸ). ಕೈಗೋಲು— ಕೈ+ಕೋಲು (ಆದೇಶ) ಕೈಯ ಕೋಲು (ತ. ಸ). ಕೆನೆವಾಲು— ಕೆನೆ+ಪಾಲು (ಆದೇಶ) (ಕ. ಸ). ರಾಜೇಂದ್ರ— ರಾಜ+ಇಂದ್ರ (ಗುಣ) ರಾಜರಲ್ಲಿ ಇಂದ್ರ (ತ. ಸ). ಪೊಂಜುರಿಗೆ— ಪೊನ್+ಸುರಿಗೆ (ಆದೇಶ) ಪೊನ್ನಿನ ಸುರಿಗೆ (ಕ. ಸ). ಎಳವೆರೆ- ಎಳ+ಪೆರೆ (ಆದೇಶ) ಎಳದು ಪೆರೆ (ಕ. ಸ) ಮೆಲ್ಮಾತು-ಮೆಲು+ಮಾತು (ಆದೇಶ) ಮೆಲ್ಲಿತು ಮಾತು (ಕ. ಸ). ದಿವ್ಯಾಸ್ತ್ರ- ದಿವ್ಯ+ಅಸ್ತ್ರ (ಸ. ಧೀ.) ದಿವ್ಯವಾದ ಅಸ್ತ್ರ (ಕ. ಸ). ಕೈವೆರಳು- ಕೈ+ಬೆರಳು (ಆದೇಶ) ಕೈಯ ಬೆರಳು (ತ. ಸ). ಕೆಂದೂಳು— ಕೆಚ್ಚನೆ+ದೂಳು (ಕಂ. ವ್ಯಂ.) (ಕ. ಸ). ಲಕ್ಷ್ಮೀಶ- ಲಕ್ಷ್ಮಿ+ಈಶ (ಸ. ಧೀ.) ಲಕ್ಷ್ಮಿಯ ಈಶ (ತ. ಸ). ಖಗೇಶ್ವರ— ಖಗ+ಈಶ್ವರ (ಗುಣ) ಖಗಗಳ ಈಶ್ವರ (ತ. ಸ). ಬಲೌಘ—

ಬಲ+ಓಘ (ವೃದ್ಧಿ) ಸಬಲಗಳ ಓಘ (ತ. ಸ). ಪನ್ನೆರಡು— ಪತ್ತು ಎರಡೂ (ಆದೇಶ) (ದ್ವಂದ್ವ). ನಿಗಮಾಗಮ— ನಿಗಮ+ಆಗಮ (ಸ. ಧೀ.) ನಿಗಮವೂ ಆಗಮವೂ (ದ್ವಂದ್ವ). ತಪೋವನ— ತಪಃ+ವನ (ವಿಸರ್ಗ) ತಪದ ವನ (ತ. ಸ). ನೂರ್ಛಾಸಿರ— ನೂರು+ಸಾಸಿರ (ಆದೇಶ) (ದ್ವಿಗು) ಹಳೆಗಂನುಡಿ— ಹಳದು+ಕಂನುಡಿ (ಆದೇಶ) ಕನ್(ಣ್)+ನುಡಿ (ಆದೇಶ) ಹಳೆಯ ಕಂನುಡಿ (ಕ. ಸ.) ಕಣ್ಣ(ನ್ನ)ರ ನುಡಿ (ತ. ಸ). ಪುಲಿದೊವಲು— ಪುಲಿ+ತೊವಲು (ಆದೇಶ) ಪುಲಿಯ ತೊವಲು (ತ. ಸ). ಕಣ್ಬೊಲ— ಕಣ್+ಪೊಲ (ಆದೇಶ) ಕಣ್ಣ ಪೊಲ (ತ. ಸ). ವೇದೋಕ್ತ— ವೇದ+ಉಕ್ತ (ಗುಣ) ವೇದದಲ್ಲಿ ಉಕ್ತ (ತ. ಸ). ಪದಾಬ್ಜ— ಪದ+ಅಬ್ಜ (ಸ. ಧೀ). ಅಪ್+ಜ (ಸಂ. ವ್ಯಂ.) ಪದ ಅಬ್ಜದಂತೆ (ಕ. ಸ). ಕುಲಾದ್ರಿ— ಕುಲ+ಆದ್ರಿ (ಸ. ಧೀ.) ಕುಲದ ಅದ್ರಿ (ಮುಖ್ಯವಾದ ಏಳು ಪರ್ವತಗಳಲ್ಲಿ ಒಂದು) (ತ. ಸ). ಎಳಗರು— ಎಳದು+ಕರು [ಆದೇ] ಎಳೆಯ ಕರು [ಕ. ಸ]. ತೆರೆವಾಯಿ— ತೆರೆ+ಬಾಯಿ [ಆದೇಶ] ತೆರೆದ ಬಾಯಿ [ಗ. ಸ]. ಸನ್ಮಾರ್ಗ— ಸತ್+ಮಾರ್ಗ [ಸಂ. ವ್ಯಂ] [ಕ. ಸ]. ಪಿತ್ರಾಜ್ಞೆ— ಪಿತೃ+ಆಜ್ಞೆ [ಯಣ್] ಪಿತೃವಿನ ಆಜ್ಞೆ [ತ. ಸ]. ಬೆಂಬೂದಿ— ಬೆಚ್ಚನೆ+ಬೂದಿ [ಕಂ. ವ್ಯಂ.] [ಕ. ಸ]. ಉಷ್ಣೋದಕ— ಉಷ್ಣ+ಉದಕ [ಗುಣ] ಉಷ್ಣವಾದ ಉದಕ [ಕ. ಸ]. ಕಮಂಡಲೋದಕ— ಕಮಂಡಲ+ಉದಕ [ಗುಣ] ಕಮಂಡಲದ ಉದಕ [ತ. ಸ]. ವಿಸ್ಮಯಾನ್ವಿತನು— ವಿಸ್ಮಯ+ಅನ್ವಿತನು [ಸ. ಧೀ] ವಿಸ್ಮಯದಿಂದ ಅನ್ವಿತನು [ತ. ಸ]. ಜಗಚ್ಚಕ್ಷು— ಜಗತ್+ಚಕ್ಷು [ಸಂ. ವ್ಯಂ.] ಜಗತ್ತಿನ ಚಕ್ಷು [ತ. ಸ]. ರಾಕ್ಷಸೇಂದ್ರ— ರಾಕ್ಷಸ+ಇಂದ್ರ [ಗುಣ] ರಾಕ್ಷಸರಲ್ಲಿ ಇಂದ್ರ [ತ. ಸ]. ವಿನುತಾಶ್ವಮೇಧ— ವಿನುತ+ಅಶ್ವಮೇಧ [ಸ. ಧೀ.] ವಿನುತವಾದ ಅಶ್ವಮೇಧ [ಕ. ಸ]. ಬಿಲ್ದಿರು— ಬಿಲ್+ತಿರು [ಕಂ. ವ್ಯಂ.] ಬಿಲ್ಲ ತಿರು [ತ. ಸ]. ವರುಣಾಸ್ತ್ರ— ವರುಣ+ಅಸ್ತ್ರ [ಸ. ಧೀ.] ವರುಣವೆಂಬ ಅಸ್ತ್ರ [ಕ. ಸ].

೧೬ ಸಂಸ್ಕೃತ—ತದ್ಭವ.

ಆಕಾಶ—ಆಗಸ, ದಿಶಾ—ದೆಸೆ, ಆರಾತ್ರಿಕಾ—ಆರತಿ, ಖನಿ—ಗಣಿ, ಕುಮಾರ—ಕುವರ, ಮಾಣಿಕ್ಯ—ಮಾಣಿಕ, ಕಾಚ—ಗಾಜು, ಶ್ರೀ—ಸಿರಿ, ಪಙ್ಕ್ತಿ—ಹಂತಿ, ಮುಗ್ಧ—ಮುಗುದ, ಜಟಾ—ಜಡೆ, ಚೀರ—ಸೀರೆ, ಉದ್ಯೋಗ—

ಉಜ್ಜುಗ, ಋಣ-ರಿಣ, ಚತುರ—ಚದುರ, ನಿಶ್ಚಲ—ನಿಚ್ಚಳ, ಗ್ರಾಮೀಣ-ಗಾವಿಲ, ಪತಿವ್ರತಾ—ಹದಿಬದೆ, ಆಜ್ಞಪ್ತಿ—ಆಣತಿ, ಸುಖ—ಸೊಗ, ಸುಕ. ಕುಮಾರಿ—ಕುವರಿ.

ಅಭ್ಯಾಸ ೪.

೧. ಧ್ವನಿಸಾಮ್ಯವುಳ್ಳ ಶಬ್ದಗಳು.

ನಲ್ಮೆ— ಪ್ರೀತಿ, ಪ್ರೇಮ; ಸ್ನೇಹ; ಕ್ಷೇಮ; ಶುಭ; ಅಭಿವೃದ್ಧಿ. **ಎಲ್ಮೆ**— ಪ್ರೀತಿ, ಪ್ರೇಮ; ಸಂತೋಷ; ದಯೆ; ಕೃಪೆ. (ಒಲುವೆ-ಒಲುಮೆಯಿಂದ ದೃಷ್ಟಿಮಾಂದ್ಯ ತಗಲುವುದರಿಂದ, (Love is blind) ಲೋಕಕ್ಕೆ ಕ್ಷೇಮ. -ಅ.) **ಚಲ್ಮೆ**— ಚಲವೆ, ಚಿಲುಮೆ; ನೀರಿನ ಬುಗ್ಗೆ. **ಬಲ್ಮೆ**- ಶಕ್ತಿ, ಬಲುಹು, ತ್ರಾಣ.

ಅನ್ಯ— ಬೇರೆ. **ಜನ್ಯ**- ಹುಟ್ಟಿದ, ಹುಟ್ಟತಕ್ಕ; ಉತ್ಪತ್ತಿ. **ಧನ್ಯ**- ಕೃತಾರ್ಥ, ಭಾಗ್ಯಶಾಲಿ; ಪುಣ್ಯವಂತ, ಅದೃಷ್ಟಶೀಲ. **ಮನ್ಯ**- ಹೆಡಕು, ಚೆಂಡು; ಹೆಗ್ಗತ್ತು. **ಪಣ್ಯ**- ಮಾರಲಿಕ್ಕೆ ಇಟ್ಟ; ಬೆಲೆಕೊಟ್ಟು ಪಡೆಯಬಹುದಾದ ವಸ್ತು; ಅಂಗಡಿ. **ವನ್ಯ**- ಕಾಡಿನ, ಕಾಡಿನಲ್ಲಿರುವ; ಕಾಡುಮೃಗ. **ಪುಣ್ಯ**- ಉತ್ತಮ; ಪವಿತ್ರ; ಸುದೈವ. (ಪುಣ್ಯ-ಹುಲಿಶಿಕಾರಿಗೆ ಎಂದು ಹೊರಟಾಗ, ಹುಲಿ ಸಿಗದಿರುವುದೇ ಪುಣ್ಯ. ಪುಣ್ಯಕೋಟಿ- ಸಾಧು ಎನಿಸಿಕೊಂಡ ಹಸು; ದುಷ್ಟರಿಗೆ ಸತ್ಯಾಗ್ರಹ ಬೋಧಿಸುವ ಗುರು. —ಅ.

ಅಜ— ಜನನವಿಲ್ಲದ; ಬ್ರಹ್ಮ; ಆಡು. **ಖಜ**- ಕದಡು, ಕಲಕು; ಕಡೆ, ಮಥಿಸು; ಕಡಗೋಲು; ಸಟ್ಟುಗ; ವಿವಾದ; ಸ್ಪರ್ಧೆ. **ಗಜ**- ಆನೆ; ಒಬ್ಬ ರಾಕ್ಷಸ; ಮೂರು ಫೂಟಿನ ಉದ್ದಳತೆ. (ಗಜಗಮನೆ— ಒಂದೊಂದು ಹಜ್ಜೆಗೂ ಒಂದೊಂದು ಗಜ ದೂರ ಹಜ್ಜೆ ಇಡುವ ಹೆಂಗಸು. ಗಜಗಜಾಂತರ-ಅಳತೆ ಮಾಡುವಾಗ ಗಜಗಜಕ್ಕೂ ಅಂತರ ಕಲ್ಪಿಸುವ ಚಾಕಚಕ್ಯತೆ. -ಅ.) **ಜಜ**- ಬಂಟ, ವೀರ, ಯೋಧ, ಭಟ; ರಣಧೀರ. (ಜಜ್ಜಾರ.) **ಬಜ**- ಬಜೆ. **ರಜ**- ದೂಳು, ಪರಾಗ; ಮುಟ್ಟು; ತ್ರಿಗುಣಗಳಲ್ಲಿ ಒಂದು. (ರಜದಮಹೋತ್ಸವ- ಶಾಲಾ ಹುಡುಗರಿಗೆ. —ಅ.)

ದಾಹ— ಸುಡುವಿಕೆ; ಪೀಡೆ; ಶರೀರದ ಬೇಗೆ; ಬಾಯಾರಿಕೆ; ಬಯಕೆ; ಲೋಭ. **ಆಹ**- ಆಹ, ಅಪ್ಪ, ಆಗುವ. (ಹಿರಿದು ಆಹ ದಾನ—ದಾನೋತ್ಕೃಷ್ಟ.) ಆಹಾ, ಆಶ್ಚರ್ಯ ಸೂಚಿಸುವ ಅವ್ಯಯ. (ಆಹ, ಇದು ತಪ್ಪದು.) **ಗಾಹ**— ಇಳಿಯುವುದು, ಮುಳುಗುವುದು, ಸ್ನಾನ; ಮರೆಗೊಳ್ಳುವಿಕೆ; ಆಳ; ಒಳಪ್ರದೇಶ; ಅತ್ಯಂತ ಒಳಮೂಲೆ. **ಚಾಹ**— ಚಹಾ. (ಕಷಾಯ ಕೊಡಲು ಪ್ರೇರೇಪಿಸುವ ಒಂದು ಬಗೆಯ ಕಷಾಯ; ಕಾಫಿ ಮಾಡುವುದಕ್ಕೆ ಚೆನ್ನಾಗಿ ಬರದ ಜನ ಇದನ್ನೇ ಕುಡಿಯುತ್ತಾರೆ.-ಅ.) **ನಾಹ**- ಬಂಧಕ, ಕಟ್ಟುವಂಥ; ಬಂಧನ; ಅಡ್ಡಿ, ಆತಂಕ, ಪ್ರತಿಬಂಧಕ; ಬಲೆ, ಜೋನು. **ಬಾಹ**— ಬರುವ. (ತಂಬಿಗೆಯ ತಪ್ಪಲೆಯ ಕೊಡರೆ ಉಂಬುದಕೆ ಕುಡಿವದಕೆ ಬಾಹವು. ಸುಮ್ಮನೆ ಬಾರದೆ ಮುಕ್ತಿ?) ಬಾಹು, ತೋಳು. [ಬಾಹಾಸ್ಫಾಲನ] **ವಾಹ**- ಒಯ್ಯುವ, ಹೊರುವ, ಧರಿಸುವ; ಕುದುರೆ; ತೋಳು; ಪ್ರವಾಹ. **ಸಾಹ**— ಸಹ. [ಸಾಹಚರ್ಯ.] **ವಾಸ**— ಇರುವಿಕೆ, ಮನೆ, ವಸತಿ; ವಸ್ತ್ರ; ಉಡುಗೆ; ಪರಿಮಳ. **ಆಸ**— ಎಸೆಯುವಿಕೆ, ಬಿಸಾಡುವಿಕೆ, ಒಗಿಯುವಿಕೆ. [ವಿಪರ್ಯಾಸ, ವ್ಯಾಸ, ಅತ್ಯಾಸ;] ಬಿಲ್ಲು—ಕೂಡು, ಆಸನ. [ಉತ್ತರಾಸ]. **ಕಾಸ**— ಕಾಶ, ಪ್ರಕಟವಾಗುವಿಕೆ; ಪ್ರಭೆ, ಹೊಗಳು, ಕಾಂತಿ, ತೆರೆಯುವಿಕೆ. [ವಿಕಾಸ]— ಕೆಮ್ಮು, ಕೆಮ್ಮಲು, ದಮ್ಮು.— ಹೋಗುವುದಕ್ಕೆ ಕಾರಣವಾಗುವಿಕೆ. [ಕಾಸಗಾರ, ಕಾಸದಾರ, ಕಾಸ್ತಾರ; ನಿಷ್ಕಾಸ, ನಿಷ್ಕಾಸಿತ.] **ಖಾಸ**— ಕಾಶ. ಖಾಸ [ಸಂ]— ಕಾಸ [ದ್ಭ]; ಸ್ವಂತ, ತನ್ನದೇ ಆದ. **ಗಾಸ**— ಕಾಚ [ಸಂ]- ಗಾಸ [ದ್ಭ]; ಗಾಜು. [ಮನೆ ಗಾಸ ಮೊದಲಾದವರಿಂದ ಮಾಡಿದ ಪುತ್ತಳಿ.] **ಘಾಸ**— ಆಹಾರ, ಹುಲ್ಲು. **ದಾಸ**— ಸೇವಕ; ಭಕ್ತ. [ಎರಡು ದಾಸರಿಗೆ ನಂಬಿ, ಕುರುಡ ದಾಸ ಕೆಟ್ಟ. ಕಲಕಾಲ ದಾಸಯ್ಯನಾದರೆ ತಿರುಮಂತ್ರ ಹೇಳ್ಯಾನು. ದಾಸಯ್ಯನೆತ್ತ? ದನ ಕರುವೆತ್ತ?]; ಬೆಸ್ತ. **ನಾಸ**— ನಾಸೆ [ಸಂ] — ನಾಸ [ದ್ಭ]. ಮೂಗು; ಆನೆಯ ಸೊಂಡಿಲು; ಬಾಗಿಲ ಮೇಲಿನ ಭಾಗದಲ್ಲಿ ಮೂಗಿನ ಆಕಾರದಲ್ಲಿ ಕೆತ್ತಿದ ಮರದ ಭಾಗ.— ನಾಶ [ಸಂ] — ನಾಸ [ದ್ಭ]; ಹಾಳುಮಾಡುವವ. [ಸುಡನಾಸ [ಪು.] ಸುಡನಾಸಿ [ಸ್ತ್ರೀ.]] **ಪಾಸ**— ಪಾಶ [ಸಂ]- ಪಾಸ [ದ್ಭ]. ಹಗ್ಗ; ಬಂಧ; ಕಟ್ಟು; ಉರುಲು; ಆಯುಧ ವಿಶೇಷ. [ತೋಳ್ಪಾಸ. ಪಾದವಾಸ]. **ಬಾಸ**— ವಾಸನೆ. **ಭಾಸ**- ಬೆಳಕು, ಪ್ರಕಾಶ; ಮನಸ್ಸಿನಲ್ಲಿ ಹೊಳೆಯುವಿಕೆ; ಭಾವ; ಇಷ್ಟ, ಅಭಿರುಚಿ;

[ಆಭಾಸ.] ಗಿಡುಗ, ರಣಹದ್ದು; ಶಕುಂತ, ಪಿಂಗಲಿ, ಹಾಲುವಕ್ಕಿ; ದನಗಳ ಹಟ್ಟಿ. **ಮಾಸ**— ಚಂದ್ರ; ಮೂವತ್ತು ದಿನಗಳುಳ್ಳ ತಿಂಗಳು. (ಮಾಸಕ್ಕೆ ರಡುಸಲ ಉಪವಾಸ ಮಾಡಿದರೂ ಕಾಸೊಂದು ಬಿಡಲಾರ) ಹನ್ನೆರಡು ನಂಬ್ರ- ಮಹಸ್ [ಸಂ]- ಮಾಸ [ದ್ಭ]. [ಮಾಸವಳ, ಮಾಸಾಳು.] **ಯಾಸ**— ವೇಷ [ಸಂ]- ಯಾಸ [ದ್ಭ]. —ಯವಾಸ = ಒಂದು ಜಾತಿಯ ಗಿಡ. [The manna-plant] **ರಾಸ**— ಶಬ್ದ, ಗದ್ದಲ, ಧ್ವನಿ; ಕೃಷ್ಣ-ಗೋಪಿಯರ ಕುಣಿತ; ಸ್ತ್ರೀ-ಪುರುಷರು ಕೂಡಿ ಕುಣಿಯುವ ಒಂದು ಶೃಂಗಾರ ವಿನೋದ. **ಲಾಸ**— ಜಿಗಿದಾಟ, ಹಾರಾಟ; ಕುಣಿತ. [ವಿಲಾಸ] **ಸಾಸ**— ಸಾಹಸ [ಸಂ]- ಸಾಸ [ದ್ಭ]. ದೊಡ್ಡ ಪ್ರಯತ್ನ, ಪರಾಕ್ರಮ, ಅದಟು, ಅರ್ಪು.— ಶ್ವಾಸ [ಸಂ]- ಸಾಸ [ದ್ಭ]. **ಹಾಸ**— ನಗೆ, ಚೇಷ್ಟೆ, ವಿನೋದ, ಮನರಂಜನೆ, ಸಂತೋಷ, ಅಣಕ. [ಚಂದ್ರಹಾಸ, ಪರಿಹಾಸ, ಪ್ರತಿಹಾಸ]—ಹಾಶ [ಸಂ]— ಹಾಸ [ದ್ಭ] ಕಟ್ಟು, ಬಂಧನ.—ಹಾಸು. [ಹಾಸಗಬ್ಬು-ಹಾಸುಗಲ್ಲು.]

೨ ಮೇಳನುಡಿಗಳು.

ಸಮೂಹ— ಆಳಿ, ಗುಂಪು, ರಾಶಿ, ಸಮುದಾಯ, ಸಮುದಯ, ಸಮವಾಯ, ಚಯ, ತತಿ, ನಿಕರ, ಆಕರ, ವ್ರಾತ, ವೃಂದ, ಒಡ್ಡು, ಓಳಿ, ಕುಲ, ರಾಜಿ, ನಿಕಾಯ, ಸಂಕುಲ, ಸಂಚಯ, ಸಂದಣಿ, ಮೊತ್ತ, ಸ್ತೋಮ, ಸಂದೋಹ, ನಿವಹ, ವಿಸರ, ವ್ರಜ, ಓಘ, ವಾರ, ವ್ಯೂಹ, ಸಂಘಾತ, ಗಣ, ನಿಕುರುಂಬಕ, ಕದಂಬಕ, ಗೊಂದಣಿ, ಸಂಹತಿ, ಹಿಂಡು, ಹೊರಳಿ, ಗಡಣ, ದೊಂಡುಳಿ, ತುರುಗಲು, ಬಂಬಲು, ಕದಲೆ, ತಿಂತಿಣಿ, ತಟ್ಟು, ಥಟ್ಟು, ಒಟ್ಟಜೆ, ಜಂಗುಳಿ, ಬಿಂದ. **ಎತ್ತು**— ನೆಗಪು, ನೆಗಹು, ಕದಿ, ಕಳು. **ಕೂದಲು**— ಕೇಶ, ಕುರುಳು, ಕಚ, ವಾಲ, ಪ್ರವಾಲ, ಅಲಕ, ನವಿರು, ಚಿಕುರು, ಕುಂತಳ, ಶಿರಸಿಜ, ಶಿರೋರುಹ, [ಮೈಯ್ಯ ಕೂದಲು— ರೋಮ, ತನೂರುಹ] [ಕಣ್ಣ ಕೂದಲು— ಪಕ್ಷ್ಮ]. **ಗೂಡು**— ಇಕ್ಕೆ, ಹಕ್ಕೆ, ಹಟ್ಟಿ, ದಡ್ಡಿ, ದೊಡ್ಡಿ, ಕರಕ, ನೀಡು, ನೀಡ, ಮುಂದೆ, ರೊಪ್ಪ, ಗವಿ, ನೆಲೆ, ಮನೆ, ಪಂಜರ, ಪಿಂಜರ, ಹಂಜರ, ಕುಲಾಯ. **ಜಗಳ**— ಹೋರಾಟ, ಹೋರಟೆ, ಹೊಯ್ದಾಟ, ಹೊಣಕೆ, ಹಣಿದ, ಬಂಡಣ, ಕಾಳಗ, ಬವರ, ಕೊಳಗುಳ, ಕೊಳುಗುಳ, ಪೊಣರು, ಪೊಣರ್ಕೆ, ಜುದ್ಧ, ಮೊನೆ, ಆಹವ, ಕಲಹ, ಕರ್ರಕ, ಕದನ,

ಯುದ್ಧ, ಸಂಗ್ರಾಮ, ಸಮರ, ರಣ, ಅನೀಕ, ಸಂಖ್ಯ, ಸಮೀಕ, ಆಜಿ, ಕಲಿ, ವಿಗ್ರಹ, ಸಂಪ್ರಹಾರ, ಸಾಪರ, ಸಂಯುಗ, ಸಮಿತಿ, ಆಯೋಧನ, ಆಸ್ಕಂದನ, ಪ್ರಧನ, ಜನ್ಯ, ಸಮಾಘಾತ, ಅಭಿಸಂಪಾತ, ಸಮುದಾಯ. ಅಭ್ಯಾಗಮ, ಮೃಧ, ಪ್ರವಿದಾರಣ, ದೌರ್ಮದ್ಯ, ಅಭ್ಯಾಮರ್ದ, ಸಂಸ್ಫೋಟ, ಸಾಂಪರಾಯಿಕ, ಸಂಯುತ್, ಸಮಿತ್, ಯುಧ್.

ಚೆಂದ— ಅಂದ, ಚೆಲುವು, ಸೊಗಸು, ಸೊಬಗು, ಸೊಂಪು, ದೇಸೆ, ಗಾಡಿ, ಲೇಸು, ಒಳ್ಪು, ಚೆನ್ನು, ರಮ್ಯ, ಎಡ್ಡ, ಮನೋಹರ, ಜಾತ್ಯ, ಪ್ರಸವ, ವೃಷ, ನಿರತೆ, ಸುಭಗತೆ, ಗನಗರಿಕೆ, ಸುಂದರ, ರಾಮ, ರಯ್ಯ, ಚೊಕ್ಕ, ಚೊಕ್ಕಳಿಕೆ, ರಮಣೀಯ, ಸೌಮ್ಯ, ರಮಣೀಯಕ, ರಾಮಣೀಯಕ, ಪೇಶಲ, ಕೋಟಿ. **ನಾಡು—** ದೇಶ, ವಿಷಯ, ಸೀಮೆ, ರಾಜ್ಯ, ಜನಪದ, ಉಪವರ್ತನ, ನೀವೃತ್, ನಾಳ್, ನಾಣ್. **ಚಿಗುರು—** ಕೊನರು, ತಳಿರು, ಮೊಳಕೆ, ಕುದಿ, ಕೊಂಬು, ಪಲ್ಲವ, ಪಲ್ಲವಾಂಕುರ, ಕಿಸಲಯ, ಪ್ರವಾಲ. **ಜಾಣ—** ಚತುರ, ಚದುರ, ಬಲ್ಲಿದ, ಬಲ್ಲವ, ಅರಿಗ, ಅರಿವ, ಶಿಕ್ಷಿತ, ವಿದ್ವಾಂಸ, ಬುಧ, ಪಂಡಿತ, ಬುದ್ಧಿವಂತ, ಧೀಮಂತ, ಧೀರ, ನಿಪುಣ, ಪ್ರವೀಣ, ಕುಶಲ, ಪೇಶಲ, ಸೂರಿ, ಸೂಧಾನ, ವಿದುಷ, ರೂಪಕ, ಪಟು, ತೀರ್ಥ, ಬೆಗಡ, ದಕ್ಷ, ಅಭಿಜ್ಞ, ಸಿಷ್ಣಾತ, ಕ್ಷೇತ್ರಜ್ಞ, ಕೃತಹಸ್ತ, ಕೃತಮುಖ. **ಓಡು—** ಪರಿ, ಹರಿ, ಸರಿ, ಧಾವಿಸು, ಧೀಂಕಿಡು, ಪಲಾಯನ, ಪೊರಮಾರು, ತೆಗೆ. **ಕೊಂಬೆ—** ಕೊಂಬು, ಕೋಡು, ಕೊಂಗೆ, ಕವಲು, ಟಿಸಲು, ಟೊಂಗೆ, ರೆಂಬೆ, ವಿಟಪ, ಶಾಖೆ. **ಅಡಗು—** ಅಣಗು, ಕಾಣದಾಗು, ಮರೆಯಾಗು, ಅವಿತುಕೊಳ್ಳು, ಮೈಗರೆ, ತಲೆಗರೆ, ಹುದುಗು, ತಿರೋಹಿಸು. **ಬಾಗು—** ಬೀಳು, ಮಣಿ, ಎರಗು, ಪೊಡಮ(ವ)ಡು, ವಂದಿಸು, ನಮಿಸು, ನಮಸ್ಕರಿಸು, ಕೈಮುಗಿ, ಕುಂಬಿಡು, ತುಳಿಲ್ಗೆಯ್, ಮಗ್ಗು, ಮುಡುಕು, ಮೊಳ್ಗ. **ಮಳೆ—** ಸರಿ, ಸರವು, ಸೆಳಕು, ಸೋನೆ, ಹನಿ, ಸಿಡಿಕಲು, ಸಿಟಿಸಿಟಿ, (ಜಿಟಿಜಿಟಿ), ಜಡಿ, ಒದ್ದೆ, ತಂದಲು, ತುಂತುರ, ವೃಷ್ಟಿ, ವರ್ಷ, ಆಸಾರ, ಧಾರಾಸಂಪಾತ, ಘನವಾರಿ. **ಗೊಂಚಲು—** ಗೊನೆ, ಕುಚ್ಚು, ಕೊಚ್ಚು, ತೊಂಗೆ, ತೊಂಗಲು, ತೊಂಬೆ, ತೊಡಂಬೆ, ಜೊಂಪ, ಗುಚ್ಛ, ಗುಚ್ಛಕ, ಗುದಿ, ಗುಲುಂಛ, ಮಂಜರಿ, ವಲ್ಲರಿ, ಸ್ತಬಕ, ಸ್ತವಕ. **ಅಲೆ—** ತಿರಿ, ತಿರುಗು, ಸುತ್ತು, ಓಡಾಡು, ಹೊಯ್ದಾಡು, ಬಳಸು, ಭ್ರಮಿಸು, ಘೂರ್ಣಿಸು, ವಿಭ್ರಮಿಸು, ಸಂಭ್ರಮಿಸು.

೩. ನಾನಾರ್ಥ.

ಸುರ— ದೇವತೆ; ಸೂರ್ಯ; ವಿದ್ವಾಂಸ; ಯತಿ; ಆಸವ; ನೀರು; ಸರ್ಪ. **ಪೆಂಪು**— ಆಧಿಕ್ಯ, ಹೆಚ್ಚಳ; ದೊಡ್ಡಸ್ತಿಕೆ, ಗೌರವ, ಸಡಗರ, ವೈಭವ; ಶ್ರೇಷ್ಠತೆ; ಉನ್ನತಿ; ವರ್ತಮಾನ, ಸುದ್ದಿ; ಕೀರ್ತಿ,ಪ್ರಸಿದ್ಧಿ; ಖ್ಯಾತಿ; ಗರ್ವ; ಅಭಿವೃದ್ಧಿ; ಹಿಗ್ಗು; ಕೈಗೂಡಿಕೆ. **ಪುಟ**— ಜೋಡು, ಯುಗ್ಮ; ಪತ್ರ, ಪರ್ಣ; ಮುಚ್ಚುವ ವಸ್ತು, ಮುಚ್ಚಳ, ಹೊದಿಕೆ; ಎಲೆಗಳಿಂದ ಮಾಡಿದ ಬುಟ್ಟಿ; ಕಣ್ಣ ಮುಚ್ಚಳ, ರೆಪ್ಪೆ; ಮಡಿಕೆ, ಪದರು, ನಿರಿಗೆ; ನೆಗತ, ಹಾರು; ಔಷದ ಇಲ್ಲವೆ ಬೆಂಕಿ ಹಾಕೋಣ, ಹೊತ್ತಿಸೋಣ; ಲೋಹಗಳನ್ನು ಬೆಂಕಿಯಿಂದ ಶುದ್ಧೀಕರಿಸುವುದು ಅಥವಾ ಭಸ್ಮ ಮಾಡುವುದು; ಪಾತ್ರೆ; ಬೊಗಸೆ; ಸಣ್ಣ ಪೆಟ್ಟಿಗೆ, ಕರಂಡಕ; ಕುದುರೆಯ ಗೊರಸು; ಹಜ್ಜೆ; ಪುಸ್ತಕದ ಎಲೆ, ಪಾನು; ದೊನ್ನೆಯಾಕಾರದ ಒಳಭಾಗ; ಗೋಡೆ ಕಟ್ಟುವಾಗ ಮಣ್ಣಿನ ಮುದ್ದೆಯ ಥರ. **ನಿಗ್ರಹ**— ವಶಮಾಡಿಕೊಳ್ಳುವುದು, ಬಿಗಿ ಹಿಡಿಯುವುದು, ಹತೋಟಿಯಲ್ಲಿಟ್ಟುಕೊಳ್ಳುವುದು; ಕೊಲ್ಲುವುದು, ಕೊಲೆ, ನಾಶ; ಪೀಡೆ, ಹಿಂಸೆ; ಶಿಕ್ಷೆ; ಸೆರೆ, ಬಂಧನ; ತಿರಸ್ಕಾರ, ಅಸಹ್ಯ, ಜಿಗುಪ್ಸೆ; ಮನಸ್ತಾಪ; ಒತ್ತರ; ಸಾಲ; ಓಡಿಸುವುದು; ಗದರಿಸುವಿಕೆ; ಅಪಜಯ; ವಿರಕ್ತಿ; ಹಿಡಿ, ಕಾವು; ಗಡಿ, ಮೇರೆ. **ಪ್ರಕಾಶ**— ಬೆಳಕು, ಕಾಂತಿ, ಉಜ್ವಲತೆ, ಹೊಳಪು; ಸೂರ್ಯಾತಪ; ಪ್ರಕಟನೆ, ಬಹಿರಂಗ; ವಿವರಣೆ, ಸ್ಪಷ್ಟವಾದ ಹೇಳಿಕೆ; ಹೆಸರು, ಕೀರ್ತಿ; ಸಡಗರ; ವಿಸ್ತಾರ, ಪ್ರಸಿದ್ಧ; ಸಂಧಿ, ಕಾವ್ಯ ವಿಭಾಗ; ಕಂಚು, ಹಿತ್ತಾಳಿ. **ತಾರ**— ದಾಟುವಿಕೆ, ಪಾರಾಗುವಿಕೆ; ಏರು ಸ್ವರ, ಸಂಗೀತದಲ್ಲಿ ಉಚ್ಚ ಸ್ವರ; ಶುಭ್ರ; ಆಕಾಶ; ನಕ್ಷತ್ರ; ಬೆಳ್ಳಿ; ರಜತಗಿರಿ; ಮುತ್ತು; ಕಣ್ಣಿನ ಬೊಂಬೆ; ನದೀ ತೀರ; ವಿಷ್ಣು; ಶಿವ; ರಕ್ಷಣೆ; ಹೊಳೆ; ಹುಲ್ಲು; ಕಾಂತಿ, ಹೊಳಪು; ಸೌಂದರ್ಯ, ಚಲುವಿಕೆ. **ಜೀವ**— ಪ್ರಾಣ, ಆತ್ಮ; ಬಾಳು, ಬದುಕು, ಸಂಸಾರ; ನೀರು; ಭೂಮಿ; ಹೆದೆ, ತಿರುವು; ಜೀವನೋಪಾಯ, ಉದ್ಯೋಗ; ಕುದುರೆ; ಪ್ರಧಾನ, ಮುಖ್ಯ; ಪ್ರಾಣಿ; ಬಜೆ; ಭಾಷೆ, ವಾಕ್ಕು; ಬೃಹಸ್ಪತಿ, ದೇವಗುರು; ಪ್ರಾಣಿಗಳ ಸಮೂಹ; ತಿರುಳು, ಸಾರ. **ತಿಮಿರ**— ಕತ್ತಲೆ; ಕುರುಡು; ಅಜ್ಞಾನ; ಶೋಕ, ದುಃಖ; ರಾಹು; ಕಪಟ, ಮೋಸ; ಮೂಢ; ದೋಷ; ಗುಣತ್ರಯ; ತಿಂಡಿ; ಕಬ್ಬಿಣದ ತುಕ್ಕು, ಕಿಟ್ಟ; ಕಣ್ಣಿನ ಒಂದು ರೋಗ. **ಭೀಮ**— ಶಕ್ತಿವಂತ, ಮಹಾ ಬಲಶಾಲಿ; ಭಯಂಕರ;

ಭೀಮಸೇನ; ಶಿವ; ಯಮ; ದಮಯಂತಿಯ ತಂದೆ; ಭುಜ, ಹೆಗಲು; ವೀರ, ಭಟಾಗ್ರಣಿ. **ಕಟ**— ಕಡೆ, ತುದಿ, ಮೂಲೆ; ಹುಲ್ಲುಚಾಪೆ; ನಡು, ಸೊಂಟ, ಕಿಗ; ಋತು; ಆನೆಯ ಕಟವಾಯಿ, ಆನೆಯ ಗಂಡಸ್ಥಳ; ಬಾಣ, ಅಂಬು; ತೃಣ; ಹೆಣ; ಚಟ್ಟ; ನಡತೆ, ರಿವಾಜು; ಶ್ಮಶಾನ; ಕಾಲ, ಸಮಯ; ಗಲ್ಲ, ಕೆನ್ನೆ. **ಉಗ್ರ**— ಭಯಂಕರ; ಕ್ರೂರ; ತೀಕ್ಷ್ಣ; ಚೂಪಾದ; ಸಿಟ್ಟು, ಕೋಪ; ರುದ್ರ, ಶಿವ; ರೌದ್ರರಸ; ವಾಯು; ವತ್ಸನಾಭಿ; ಕೇರಳ ದೇಶ; ಕ್ಷತ್ರಿಯನಿಗೂ ಶೂದ್ರ ಸ್ತ್ರೀಗೂ ಹುಟ್ಟಿದವನು. **ಅಕ್ರೂರ**— ಕ್ರೂರನಲ್ಲದವ; ಶಾಂತ; ಯಾದವ ವಂಶದ ಶ್ವಫಲ ಮತ್ತು ಗಾಂದಿನಿಯರ ಮಗ. **ಕವಿ**— ಬುದ್ಧಿವಂತ, ಪಂಡಿತ, ವಿದ್ವಾಂಸ; ಕವಿತೆಯನ್ನು ರಚಿಸುವವ, ಕವನಗಾರ, ಕಬ್ಬಿಗ; ಶುಕ್ರ; ಬ್ರಹ್ಮ; ಸೂರ್ಯ; ನೀರು; ನೀರು ಹಕ್ಕಿ; ಜ್ಞಾನಿ, ಯತಿ; ಖಲೀನ, ಕಡಿವಾಣ; ಕೃತಿಪತಿ, ಗ್ರಂಥಾಧಿಕಾರಿ; ಆನೆ. -ಮುಸುರು, ತುಂಬು, ಮುಚ್ಚು; ಮುತ್ತು; ಮುತ್ತಿಗೆ ಹಾಕು; ಸುತ್ತುಗಟ್ಟು; ಮುಗಿಬೀಳು; ಮೇಲೆ ಬೀಳು. **ಅಂಧ**— ಕತ್ತಲೆ; ಕುರುಡ; ಅಜ್ಞಾನ; ನೀರು; ಅನ್ನ, ಆಹಾರ; ಅಂಧಕಾಸುರ; ಆನೆ. **ಕಣ್ಣು**— ನೇತ್ರ, ನಯನ; ನವಿಲ ಗರಿಯಲ್ಲಿರುವ ಚುಕ್ಕೆ; ಜಲ್ಲಡೆ—ಕುರ್ಚಿ—ಬಲೆ ಇತ್ಯಾದಿಗಳ ಸಣ್ಣ ತೂತು; ಉಗುರ ಸಂದಿ; ಚಿಗುರು ಹುಟ್ಟುವ ಗಂಟು. **ಕಾಂಡ**— ಭಾಗ, ಅಂಶ; ಮರದ ಕೆಳಭಾಗ; ಗ್ರಂಥ ವಿಭಾಗ, ಸಂಧಿ; ಗೊಂಚಲು, ಕಟ್ಟು; ಸಮೂಹ; ಬಾಣ; ನೀರು; ದಂಟು, ಗೆಲ್ಲು, ಎಸೆಯ ತುಂಬು; ಬೆತ್ತ, ಕೋಲು, ದೊಣ್ಣೆ; ವೇಗ, ಅವಸರ; ಕುದುರೆ; ಕೆಟ್ಟ, ಹೀನ; ನಿಂದೆ; ಉದ್ದವಾದ ಎಲುಬು, ಕೈಕಾಲುಗಳ ಎಲುಬು; ಸಂದರ್ಭ, ಅನುಕೂಲ; ಗೋಪ್ಯ ಸ್ಥಳ, ಏಕಾಂತ; ಅಳತೆ ಭೇದ; ಹೊಗಳಿಕೆ, ಸ್ತುತಿ; ವರ್ಗ; ಪುಸ್ತಕ. **ಕಲೆ**— ತುಂಡು, ಚೂರು, ಚಿಕ್ಕ ತುಂಡು, ಸಣ್ಣ ಅಂಶ; ಕಿರಣಾಂಶ, ಚಂದ್ರ ಬಿಂಬದ ಹದಿನಾರನೆಯ ಒಂದು ಭಾಗ; ಲಲಿತವೇ ಮೊದಲಾದ ಅರ್ವತ್ತನಾಲ್ಕು ಕಲೆಗಳು; ಚಮತ್ಕಾರ, ಕುಶಲತೆ; ಜಾಣತನ, ಚಾತುರ್ಯ; ಪ್ರಕಾಶ, ಕಾಂತಿ; ಸೌಂದರ್ಯ, ಮನೋಹರತೆ; ಮೋಸ, ದಗೆ; ಸ್ತ್ರೀಯರ ಮುಟ್ಟು; ಅಣು; ವೇಳೆಯ ಒಂದು ಅಂಶ (ಮೂವತ್ತು ಕಾಷ್ಟಗಳ ಕಾಲ). -ಕೂಡು, ಸೇರು; ಗಾಯದ ಕುರುಹು; ಚಿಹ್ನೆ, ಮಚ್ಚೆ; ಮೈಲಿಗೆ, ಕೊಳಕು; ಕುಂದು, ಕೊರತೆ; ಕಲಂಕ. **ಉತ್ಸವ**— ಮಂಗಲಕಾರ್ಯ; ಉಲ್ಲಾಸ, ಸಂತೋಷ; ಹಬ್ಬ; ಜಾತ್ರೆ; ದೊಡ್ಡಸ್ತಿಕೆ, ಉನ್ನತಿ; ಆಸೆ, ಬಯಕೆ;

ಗ್ರಂಥ ವಿಭಾಗ; ಸಾಹಸಕಾರ್ಯ; ಎಸಗುವಿಕೆ, ತೊಡಗುವಿಕೆ; ಅವಸರ, ಆತುರ; ಹೆರುವಿಕೆ. **ಗಂಧ**— ವಾಸನೆ; ಸುವಾಸನೆ, ಪರಿಮಳ; ಬಾವನ್ನ, ಮಲಯಜ; ಸಂಬಂಧ, ನಂಟುತನ; ಅಹಂಕಾರ, ಗರ್ವ; ಶಿಲೆ; ಅಲ್ಪ, ಸ್ವಲ್ಪ; ಹರ್ಷ. **ಚಂದ್ರಿಕೆ**— ಚಂದ್ರನ ಬೆಳಕು, ಬೆಳದಿಂಗಳು; ದೀಪೋತ್ಸವ; ದೊಡ್ಡ ಏಲಕ್ಕಿ; ಚಂದ್ರಭಾಗಾ ನದಿ; ಮಲ್ಲಿಗೆ ಗಿಡ; ಒಂದು ತರದ ವೃತ್ತ; ಬರೆದ ತಾಳೆಯ ಗರಿಯ ಕಟ್ಟು. (A coil of written palm-leaf) **ಪ್ರಪಂಚ**— ಲೋಕ, ಜಗತ್ತು; ವಿವರ, ವಿಸ್ತಾರ; ಪುಷ್ಕಳ, ಹೆಚ್ಚು; ಮಾಯೆ, ಭ್ರಮೆ; ವೈವಿಧ್ಯ; ಸುಧಾರಣೆ; ಜೀವನ ಯುದ್ಧ; ವಂಚನೆ, ಮೋಸ. **ಪತಂಗ** ಚಿಟ್ಟೆ, ಮಿಡಿತೆ; ಹುಳ; ತುಂಬಿ; ಪಕ್ಷಿ; ಸೂರ್ಯ; ಬಾಣ; ಗಾಳಿಪಟ; ಪಾರದ; ಭೂತ, ಪಿಶಾಚ; ಕೃಷ್ಣ; ಗಂಧಭೇದ. **ನಿಧಾನ**— ನಿಕ್ಷೇಪ, ನಿಧಿ, ನವ ನಿಧಿಗಳು, ಐಶ್ವರ್ಯ; ಆಶ್ರಯ ಸ್ಥಾನ; ಸಾವಧಾನ, ತಾಳ್ಮೆ; ನಂಬಿಗೆ. **ಧುರ**— ಹೊರೆ, ಭಾರ; ನೊಗ; ಯುದ್ಧ; ಕೈ ಬೆರಳು; ಕಂಪನ, ನಡುಕ; ಪ್ರತಿಬಿಂಬ; ಧ್ಯಾನ, ವಿಚಾರ; ಬೆಂಕಿಯ ಕಿಡಿ; ವ್ಯಸನ, ಚಿಂತೆ; ಪಾಲು, ಭಾಗ; ಐಶ್ವರ್ಯ; ಗಂಗೆ; ಶಿವ; ಮುಖ್ಯ ಭಾಗ; ಮುಖ್ಯಸ್ಥ; ಯುದ್ಧದ ಮುಂಭಾಗ; ಹೊರೆ ಹೊರುವ ಮೃಗ. **ತಾರಕ**— ದಾಟಿಸುವವ; ಸಹಾಯಕ; ಓಂ ಎಂಬ ಮಂತ್ರ; ನಕ್ಷತ್ರ; ಕಣ್ಣ ಬೊಂಬೆ; ಬೃಹಸ್ಪತಿಯ ಹೆಂಡತಿ; ಹಡಗ ನಡೆಸುವವ; ರಕ್ಷಕ; ಶಿವ; ತೆಪ್ಪ, ದೋಣಿ; ತಾರಕಾಸುರ; ಆಶ್ರಯ. **ಧರ್ಮ** –ಜಾತಿಯ ನಡತೆ, ನಿಯಮ, ಕಟ್ಟಳೆ, ಕರ್ತವ್ಯ; ನ್ಯಾಯ; ನೀತಿ, ಸತ್ಕರ್ಮ, ಪುಣ್ಯ; ವಿಧಾನ; ಮತ; ಮತಾಚಾರ; ಭಕ್ತಿ, ವಿನಯ; ಲಕ್ಷಣ, ಸ್ವಭಾವ, ಪ್ರಕೃತಿ; ವಿಶೇಷ ಗುಣ; ಸಾದೃಶ್ಯ; ಯಜ್ಞ; ಉಪನಿಷತ್ತು; ಯುಧಿಷ್ಠಿರ; ಯಮ; ದಾನ; ಬೆಲೆ ತೆಗೆದುಕೊಳ್ಳದೆ ಕೊಡುವುದು; ಸತ್ಸಂಗ; ಧ್ಯಾನ; ಚಾಪ; ಸೋಮಪಾನಿ; ಆಶ್ಲೇಷಾ ನಕ್ಷತ್ರ; ಜೈನರ ಅರ್ಹತ್; ಅಹಿಂಸೆ; ಆತ್ಮ; ಉತ್ಪಾತ; ಶಿವ; ವಿಷ. **ಪೊದೆ**— ಹೊಟ್ಟೆ; ಎದೆ; ಶರೀರ; ತೆನೆ; ಬತ್ತದ ತುಂಬು; ಮಡಿಲು; ಮುಚ್ಚೆ; ತುರುಬು; ಕೇದಗೆ ಹೊಡೆ; ಧೈರ್ಯ; ಕೆನ್ನೆ.– ಒಳಗು; ಬದಿ. –ಬಡಿಯು; ಕತ್ತರಿಸು; ಅಟ್ಟು; ಕೆಡೆ; ನುಂಗು; ನಿವಾರಿಸು; ಕೈಗೆ ಕಟ್ಟಿಕೊಳ್ಳುವ ಚರ್ಮದ ರಕ್ಷಣೆ. **ನೇತ್ರ**— ಕಣ್ಣು; ಕಡಗೋಲಿನ ಹಗ್ಗ; ಮರದ ಬೇರು, ಬೀಳಲು; ಪಟ್ಟೆ ವಸ್ತ್ರ; ಎರಡು ಎಂಬ ಸಂಖ್ಯೆ; ಅಡಕೆ ಮರ; ಸದ್ಗುಣ; ವಾಹನ; ನಾಯಕ; ನಕ್ಷತ್ರ; ರಥ. **ರವಿ**— ಸೂರ್ಯ;

ಸುವರ್ಣ; ಸಂಪತ್ತು; ಪರ್ವತ; ರಾಜ, ಅರಸು; ಸ್ಫಟಿಕ; ಎಕ್ಕೆ ಗಿಡ; ಹನ್ನೆರಡು ಸಂಖ್ಯೆಯ ಸಂಜ್ಞೆ. **ವಿಭು**— ಅರಸ, ಒಡೆಯ, ಯಜಮಾನ, ಸ್ವಾಮಿ, ಪ್ರಭು; ದೇವರು; ಸರ್ವವ್ಯಾಪಿ; ಬ್ರಹ್ಮ; ಶಿವ, ವಿಷ್ಣು; ಆಕಾಶ; ಸ್ಥಳ; ಕಾಲ; ಆತ್ಮ; ಸೇವಕ. **ಸರ**— ಎಳೆ, ಮಾಲೆ, ಹಾರ; ಧ್ವನಿ, ಶಬ್ದ, ಸಪ್ಪಳ; ಬಾಣ; ಕೆನೆ; ಉಪ್ಪು; ಚಲನೆ; ಜೋಗು; ನೀರು; ಕೆರೆ; ಸರೋವರ. **ವಾಟ**— ಬೇಲಿ, ಆವರಣ; ದಾರಿ, ಹಾದಿ; ಅಂಗಳ; ಹಿತ್ತಲು, ತೋಟ; ಬೀದಿ, ಕೇರಿ, ಓಣಿ, ಅಗ್ರಹಾರ; ಧಾನ್ಯ ಭೇದ; ಗೆಜ್ಜೆ; ಸ್ಥಳ; ಮೈ; ಅನ್ನ. –ಓಟ; ಪ್ರವಾಹ, ಹರಿವು; ಜರಿ, ಇಳಿಜಾರು, ಇಳುಕಳು ಪ್ರದೇಶ; ಉಪಾಯ, ಸಾಧನ. **ರಂಪ**— ಗದ್ದಲ, ಗಲಾಟೆ, ಗುಲ್ಲು, ಒದರಾಟ; ಕೋಲಾಹಲ; ಕಲಹ, ಜಗಳ; ಸೋಗು, ಡೌಲು, ಗಡಾವಣೆ; ದೊಡ್ಡ ಗರಗಾಸು. **ಸಾಧನ**— ಸಲಕರಣೆ, ಸಾಮಗ್ರಿ, ಉಪಕರಣ; ವಸ್ತು, ಪಾತ್ರೆ, ಪದಾರ್ಥ; ಉಪಾಯ, ದಾರಿ; ಸೈನ್ಯ; ನೆರವೇರಿಕೆ; ಸಿದ್ಧಿ; ಸಿದ್ಧಾಂತ; ವಿಧಾನ; ಸಹಾಯ; ನಾಶನ; ಗಮನ; ಕಾರಣ, ಹೇತು; ಮುಟ್ಟು; ಅವಯವ; ಧನ; ಆಶೆ, ಕೋರಿಕೆ; ಪ್ರಯತ್ನ; ಪ್ರಮೇಯ; ಆಧಾರ; ಸತ್ಕ್ರಿಯೆ; ಪಾಪ್ತ. **ಲಕ್ಷಣ**— ಗುಣ; ಸ್ವಭಾವ; ವಿಶಿಷ್ಟ ಗುಣ; ಚಿಹ್ನೆ, ಕುರುಹು, ಗುರುತು, ಲಾಂಛನ; ಲಾವಣ್ಯ; ಶುಭ ಚಿಹ್ನೆ; ಕಾಂತಿ; ಸೌಂದರ್ಯ; ಉದ್ದೇಶ, ಗುರಿ, ಸಾಧನೆ; ಶುದ್ಧ; ಸೂತ್ರ; ಸುಕೃತ; ಹೆಸರು; ರೂಪ; ತರ; ಕಾರಣ; ಸಮಯ; ನೋಟ; ಕೊಕ್ಕರೆ; ಹೆಣ್ಣು ಬಾತು. **ರಚ್ಚೆ**— ಕೂಗುವಿಕೆ, ಬಯ್ಯುವಿಕೆ; ಹರಟೆ ಬೊಗಳುವಿಕೆ, ಬುರುಡೆ; ಗಲಿಬಿಲಿ, ಗಾಬರಿ; ಗುಪ್ತವಾದುದು ಒಡೆಯುವಿಕೆ, ಪ್ರಕಟ ಪಡಿಸುವಿಕೆ, ಗುಟ್ಟು ರಟ್ಟು ಮಾಡುವುದು; ವೇದಿಕೆ, ಕಟ್ಟೆ; ಕಲಹ, ಜಗಳ; ಸೋಗು, ಡೌಲು. **ಪ್ರಭವ**— ಹುಟ್ಟುವಿಕೆ, ಹುಟ್ಟು, ಜನ್ಮ, ಉತ್ಪನ್ನ; ಉತ್ಪತ್ತಿ ಕಾರಣ, ಮೂಲ; ಉತ್ಪತ್ತಿ ಕಾರಣ, ಮೂಲ: ಉತ್ಪತ್ತಿ ಸ್ಥಾನ, ಹುಟ್ಟಿಡೆ, ಜನ್ಮಭೂಮಿ; ಸತ್ವ, ಪರಾಕ್ರಮ; ಪ್ರಭಾವ; ಕರ್ತ, ಉಂಟು ಮಾಡುವವ; ಜ್ಞಾನ; ತಾಯಿತಂದೆಗಳು; ಮೊದಲನೇ ಸಂವತ್ಸರ.

೪. ಮಾರುನುಡಿಗಳು.

ಹೊಗಳು-ತೆಗಳು. ಅಂಗಲ-ದಟ್ಟ. ತಪ್ಪು-ಒಪ್ಪು. ಹುಣ್ಣಿಮೆ-ಅಮವಾಸ್ಯೆ. ಹುಣ್ಣಿವೆ-ಅಮಾಸಿ. ಸಂದೇಹ-ನಿಃಸಂದೇಹ. ಅಭಿಮಾನ-ನಿರಭಿಮಾನ.

ಶೀತ-ಉಷ್ಣ. ಪ್ರೀತಿ-ಅಪ್ರೀತಿ. ಪ್ರೀತಿ-ಭೀತಿ. ಜಯ-ಅಪಜಯ. ಮೂರ್ಖ-ಜಾಣ. ಶೂರ-ಹೇಡಿ. ವಿಶ್ವಾಸ-ಅವಿಶ್ವಾಸ. ಆದರ-ಅನಾದರ. ತಿಸ್ಸೆ-ಉಪ್ಪರಿಗೆ. ಸಾಧಕ-ಬಾಧಕ. ಯೌವನ-ಮುಪ್ಪು. ತೆಂಕಣ-ಬಡಗಣ. ದೇವ-ದೈತ್ಯ. ದಂಡನೆ-ಕ್ಷಮೆ. ಶ್ರೇಷ್ಠ-ಕನಿಷ್ಠ. ಬೇವು-ಬೆಲ್ಲ. ಪ್ರಾಚೀನ-ಅರ್ವಾಚೀನ. ದತ್ತಕ ಪುತ್ರ-ಔರಸಪುತ್ರ.

೫. ಅನ್ವಯಾರ್ಥ.

ಸರೋಜ- ಸರ!- ಸರೋವರದಲ್ಲಿ+ಜ-ಹುಟ್ಟಿದ್ದು--ಕಮಲ. **ಅತಿಥಿ**-(ಅತ್—ಸಂಚಾರ ಮಾಡು.) ಸಂಚರಿಸುತ್ತ ಪಾದಿಹೋಕನಾಗಿ ಮನೆಗೆ ಬಂದವನು—ಅಭ್ಯಾಗತ. **ಆಶೀರ್ವಾದ**- ಆಶೀಃ— ಶುಭವಾಗಲೆಂಬ+ವಾದ-ಮಾತು, ವಚನ-ಮಂಗಲ ಪ್ರಾರ್ಥನೆ, ಹರಕೆ. **ಭೂಭುಜ**— ಭೂ-ಭೂಮಿಯನ್ನು+ಭುಜ-ಭೋಗಿಸುವವನು, ಅನುಭವಿಸುವವನು—ರಾಜ. **ಸ್ವಯಂವರ**— ಸ್ವಯಂ-ತಾನೇ+ವರ—ಆರಿಸುವಿಕೆ— ತಾನಾಗಿ ಪತಿಯನ್ನು ಆರಿಸುವಿಕೆ— ವಿವೇಚನಪೂರ್ವಕವಾದ ಉತ್ತಮ ಪಾತ್ರ ನಿರ್ಣಯ—ತನ್ನ ಗಂಡನನ್ನು ತಾನೇ ಆರಿಸುವ ಪದ್ಧತಿ. **ಜಾಹ್ನವಿ**— ಜಹ್ನು ಎಂಬ ಋಷಿಯ ಮಗಳು—ಗಂಗೆ. (ಗಂಗೆಯನ್ನು ಭಗೀರಥನು ಈಶ್ವರನಿಂದ ಬಿಡಿಸಿಕೊಂಡು ತರುವಾಗ ಆಕೆಯು ಗರ್ವದಿಂದ ಜಹ್ನು ಋಷಿಯ ಆಶ್ರಮಕ್ಕೆ ನುಗ್ಗಲು, ಆ ಮುನಿಯು ಗಂಗೆಯನ್ನು ಕುಡಿಯೆ, ಬಳಿಕ ಭಗೀರಥನ ಪ್ರಾರ್ಥನೆಯನ್ನು ಮನ್ನಿಸಿ, ಕಿವಿಯಲ್ಲಿ ಬಿಟ್ಟದರಿಂದ ಗಂಗೆಗೆ ಈ ಹೆಸರು ಬಂತು.) **ಪುತ್ರ**— 'ಪುತ್' ಎಂಬ ನರಕದ ದೆಸೆಯಿಂದ+ತ್ರ—ದಾಟಿಸುವವನು—ಪುತ್ರ-ಮಗ. **ಶ್ರೀನಿವಾಸ**— ಶ್ರೀ+ನಿವಾಸ—ಸಂಪತ್ತಿಗೆ ನೆಲೆಯಾಗಿರುವ-ಲಕ್ಷ್ಮಿಯು ವಾಸಿಸುವ ಸ್ಥಾನ—ಲಕ್ಷ್ಮಿಗೆ ನೆಲೆಯಾಗಿರುವವನು-ವಿಷ್ಣು. **ಜಲದ**- ಜಲ ನೀರನ್ನು+ದ—ಕೊಡುವುದು—ಮೋಡ. **ಅಂಬುರುಹ**- ಅಂಬು-ನೀರಿನಲ್ಲಿ+ರುಹ—ಬೆಳೆಯುದು (ಏರಿದುದು)—ತಾವರೆ. **ಖಚರ**— ಖ—ಆಕಾಶದಲ್ಲಿ+ಚರ—ಸಂಚರಿಸುವವ—ಗಂಧರ್ವ. **ರಜನಿಕಾಂತ**— ರಜನಿ—ರಾತ್ರಿಯ+ಕಾಂತ-ಪ್ರಿಯ, ಒಡೆಯ-ಚಂದ್ರ. **ಅಮರ**- ಅ+ಮರ-ಮರಣವಿಲ್ಲದ-ದೇವತೆ. **ಶೂಲಿ**— ಶೂಲವನ್ನು ಧರಿಸಿದವ-ಈಶ್ವರ. **ಭೂಧರ**- ಭೂ-ಭೂಮಿ+ಧರ-ಧರಿಸಿದವ, ಹೊತ್ತುಕೊಂಡಿರುವ-ಪರ್ವತ. **ಬಂಡುಣಿ**— ಬಂಡು-ಮಕರಂದ

ವನ್ನು+ಉಣೆ-ಉಣ್ಣುವದು-ತುಂಬಿ, ಭ್ರಮರ. **ಭ್ರಮರ**- ಭ್ರಮ್-ತಿರುಗು-ಯಾವಾಗಲೂ ತಿರುಗುತ್ತಾ ಇರುವ ಜಂತು-ತುಂಬಿ. **ಶಿರೋಮಣಿ**- ಶಿರಸ್-ತಲೆ+ಮಣಿ-ರತ್ನ-ತಲೆಯಲ್ಲಿ ಧರಿಸುವ ರತ್ನ; ಶ್ರೇಷ್ಠ. **ಭೂದೇವ**- ಭೂ-ಭೂಮಿಯ+ದೇವ-ದೇವತೆ-ಬ್ರಾಹ್ಮಣ. **ಅಂಬುಧರ**— ಅಂಬು-ನೀರನ್ನು+ಧರ-ಧರಿಸುವುದು-ಮೋಡ. **ಮೃಗಾಂಕ**— ಮೃಗ-ಜಿಂಕೆ+ಅಂಕ- ಗುರುತು-ಜಿಂಕೆಯ ಗುರುತುಳ್ಳವನು-ಚಂದ್ರ.

೬. ಕಿರುನುಡಿಗಳು.

ಬೆದೆಬೆದೆ ಬೆಂದುವ್— ಅರ್ಜುನನ ತಪಸ್ಸಿನ ಪ್ರಭಾವದಿಂದ ಇಂದ್ರಕೀಲಕದ ಜೀವಿಗಳೆಲ್ಲ ಬೆದೆಬೆದೆ ಬೆಂದು ಹೋದುವು **ಕಮರಿ ಸೀಕರಿ ಹೋಗು**-ಕಾಡ್ಗಿಚ್ಚಿಗೆ ಸಿಲುಕಿದ ವನ್ಯ ಜೀವಿಗಳು ಕಮರಿ ಸೀಕರಿ ಹೋಗುವುದರಲ್ಲಿ ಸಂದೇಹವಿದೆಯೆ? **ತಿಂತಿಣಿಯಾಗಿ ತುಂಬು**— ಬೆಲ್ಲದ ಪರಿಮಳಕ್ಕೆ ಇರುವೆಗಳು ತಿಂತಿಣಿಯಾಗಿ ತುಂಬಿದುವು. **ಬಕ್ಕಂ ಬಯಲು**— ಬಂದ ವ್ಯಾಮೋಹದೆ ಇಂದುವರಂ ಬಕ್ಕಟ ಬಯಲೊಡನೆ ಪೋರ್ದಿ, ಎನಗುಳ್ಳ ಆಯುಮುಂ ಜ್ಞಾನಮುಂ ಬರಿದೆ ಬರಿಗೈದು, ಹಾಳಾಗಿ, ಬಕ್ಕಂ ಬಯಲ್ಗೆ ಬಿದ್ದು ಕೆಟ್ಟೆಂ. ನಾಣಿಲಿ, ಬಕ್ಕಂ ಬಯಲೊಳಮ್ ಆದಾರುಮುಂ ಭುಂಜಿಸುವರ್? ಬಕ್ಕಂ ಬಯಲಲ್ಲಿ ತಲೆ ಮರೆಸಿಕೊಂಡರೆ ಕಾಣಿಸದೆ ಇರುವನೇ? **ಬಳ್ವಳನೆ ಬೆಳೆ**-ಅಲರ್ವಳ್ಳಿಯು ಬಳ್ವಳನೆ ಬೆಳೆದು ಕುಸುಮಿಸಿದುದನ್ನು ಕಂಡ ಕಿಶೋರಿಯು ಕಿಲಕಿಲನೆ ನಕ್ಕು ನಲಿದಾಡುವಳು. **ಪರ್ವಿ ಕೊರ್ವಿ**— (ಹಬ್ಬಿ ಕೊಬ್ಬಿ) ಮೋಡವನ್ನು ಕಂಡಕೂಡಲೆ ಪರ್ವಿ ಕೊರ್ವಿದ ಕೇಕಿಯು ಕೇಗುತ್ತಾ ಕುಣಿಯಿತು. ದುಸ್ಸಂಗದಿಂದ ಪರ್ವಿ ಕೊರ್ವಿದ ಕೀಚಕನು ಸೈರಂಧ್ರಿಯ ಮೇಲೆ ಕೈಹಾಕಿ ತನ್ನ ಕುಲಕುಠಾರನಾದನು. **ಕೊಂಡು ಕೊನೆದು**— ಶತಯಾಗಗಳನ್ನು ಮುಗಿಸಿ, ಇಂದ್ರ ಪದವಿಯನ್ನು ಪಡೆದು ಕೊಂಡು ಕೊನೆದು ನಹುಷನು ಶಚಿಯ ಮೇಲೆ ಕಣ್ಣಿಟ್ಟು ಅಜಗರವಾಗಿ ಭೂಲೋಕವನ್ನು ಸೇರಿದನು. **ಕಿಸುರುಂ ಕಲಹ**- ಅಸತಿವಸನದಲ್ಲಿ ಕಿಸುರುಂ ಕಲಹಕ್ಕೆ ಬರಗಾಲವೆ? ಹೋರುವ ಹೆಂಡತಿಯೊಡನೆ ಕಿಸುರುಂ ಕಲಹಿಯಾಗಿ ಬಾಳುವುದಕ್ಕಿಂತ ದೂರ ಬಿಡುವುದೇ ಲೇಸು. **ತೊಳಲು-ಬಳಲು**— ಆಹಾರಕ್ಕಾಗಿ ತೊಳಲಿ ಬಳಲಿದ ನರಿಯು ಮರದಡಿಯಲ್ಲಿ ಒರಗಿ ನಾಯಿಯ ಬಾಯಿಗೆ ತುತ್ತಾಯಿತು.

ಜಡಿದು-ಝುಂಕಿಸು— ವೈರಿಗಳನ್ನು ಗದಾ ಪ್ರಹಾರದಿಂದ ಜಡಿದು ಝುಂಕಿಸಿದ ಭೀಮನು ಮುಂದುವರಿಯುತ್ತಾ ಚಕ್ರವ್ಯೂಹದ ಬಳಿಗೆ ಬಂದನು. **ಮಾಡಿ-ಆಡು**— ಕೆಲಸವನ್ನು ಮಾಡಿ ಆಡುವುದು ಉತ್ತಮರ ಲಕ್ಷಣ. **ಆಡಿ-ಮಾಡು**— ಸರ್ವಜ್ಞನ ಮತದಲ್ಲಿ ಕಾರ್ಯವನ್ನು ಆಡಿ-ಮಾಡುವವನು ಮಧ್ಯಮನಂತೆ. **ಕೂಡಿ-ನೋಡು**— ಬಾವಿಯ ಆಳ ಇಳಿದು-ನೋಡಬೇಕು, ಮನುಷ್ಯರ ಗುಣ ಕೂಡಿ-ನೋಡಬೇಕು. **ನೋಡಿ-ಕೂಡು**— ನೋಡಿ-ಕೂಡುವವನಿಗೆ ಕೇಡು ಬಾರದು. ಜನರೊಡನೆ ನೋಡಿ-ಕೂಡುವುದು ಜಾಣರ ಸ್ವಭಾವ. **ಓಡಿ-ಹೋಗು**— ಓಡಿ-ಹೋಗುವ ಬಡ್ಡಿ ಹಾಲಿಗೆ ಹೆಪ್ಪು ಹಾಕ್ಯಾಳೇ? ಓಡಿ-ಹೋಗುವವನ ಕಂಡರೆ ಅಟ್ಟುವವಗೆ ಘನ. **ಹೋಗಿ-ಓಡು**— ಹೋಗಿ-ಓಡುವ ಪಾಡು ಉತ್ತರಕುಮಾರನಿಗೆ ಮೀಸಲು.

೭.

ಕರಕರ ಕಡಿ— ಕಟುಕನು ಕತ್ತಿಯಿಂದ ಕುರಿಯ ಕತ್ತನ್ನು ಕರಕರ ಕಡಿದನು. **ತಳತಳನೆ ತೊಳಗು**— ಆಂಜನೇಯನು ಜನಿಸಿದ ಕೂಡಲೆ ಆಗತಾನೆ ಉದಯಿಸಿ ತಳತಳನೆ ತೊಳಗುತ್ತಿದ್ದ ಸೂರ್ಯ ಬಿಂಬವನ್ನು ಕಂಡು, ಫಲವೆಂಬ ಭ್ರಾಂತಿಯಿಂದ ಅಂತರಿಕ್ಷಕ್ಕೆ ನೆಗೆದು ಸೂರ್ಯನನ್ನು ಹಿಡಿಸಲು, ದೇವೇಂದ್ರನು ವಜ್ರಾಯುಧದಿಂದ ಅವನನ್ನು ಹೊಡೆಯಲು ಒಂದು ಕೆನ್ನೆ ಗಾಯವಾಗಿ ಸೊಟ್ಟಗಾದ ಕಾರಣ ಅವನಿಗೆ ಹನೂಮಂತನೆಂಬ ಹೆಸರು ಬಂತು. **ಚರಪರ ಹರಿ**— ಒಕ್ಕಲಿಗನು ಕಳೆಯನ್ನು ಚರಪರ ಹರಿದು ಮೇಲಕ್ಕೆ ಬಿಸಾಡಿದನು. **ಗಡಗಡನೆ ನಡುಗು**— ಗಡಗಡನೆ ನಡುಗಿದರೆ ಗುಡುಗು ಕೇಳೀತೆ? ಗಡಗಡನೆ ನಡುಗುವವನ ಮೇಲೆ ಸತ್ತ ಹಾವು ಬಿದ್ದಹಾಗೆ. ಕುಂಜರನೆಂಬ ಕಪಿನಾಯಕನ ಮಗಳಾದ ಅಂಜನೆಯು ಕೇಸರಿಯೆಂಬ ವಾನರನನ್ನು ಮದುವೆಯಾಗಲು, ಆಕೆಯ ರೂಪಾತಿಶಯಕ್ಕೆ ಮರುಳಾದ ವಾಯುದೇವನು ಆಕೆಯೊಡನೆ ಬಲಾತ್ಕರದಿಂದ ಕ್ರೀಡಿಸಲು ಬಂದುದನ್ನು ಕಂಡು ಆಕೆಯು ಗಡಗಡನೆ ನಡುಗಿದಳು.

ಥರಥರ ನಡುಗು— ಪುತ್ರಶೋಕಪೀಡಿತನಾದ ವಸಿಷ್ಠನು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕಾಗಿ ಹೈಮವತಿ ನದಿಯಲ್ಲಿ ಬೀಳಲು, ಬ್ರಹ್ಮಹತ್ಯೆಯ ಭಯದಿಂದ ಹೆದರಿ ಥರಥರ ನಡುಗಿದ ಹೈಮವತಿಯು ನೂರಾರು ಭಾಗಗಳಾಗಿ

ಹರಿದುಹೋದ ಕಾರಣ 'ಶತದ್ರು' (Sutlej) ಎಂದು ಹೆಸರು ಬಂತು.

ಪಿರಿಪಿರಿ ತಿರುಗು— ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಿದುದರಿಂದ ಪ್ರಾಪ್ತವಾದ ಬ್ರಹ್ಮಹತ್ಯೆಯಿಂದಾಗಿ ಕಾಪಾಲಿಕನಾದ ಶಿವನು ಪಿರಿಪಿರಿ ತಿರುಗುತ್ತಾ ಕಾಶೀ ಕ್ಷೇತ್ರವನ್ನು ಸೇರಿ ಪುನೀತನಾಗಿ ಅಲ್ಲಿ ನೆಲಸಿದನು.

ತಪತಪ ತೊಯ್ಯು— ತೀರ್ಥಯಾತ್ರೆಗೆ ಹೊರಟ ಅರ್ಜುನನು ಪ್ರಭಾಸ ತೀರ್ಥಕ್ಕೆ ಹೋಗಿ ಅಲ್ಲಿ ಸುಭದ್ರಾ ಪರಿಣಯ ವೃತ್ತಾಂತವನ್ನು ಕೇಳಿ, ಮರುಗಿ, ವರ್ಷಕಾಲದ ಬಲ್ಮೋನೆಯನ್ನು ಲೆಕ್ಕಿಸದೆ ತಪತಪ ತೊಯ್ಯುತ್ತಾ ದ್ವಾರಕೆಯನ್ನು ಸೇರಿದನು.

ಮಿರಿಮಿರಿ ಮಿಂಚು— ಕಂಚಿನ ಪಾತ್ರೆಗಳು ದೀಪದ ಪ್ರಕಾಶಕ್ಕೆ ಮಿರಿಮಿರಿ ಮಿಂಚುತ್ತವೆ. ಮಳೆಗಾಲದಲ್ಲಿ ಮಿರಿಮಿರಿ ಮಿಂಚುವ ಮಿಂಚುಹುಳಗಳು ಸೂರ್ಯನೊಡನೆ ಸ್ಪರ್ಧಿಸಲು ಹೊರಟುವಂತೆ.

ಗುಳಗುಳನೆ ಹರಿ— ಬೆಟ್ಟದ ತಪ್ಪಲಲ್ಲಿ ಹುಟ್ಟಿದ ನದಿಯು ಗುಳಗುಳನೆ ಹರಿಯುತ್ತಾ ಮುಂದಕ್ಕೆ ಸಾಗಿ ಸಮುದ್ರದಲ್ಲಿ ಸಂಗಮವಾಯಿತು.

ಗಿಮಿಗಿಮಿ ತಿರುಗು— ಮಕ್ಕಳಿಗೆ ಗಿಮಿಗಿಮಿ ತಿರುಗುತ್ತಾ ಆಡುವ ಆಟದಲ್ಲಿ ಅಭಿರುಚಿ ಹೆಚ್ಚು. ಭೀಮನ ಕೈಯಲ್ಲಿ ಗಿಮಿಗಿಮಿ ತಿರುಗುತ್ತಿದ್ದ ಭೀಮ ಗದೆಯನ್ನು ಕಂಡ ವೈರಿಗಳ ಹೃದಯವು ಬಿರಿಯಿತು.

ಭಗಭಗ ಉರಿ— ದುರ್ಯೋಧನನು ತನ್ನ ಮಂತ್ರಿಗಳಲ್ಲಿ ಒಬ್ಬನಾದ ಪುರೋಚನನ ಮೂಲಕ ವಾರಣಾವತದಲ್ಲಿ ಜತುಗೃಹವನ್ನು ನಿರ್ಮಿಸಿ ಪಾಂಡವರನ್ನು ಸುಡಲೆತ್ನಿಸಿದನು. ಆದರೆ ವಿದುರನ ಮೂಲಕ ಈ ಒಳಸಂಚನ್ನು ತಿಳಿದಿದ್ದ ಭೀಮನು ರಾತ್ರಿಹೊತ್ತಿನಲ್ಲಿ ಜನನಿಯನ್ನೂ ಸೋದರರನ್ನೂ ಕರೆದುಕೊಂಡು ಹೊರಬಂದು ಅರಗಿನ ಮನೆಗೆ ಬೆಂಕಿ ಕೊಡಲು ಭಗಭಗ ಉರಿವ ಆ ಬೆಂಕಿಗೆ ಪುರೋಚನನೇ ಆಹುತಿಯಾದನು.

ಚರಚರ ಹರಿ— ಜವುಳಿ ವ್ಯಾಪಾರಿಯು ವಸ್ತ್ರವನ್ನು ಚರಚರ ಹರಿಯುವಾಗ ನಾವು ಆಶ್ಚರ್ಯಗೊಂಡು ಮಿಕಿಮಿಕಿ ನೋಡುತ್ತೇವೆ.

ಮಿಕಿಮಿಕಿ ನೋಡು— ಕುರುಕ್ಷೇತ್ರದಲ್ಲಿ ಭೀಮನು ದುಶ್ಯಾಸನನ ಉದರವನ್ನು ಬಗಿದು ಕರುಳನ್ನು ಸೆಳೆಯುತ್ತಿರಲು ಕರ್ಣ ಮೊದಲಾದವರು ಕೈಲಾಗದ ಹೇಡಿಗಳಂತೆ ಮಿಕಿಮಿಕಿ ನೋಡುತ್ತಿದ್ದರು.

ಥಕಥಕ ಕುಣಿ— ಸುತ್ತಲೂ ಗೋಪಿಯರು ಕೈಪರೆಗುಟ್ಟುತ್ತಿರಲು ಬಾಲಕೃಷ್ಣನು ಥಕಥಕ ಕುಣಿಯುತ್ತಿದ್ದನು.

ಗದಗದ ನಡುಗು— ರಾವಣನ ಹೆಸರನ್ನು ಕೇಳಿದ ಕೂಡಲೆ ದೇವತೆಗಳು ಗದಗದ ನಡುಗುತ್ತಿದ್ದರು.

ಸಳಸಳ ಹರಿ— ಸಳಸಳ ಹರಿಯುವ ನದಿಯ ಸುಳಿಯಲ್ಲಿ ಸಿಲುಕಿದ ಹರಿಗೋಲು ಗರಗರನೆ ತಿರುಗಿತು.

೮

ಹರೆಯ ಹೋರಿ- ಹೊಟ್ಟೆಯ ಹಿಟ್ಟಿಗಾಗಿ ಬಡವರ ಮಕ್ಕಳು ಅಹೋರಾತ್ರಿ ದುಡಿಯುತ್ತಿರುವಾಗ ಶ್ರೀಮಂತರ ಮಕ್ಕಳು ಹರೆಯ ಹೋರಿಗಳಂತೆ ಬೀದಿ ಬೀದಿ ತಿರುಗುತ್ತಾ ಮರೆದಾಡುವುದು ಸ್ವತಂತ್ರ ಭಾರತದ ವೈಶಿಷ್ಟ್ಯ. **ನೀರು ನಿಕ್ಕಡಿ**— ನೀರು ನಿಕ್ಕಡಿಯಾದರೂ ಮಜ್ಜಿಗೆ, ಮರುಳಾದರೂ ತಾಯಿ. **ಕೆಂಪಗೆ-ಕೆಂಜಗ**— ಕುರವಕವು ಕೆಂಪಗೆ ಕೆಂಜಗದಂತೆ ಶೋಭಿಸುತ್ತಿತ್ತು. ಆಕೆಯ ಕೇದುಟಿಯು ಕೆಂಪಗೆ ಕೆಂಜಗದಂತೆ ಶೋಭಾಯಮಾನವಾಗಿತ್ತು. ಕುಡಿಕನ ಕಣ್ಣು ಕೆಂಪಗೆ ಕೆಂಜಗದಂತೆ ಹೊಳೆಯುತ್ತಿತ್ತು. **ಬಡನಡು**— ಮನೆಯ ಗೊಡವೆಯನ್ನುಳಿದು ಬೀದಿ ಮೆರವಣಿಗೆಗೆ ಹೊರಟ ಬಡನಡುವಿಂದ ಬಳ್ಕುವ ಬೆಡಗಿಯರಿಗೆ ನಮ್ಮಲ್ಲಿ ಬರಗಾಲವೆ? **ಸುಳಿಗುರುಳು**- ಪ್ರಿಯೆ, ನಿನ್ನ ಸುಳಿಗುರುಳ ಕಾಂತಿಯನ್ನು ಕಂಡು ಲಜ್ಜೆಗೊಂಡ ಭ್ರಮರಗಳೆಲ್ಲಾ ಆ ಸರೋವರದಲ್ಲಿದ್ದ ಕನ್ನೈದಿಲೆಗಳಲ್ಲಿ ಮರೆಗೊಂಡ ಪರಿಯನ್ನು ಕಂಡೆಯಾ? ಕಿಶೋರಿಯ ಮೊಗವನ್ನು ತಾವರೆ, ಕಣ್ಣನ್ನು ಉತ್ಪಳದಳ, ಸುಳಿಗುರುಳ ಧಮ್ಮಿಲ್ಲವನ್ನು ಸೋಗೆ, ಸೆಳ್ಳುಗರನ್ನು ಕೇದಗೆ, ಹುಬ್ಬನ್ನು ಅಂಗಜನ ಚಾಪ, ದಂತಾಳಿಯನ್ನು ಮುತ್ತು ಕೈಮುಗಿದು ಆರಾಧಿಸುತ್ತಿವೆ.

೯

ಸಮುದ್ರದಂತೆ ಭೋರ್ಗರೆ. ಸಮುದ್ರದಂತೆ ಗಂಭೀರ. ಸಮುದ್ರದಂತೆ ಗುಣ್ಪು. ಅರಳು ಹುರಿದಂತೆ ಮಾತು. ಹಿಮಾಲಯದಂತೆ ಉನ್ನತ. ಹಿಮಾಲಯದಂತೆ ಶುಭ್ರ. ಹಿಮಾಲಯದಂತೆ ಧವಳ. ಮುತ್ತು ಹವಳ ಉದುರಿ ಬಿದ್ದಂತೆ ಮಾತು. ಸಿಂಹನಂತೆ ಗರ್ಜನೆ. ಬೇವಿನಂತೆ ಕಹಿ. ಕಲ್ಲಿನಂತೆ ಕಠೋರ (ಕಠಿನ). ಚಂಡಿನಂತೆ ದುಂಡುಗೆ. ಚಂಡಿನಂತೆ ಪುಟಿತ. ಬೆಳ್ಳಕ್ಕಿಯಂತೆ ಬಿಳಿ.

ಬಾಳೆ ಸುಳಿಯಂತೆ ಮೃದು (ಕೋಮಲ). ಕಾಮನಂತೆ ಸುಂದರ (ಚೆಲುವು).

೧೦. ಜೋಡುನುಡಿಗಳು.

ಕರುಳು-ಕಕ್ಕುಲತೆ- ಒಕ್ಕಲ ಮನೆ ಸುಟ್ಟು ಹೋದ ಮೇಲೆ ಕರುಳು-ಕಕ್ಕುಲತೆ ಪಟ್ಟು ಪ್ರಯೋಜನವೇನು? ಮಗುವಿನ ಮೇಲಣ ತಾಯಿ ಕರುಳು-ಕಕ್ಕುಲತೆಗೆ ಮೇರೆ ಇದೆಯೋ? **ಶಾಸ್ತ್ರಿ-ಮೇಸ್ತ್ರಿ**— ಶಾಸ್ತ್ರಿ-ಮೇಸ್ತ್ರಿಗಳ ಕಾದಾಟದಲ್ಲಿ ಶಾಲೆ ಮೂಲೆಪಾಲಾಯಿತು. ಶಾಸ್ತ್ರಿ-ಮೇಸ್ತ್ರಿಗಳ ಪುರಾಣ ಕೇಳಿ ಅಟ್ಟ ಅಡಿಗೆ ಸುಟ್ಟುಹೋಯಿತು. **ಠಕ್ಕು-ಠೌಳಿ**- ಮಕ್ಕಕ್ಕೆ ಹೋದರೂ ಠಕ್ಕು-ಠೌಳಿ ಬಿಡಲಿಲ್ಲ. ಬೊಕ್ಕನಾದರೂ ಠಕ್ಕು-ಠೌಳಿ ಬಿಡಲಿಲ್ಲ. ಠಕ್ಕು-ಠೌಳಿ ಇರುವವಗೆ ಠಿಕಾಣಿ ಸಿಗದು. ಟಕ್ಕು-ಟವಳಿಗಾರನ ಮೈಮ್ಯೇಲೆ ಗವುಳಿ ಬಿತ್ತು. ಟಕ್ಕು-ಟವಳಿಗಾರನ ಹತ್ತಿರ ಧರ್ಮ ಉಂಟೆ? **ತಾರು-ಮಾರು**— ತಾರು-ಮಾರು ಮಾಡುವವನಿಗೆ ಯಾರು ತಾನೆ ನಂಬ್ಯಾರು? (ತಾರು-ಮಾರು-ತಾಳುಂ ತಟ್ಟುಂ- Disorder, confusion). **ನುಚ್ಚು-ರೊಟ್ಟಿ**— ನುಚ್ಚು-ರೊಟ್ಟಿಯಾದರೂ ಹುಚ್ಚಗೆ ಬೇಕು. **ದೇವರು-ದಿಂಡರು**— ದೇವರು-ದಿಂಡರನ್ನು ಪೂಜಿಸಲು ಹೋಗಿ ಮನೆ-ಮಾರು ಕಳೆದುಕೊಂಡ ಮೂರ್ಖರ ಪಾಡು ನಾಯಿಗಿಂತ ಕಡೆ. **ತಾರು-ತಟ್ಟು**— (ತಾರು-ಮಾರು) ತಾರು-ತಟ್ಟು ಇಲ್ಲದೆ ದುಡುಕಿದರೆ ಎಡವಿ ಬೀಳುವುದರಲ್ಲಿ ಸಂದೇಹವಿದೆಯೆ? ತಾರು-ತಟ್ಟು ಇಲ್ಲದ ವಿರಹ ತಿಣಿಕಿದರೆ ಹೋದೀತೇ? **ಪಾಲು-ಪಸುಗೆ**— ಪಾಲು-ಪಸುಗೆಯ ಮನೆ ಹಾಳು. ಅಣ್ಣನೊಡನೆ ಜಗಳಾಡಿ ಪಾಲು-ಪಸುಗೆ ಹಿಡಿದುಕೊಂಡು ತಮ್ಮ ಜೇರೆ ಬಿಡಾರ ಹೂಡಿದ. **ಕೆಲಸ-ಬೊಗಸೆ**— ಕೆಲಸಗಳ್ಳತಿಗೆ ಕೂಸು ಹುಟ್ಟಿದರೆ ಕೆಲಸ-ಬೊಗಸೆಯ ತೊತ್ತಿಗೆ ಪ್ರಾಣ ಸಂಕಟ. ಮನೆ ಮನೆ ತಿರುಗುವ ಕೆಲಸ-ಬೊಗಸೆಯ ತೊತ್ತು ಮಾತು ತಾರದೆ ಬಿಟ್ಟಾಳೇ? **ತಾರಗ-ಬೀರಗ**— ಸಿಟ್ಟು ಬಂದಾಗ ಮನುಷ್ಯರು ಕಣ್ಣು ಮುಚ್ಚಿ ತಾರಗ-ಬೀರಗ (ತರಗಾಬರಗಾ) ಮಾತನಾಡುತ್ತಾರೆ. (ಸಿಕ್ಕಂತೆ ಮಾತನಾಡುತ್ತಾರೆ). **ತೊಂಡು-ತೊಳಸು**— (ಸ್ವೇಚ್ಛಾಚಾರದ ತೊಡಕು, ಮೊಂಡತನ). ಕೌರವರ ತೊಂಡು-ತೊಳಸನ್ನು ಸೈರಿಸಲಾರದೆ ಪಾಂಡವರು ಯುದ್ಧಕ್ಕೆ ನಿಂತು ಕೌರವರ ಕುಲವನ್ನೇ ನಾಶಮಾಡಿದರು. **ಜಗಳ-ತೋಟಿ**— ಮಗಳೇ, ಮರುಳಾದೆಯಾ? ಅಂದರೆ ಇರುಳು ಜಗಳ-ತೋಟಿಗೆ ನಿಲ್ಲುವವರು ಯಾರು? ಅಂದ ಹಾಗೆ. ಯುದ್ಧಾದಿಗಳಲ್ಲಿಹ ಜಗಳ-ತೋಟಿ ತಪ್ಪಿ ವೀರಾವೇಶದಿಂದ

ತನ್ನಿಚ್ಛೆ ಬಂದ ಹಾಗೆ ಬಹಳ ಬಹಳ ಸುಗ್ಗಿ ಹೋಗುವವನು ಅತ್ಯಂತ ಹೀನನು. ಪಾಂಡವ ಕೌರವರ ಬಾಲ್ಯತನದ ಜಗಳ-ತ್ರೋಟಿಯನ್ನು ಕೇಳಿ ಕೇಳಿ ಭೀಷ್ಮಾ ಚಾರ್ಯನಿಗೆ ಸಾಕುಸಾಕಾಯಿತು. **ಹಾಸು-ಹೊಕ್ಕು**— ಮಾಯಾವಿದ್ಯೆಯು ಮಾರೀಚನಲ್ಲಿ ಹಾಸು-ಹೊಕ್ಕಾಗಿತ್ತು. ಕಳ್ಳತನವು ಕಳ್ಳ-ಕಾಕರಲ್ಲಿ ಹಾಸು-ಹೊಕ್ಕಾಗಿರುವುದರಲ್ಲಿ ಸಂದೇಹವಿಲ್ಲ. **ಶಾಸ್ತ್ರ-ಪುರಾಣ**— ಶಾಸ್ತ್ರಿ ಮಜ್ಜಿಗೆಗೆ ತಕ್ಕ ಶಾಸ್ತ್ರ-ಪುರಾಣ ಹೇಳಿದ. ಶಾಸ್ತ್ರ-ಪುರಾಣ ತಿಳಿದರೂ ಮಾರಣ ಬಿಡ ಲಿಲ್ಲ. ಶಾಸ್ತ್ರ-ಪುರಾಣ ಹೇಳಿ ಹೋಗುವಾಗ ಬಾಗಲ ಮುಚ್ಚಿ ಹೋಗಿ! ಎಂಬಂತೆ. **ಬಡವರು-ಬಗ್ಗರು**— ಬಡವರು-ಬಗ್ಗರ ಬಿನ್ನಹ ಎಡೆಯಲಿ ಹೋಯಿತು. ಬಡವರು-ಬಗ್ಗರು ತಿಂದರೆ ಹೊಟ್ಟೆಗಿಲ್ಲದೆ ತಿಂದರು, ಬಲ್ಲಿದರು ತಿಂದರೆ ಮದ್ದಿಗೆ ತಿಂದರು. ಬಲ್ಲಿದರ ನಂಟತನ ಬಡವರು-ಬಗ್ಗರಿಗೆ ಬಂಡಾಟ. **ನೆರೆ-ಹೊರೆ**— ಕೊಂಕುಳಲ್ಲಿ ಕುರು ಸಲ್ಲ, ಕೊಂಕಣಿಗರ ನೆರೆ-ಹೊರೆ ಸಲ್ಲ. ಅಭಿಚಾರಿಯು ಕೆಯ್ಯಾಲ್ಲಾದರೂ ಉಂಡೇನು, ಅವಿಚಾರಿಯ ನೆರೆ-ಹೊರೆ ಬೇಡ. ಅರ್ಜುನನು ಚೈತ್ರಯಾತ್ರೆಗೆ ಹೊರಟಾಗ ಕಳಿಂಗ, ಪ್ರಾಗ್ಜ್ಯೋತಿಷ, ಅಂತಗಿರಿ, ಉಲೂಕ ಪುರ, ಮೋದಾಪುರ, ಉರಗಾಪುರ, ಕಾಂಭೋಜ, ಋಷಿಕ ಮುಂತಾದ ನೆರೆ-ಹೊರೆಯ ದೇಶಗಳನ್ನು ಗೆದ್ದನು. **ಛಿದ್ರ-ಛದ್ಮ**— ಅನ್ಯರ ಛಿದ್ರ-ಛದ್ಮಗಳನ್ನು ಹುಡುಕುವುದರಲ್ಲಿ ಭಾರತೀಯರು ಎತ್ತಿದ ಕೈಯುತೆ. ಬೇರೆಯವರ ಛಿದ್ರ-ಛದ್ಮಗಳನ್ನು ಶೋಧಿಸುವುದರ ಮೊದಲು ತನ್ನನ್ನು ಶೋಧಿಸಿಕೊಳ್ಳುವುದೆ ಮೇಲು.

೧೧.

ಒಳಗೆಯ್— ಕೃಷ್ಣಾರ್ಜುನರು ಯಮುನೆಯಲ್ಲಿ ಜಲಕ್ರೀಡೆಯಾ ಡುತ್ತಿರುವಲ್ಲಿ ಅಗ್ನಿ ಬ್ರಾಹ್ಮಣ ರೂಪದಿಂದ ಬಂದು, ಯಾಚನೆಯ ಮೂಲಕ ಅರ್ಜುನನನ್ನು ಒಳಗೆಯ್ದು, ಶ್ವೇತಕಿ ರಾಜನ ಯಜ್ಞದಲ್ಲಿ ತನಗೆ ಅಜೀರ್ಣ ವುಂಟಾಗಿರುವುದೆಂದು ಹೇಳಿ, ಆತನ ಸಹಾಯದಿಂದ 21 ದಿವಸಗಳ ವರೆಗೆ ಖಾಂಡವ ವನವನ್ನು ಭಕ್ಷಿಸಿ, ಅರ್ಜುನನ ಸಾಹಸಕ್ಕೆ ಮೆಚ್ಚಿ ಆತನಿಗೆ ಗಾಂಡೀ ವಮೆಂಬ ದಿವ್ಯ ಧನುಸ್ಸನ್ನೂ, ಅಕ್ಷಯ ತೂಣೀರಗಳನ್ನೂ, ಬಿಳಿಯ ಕುದುರೆ ಗಳನ್ನು ಹೂಡಿದ ದಿವ್ಯ ರಥವನ್ನೂ ಕೊಟ್ಟನು.

ಒಳಗೊಳ್— ಇಂದ್ರನ ಬಿನ್ನಹವಂತೆ ದೇವಲೋಕವನ್ನು ಸೇರಿದ ಅರ್ಜುನನು ಚಿತ್ರಸೇನನೆಂಬ ಗಂಧರ್ವನನ್ನು ಒಳಗೊಂಡು ಆತನಿಂದ ಗಾಂಧರ್ವ

ವೇದವನ್ನು ಅಭ್ಯಾಸ ಮಾಡಿದನು.

ಒಳಗತ್ತರಿ— ಜ್ವರ, ಗುಲ್ಮ, ಕೃಚ್ಛ್ರಾದಿ ರೋಗಗಳು ಕರುಳಿನ ಒಳಗತ್ತರಿಯ ಹಾಗೆ ಪುಟ್ಟಿಸುವ ಪರಿಪರಿ ವ್ಯಾಧಿ. ಗಾಂಧಾರ ದೇಶದ ಅರಸನಾದ ಸುಬಲ ರಾಜನ ಹಿರಿಯ ಮಗನಾದ ಶಕುನಿಯು ದುರ್ಯೋಧನನು ತಮಗೆ ಮಾಡಿದ ಅನ್ಯಾಯವನ್ನು ಮರೆಯದೆ ದುರ್ಯೋಧನನೊಡನೆ ಸೇರಿಕೊಂಡು ಆತನನ್ನು ಬಹಳವಾಗಿ ಕೆಟ್ಟಹಾದಿ ಹಿಡಿಯುವಂತೆ ಪ್ರೋತ್ಸಾಹಗೊಳಿಸಿ ಒಳಗತ್ತರಿಯಂತೆ ದುರ್ಯೋಧನನ ವಂಶವನ್ನೇ ನಾಶಗೊಳಿಸಿದನು.

ಒಳಮಾತು— ಒಳಮಾತು ಮನೆ ಹಾಳು ಮಾಡಿತು, ಸೂಳೆ ನೆರೆಹಾಳು ಮಾಡಿದಳು. ಅನ್ಯರ ಒಳಮಾತನ್ನು ಕದ್ದು ಕೇಳುವುದು ಉತ್ತಮ ಲಕ್ಷಣವಲ್ಲ.

ಒಳವಾಲ ಹಾಕು— ತನಗೆ ಅಗತ್ಯವಿಲ್ಲದ ಅನ್ಯರ ಕೆಲಸದಲ್ಲಿ ಕೈ ಹಾಕಿ ಒಳವಾಲ ಹಾಕಿದಂತೆ ಮನೆಮಾರು ಕಳಕೊಂಡ ಬುದ್ಧಿವಂತ ಮೂರ್ಖರಿಗೆ ನಮ್ಮಲ್ಲಿ ಬರಗಾಲವೇ?

ಕಟ್ಟೆರಕ— ಕಟ್ಟೆರಕದ ಕಾಂತೆಯು ನಡುನೀರಲ್ಲಿ ಕೈಬಿಟ್ಟು ಹೋಗುವಳೇ? ಕರ್ಣ-ದುರ್ಯೋಧನರ ಕಟ್ಟೆರಕ ವಿಶ್ವವಿಶ್ರುತವಾಗಿದೆ.

ಕಟ್ಟಚ್ಚರಿ— ನಾರೀ ತೀರ್ಥದಲ್ಲಿ ಸ್ನಾನ ಮಾಡುವಾಗ ಅರ್ಜುನನನ್ನು ಒಂದು ಮೊಸಳೆ ಹಿಡಿಯಲಾಗಿ, ಅದನ್ನು ಹೊರಗೆ ತೆಗೆದುಹಾಕಲು, ಶಾಪದಿಂದ ಮೊಸಳೆಯಾಗಿದ್ದ ವರ್ಗೆಯೆಂಬ ಅಪ್ಸರಸಿ ತನ್ನ ನಿಜರೂಪವನ್ನು ಧರಿಸಿದುದನ್ನು ಕಂಡ ಅರ್ಜುನನು ಕಟ್ಟಚ್ಚರಿಗೊಂಡನು.

ಕಟ್ಟಡವಿ— ಗಂಗಾನದಿಯನ್ನು ಉತ್ತರಿಸಿದ ಸೀತಾ ಲಕ್ಷ್ಮಣರು ಮುಂದೆ ನಡೆದು ಒಂದು ಕಟ್ಟಡವಿಯನ್ನು ಪ್ರವೇಶಿಸಲು ಅಲ್ಲಿಯ ವನ್ಯ ಪ್ರಾಣಿಗಳ ಗರ್ಜನೆಯನ್ನು ಕೇಳಿ ಸೀತೆಯು ಗಡಗಡನೆ ನಡುಗಿದಳು.

ಕಟ್ಟಣಕ— ಭಾರತ ಯುದ್ಧದಲ್ಲಿ ಭೀಮಸೇನನು ಕಟ್ಟಣಕ (Great strength) ದಿಂದ ಆನೆಗಳನ್ನು ಎತ್ತಿ ಆನೆಗಳನ್ನು ಹೊಡೆಯುತ್ತಿದ್ದನು.

ಕಟ್ಟರಸು — (ಅಭಿಷಿಕ್ತ ರಾಜ). ಕಟ್ಟರಸ ಸಿಂಹಾಸನವನ್ನು ಅಲಂಕರಿಸಿದ ಕೂಡಲೆ ಸಭಿಕರು ಎದ್ದು ನಿಂತು ತಲೆವಾಗಿದರು.

ಕಟ್ಟವಸರ— (ಹೆಚ್ಚಿನ ಅವಸರ). ಕಟ್ಟವಸರಕ್ಕೆ ಮೂರು ಮೊಳ

ನೇಯಬೇಡ. ಕಟ್ಟವಸರದ ವರ್ತಮಾನವನ್ನು ತಂತಿಯ ಮೂಲಕ ತಿಳಿಸುತ್ತಾರೆ.

ಕಟ್ಟಳವಿ— ಧನುರ್ಯಾಗಕ್ಕಾಗಿ ಕಂಸನ ಅಪ್ಪಣೆಯ ಮೇರೆಗೆ ಮಧುರೆಯನ್ನು ಹೊಕ್ಕ ಕೃಷ್ಣನು ಕುವಲಯಾಪೀಡವೆಂಬ ಕಂಸನ ಆನೆಯನ್ನು ಕಟ್ಟಳವಿಯಲ್ಲಿ ಕೊಂದನು. ಕಂಸನ ಆಸ್ಥಾನದಲ್ಲಿ ನಡೆದ ಕಟ್ಟಳವಿ (Great wrestling) ಯಲ್ಲಿ ಕೃಷ್ಣನು ಚಾಣೂರ ಮುಷ್ಟಿಕರೆಂಬ ಜಟ್ಟಿಗಳನ್ನು ಸಂಹರಿಸಿದನು.

ಕಟ್ಬಾಸರು— ಪಥಿಕನು ಕಟ್ಬಾಸರನ್ನು ತಡೆಯಲಾರದೆ ಬಳಿಯ ಹೊಂಡದ ನೀರನ್ನು ಕುಡಿದು ಸನಿಹದ ಮರದಡಿಯಲ್ಲಿ ಒರಗಿದನು.

ಕಟ್ಬಾಳು— ಆಳು ಕಾಳು ಇದ್ದ ಕಟ್ಬಾಳುವಾದರೂ ಕಾಳಯನು ಬಿಟ್ಬಾನೆ? ದ್ರೌಪದೀ ಸ್ವಯಂವರ ಸಮಯದಲ್ಲಿ ಕಟ್ಬಾಳು ಅರ್ಜುನನು ಕರ್ಣನನ್ನು ಯುದ್ಧದಲ್ಲಿ ಸೋಲಿಸಿದನು.

ಕಟ್ಟುತ್ತರ— ಅಭಿಮನ್ಯುವಿನ ವಿವಾಹಾನಂತರ ಪಾಂಡವರು ಉಪಪ್ಲಾವ್ಯ ನಗರದಲ್ಲಿ ವಾಸಿಸುತ್ತಿದ್ದಾಗ ದ್ರುಪದ ಕುರು ಪಾಂಡವರ ಸಂಧಿಗಾಗಿ ತನ್ನ ಪುರೋಹಿತನನ್ನು ಧೃತರಾಷ್ಟ್ರನಿಗೆ ಕಳುಹಿಸಲು, ದುರ್ಯೋಧನನು "ಸಂಧಿಯ ಮೂಲಕ ರಾಜ್ಯವನ್ನು ಖಂಡಿತವಾಗಿಯೂ ಕೊಡೆನು'' ಎಂದು ಕಟ್ಟುತ್ತರವನ್ನು ಕಳುಹಿಸಿದನು.

ಕಟ್ಟುಬ್ಬೆಗ— ಜರಾಸಂಧನಿಂದ ತನಗಾಗುತ್ತಿರುವ ಹಾನಿಯನ್ನು ತಡೆಯಲಾರದೆ ಕೃಷ್ಣನು ಕಟ್ಟುಬ್ಬೆಗದಿಂದ ಆನರ್ತ ದೇಶದಲ್ಲಿ ದ್ವಾರಕೆಯನ್ನು ನಿರ್ಮಿಸಿ, ಅಲ್ಲಿಯೇ ಸಕಲ ಯಾದವರೊಂದಿಗೆ ವಾಸಮಾಡತೊಡಗಿದನು.

ಕಟ್ಟುಲಿಂಪು— (ಬಹಳ ಗಲಭೆ, ದೊಡ್ಡ ಕೂಗು) ದಿಗ್ವಿಜಯಕ್ಕಾಗಿ ಹೊರಟ ದಶಕಂಠನು ಕೈಲಾಸದ ಬಳಿಸಾರಿ, ನಂದಿಯನ್ನು ಪರಿಹಾಸ ಮಾಡಿ, ಕಪಿಗಳ ಮೂಲಕ ತನ್ನ ವಂಶವು ಹಾಳಾಗುವಂತೆ ಶಾಪವನ್ನು ಪಡೆದು, ಸಿಟ್ಟಿನಿಂದ ಕೈಲಾಸ ಪರ್ವತವನ್ನು ಎತ್ತಲು ಪ್ರಯತ್ನ ಮಾಡಿದನು. ಪರ್ವತವು ಅವನ ಮೇಲೆ ಕುಸಿಯಲು, ಭಾರವನ್ನು ತಡೆಯಲಾರದೆ ಗಟ್ಟಿಯಾಗಿ ಕೂಗಾಡಿದನು. ಈ ಕಟ್ಟುಲಿಹಿಂದಾಗಿ ಶಿವನಿಂದ ರಾವಣನೆಂಬ ಹೆಸರನ್ನೂ ದಿವ್ಯ ಖಡ್ಗವನ್ನೂ ದೀರ್ಘಾಯುಷ್ಯವನ್ನೂ ಪಡೆದನು.

ಕಟ್ಟೊಳಿಗ— (ವಿಶ್ರಾಂತಿ ಸಿಗದ ಕಡು ಕೆಲಸ.) ಸುಗ್ರೀವನಿಂದ ಸೀತೆಯನ್ನು ಹುಡುಕುವ ಕಟ್ಟಾಜ್ಞೆಯನ್ನು ಪಡೆದ ಕಪಿವೀರರು ಕಟ್ಟೊಳಿಗಕ್ಕಾಗಿ ಎಲ್ಲಾ ದಿಕ್ಕುಗಳಿಗೂ ಕಟ್ಟವಸರದಿಂದ ಹೊರಟರು.

ಕಟ್ಟಂಕ— ಅರ್ಜುನ ಕರ್ಣರೊಳಗೆ ನಡೆದ ಕಟ್ಟಂಕದಲ್ಲಿ ಅರ್ಜುನನು ತೋರಿಸಿದ ಸಾಹಸಕ್ಕೆ ಮೆಚ್ಚಿದ ಅಂಬರ ನಿವಾಸಿಗಳು ಹೂಮಳೆಯನ್ನು ಕರೆದರು.

ಕಟ್ಟೆಸುಗೆ— ತಾಯಿಯ ಗಜಗೌರಿ ವ್ರತಕ್ಕಾಗಿ ಸ್ವರ್ಗಲೋಕದಿಂದ ಐರಾವತವನ್ನು ತರಿಸಲು ಅರ್ಜುನನು ಭೂ-ಸ್ವರ್ಗಕ್ಕೆ ಕಟ್ಟೆಸುಗೆಯಿಂದ ಶರ ಪಂಜರವನ್ನು ಬಿಗಿದನು.

ಕಟ್ಟುಗೂಳಿ— (ಬೀಜದ ಹೋರಿ.) ವಿರಾಟನ ಮಗನಾದ ಉತ್ತರನು ರಾಣಿವಾಸದಲ್ಲಿ ಕಟ್ಟುಗೂಳಿಯಂತೆ ಮೆರೆಯುತ್ತಿದ್ದನು.

ಕಟ್ಟೊಡೆ— (ನಿಯಮವನ್ನು ಉಲ್ಲಂಘಿಸು, ಮಾತು ಮುರಿ.) ಸಮಾಜದ ಕಟ್ಟೊಡೆದ ಧೂರ್ತರನ್ನು ಹಿಂದೆ ಬಹಿಷ್ಕರಿಸುವ ಸಂಪ್ರದಾಯವಿತ್ತಂತೆ.

೧೨. ಪಡೆನುಡಿಗಳು.

ಕಣ್ಣಿಡು- ಗೌತಮನ ಮಡದಿಯಾದ ಅಹಲ್ಯೆಯ ಮೇಲೆ ಕಣ್ಣಿಟ್ಟ ದೇವೇಂದ್ರನು ಮೋಸದಿಂದ ಆಕೆಯ ಪಾತಿವ್ರತ್ಯವನ್ನು ಭಂಗಗೊಳಿಸಿ, ಗೌತಮನಿಂದ ಶಾಪಪಡೆದು ಸಹಸ್ರಾಕ್ಷನಾದನು.

ಕಾಲು ಕೆದರು- ಚಂದ್ರವಂಶದ ಕೃತವೀರ್ಯ ರಾಜನ ಮಗನಾದ ಕಾರ್ತವೀರ್ಯನು ತನ್ನ ಮಡದಿಯರೊಂದಿಗೆ ಜಲಕ್ರೀಡೆಯಾಡುತ್ತಿದ್ದಾಗ ಅಲ್ಲಿಗೆ ಹೋದ ರಾವಣನು ಕಾಲು ಕೆದರಿ ಜಗಳಕ್ಕೆ ನಿಲ್ಲಲು, ಕಾರ್ತವೀರ್ಯನು ಅವನನ್ನು ಬಂದಿಯಾಗಿರಿಸಿದನು.

ಕತ್ತೆಯ ಬಿಟ್ಟಿ- ಬಿಟ್ಟಿಯಾಳು ಧನಿಗಳ ಮನೆಗಳಲ್ಲಿ ಎಷ್ಟು ಕತ್ತೆಯ ಬಿಟ್ಟಿ ಮಾಡಿದರೂ ಕೂಳು ಸಿಗುವುದು ಕಷ್ಟ. ಬಲ್ಲಿದನ ಮನೆಯಲ್ಲಿ ದುಡಿವ ಒಡವನ ಶ್ರಮವು ಕತ್ತೆಯ ಬಿಟ್ಟಿಯೆ ಸರಿ.

ಕೆಯ್ಯಾನು- (ಕೈನೀಡು, ಆದರಿಸು, ಬೇಡು) ದುಃಖದಲ್ಲಿ ಮುಳುಗಿ ತತ್ತರಿಸುವ ಮಾನವನಿಗೆ ದುಷ್ಟರು ಕೆಯ್ಯಾನಲು ಮುಂದೆ ಬರುವರೆ? ಶಿಷ್ಟರು ಕೆಯ್ಯಾನಲು ಹಿಂದುಳಿಯುವರೆ? ಬಲು ಬಕ್ತಿಯಿಂದ ಕೆಯ್ಯಾಂತವನನ್ನು ಭಗವಂತನು ಕೆಯ್ಬಿಡುವನೆ?

ಕೆಯ್ಮಿಗು– ಭಾರತದ ಹದಿನಾಲ್ಕನೆಯ ದಿನದಲ್ಲಿ ನಡೆದ ಕರ್ಣ ಭೀಮರ ಯುದ್ಧದಲ್ಲಿ ಭೀಮನ ಕೆಯ್ಮಿಗಲು ಕರ್ಣನು ಸೋತು ಓಡಿಹೋದನು. ತಂದೆತಾಯಿಗಳ ಕೆಯ್ಮಿಕ್ಕಿದ ಮಕ್ಕಳು ಹಾಳಾಗುವುದರಲ್ಲಿ ಸಂಶಯವಿಲ್ಲ.

ಕೈವೀಸು– (ಯುದ್ಧವನ್ನು ಆರಂಭಿಸುವುದಕ್ಕೆ ಸನ್ನೆ ಮಾಡು.) ರಾಜನು ಕೈವೀಸಲು ಉಭಯ ಸೇನೆಗಳೂ ತುಮುಲ ಯುದ್ಧವನ್ನು ಆರಂಭಿಸಿದುವು.

ಕೈದೆಗೆ– (ಹಿಂಜರಿ, ಹಿಮ್ಮೆಟ್ಟು.) ಮಾಯಾವಿ ಮತ್ತು ವಾಲಿಯರ ಯುದ್ಧದಲ್ಲಿ ಕೈದೆಗೆದ ಮಾಯಾವಿಯು ದಿಕ್ಕು ತೋರದೆ ಒಂದು ಬೆಟ್ಟವನ್ನು ಹತ್ತಿ ಅದರಲ್ಲಿದ್ದ ಒಂದು ಗುಹೆಯನ್ನು ಪ್ರವೇಶಿಸಿದನು. ಹಿಡಿದ ಕಾರ್ಯವನ್ನು ಪೂರ್ಣಗೊಳಿಸದೆ ಮಧ್ಯದಲ್ಲಿ ಕೈದೆಗೆಯುವುದು ಪುರುಷಲಕ್ಷಣವಲ್ಲ.

ಕೆಯ್ಮೆ– (ಮಾಟ, ಕೃತಿ.) ಮಂತ್ರಗಾರನ ಕೆಯ್ಮೆಗೆ ತಂತ್ರಗಾರನ ಕೆಯ್ಮೆಯೆ ಸರಿದೊರೆ.

ಹೊಟ್ಟೆಯ ಮೇಲೆ ಹೊಡೆ– ಬಡವರ ಹೊಟ್ಟೆಯ ಮೇಲೆ ಹೊಡೆಯದಿದ್ದರೆ ಶ್ರೀಮಂತರಾಗಲು ಸಾಧ್ಯವೆ ಪ್ರಾಣಿಗಳ ರಕ್ತವನ್ನು ಹೀರುವ ಜಿಗಳೆಗೂ ಬಡವರ ಹೊಟ್ಟೆಯ ಮೇಲೆ ಹೊಡೆಯುವ ಕುಬೇರ ಪುತ್ರರಿಗೂ ಏನು ಭೇದ?

ಗಾಳಿಗೋಪುರವಾಗು– ಕರ್ಣನ ಒಡನಾಟದಿಂದ ಪಾಂಡವರ ನಾಶಕ್ಕಾಗಿ ದುರ್ಯೋಧನನು ಮಾಡಿದ ಪ್ರಯತ್ನಗಳು ಗಾಳಿಗೋಪುರವಾಯಿತು.

ಹೊಟ್ಟೆಯೊಳಗೆ ಹಾಕಿಕೊ– ದಮಘೋಷನ ಹೆಂಡತಿಯೂ ತನ್ನ ತಂದೆಯ ತಂಗಿಯೂ ಆದ ಶ್ರುತಶ್ರವೆಗೆ ಕೊಟ್ಟ ಮಾತಿನಂತೆ ಅವಳ ಮಗನಾದ ಶಿಶುಪಾಲನು ಮಾಡಿದ ನೂರು ಅಪರಾಧಗಳನ್ನು ಕೃಷ್ಣನು ಹೊಟ್ಟೆಯೊಳಗೆ ಹಾಕಿಕೊಂಡನು.

ಕಾಲ ಮೇಲೆ ಕಾಲು ಹಾಕಿಕೊಳ್ಳು– (ವ್ಯರ್ಥ ಕಾಲಕ್ಷೇಪ, ಅಲಕ್ಷ್ಯ.) ಭಾರತದ ಕುಬೇರ ಪುತ್ರರಲ್ಲಿ ಹೆಚ್ಚಿನವರು ಕಾಲ ಮೇಲೆ ಕಾಲು ಹಾಕಿಕೊಂಡು ಆಯುಷ್ಯ ಕಳೆಯುವರಲ್ಲದೆ ಅನ್ಯ ಚಟುವಟಿಕೆಗಳಿಗೆ ಮನಗೊಡರು. ಸಜ್ಜನರನ್ನು ಕಂಡಕೂಡಲೇ ಕಾಲ ಮೇಲೆ ಕಾಲು ಹಾಕಿಕೊಳ್ಳುವುದು ದುರ್ಜನರ ಸ್ವಭಾವ.

ಭುಜಕ್ಕೆ ಭುಜ ಹಚ್ಚು– ಧರ್ಮರಾಯನ ಯಜ್ಞದ ಕುದುರೆಯನ್ನು

ಕಟ್ಟಿಹಾಕಿದ ಕಾರಣ ಬಭ್ರುವಾಹನ ಅರ್ಜುನರೊರಳಗೆ ಭುಜಕ್ಕೆ ಭುಜ ಹಚ್ಚಲು, ಬಭ್ರುವಾಹನನ ತಾಯಿಯಾದ ಚಿತ್ರಾಂಗದೆಯು ಮಧ್ಯದಲ್ಲಿ ಪ್ರವೇಶಿಸಿ ತನ್ನ ಮಗನನ್ನು ಆತನ ತಂದೆಯಾದ ಅರ್ಜುನನ ಪದತಲದಲ್ಲಿ ಅಡ್ಡ ಬೀಳಿಸಿದಳು.

ಹೊಟ್ಟೆಗೆ ಕಲ್ಲು ಹಾಕು- ಬಡವರನ್ನು ಸುಲಿದು ಅವರ ಹೊಟ್ಟೆಗೆ ಕಲ್ಲು ಹಾಕುವ ಮನುಷ್ಯನಿಗೂ ರಾಕ್ಷಸನಿಗೂ ಭೇದವಿಲ್ಲ.

ಬರಿಹೊಟ್ಟೆಯ ಮೇಲೆ ಅಡಿಯಿಡು- ಮನೆ ತುಂಬ ಮಕ್ಕಳಿರುವ ಕಡು ಬಡವನ ಮನೆಯಲ್ಲಿ ರೋಗ-ರುಜನ ಪ್ರವೇಶಿಸಿತೆಂದರೆ ಬರಿಹೊಟ್ಟೆಯ ಮೇಲೆ ಅಡಿಯಿಟ್ಟಂತಾಗುವುದು.

ಲಾಂಗೂಲ ಚಾಲನ ವೃತ್ತಿ- ಇಂದಿನ ಕಾಲದಲ್ಲಿ ಮೇಲಧಿಕಾರಿಗಳ ಲಾಂಗೂಲ ಚಾಲನ ವೃತ್ತಿಯನ್ನು ಕೈಗೊಂಡ ಕೆಳ ಅಧಿಕಾರಿಗಳಿಗೆ ಮಾತ್ರ ಪದೋನ್ನತಿ (ಬಡ್ತಿ) ಹೊಂದಲು ಸಾಧ್ಯ. ಸ್ವತಂತ್ರ ಭಾರತದ ಟೋಪಿವಾಳಗಳ ಬಿಳಿ ಟೋಪಿಯನ್ನು ಕಳಚಿದರೆ ಅದರ ಒಳಗಡೆ ಲಾಂಗೂಲ ಚಾಲನ ವೃತ್ತಿಯ ಕರಿಯ ಪದರು ಕಂಡುಬರುವುದು ಭಾರತೀಯರ ದೌರ್ಭಾಗ್ಯ.

೧೩ ಶಬ್ದ ಸಂಗ್ರಹ.

ಗಳಿಸು— (ಸಂಪಾದಿಸು.) ಗಳಿಕೆ. (ಗಂಡನಿಗೆ ಗಳಿಕೆ ತೋರಿಸಬೇಡ, ಮಕ್ಕಳಿಗೆ ಸವಿ ಕಲಿಸಬೇಡ.) ಗಳಿಸುವಿಕೆ, ಗಳಿಕೆಗಾರ, ಗಳಿಸಾಳಿ, ಗಳಿಸಾಳಿ ಹೆಣ್ಣು (ಪಡೆಪುಗಾರ್ತಿ.)

ಒಡೆ-- (ಭಾಗಿಸು, ಚೂರು ಮಾಡು.) ಒಡೆಯಿಸು. ಒಡೆಯ ಹೊಯ್, ಒಡೆಯಿಕ್ಕು, ಒಡೆಯಿಡು, (ಪುಲಿಯ ತಲೆಯ ಒಡೆಯಿಟ್ಟು.) ಒಡಿ, ಒಡಿಸು, ಒಡಸು, ಒಡೆಸು, ಒಡ, ಒಡಕೊಳ್ಳು, (ಸಾರಂಗವು ಅಂಜಿ, ಎದೆ ಒಡಕೊಂಡು, ಗಿಡದ ಗುಂಪಿನೊಳಗೆ ಹೊಕ್ಕು.) (ತುಡದ ಜನರು ಹಿಂಡು ಒಡಕೊಂಡು ಹೋದರೆ ಮುಂಡೆಪುರಿಂದ ಕಡೆ.) ಒಡಗಲ್ಲು, ಒಡಮೊಗೆ, (ಮರ್ಮವಿಲ್ಲದ ಮಾತು ಒಡಮೊಗೆಯ ತೂತು.) (ಒಡಮೊಗೆ- A broken or cracked earthen vessel) ಒಡ ಕುಟ್ಟು, (ಒಡಗುಟ್ಟು), ಒಡಗೊಡು, ಒಡ ಮುರಿ, ಒಡೆ ಮುರಿ, ಒಡಕ, (ಒಂದಾಗಿ ಇರುವವರಲ್ಲಿ ಒಡಕ ಹುಟ್ಟಿಸುವವನು ದುರ್ಜನ.) ಒಡಕಗಡಿಗೆ, (ಮುರುಕ ಮನೆಗೆ ಒಡಕಗಡಿಗೆ.) ಒಡಕದನಿ-

ಒಡಕಬಾಯುವ, ಎದೆವೊಡಕ, ಒಡಕಲು, (ಒಡಕಲ,) ಒಡಕು, ಒಡಕುದೋಣಿ, (ಒಡಕು ದೋಣಿಗೆ ಗಿಡ್ಡ ಜಲ್ಲು.) ಒಡಕುಹರವಿ, (ದುಡಿಗೆ ಅಂಜುವ ಬಂಟನ್ ಒಡಕುಹರವಿಯು ಕಂಟಿ.)

ಆನು— (ಆಧಾರ ಹೊಂದು.) (ಆ. ಆನ್. ಆಂತು.) ಆನಿಸು, ಆನಿಕೆ, ಆನುಗೋಲು, ಆನೆ, ಆಂಕೆ, ಆಂಕೆಗೊಳ್ಳು, ಆಂದಿ, (ಹೊಣೆ), ಆಂದಿಗ (ಹೊಣೆಗಾರ), ಆಂದುಗಲ್ಲು (ಹೊರೆ ಹೊತ್ತುಕೊಂಡು ಹೋಗುವ ದಾರಿಕಾರರು ದಣಿದಾಗ ಅವರಿಗೆ ಹೊರೆ ಇಳಿಸುವುದಕ್ಕಾಗಿ ನಿಲ್ಲಿಸಿದ ಕಲ್ಲು.)

ಅರಿ— (ತಿಳಿ), ಅರಿಗ (ತಿಳಿದವ), ಅರಿಕೆ, ಅರಿತ, ಅರಿಪು, (ತನ್ನ ವಿದ್ಯೆಯುಂ ಧರೆಗೆ ಅರಿಪಲ್ಕೆ.) ಅರಿಮೆ, ಅರಿಯಮೆ, ಅರಿವು, ಅರಿಸು, (ಅರಿಸುವ ಕಾರ್ಯ.) ಅರಿಹ, (ಪರರಂ ಚೇಷ್ಟೆಯಿಂದೆ ಅರಿಹಂ.) ಅರಿಹು, ಅರು, ಅರವು, ಅರುವು, ಅರುಮರು, ಅರುವು ಮರುವು, ಅರುಪು, ಅರುಹು, ಅರುಹು ಮರುಹು, ಅರುವಿಲಿ, ಗುರ್ತರಿಕೆ, (ಸಂಸ್ತವ, ಪರಿಚಯ.) ಮೊಗವರಿತ, ಮೊಗವರಿಕೆ, (ಪರಿಚಯ.) (ಅರಿಯೆನು ಅಂದರೆ ಅರ್ವತ್ತು ಗುಣ, ಬಲ್ಲೆನು ಅಂದರೆ ಬಹಳ ಕಷ್ಟ, ಅರಿಯೆನು ಎಂಬುದು ಅರ್ವತ್ತು ಗುಣ, ಕಾಣೆನು ಎಂಬುದು ಕೋಟಿ ಗುಣ, ಅರಿಯೆ ಎಂಬುದು ಆನೆಯ ಕೊಟ್ಟು ಕಲಿ.) – (ಕಡಿದು ಹಾಕು). ಅರಿಸು, (ತಲೆಯುನು ಅರಿಸಿಕೊಳಲ್ ತಕ್ಕವನು– ವಧ್ಯ, ಶೀರ್ಷಚ್ಛೇದ್ಯ,) ಅರಿಬೊಯ್ಲು, ಅರಿವಾಳು, ಅರಿವಾಳದಾಂಡಾರಿ, ಅರಿತರಿ, ಅರಿಷಡ್ವರ್ಗ.

ಅಗಳು— (ಅಗಿ, ತೋಡು.) ಅಗಳ, ಅಗಳತಿ (ಕಂದಕ), ಅಗಳತೆ, ಅಗಳ್ತೆ, ಅಗಳಂತಿ, ಅಗಳಿ, ಅಗಳು, ಅಗುಳು.

ಅಡಕು— (ಅಡಗು, ತುಂಬು, ಮುಚ್ಚಿರು.) ಅಡಕ, ಅಡಕಗೊಳಿಸು, ಅಡಕದ ಕೋಣೆ, (A store-room.) ಅಡಕಲು, ಅಡಕಲೇರಿಸು, (ನೀನು ಅಡಕಲೇರಿಸಿದ ಗಡಿಗೆಗಳನ್ನು ಯಾರು ಮಾಡಿದರು?) ಅಡಕಿಲು, ಅಡಕಿಲ್ವೊಂದು, (ಒಂದರ ಮೇಲೆ ಒಂದು ಇರು) ಅಡಕಿ, (ನೀರಡಕಿ,) ಅಡಕು, ಅಡಕು ಪಾತ್ರೆ, ಅಡಕೆ, ಅಡಿಕೆ, ಅಡಕೆಗತ್ತಿ, ಅಡಕೆಲೆ, ಅಡಕೆ ಹಂಗು, ಅಡಕೊತ್ತು, ಅಡಕೋತು, ಅಡಗತ್ತಿ, ಅಡಗತ್ರಿ, ಅಡ್ಕ.

ಅಡ್ಡು— (ನಡುವೆ ಬರು,) ಅಡ್ಡ, ಅಡ್ಡಗಟ್ಟು, (ಅಡಗಟ್ಟು, ಅಡ್ಡಕಟ್ಟು), ಅಡ್ಡಗಟ್ಟೆ, ಅಡ್ಡಕಸಬು, ಅಡ್ಡಗಾಲು, ಅಡ್ಡಕಾಲುವೆ, ಅಡ್ಡಕಾವಲಿ,

ಅಡ್ಡಗೂಸು, ಅಡ್ಡಗೋಡೆ, (ಅಡ್ಡ ಗೋಡೆಯ ಮೇಲಣ ದೀಪದ ಹಾಗೆ. ಅವನ ಸಾಕ್ಷಿ ಅಡ್ಡ ಗೋಡೆಯ ಮೇಲಣ ದೀಪ) ಅಡ್ಡಣೆ, ಅಡ್ಡತಿಡ್ಡ, (ಕಾಡಕೋಣ ಗಳು ಅಡ್ಡತಿಡ್ಡ ನಡೆದಾಗ್ಯೂ. ಎಮ್ಮೆ ಕೋಣಗಳ ನಡಿಗೆ ಅಡ್ಡತಿಡ್ಡವಾಗಿ ಇದ್ದಾಗ್ಯೂ.) ಅಡ್ಡಾತಿಡ್ಡಿ, ಅಡ್ಡಾದಿಡ್ಡಿ, ಅಡ್ಡಾದುಡ್ಡಿ, ಅಡ್ಡತಿಡ್ಡಿ, ಅಡ್ಡ ನಗೆ, ಅಡ್ಡ ನಾಮ, ಅಡ್ಡ ನಾಲಿಗೆ, ಅಡ್ಡ ಮಾತು, ಅಡ್ಡ ಹೆಸರು, ಅಡ್ಡಾಗು, ಅಡ್ಡಾನು, ಅಡ್ಡೇಟು, (ಅಡ್ಡೇಟು ತಗಲಿದರೆ ಬಡ್ಡನಾದರೂ ಗೆದ್ದಾನು.) ಅಡ್ಡಯಿಸು (ಅಡ್ಡಗಿಸು), ಅಡ್ಡಣ, (ಡಾಲು), (ಅಡ್ಡಣಂ ಒಡ್ಡಿದ ಕಾರ್ಮುಗಿಲ ಒಡ್ಡಣಂ.) ಅಡ್ಡನ, ಅಡ್ಡನೆ, ಅಡ್ಡವಿಸು, ಅಡ್ಡಯ್ಸು, ಅಡ್ಡಯಿಸುಹ, ಅಡ್ಡಲು, ಅಡ್ಡಲಿಡು, ಅಡ್ಡಾಯಿಲ (ವಿರೋಧಿ), ಅಡ್ಡಾಯುಧ, (ಅಡಾಯುಧ), ಅಡ್ಡಿ, ಅಡ್ಡಿಸಡ್ಡಿ, ಅಡ್ಡಣಿಗೆ, ಅಡ್ಡಿಕೆ.

ಅರೆ— (ಸಣ್ಣ ಮಾಡು,) ಅರಿ, ಅರ, ಅರತ, ಅರಯಿಸು, ಅರಿಸು, ಅರನ, ಅರ್ನ, (ಪದಾರ್ಥಗಳನ್ನು ತಿಕ್ಕಿ ನುಣುಪು ಮಾಡುವ ಉಕ್ಕಿನ ಸಾಧನ)

ಆರು— (ಸಮರ್ಥನಾಗು.) ಆರಡಿ (ವೈರ) ಆರಡಿಗೊಳ್ಳು, ಆರ್ಪು, ಆರ್ಪಳಿ, ಆರ್ಪುಗುಂದು.

ಇಡಿ— (ಗುಂಪಾಗು, ತುಂಬು.) ಇಡಿ, (ಇಡಿ ಮುಳುಗಿದ ಮೇಲೆ ಚಳಿ ಉಂಟೇ? ಅರಸಿಗೆ ಅರ್ಧ ರಾಜ್ಯವಾದರೆ ತಿರಿದುಂಬುವಗೆ ಇಡೀ ರಾಜ್ಯ.) ಇಡಿಕು ಇಡಕು, ಇಡಿಕಿರಿ, ಇಡುಕಿರಿ.

ಉಡು— (ಬಟ್ಟೆ ಸುತ್ತಿಕೊಳ್ಳು.) ಉಡಿಸು, ಉಡಸು, ಉಡುಸು, (ಚಕಿತ ಕುರಂಗ ನಯನೆಗೆ ತಂದುಡಿಸಿದರು ನವದುಕೂಲವನು.) ಉಡ, ಉಡದಾರ, (ಪುರುಷನ ಉಡದಾರ-ಶೃಂಖಲ.) (ಸಾರಕನ ಅಂದರೆ ಹೆಂಗಳ ಟೊಂಕಕ್ಕೆ ಆಭರಣ, ಮೂರು ಎಳೆಗಳ ಡಾಬು, ಉಡದಾರ, ಗೆಜ್ಜೆಯ ಉಡದಾರ, ಗಂಟೆಯ ಉಡದಾರ.) (ಅಜ್ಜಿ ನೂತದ್ದೆಲ್ಲಾ ಅಜ್ಜನ ಉಡದಾರಕ್ಕೆ ಸರಿ.) ಉಡಪು, ಉಡಿ, (ಬಸುರಿದ್ದವಳ ಉಡಿಯ ತುಂಬುವ ಕಾರ್ಯ- ಸೀಮಂತಪ್ರಸ್ತ.) (ಲೇಸಪ್ಪ ಸ್ತ್ರೀಯರ ಉಡಿ- ಆರೋಹ.) (ಅಡಿಕೇ ಉಡಿಯಲ್ಲಿ ಹಾಕಬಹುದು, ಮರವಾದ ಮೇಲೆ ಆಗದು.) ಉಡಿಗೂಸು, ಉಡಿಗಂಟೆ, ಉಡಿಗಲ್ಲಿ, ಉಡಿಗೆಜ್ಜೆ, ಉಡಿದಾರ, (ಮೇಖಲೆ, ಕಾಂಚಿ, ರಶನೆ, ಸಪ್ತಕಿ, ಕಲಾಪ, ಸಾರಸ, ಕಕ್ಷ್ಯೆ.) ಉಡಿನೂಲು, ಉಡಿಕೆ, (ಬಟ್ಟೆಯನ್ನು ಕೊಟ್ಟು, ಇತರ ಯಾವ ಸಮಾರಂಭವನ್ನೂ ಮಾಡದೆ ಆದ ಲಗ್ನ.) ಉಡಿಕೆಗಂಡ, (ಉಡಿಕೆಗಂಡನ ಉಪದ್ರವ

ಬಹಳ.) ಉಡಿಕೆ ಮಾಡು, (To give a Kuppasa and Sari to a widow, make her put them on, and hereby, in the presence of some witnesses, make her his wife.) ಉಡಿಕೆ ಹೆಂಡತಿ, (ಉಡಿಕೆಯವಳು), ಉಡಿಗೆ, ಉಡಿಗೆ ತೊಡಿಗೆ, ಉಡಿಲು (ಉಡಿ), (ಉಟ್ಟುದು- ಉಪಸಂವ್ಯಾನ, ಪರಿಧಾನ, ಅಂತರೀಯ, ನಿವಸನ.) (ಒಳಗುಡುವ ಸೀರೆ- ಅಂತರ.) (ನವಿಲಗರಿ ಉಟ್ಟ ಬೇಡನು- ಕಿರಾತ) (ಎಲೆ-ಸೊಪ್ಪನು ಉಟ್ಟ ಬೇಡನು-ಶಬರ.) (ಉಡುವ ಸೀರೆ-ಪರಿಧಾನ.) (ವರ ಯುವತಿಯರು ಅರ್ಧ ತೊಡೆ ಪರಿಯಂತರ ಉಡುವಂತಹ ಸೀರೆ-ಚಂಡಾತಕ.) ಉಡುಗರೆ. ಉಡುಗುರೆ. ಉಡುಗೊರೆ. ಉಡುದಾರ. (ದರ್ಭೆಯಿಂದ ಮಾಡಿದ ಉಡುದಾರ-ಮೌಂಜಿ.) ಉಡುಕ. ಉಡುಕೆ. ಉಡುಗೆ. ಉಡುತೊಡು. ಉಡುಗೆ ತೊಡುಗೆ. ಉಡುತ. ಉಡುಪು. ಉಡೆ. (ಪೆಣ್ಣುಡೆ.) ಉಡೆವಣಿ.

ಎಗ್ಗು— (ಕುಕ್ಕು.) ಎಗ್ಗ (ಯಾವಾಗಲೂ ತಲೆಯಮೇಲೆ ಕುಕ್ಕಿಸಿ ಕೊಳ್ಳುವವ-ತ್ರಿಳಿಗೇಡಿ.) ಎಗ್ಗತನ. (ಎಗ್ಗತನದ ಮಾತು-ಗ್ರಾಮ್ಯ, ಅಶ್ಲೀಲ). ಎಗ್ಗು (ನಾಚಿಕೆ, ಅವಮಾನ.) ಎಗ್ಗುಳಿ. ಎಗ್ಗುಳಿತನ. ಎಂಗಿ.

ಒಂಕು— (ಡೊಂಕಾಗು.) ಒಂಕರ (ಡೊಂಕು.) ಒಂಕಿ (ಹೇಗಸರ ತೋಳ ಆಭರಣ.) ಒಂಕಿಣ (ಕಿರುಗತ್ತಿ.)

ಒಡ್ಡು— (ಹರಹು, ಪಸರಿಸು.) ಒಡ್ಡ. ಒಡ್ಡಣ. ಒಡ್ಡಿಸು. (ಸತಿಯ ಕಂಗಳೊ? ಒಡ್ಡಿದ ಉರುಳುಗಳೊ? ಆಕಾಶ ಹರಿದು ಬೀಳುವಾಗ ಅಂಗೈ ಒಡ್ಡಿದರೆ ನಿಂತೀತೇ? ಮಳೆಯ ನೀರನ್ನು ಬಿಟ್ಟು, ಮಂಜಿನ ನೀರಿಗೆ ಕೈಯೊಡ್ಡಿದ ಹಾಗೆ.) ಒಡ್ಡಿಕೆ. ಒಡ್ಡು.

ಓ— (ಗೆಳೆತನ ಮಾಡು, ಪ್ರೀತಿಸು) ಓಪ. ಓಪಳು. ಓಪಾದಿ. ಓಪು. ಓವ. ಅಮರ್ದುವೆಣ್ಣೋಪ (ಶಿವ)

ಕರಿ— (ಹುರಿ) ಕರಕು. ಕರಿಕು. ಕರಿಸು. ಕರಿಗಡಬು. ಕರಿಕರಿ. ಕರಿ ಕರಿಗುಂದು. ಕರಿಗೊಳ್ಳು. ಕರಿಮುರಿ. ಕರಿಮುರಿವೋಗು. (ಕಿವಿಯು ಮಣ್ಣಟ್ಟಿ ಕರಿಮುರಿವೋಕುಂ.) ಕರಿಮೊಳೆ. ಕರಿಯೊನಿಕೆ. (ಶರ್ಮಮ್ ಇಲ್ಲದ ಗಂಡು ಕರಿಯೊನಕೆಯ ತುಂಡು.)

ಕಲಿ— (ಬೆರೆ, ಕೂಡು) ಕಲಕ. ಕಲಕು. ಕಲ್ಕ. ಕಲಪು. ಕಲಪ. (ಮೈಗೆ ಲೇಪಿಸಲು ಮಾಡಿದ ಸುಗಂಧ ದ್ರವ್ಯ) ಕಲಿಸು. ಕಲಸು. (ಕಿಲುಬಿನ

ಬಟ್ಟಲಲ್ಲಿ ಹುಳೀ ಕಲಿಸಿ ಉಣ್ಣಬಹುದೇ?) ಒಡೆಗಲಸು. ತಡೆಗಲಸು. ಹೊಲೆಗಲಿಸು. ಕಲಸನ್ನ. ಕಲಸುಗೂಳು. ಕಲಸು ಮೇಲೋಗರ. ಕಲಸೋಗರ. ಕಲುಸು. ಕಲೆ. ಕಲೆಗಲುಪು (ಋಣಾನುಬಂಧ).

ಕೇಳು— (ಕಿವಿಗೊಡು, ವಿಚಾರಿಸು) ಕೇಳಿಸು. ಕೇಳಿಕೆ. ಕೇಳುವಿಕೆ. ಕೇಳುಹ. ಕೇಳ್ವಿಕೆ. (ಕೇಳದ ಕಿವಿ ಊರಿಗೆ ಮಾರಿಯು ತಂತು. ಕೇಳುವವರಿಗೆ ಬುದ್ಧಿ, ಹೇಳುವವರಿಗೆ ಸುದ್ದಿ. ಮಥನ ಕಾಲದಲ್ಲಿ ಕಥೆ ಕೇಳುವದುಂಟೇ?)

ಗುರುಕು— (ಗುರುಗುಟ್ಟು) ಗುರಕೆ (ಕುರಕ್) ಗೊರಕು. ಗೊರಿಕೆ. ಗೊರುಕು. ಗೊರ್ಕು. ಗೊರ್ಕೆ. ಗುರಗುರ. ಗುರುಗುಟ್ಟು. ಗುರುಗುರಿಸು. ಗುರುಗುರು. ಗುರುಗುರೆನ್ನು. ಗುರುಗುಮ್ಮಗೆ. ಗುರುಗುಮ್ಮನೆ. ಗುರುಕಿಡು. ಗುಕ್ಕು. ಗುಕ್ಕೆನ್. (ಗುಕ್ಕೆನ್ನದೇ ಮಿಕ್ಕೆನ್ನದೆ, ಉಸುರ್ ಅಡಗಿ.) ಗೊರ್‌ಗೊರ್.

ಚಲ್ಲು-ಚೆಲ್ಲು— (ಒಗೆ, ಹರವು.) ಚಲ್ಲಿಸು. ಚಲ್ಲುತನ. ಚಲ್ಲ. ಚಲ್ಲಬಡಿ. ಚಲ್ಲವರಿ. (ನೀರನ್ನು ಚಲ್ಲವರಿದು ಹಾಕು.) ಚಲ್ಲೊರೆ (ಹಳ್ಳ ಚಲ್ಲೊರೆದು ಹೋಯಿತು.) ಚಲ್ಲಾಪಲ್ಲಿ. ಚಲ್ಲಾಪಿಲ್ಲಿ. ಚಲ್ಲಿ. (ಪ್ರತಿಬಿಂಬವನ್ನು ಒಗೆಯುವುದು-ಕನ್ನಡಿ.) ಚಲ್ಲಾಟ. ಚಲ್ಲಾಡು. ಚಲ್ಲೆ. (ಅಗಲ, ದೊಡ್ಡ.) ಚಲ್ಲೆಗಣ್ಣು. ಚೆಲ್ಲಿಸು. ಚೆಲ್ಲಾಟ. ಚೆಲ್ಲಾಪಿಲ್ಲಿ. ಚೆಲ್ಲೆ. ಚೆಲ್ಲೆಗಣ್ಣು. (ಎಣ್ಣೆ ಚೆಲ್ಲಿದವನೂ ಅತ್ತ, ಕಾಯಿ ಚೆಲ್ಲಿದವನೂ ಅತ್ತ. ಕೂಳು ಚೆಲ್ಲಿದಕಡೆ ಸಾವಿರ ಕಾಗೆ) ಚೆಲ್ಲ್ಯಾಡು (ಚೆಲ್ಲಾಡು.)

ಜರೆ— (ನಿಂದಿಸು) ಜರಹ. ಜರುಚು. ಜರುಪು. ಜರುಹು. ಜರುಬು. ಜಬ್ಬು.

ಪೊಣರು— (ಕಾದು) ಪೊಣರ್. (ಮುಂಪೊಣರ್.) ಪೊಣರ್ಕೆ. ಪೊಣರ್ವಕ್ಕಿ. (ಚಕ್ರವಾಕ).

ಮುಗಿ— (ಕಡೆಯಾಗು) ಮುಗಿಯುವಿಕೆ. ಮುಗಿಸು. (ತೆಗೆದುಕೊಂಡಷ್ಟೂ ಮುಗಿದರೆ ಮಗನಿಗೇನು ಉಳಿದೀತು?) ಮುಗಸು (ಮುಗಿಸು) ಮುಗಿತ. (ಮದುವೇ ಮುಗಿದರೂ ಮದುಮಗನ್ನ ನೋಡಲಿಲ್ಲ.) ಮುಗಿಲು (ವಿಶ್ವದಕಡೆ ಭಾಗ, ಆಕಾಶ) (ನೆಗಳೆ ಹಾರಿದರೆ ಮುಗಿಲಿಗೆ ಮುಟ್ಟೀತೇ? ಕೂಸು ಕಾಸ ಹಡೆಯದು, ಜೋಗುಳ ಮುಗಿಲ ಮುಟ್ಟಿತು.) .

ತಳಿ— (ಚಿಗಿ) ತಳಿರ್. ತಳಿರು. ತಳಿರ್ಚು. ಎಳಿದಳಿರು. ಕೆಂದಳಿರು. ಚೆಂದಳಿರು. ಪಂದಳಿರು. ಪೂದಳಿರು. ಪೊಸದಳಿರು. ತಳಿಗಡಿ. ತಳಿರಂಬು. ತಳಿರಿಡಿ. ತಳಿರುಡೆ. (ತಳಿರ್ವಟ್ಟೆ) ತಳಿರುಯ್ಯಲು. ತಳಿರ್ಗೊಂಬು. ತಳಿರ್ಜೊಂಪ. ತಳಿರ್ದುಟಿ. ತಳಿರ್ದುರುಗು. ತಳಿರ್ದೊಂಗಲು. ತಳಿರ್ದೋರಣ. ತಳಿರ್ಪಟಿ (ಸತ್ತಿಗೆ) ತಳಿರ್ಬಿಡು. ತಳಿರ್ವಣ್ಣ. ತಳಿರ್ವಂದರ. ತಳಿರ್ವಸೆ. ತಳಿರ್ವಾಸು. (ತಳಿರ್ವಾಸಿನಿಂದೆ ಸೆಜ್ಜೆಗೆ ಏಂ ತಕ್ಕೆ ಕೊಂಡು ಪೋದರ್ ವಿರಹಾಕುಲೆಯಂ?) ತಳಿರ್ವೇರಿಸು. ತಳಿರ್ವೊರೆ. ತಳಿಲು. ತಳ್ತಿ (ತತ್ತಿ)

ದಣಿ— (ಶ್ರಮಗೊಳ್ಳು) (ಕಂಡು ದಣಿದೆಯೋ? ಉಂಡು ದಣಿದೆಯೋ?) ದಣ. (ಬೇನೆಯಿಂದ ದಣಕೊಂಡವ—ಗ್ಲಾನ) ದಣವು. ದಣಿವು. ದಣುವು. (ದಣಿದ ಎತ್ತಿಗೆ ಮಣವೇ ಭಾರ.) ದಣಿಸು. ದಣು. (ದಣುಪಟ್ಟವನು ಹೆಣವಾದರೂ ಹೊರನೇ?) ದಣುವಾಗು. ದಣುವಾರು. ದಣುವಾರಿಸು.

ಕಾಣು— (ತೋರು, ನೋಡು) ಕಾಣಿಸು. ಕಾಣಿಸಿಕೊಳ್ಳು. ಕಾಣುವಿಕೆ. (ಕನಸು ಕಾಣುವಿಕೆ—ದೇವಸ. ಹಗಲು ನಕ್ಷತ್ರ ಕಾಣುವಿಕೆ—ಅಜನ್ಯ.) ಕಾಣ್ಕೆ. ಕಡೆಗಾಣು. ನೆಲೆಗಾಣು. ಮುಟ್ಟಲೆಗಾಣು. ಮುಂದುಗಾಣು. ಸರಿಗಾಣು. ಕಾಣಬರು. ಕಾಣಲ್ಕೆಬರು. ಕಾಬ- (ಕಾಬಿರಿ—ಕಾಂಬಿರಿ.) ಕಾಂಬ. ಕಾಂಬುವ. (ಭಾನುವಂ ಕೌಶಿಕವು ಕಾಂಬುದೇ?) (ಕಣ್ಣಿಗೆ ಕಾಂಬುವ ವಸ್ತು.) (ದೂರದ ವಸ್ತು ಕಣ್ಣಿಗೆ ಕಾಂಬದು) (ಕಂಡ ದೇವರಿಗೆಲ್ಲಾ ಕೈಯ ಮುಗಿದರೂ ಗಂಡನಿಲ್ಲದೆ ಮಕ್ಕಳಾಗದು. ಕಂಡದ್ದಲ್ಲ, ಕೇಳಿದ್ದಲ್ಲ. ಕಂಡದ್ದು ಮಾತಾಡಿದರೆ ಕೆಂಡದಂಥಾ ಕೋಪ. ಕಂಡರೆ ಕಣ್ಣುರಿ, ಕಾಣದಿದ್ದರೆ ಹೊಟ್ಟೆಯುರಿ. ಕಂಡರೆ ಕೋಪ, ಕಾಣದಿದ್ದರೆ ತಾಪ. ಕಂಡರೆ ಮಾಣಿ, ಉಂಡರೆ ಗೋಣಿ. ಕಂಡರೆ ಸೇರದವನಿಗೆ ಉಂಡರೆ ಸೇರೀತೇ? ಕಂಡರೆ ಸುಂಕ, ಕಾಣದಿದ್ದರೆ ಬಿಂಕ. ಕಂಡವರ ಕಾಲು ಹಿಡಿದರೂ ಗಂಡನ ಮನೆಗೆ ಹೋಗೋದು ತಪ್ಪದು. ಕಂಡವರ ಮಕ್ಕಳನ್ನ ಬಾವೀಲಿ ದೂಡಿ ಆಳಾ ನೋಡಿದ ಹಾಗೆ. ಕಾಣದ ಮುರುವ ಕನಸು ಕಂಡರೆ ಏಳುಬಾರಿ ಎದ್ದು ಕೂತ. ಕಂಡಕಂಡವರಿಗೆಲ್ಲಾ ಹಲ್ಲು ಕಿರಿದರೂ, ಗಂಡ ಸತ್ತ ಮುಂಡೆಗೆ ಬೋಳಿಸದೇ ಬಿಡರು.) ಕಂಡಕಡೆಗೆ. ಕಂಡಾಬಟ್ಟೆ. ಕಂಡಿ. (ಬಂಡನ ಕಂಡರೆ ಕಂಡೀಲಿ ಆದರೂ ಹೋಗಬೇಕು) ಅಂಬುಗಂಡಿ. ಬೆಳಕಂಡಿ. ಗಂಡಿ. ಗಂಡಿಕಾವಲಿ. ಕಣ್ಣು. (ಹೀಲಿಯ ಕಣ್ಣು—ಚಂದ್ರಕ, ಮೇಚಕ.) (ಬಿಳುಪು ಮಿಕ್ಕ ಕಣ್ಣವಳು— ವಾಮಲೋಚನೆ.)

(ಕಣ್ಣನಷ್ಟು ಪ್ರಕಾಶವಿಲ್ಲ, ಮಣ್ಣಿನಷ್ಟು ಆಧಾರವಿಲ್ಲ- ಕಣ್ಣು ಕೊಂಡುಹೋದ ದೈವ ಮತೀ ಕೊಟ್ಟಿತು.) (ಕಣ್ಣು ಕಾಣದ ಹೊಟ್ಟಿಗೆ ಮಣ್ಣೇನು? ಮಸಿ ಯೇನು?) ಕಣ್ಮಾಯು (ಕಣ್ಣುಕಟ್ಟು- ಕಣ್ಣುಕಟ್ಟು ವಿದ್ಯೆ.) ಅರೆಗಣ್ಣು. ಕೇಂಗಣ್ಣು. ಗುಳಿಗಣ್ಣು. ಚೆಲ್ಲಗಣ್ಣು. ಬಗಸೆಗಣ್ಣು. ಕಣ್ಕದಡು. ಕಣ್ಕಮಲ. ಕಣ್ಕಾಡಿಗೆ. ಕಣ್ಕಿಡಿ. ಕಣ್ಕಿಸು. ಕಣ್ಕಿಸುರು. ಕಣ್ಕುಟಿಲ. ಕಣ್ಕುಳಿಕೆ (ಕಣ್ಕುಣಿಕೆ) ಕಂಗಡೆ. ಕಗದಿರು. ಕಂಗಾಣು. ಮನಗಾಣು. ಕಣ್ಗಿಚ್ಚು. ಕಂಗೆಡು. ಕಣ್ಗೆವರು. ಕಂಗೊಳಿಸು. ಕಣ್ಚಕ್ರ. ಕಣ್ಚಲ್ಲ (ಸರಸಾಲೋಕನ) ಒಕ್ಕಣ್ಣು. ಕಿಡಿಗಣ್ಣು. ತಾವರೆಗಣ್ಣು ಪಣೆಗಣ್ಣು. ಪಲಗಣ್ಣು ಮುಕ್ಕಣ್ಣು. ಮೆಯ್ಗಣ್ಣು. ಕಣ್ಣಡಿಗ (ಪಾದದಲ್ಲಿ ಕಣ್ಣು ಇದ್ದವ—(ವಿಷ್ಣು)—ಶಿವ.) ಕಣ್ಣಡಿಯು (ಶಿವ) ಕಣ್ಣಪ್ಪು (ಕಣ್ಣೀರು). ಕಣ್ಣಲರು. ಕಣ್ಣಲೆ. ಕಣ್ಣಳವು ಕಣ್ಣಾಗಿರು. ಕಣ್ಣಾರ. (ಕಣ್ಣಾರೆ). (ಕಣ್ಣಾರೆ ಕಂಡರೂ ಪರಾಂಬರಿಸಿ ನೋಡಬೇಕು.) ಕಣ್ಣಾಲಿ. ಕಣ್ಣಿಡು. ಕಣ್ಣಲಿ. ಕಣ್ಣಲಿಮೊಗ ಕಣ್ಣೀರು (ಗಳಗಳನೆ ಕಣ್ಣೀರು ಸುರಿಸು.) [ಬ್ರಾಹ್ಮಣಸಾವರೆ ಕಣ್ಣೀರು ಬಾರದೇ?] ಕಣ್ಣುಬ್ಬು [ಭ್ರೂ.] ಕಣ್ಣುರಿ. [ಲಲಾಟದೊಳ್ ಮಿರುಪ ಕಣ್ಣುರಿಯಂತೆ.] ಕಣ್ಣೆಂಜಲು [ದೃಷ್ಟಿ ದೋಷ.] ಕಣ್ಣೆಮೆ [ಕಣ್ಣೆವೆ] ಕಣ್ಣೊಳವು. ಕಣ್ಣೋಟ. ಕಣ್ತೆರಿ. ಕಣ್ದಣಿ. ಕಣ್ದೀವು. ಕಣ್ದೆಗೆ. ಕಣ್ದೊಳಲು. ಕಣ್ಪರೆ. ಕಣ್ಬಡೆ. ಕಣ್ಬನಿ. ಕಣ್ಬರಿ. ಕಣ್ಬರಿಗಿಡು. ಕಣ್ಬೇಡು. [ಆ ನಾಡು ಪಿರಿಯು ಕಣ್ಬೇಡು] ಕಣ್ಬೇಟ. ಕಣ್ಬೊಳಪು. ಕಣ್ಮರಲು [ಕಣ್ಮಲರು.] ಕಣ್ಮರೆ. ಕಣ್ಸವಿ. [ಮೆಯ್ಸವಿ ಕಣ್ಸವಿಯಪ್ಪ ರೂಪು.] ಕಣ್ಸೋಲು. ಕಂಗಳ. ಕಣ್ಗೆಡ್ಡ.

ಅಗಲು — [ತೊಲಗು.] ಅಗಲಿಸು. [ಒಂದು ಕಡೆಯಲ್ಲಿ ಕೂಡಿದವರನ್ನು ಅಗಲಿಸೋಣ—ಉಪಜಾಪ.] ಅಗಲ. [ಎರಡು ಕಾಲುಗಳಿಗೂ ನಡುವೆ ಗೇಣಗಲ ಬಿಟ್ಟು ನಿಲ್ಲೋಣ—ವಿಶಾಖ] [ಆಕಾಶಕ್ಕಿಂತ ಎತ್ತರವಿಲ್ಲ, ಭೂಮಿಗಿಂತ ಅಗಲವಿಲ್ಲ.] ಅತಿಯಗಲ. ಉದ್ದಗಲ. ಚೋಟಗಲ. ಅಗಲಿಕೆ. ಅಗಲುವಿಕೆ. ಆಗಲಿತು [ಅಗಲಿತ್ತು]. [ಪ್ರೀತಿಯುಳ್ಳವರ ಅಗಲುವಿಕೆ- ವಿಪ್ರಯೋಗ, ವಿಯೋಗ] ಅಗಲ್ಕೆ. [ಇನವಿರಹಿಣಿ ಪದ್ಮಿನಿ ಕಾಂತನ ಅಗಲ್ಕೆಯನ್ ಅಂತು, ಅರಸುಗೆ ಮುಳಿವ ನಿಶಾಕಾಂತನ ಕರಕೆ ಬೆರ್ಚಿ ಮುಚ್ಚಿದಳ್.] ಅಗಲ್ಚು. [ಆ ಸಿರಿಮೊಗಕ್ಕೆ ಬಿಸಿಲು ಆಗದಂತೆ ಆಗಸದೊಳ್ ಓಸರಿಸದೆ ಅಂಚೆಗಳು ರೆಕ್ಕೆಯನು ಅಗಲ್ಚಿ, ನೆಳಲ ಆಸೆಗೆಯ್ದುವು.] ಅಡ್ಡಗಲು.

ಊರು— [ನೆಲೆಗೊಳಿಸು] ಊರಿಸು. ಊರೂಟ [A public meal] ಊರೂರು: ಊರೊಡೆಯ [A village or town chief] [ಯಾರೂ ಇಲ್ಲದ ಊರಿಗೆ ಅಗಸರ ಮೂಳೆಯೇ ಮುತ್ತಯ್ದೆ. ಊರಗದ್ದಲಿ ತಂದು, ನಾಡ ಕಾಲಿನೆ ತೆಗೆದ. ಊರ ಮುಂದೆ ನೇಗಿಲ ಹೂಡಿದರೆ ಕಂಡಕಂಡ ವರಿಗೆ ಒಂದೊಂದು ಮಾತು. ಊರ ಸೇರಿದ ಮೇಲೆ ದಾರಿ ತೀರಿತು. ಊರಿಗೆ ಅರಸನಾದರೂ ತಾಯಿಗೆ ಮಗ. ಊರಿಗೆ ದಿಕ್ಕಿಲ್ಲ, ಯಾರಿಗೆ ಅಳಲಿ? ಊರಿಗೆ ಬಂದ ಮಾರಿ ಉಂಡಲ್ಲದೇ ಹೋಗದು. ಊರಿಗೆ ಬರುವನಕಾ ಒಬ್ಬ ನೆಂಟ, ಊರಿಗೆ ಬಂದ ಮೇಲೆ ಎಲ್ಲರೂ ನೆಂಟರು. ಊರಿಗೆ ಹಬ್ಬವಾದರೆ ನಾಯಿಗೆ ಲೊಲ್ಲೊಟ್ಟಿ. ಊರಿಗೆ ಹೋಗದವರಿಗೆ ದಾರೀಗೊಡವೆ ಏಕೆ? ಊರಿದ್ದಲ್ಲಿ ಹೊಲಗೇರಿ. ಊರು ಉಪಕಾರವರಿಯದು, ಹೆಣ ಶೃಂಗಾರವರಿಯದ.. ಊರು ತಿರಿದು, ಜೂಲು ನಾಯಿಗೆ ಹಾಕಿದ. ಊರುಬಿಟ್ಟು ಹೊಲಗೇರಿಯಲ್ಲಿ ತಂಗಿ ದರು. ಊರು ಬೇರೆಯಾದರೂ ಪ್ರಾರಬ್ಧ ಬೇರೆಯೇ? ಊರು ಮೂರು ಸುತ್ತು ಸುತ್ತಿದರೂ ಊರ ಬಾಗಲಲ್ಲಿಯೇ ಹೊರಡಬೇಕು. ಊರ ಮೇಲೆ ನೂರು [-ತೊಂದರೆ] ಬಿದ್ದರೆ ಶಾನಭೋಗನಿಗೆ ಕೆಟ್ಟದ್ದೇನು? ಊರು ಸುಟ್ಟರೂ ಹನುಮಂತ ಹೊರಗೆ. ಊರೆಲ್ಲಾ ತೊಳೆದರೂ ಮಸಿ ಬೆಳ್ಳಗಾಗದು. ಊರು ಸೂರೆ ಆದ ಮೇಲೆ ಪಾಲಿಕಾದರು. ಊರೊಂದಾಡಿದರೆ ಊಡಕನೊಂದಾಡಿದ] ಊರಾಳು. [ಧಾರಾಳಕ್ಕೋಸ್ಕರ ದಂಡಣೆಯಾದರೆ ಊರಾಳು ಏನು ಮಾಡ್ಯಾರು?] ಊರುಕೇರಿ. ಊರಪ್ಪ [ಗೌಡ] [ಊರಪ್ಪನ ಎತ್ತು, ಯಾರಪ್ಪನ ಗೇಣಿ] ಊರುವನ್ನಿ [ಹಂದಿ] [ದಿಗ್ವಾರಣದ ಮರಿ ಉಂಬುದೇ ಬಂದು ಊರುವಂದಿಯ ಮೊಲೆಯಂ?] ಊರುಗ. ಊರುಗನುಡಿ. [ಅಶ್ಲೀಲ]. ಊರಿಕೆ. ಊರುಗೋಲು.

ಅಲರು— (ಅರಳು) ಅಲರು (ಹೂವು), ಅಲರಂಬ (ಕಾಮ) ಅಲರಂಬು (ಅಲರ್ಗಣೆ), ಅಲರಲರು, ಅಲರಿಚ (ಬ್ರಹ್ಮ), ಅಲದುಣಿ (ತುಂಬಿ), ಅಲರ್ಗಣ್ಣು, ಅಲರ್ಗಣೆಯ (ಕಾಮ), ಅಲರ್ಗಣ್ಣ (ವಿಷ್ಣು), ಅಲರ್ಗಂಪು, ಅಲರ್ಗೋಲು, ಅಲರ್ಜೊಂಪ, ಅಲರ್ದಳೆ, ಅಲರ್ದಾವರೆ, ಅಲರ್ವೊಂಗಲು, ಅಲರ್ಪೊಡೆಯ, (ಅಲರ್ಪೊಡೆಯ- ವಿಷ್ಣು), ಅಲರ್ದೋರಣ, ಅಲರ್ಮುಡಿ, (ಹೂವಿನಿಂದ ಸಿಂಗರಿಸಿ ತಲೆಸೂಡಿ.) ಅಲರ್ವಕ್ಕಿ (ತುಂಬಿ), ಅಲರ್ವಡಿಗ (ಅರಲ್ವಡಿಗ- ಹೂವು ಮಾರುವವನು), ಅಲರ್ವಾಸು (ಅಲರ್ವಸೆ) (ಅಸುಗೆದ

ಳಿರ ಅಲರ್ವಾಸಿನೊಳ್ ಅರಸಿವೆರಸಿ ಕುಳ್ಳಿರ್ದಂ ನರೇಂದ್ರಂ.) ಅಲರ್ವಡಿ, ಅಲರ್ವುಡಿ, (ಪರಾಗ.) ಅಲರಿಕೆ, ಅಲರಿಸು, ಅಲರ್ಚು, ಅಲರುಬಿಲ್ಲುಗಾರ (ಕಾಮ), ಅಲರುಗಣ್ಣಿ (A woman with flower like-eyes).

ಕುಗ್ಗು-(ಕಡಿಮೆಯಾಗು). ಕುಗ್ಗು, ಕುಗ್ಗಿಸು, ಕುಗ್ಗಿಸು, ಕುಳ್ಗಿಸು, ಕುಂಗು, (ಕುಂಗಿದ್ದವನನ್ನು ನುಂಗ ನೋಡುವರು.) ಕುಂಚು, (ಕುಂಚದವ= ಅದಟ) ಕುಗ್ಗಟ, (ಇಳಿದು ಹೋದ, ದೀನ), ಕುಗ್ಗಾಲ (ಕೆಡುಕು ಕಾಲ), ಕುಗ್ಗೋಲು

ಜಗಡು—(ಹೊಡೆದಾಡು), ಜಗಡ, ಜಗಳ, (ಅಟ್ಟುಂಜಗಳ), (ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ. ಜಗಳವಿಲ್ಲದೆ ಜಾವ ಹೊತ್ತಿದ್ದರೆ ಜಿಗಳೆ ಬಂದು ಕಚ್ಚಿದ ಹಾಗೆ ಆಗುತ್ತದೆ. ಜಗಳವಿಲ್ಲವೇ, ಜಂಗ ಮಯ್ಯ? ಅಂದರೆ ಹರಕುಮುಂಡೆ, ಭಿಕ್ಷಾ ನೀಡೆ! ಅಂದ. ಜಾರ ಚೋರರ ಜಗಳದಿಂದ ಯಜಮಾನನಿಗೆ ಕ್ಷೇಮ, ಮಾತು ಬಲ್ಲವ ಮಾಣಿಕಾ ತಂದ, ಮಾತರಿಯದವ ಜಗಳಾ ತಂದ, ಗಂಡ ಹೆಂಡರ ಜಗಳದಲ್ಲಿ ಕೂಸು ಗಾಸಿಯಾ ಯಿತು.) ಜಗಳಗಂಟ, ಜಗಳಗಂಟಿ, ಜಗಳಗಂಟಿಗ, ಜಗಳಗಂಟಿಮರ (ಜಗಳದ ಮರ- ತುಂಪರ ಗಿಡ.) ಜಗಳತರು, ಜಗಳವಾಡು (ಜಗಳಾಡು), (ಹಾದಿಜಗಳ ಹಣವಡ್ಡ (ಹಣಹಾಗ), ಬೀದಿಜಗಳ ಮುಪ್ಪಾಗ. ಮಗಳೇ, ಮರುಳಾದೆಯಾ? ಅಂದರೆ ಇರುಳು ಜಗಳಾಡುವವರು ಯಾರು? ಅಂದ ಹಾಗೆ.) ಜಗಳಗಾತಿ, (ಜಗಳಗಾತಿ ಮಗಳನರಿಯುಳು.) ಜಗಳಹಚ್ಚು, (ಜಗಳ ಹಚ್ಚುವವ-ಪಿಶುನ)

ಕೆತ್ತು— (ಕಡಿ, ಕೊರೆ.) ಕೆತ್ತಿಸು; ಕೆತ್ತನೆ, ಕೆತ್ತಿಕೆ, ಕೆತ್ತಿಗೆ, ಕೆತ್ತೆ, ಕೆಹ್ನಿ. (ಕೆತ್ತಿಗೆ ಸರಸಣಿ-ಕೆತ್ನೆ ಸರಪಣಿ.) (ಉದ್ಯೋಗವಿಲ್ಲದ ಬಡಗಿ ಮಕ್ಕಳ ತಿಕಾ ಕೆತ್ತಿದ. ಬಿತ್ತಿದ ಪೈರು ಕೆತ್ತಿದರೆ ಆದೀತೇ? ಮಟ್ಟ ಹಾಕದೆ ಕೆತ್ತ ಕೂಡದು, ಕಟ್ಟಡದೆ ಹೊರ ಕೂಡದು.)

ತುಳಿ— (ಕಾಲಿಕ್ಕು, ಮೆಟ್ಟು.) ತುಳಿಸು, ತುಳಿಹ, ತುಳಿತ, ತುಳತ, ತುಳ್ತ, ತುಳಿತುಳಿ, (ತುಳಿದ ಧಾನ್ಯವೂ ಮಳಲೂ ಸಮವೋ?) ಕಿಮುಳ್ದುಳಿ (ಸಣ್ಣನ್ ಆಗಿ ತುಳಿ.) ತುಳಿದಾಡು, ತುಳಿದಾಟ, ದಳದುಳಿ (ದಳ+ತುಳಿ- To tread down hosts.) ಕಾಲ್ದುಳಿ, ತೊಳ್ತುಳಿ, ತುಳಿಗೇಡ, ತುಳಿ ಮಣ್ಣು, ತುಳಿಲ್, ತುಳಿಲು, (ಬಂಟತನ), ತುಳಿಲಾಳು (ಬಲ್ಬಂಟ).

ದೊರೆ— (ಸಿಕ್ಕು), ದೊರ, ದೊರಕೊಳ್ಳು, ದೊರಕಿಸು, ದೊರಕು,

(ದೊರಕಿದ ಬಟ್ಟೆ ಹರಕು ಆದರೆ ನರಕೋದು ಯಾಕೆ? ದೊರಕಿದರೆ ಹರಕೇ ಕೊಡಬಹುದು.) ದೊರೆಯುಗೊಡು, (ಹಣವು ಅವರ ಮಕ್ಕಳಿಗೆ ದೊರೆಯುಗೊಡುವುದಿಲ್ಲ.) ದೊರೆಕೊಳ್ಳು (ಪ್ರಾಪ್ತಿ), ದೊರವು, ದೊರಿಕೆ, ದೊರೆತ.

ಕೊಂಡಾಡು— (ಸ್ತವಿಸು, ಹೊಗಳು.) (ಕೊಳ್-ಕೊಂಡು.) ಕೊಂಡಾಡಲ್ ಪಟ್ಟ (ವಿನುತ). ಕೊಂಡಾಡಲ್ ಪಟ್ಟದು (ಈಡಿತ, ಶಸ್ತ, ಪಣಾಯಿತ, ಪ್ರಣಿತ, ವರ್ಣಿತ, ಸ್ತುತ.) (ಅರಸುಗಳ ಕಾರ್ಯ ಗುಣಂಗಳನೆ ಕೊಂಡಾಡುವವನು- ವಂದಿ, ಸ್ತುತಿಪಾಠಕ.) ಕೊಂಡಾಡುವಿಕೆ, [ಸ್ತವ, ಸ್ತೋತ್ರ, ಸ್ತುತಿ, ನುತಿ.] ಕೊಂಡಾಟ, ಕೊಂಡಾಡಿಗ [ಹೊಗಳುವವ.]

ಈ— [ಕೊಡು], ಈತ, ಈದು, ಈದುವಿಕೆ [ಪ್ರಸೂತಿ], ಈನ, ಈಯುಲು, ಈಯಲಾಗು, ಈವಿಕೆ.

ದಟ್ಟು— [ಗುಂಪಾಗು.] ದಟ್ಟಿಸು, ದಟ್ಟಿತು, ದಟ್ಟಿತ್ತು, ದಟ್ಟಗೆ [ಪೈರು ದಟ್ಟಗೆ ಬೆಳೆಯಿತು.] ದಟ್ಟಣಿಸು, ದಟ್ಟಣೆ, ದಟ್ಟನೆ, ದಟ್ಟನ್ನ, [ದಟ್ಟನ್ನ ಹವೆ.] ದಟ್ಟಯಿಸು, ದಟ್ಟಯ್ಸು, [ದಟ್ಟಯ್ಸುವ ತವಾಂಧ] ದಟ್ಟಾನೆ [ದಟ್ಟನೆ], ದಟಿತ [ದಟಿತವಾದಂಥ ಜಾಗ- ಸಂಕಟ.] ದಟ್ಟಿ, ದಟ್ಟಡಿ.

ಜೀರು— [ಚಿಮ್ಮು] ಜೀರ್, ಜೀಕಳಿ, ಜೀರ್ಕೊಳವಿ, ಜೀರ್‌ಬೋರ್.

ಕಟ್ಟು— [ಬಿಗಿ, ಬಂಧಿಸು.] [ನೀರು ಹರಿಯಲ್ ಈಯದೆ ಕಟ್ಟಿದ ಕಟ್ಟೆ- ಆಧಾರ. ನೀರ ನಡುವೆ ಕಟ್ಟಿದ ಕಟ್ಟೆ- ಸೇತು] [ಆಳು ಕಟ್ಟಿದವನೇ ಅರಸು, ಕೂಳು ಇಕ್ಕಿದವನೇ ದಾತ. ಕಟ್ಟಿದ ಮನೆ ಮೆಟ್ಟಲಿಲ್ಲ, ಅಟ್ಟಿಕೊಂಡು ಬಂದೆಯೋ, ಯಮನೇ?] ಅಡ್ಡಗಟ್ಟು, ಕೈಗಟ್ಟು, ಗಲ್ಲೆಗಟ್ಟು, ಗುಡಿಗಟ್ಟು, ತೆಕ್ಕೆಗಟ್ಟು, ಮನೆಗಟ್ಟು, ಮೊಟ್ಟಗಟ್ಟು, ಮೊತ್ತಗಟ್ಟು, ಸಂದುಗಟ್ಟು, ಸಮಕಟ್ಟು, ಸೆರೆಗಟ್ಟು, ಹುಣ್ಣುಗಟ್ಟು, [ಮನೆ ಕಟ್ಟಬಹುದು, ಮನಸು ಕಟ್ಟಕೂಡದು. ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು.] ಕಟ್ಟಾಡು, ಕಟ್ಟಾಡಿಸು, ಕಟ್ಟಿಕೊಳ್ಳು, [ಅಪ್ಪ ಸತ್ತ, ಆರು ತಿಂಗಳಿಗೆ ಹುಚ್ಚು ಮಾವ ಬಂದು, ಕೊರಳು ಕಟ್ಟಿಕೊಂಡು (ಆಲಿಂಗಿಸಿ) ಅತ್ತ.] [ಬಿಟ್ಟಿಯೂಟ ಸಿಕ್ಕಿದರೆ ಕಟ್ಟಿ ಕಟ್ಟಿ [tying up for another meal] ಉಂಡಾನು.] [ಮಹಾದೇವನ ಜಡೆಯ ಕಟ್ಟು- ಕಪರ್ದ.] [ಕಬ್ಬಿಣದ ಕಟ್ಟು ಹಾಕಿದ ಮರದ ಗುದಿಗೆ- ಪರಿಘ.] [ಕಟ್ಟು ಹರಿದ ಪುಜು.] ಇಕ್ಕಟ್ಟು, ಎಡೆಗಟ್ಟು, ಕಣ್ಣುಕಟ್ಟು, ಕಾಲ್ಗಟ್ಟು, ಕಿಸುಗಟ್ಟು, ಕಿಳ್ಕಟ್ಟು, ಕೇರ್ಗಟ್ಟು, ಚೌಕಟ್ಟು,

ತಲೆಕಟ್ಟು, ತೋಳ್ಕಟ್ಟು, ನಡಿಕಟ್ಟು, ನಡುಕಟ್ಟು, ನೆಲಗಟ್ಟು, ನೆಲೆಗಟ್ಟು, ಪಲಗೆಗಟ್ಟು, ಮಣಿಕಟ್ಟು, ಮರಗಟ್ಟು, ಮಾರ್ಕಟ್ಟು, ಮೆಯ್ಕಟ್ಟು, ಮೇಲ್ಕಟ್ಟು, ಸಂದುಗಟ್ಟು, ಕಟ್ಟಿಡಕ (A binding written agreement) ಕಟ್ಟಾಣಿ, ಕಟ್ಟು ಕಡೆ, ಕಟ್ಟು ಕಡೆ, ಕಟ್ಟು ಕಥೆ, ಕಟ್ಟುಗಡಸು [ಕಾಲಪ್ರಾಪ್ತಿಯಾಗಿ ಬೆದೆಯಾದ ಆಕಳು, ಉಪಸರ್ಯೆ.] ಕಟ್ಟುಗೂಳಿ, ಕಟ್ಟುಗೂಳು [ಕಟ್ಟಿನ್ನ], ಕಟ್ಟು ಬೀಳು, ಕಟ್ಟು ಮಾಡು, ಕಟ್ಟು ಮುಟ್ಟು, ಕಟ್ಟು ಮುಡಿ [ಕಬರಿ], ಕಟ್ಟುವಡೆ, ಕಟ್ಟುವಾಸ [A wrapper or cover.] ಕಟ್ಟೊಡೆ, ಕಟ್ಟುಕ, ಕಟ್ಟುವಿಕೆ, ಕಟ್ಟುಹ, ಕಟ್ಟೆ, ಅಣೆಕಟ್ಟೆ, ಕಟ್ಟಾಳು, ಕಟ್ಟಡ, ಕಟ್ಟಣ, ಕಟ್ಟಲು, ಕಟ್ಣ [ಕಟ್ಟಡ].

ಎಸೆ— [ಒಗೆ, ಹೊರ ಚಲ್ಲು.] ಎಸಿಗೆ, ಎಸಗೆ, ಎಸುಗೆ, [ಬಿಲ್ಲೆಸಿಗೆ], ಎಸು, [ಪರಿಯಲೆಸು, ಪೂಣ್ದೆಸು.] [ರತೀಶ್ವರನ ಎಸುವಿಂದೆ] ಎಸೆಗಾರ.

ತೊಳಲು— [ಅಲೆ, ತಿರುಗಾಡು.] ತೊಳಲಿಸು, ತೊಳಲಿಚು, ತೊಳಲಿಕೆ, ತೊಳಲುವಿಕೆ, ತೊಳಸು, ತೊಳಕಲ್, ತೊಳಲಿ, ಕಣ್ಣಂದೊಳಲಿ, ಜಕ್ಕಂದೊಳಲಿ, ತೊಳಲಿಕಲ್ಲು, ಕಣ್ದೊಳಸು, ತೊಂಡು ತೊಳಸು, ತೊಳಲಿ ಬಳಲು, [ತೊಳಲಿದರೂ ಬಳಲೋದು ತಪ್ಪೀತೇ?] ತೊಳಲಾಟ.

ದುಮುಕು— [ಹಾರು] [ದುಮುಕಿದರೆ ದುಃಖ ಹೋದೀತೇ?] ದುಮಿಕು, ದುಮ್, [ಧುಮ್], ದುಮಿಕ್ಕು, ದುಮ್ಮಿಕ್ಕು, [ಧುಮ್ಮಿಕ್ಕು].

ಕೂರು— [ಸ್ನೇಹಿಸು, ಪ್ರೀತಿಮಾಡು.] ಕೂರಿಸು, ಕೂರ್ತೆ, [ಕೂರ್ತೆ ಮರುಗಿದಂ.] ಕೂರ್ಪೆ, [ಕೂಪ], ಕೂರ್ಪು, ಕೂರ್ಪವನು [ಕೂರ್ಪ+ಅವನು- ವಲ್ಲಭ, ದಯಿತ, ಪ್ರಿಯ.] ಕೂರ್ಪಳು, ಕೂರ್ಮೆ, ಕೂರ್ಪಾಳಿ [ಗೆಳೆಯ].

ಉಕ್ಕು— [ವಿಕಾರು, ಹೊರಚಲ್ಲು,] ಉಕ್ಕಿಸು, [ಉಕ್ಕಿ ಬಂದದ್ದು ತೆಗೆದು ಹಾಕಿದರೆ ಮಿಕ್ಕದ್ದಕ್ಕೆ ಮೋಸವಿಲ್ಲ.] ಉರ್ಕು, ಉಕ್ಕೇರು, ಉಕ್ಕುಡಿಸು [ಉಕ್ಕು+ಉಡಿಸು.] ಉಕ್ಕುವಿಕೆ, ಉರ್ಕಳಿ, ಉರ್ಕಾಳು [ಬಲ್ಬಂಟ]. ಉರ್ಕುಡುಗು, ಉರ್ಕುಂದೊರೆ [swollen river]. ಉಕ್ಕಲಿಸು, ಉಕ್ಕಂದ, ಉಕ್ಕಲ.

ಕನಲು— [ಸಿಟ್ಟಾಗು], ಕನಲ್, ಕನಲಿಕೆ, ಕನಲ್ಕೆ.

ಪಾರು— [ಹಾರು, ಬಯಸು.] ಪಾರಯಿಸು [ಹಾರಯಿಸು]. ಪಾರಿಸ, ಪಾರಿವಾಳ, ಪಾರಿವಾಣ, ಪಾರಾವತ, ಪಾರಾವತ, ಪಾರುವಾಣ, ಪಾರಳಿ ಪಾರುಗೆಡು, ಪಾರುಂಬನಿ [ತುಷಾರ], ಪಾರುಂಬಳೆ [ಚಕ್ರ], ಪಾರುಂಬಳೆಗೆಯ್ಯ [ವಿಷ್ಣು], ಪಾರೇಳು [ನಿರ್ಧಾವನ-ಓಡು], ಪಾರು [ಪಾರೆ] [ವಡ್ರಂಚೆ, ಸೂಳೆ] ಮುದಿಪಾರು [ಮುದುಪಾರು], ಪಾರುಗೆಯ್ತ, ಪಾರುವ, ಪಾರ್ವ, ಪಾರ್ಬ, ಪಾರ್ವಿಕೆ, ಪಾರ್ಬಿಕೆ, [ಪಾರ್ವ-ಪು. ಪಾರ್ವತಿ-ಸ್ತ್ರೀ.]

ಹೊಗು— [ಪ್ರವೇಶಿಸು, ಒಳಸೇರು.] ಹೊಕ್ಕು, ಹೊಗಿಸು, ಹೊಗುವಿಕೆ, [ಹೊಕ್ಕ ಮನೆ ಹಾಳು, ಇದ್ದ ಮನೆ ಬೋಳು. ಹಾವು ಹಡೆದವನ್ನು ಬೇಲಿ ಹೊಕ್ಕಳು] ಹೊಗೆ, [ಹೊಗೆ ಹೊಗೆದು], [ಹೊಗೆ ಇದ್ದಲ್ಲಿ ಬೆಂಕಿ, ತಗ್ಗು ಇದ್ದಲ್ಲಿ ಚಳಿ. ಬೇಗೆ ಹತ್ತಿದ್ದಲ್ಲಿ ಹೊಗೆಗೆ ನಿಮಿತ್ತ ಕೇಳಬೇಕೇ?] ಹೊಗೆಕಡ್ಡಿ, ಹೊಗೆಕಂಡಿ, ಹೊಗೆಕೊಡು, ಹೊಗೆಬಂಡಿ, ಹೊಗೆಬತ್ತಿ, ಹೊಗೆಸೊಪ್ಪು, ಹೊಗೆಹಡಗ, ಹೊಗೆ ಹಾಕು, [ಹೋಗು ಅನ್ನಲಾರದೆ, ಹೊಗೆ ಹಾಕು! -ಹೋಗಬೇಡ! ಹೊಗೆ ಹಾಕುತ್ತೇನೆ.]

ಸಿಡಿ— [ಒಮ್ಮೆಂದೊಮ್ಮೆ, ಹಾರು, ತಾಕು.] ಸಿಟ್ಟು, [ಸಹಜವಾದ ಸಿಟ್ಟುಳ್ಳವನು- ಕ್ರೋಧನ, ಅಮರ್ಷಣ. ಸಿಟ್ಟುಳ್ಳದು- ಅಭಿನೀತ, ಸಿಟ್ಟುಳ್ಳವಳು- ಚಂಡಿ, ಸಿಟ್ಟಿನವ- ಅಮರ್ಷಣ, ಸಿಟ್ಟಿನವಳು- ಭಾಮಿನಿ, ಭಾಮೆ.] [ಬಡವನ ಸಿಟ್ಟು ದವಡೆಗೆ ಮೂಲ. ಸಿಟ್ಟಿಗೆ ಕೊಯ್ದ ಮೂಗು ಶಾಂತತ್ವಕ್ಕೆ ಹತ್ತೀತೇ? ಸಿಟ್ಟು ತನಗೆ ಕೇಡು, ಸಮಾಧಾನ ಪರರಿಗೆ ಕೇಡು.] ಸಿಟ್ಟು ಬರು, [ಸಿಟ್ಟು ಬಂದರೆ ಹಿಟ್ಟು ಮುಕ್ಕು. ಸಿಟ್ಟು ಬಂದರೂ ಅಟ್ಟು ವಿನಹಾ ಉಣ್ಣ ಕೂಡದು.] ಸಿಟ್ಟುಬಿಡು, [ಪೆಟ್ಟಿಗೆ ಪೆಟ್ಟು ಆದರೂ ಸಿಟ್ಟು ಬಿಡಲಿಲ್ಲ.] ಸಿಟ್ಟುಗಾರ, [ಚಂಡ, ಅತ್ಯಂತಕೋಪನ], ಸಿಟ್ಟುಗಾರಳು [ಕೋಪನೆ, ಭಾಮಿನಿ] ಸಿಡಿಸು, [ಕೊಳಚೀ ಮೇಲೆ ಹೇಟಿ ಹಾಕಿ, ಮೋರೇ ಮೇಲೆ ಸಿಡಿಸಿಕೊಂಡಂತೆ] ಸಿಡಿಸೋನೆ, [ಉಗುಳು ಸಿಡಿವ ನುಡಿ- ಅಂಬೂಕೃತ. ವೇದವನ್ನು ಓದುವಾಗ ಬಾಯೊಳಗಿಂದ ಸಿಡಿವ ಹನಿ- ಬ್ರಹ್ಮಬಿಂದು] [ಸಿಡಿ ಸುರಿವ ಮೇಲೆ ಮಡಿ ಏನು?] ಸಿಡಿವಳೆ [ಸಿಡಿಯುಂದಲೆ], ಸಿಡಿಮಿಂಡಿ, ಸಿಡಿಮಿಡಿಗೊಳ್ಳು, ಸಿಡಿಮಿಡಿ ಬರು, ಸಿಡಿಮಿಡಿಹಕ್ಕಿ, [ವರ್ತಿಕೆ], ಸಿಡಿತ, ಸಿಡತ. [ತಲೇ ಸಿಡತಕ್ಕೆ ಮಲ ಶೋಧನೇ ಕೊಂಡ ಹಾಗೆ] ಸಿಡಿಲು, ಸಿಡಿಲ ಗರ್ಜನೆ, [ನೊಳಗು], ಸಿಡಿಲ

ಧ್ವನಿ, [ಸ್ಫೂರ್ಜಥು], ಸಿಡಿಲಸ್ನ, [ಸಿಡಿಲನ್ನಂ ಸಿಂಗದನ್ನಂ ಪುರಹರನ ಉರಿಗಣ್ಣನ್ನನ್ ಈ ನಾರಸಿಂಹಂ]. ಸಿಡಿಲ ದನಿ, [ಗುಡು ಗುಡು ಚಿಟಿಚಿಟಿ ಲೆಂದುಗ್ಗಡದ ಸಿಡಿಲ್ದನಿ ಪೊಸೆಯೆ.] ಸಿಡಿಲ್ಮಿಳಗು, [ಮುಗಿಲ್ಗಿಚ್ಚು], [ಮಳೆ ತಡಿಸದ ಕೊಡೆ ಸಿಡಿಲ ತಡಿಸೀತೇ? ಇದ್ದವರು ಇದ್ದ ಹಾಗೆ, ಸಿದ್ದಾದೇವಿಗೆ [ದುರ್ಗೆ] ಸಿಡಿಲು ಬಡೀತು] ಸಿಡು, ಸಿಡುಗುಟ್ಟು, ಸಿಡುಕು, ಸಿಡುಕ, ಸಿಡುಕಿ, ಸಿಡುಕುಮೋರೆ, ಸಿಡುಕುತನ, ಸಿಡುಬು, ಸೇಡು.

ಪೂ--- [ಹೂವಾಗು], ಪೂ [ಹೂ], ಪೂಗಣೆ, ಪೂಗಣೆಯ [ಕಾಮ]; ಪೂಗಣ್ಣ [ವಿಷ್ಣು], ಪೂಗಲ್ಲು, (A stone in the form of a lotus-flower on which a linga stands.) ಪೂಗುಡಿ, [ಪೂ+ ಕುಡಿ, ಪೂ+ಗುಡಿ], ಪೂಗೆಂಡ, ಪೂಗೊಂಚಲು, ಪೂಗೊಳ, ಪೂದಿರಿ [ಪೂ+ ತಿರಿ], ಪೂಗೋಲು, ಪೂಗೋಲ [ಕಾಮ], ಪೂದೊಂಗಲು, ಪೂದೊಡಂಬೆ [ಪ್ರಸವಬಂಧ, ವೃಂತ], ಪೂದೊಡವು, ಪೂದೋಟ [ಪೂದೋಂಟ], ಪೂದೋರಿಸು, ಪೂಪುಣುಂಬು [ಪೂಗಣೆ], ಪೂಪುಣುಂಬ-ಪೂಪುಣುಂಬ [ಕಾಮ], ಪೂಮಳೆ, ಪೂಮಾಲಿಕೆ (ಪೂಮಾಲೆ), [ಪೂಮಾಲೆಯಿಲ್ಲದಿದ್ದರೆ ರೂಮಾಲೆ [ರುಮಾಲು] ಬೇಡವೋ?] ಪೂಮಾಲೆದುರುಂಬು, [A knot of hair with a garland of flowers] ಪೂಮುಡಿ, ಪೂರವಕೆ [A bodice with flowers]. ಪೂವಲಿ, [ರಂಗವಲಿ], [ಸೌರಭದ ಪೂವಲಿಗಳಲಿ ಸಿಂಗಾರಿಸಿದ ಬೀದಿಗಳ್], ಪೂವಸೆ, ಪೂವಳೆ [ಪೂಮಳೆ], ಪೂವಾಸು, [A bed of flowers]. ಪೂಸರಲು (ಪೂಗಣೆ), ಪೂವಡಿಗ, (ಪೂವಳ), ಪೂವಡಿಗ ವೆಣ್ಣು.

ಬೆರೆ--- (ಕೂಡು) ಬೆರಕೆ, (ನೆಂಟರ ಮನೆಗೆ ನಾಯಿ ಹೊಕ್ಕರೆ ಎಂಟು ಊರಿಗೆ ಬೆರಕೆ.) ಬೆರಕೆವರ್ಣ, ಬೆರಕೆವೆಳಗು, ಬೆರ, (ಬೆರಕೊಳ್ಳು), ಬೆರಿಕೆ, ಬೆರಿಕೆಜಾತಿ, ಬೆರಿಕೆಮಣ್ಣು, ಬೆರಿಕೆಮನುಷ್ಯ, ಒಡವೆರೆ, ಗರಿವೆರೆ, ತೆರೆವೆರೆ, ಬೆರೆ ಬೆರೆ

ಹುಗಿ--- (ನೆಲದೊಳಗೆ ಮುಚ್ಚು,) ಹುಗಿತ, ಹುಗಿಸು, ಹುಗಿಲು (ಹುದಿಲು-ಕೆಸರು), ಹುಗುಲು (ತೂತು).

ಸೀಪು--- (ಹೀರಿ ತಿನ್ನು), ಸೀಪಿಸು, ಸಿಪ್ಪೆ, (ಬಾಳೆಹಣ್ಣು ತಿನ್ನುವ

ಪರದೇಶಿ ಸಿಪ್ಪೆ ಈಚಿಗೆ ಬಿಸಾಡು! ಅಂದ. ಸಿಪ್ಪೆ ಇದ್ದರೆ ಕಾಯಿ, ಮುಪ್ಪು ಆದರೆ ಮರಣ.) [ಬೊಟ್ಟು (ಬೆರಳು) ಸೀಪಿದರೆ ಹೊಟ್ಟೆ ತುಂಬೀತೇ?]

ಮೇ— (ಮೇಯು), ಮೇಕೆ (ಹೆಣ್ಣು ಆಡು), ಮೇಕ (ಗಂಡು ಆಡು), (ನೂಕಿಸಿಕೊಂಡು ಹೋಗುವದಕ್ಕಿಂತ ಮೇಕೆ ಕಾಯೋದು ಲೇಸು.) ಮೇಕೆ ಯೊಲ್ಲದ ಗಿಡ (ಆಟರೂಷ, ಆಡುಸೋಗೆ), ಮೇಯಿಸು (ಮೇಸು), (ದನಾ ಮೇಯಿಸುವವನಿಗೆ ಘನ ಯಾಕೆ), (ಮೇದ ಮೋಟೂ ಹೋದ ಹಜ್ಜೆಯೂ ಕಾಣುವುದಿಲ್ಲ), (ಕತ್ತೆ ಮೇದಲ್ಲಿ ಮತ್ತೆ ಮೇವಿಲ್ಲ. ಉದ್ದು ಮೇದ ಕತ್ತೇ ಹಾಗೆ ಬುದ್ಧಿಹೀನನು. ಬೇಲಿ ಎದ್ದು ಹೊಲ ಮೇಯುವಾಗ್ಯೆ ಕಾಯೋದು ಯಾರು? ಆನೆಯಾಗಿ ಕಬ್ಬು ಮೇಯುವದಕ್ಕಿಂತ ಇರುವೆಯಾಗಿ ಸಕ್ಕರೆ ಮೇಯುವದು ಲೇಸು.) ಮೇವು, (ಹಾಗದ ಕೋಳಿ ಮುಪ್ಪಾಗದ ಮೇವು ತಿಂತು. ಮೂಢಗೆ ಹೇಳಿದ ಬುದ್ಧಿ, ಆಡಿಗೆ ಹಾಕಿದ ಮೇವು.) ಪುಲ್ಮೇವು.

ಹೆಚ್ಚು— (ಬೆಳೆ, ವೃದ್ಧಿಯಾಗು.) ಹೆಚ್ಚಳ, ಹೆಚ್ಚಿಕೆ, ಹೆಚ್ಚಿಗೆ, ಹೆಚ್ಚಿಸು, ಹೆಚ್ಚಿನತನ, [ಸಮುಚ್ಛ್ರಯ], [ಸುಚ್ಚಾದರೂ ಹೆಚ್ಚಿಂತ ಭಾವಿಸ ಬೇಕು, ಪೋಲೀ ದನಕ್ಕೆ ಹಾಲು ಹೆಚ್ಚು, ಕೂಲೀ ಮುಂಡೆಗೆ ನಾಲಿಗೆ ಹೆಚ್ಚು, ಬಂಟರಲ್ಲಿ ತಂಟೆ ಹೆಚ್ಚು, ನಂಟರಲ್ಲಿ ಗರ್ವ ಹೆಚ್ಚು. ಸ್ಮಾರ್ತರಿಗೆ ಸ್ವಾರ್ಥ ಹೆಚ್ಚು, ವೈಷ್ಣವರಿಗೆ ಉಷ್ಣ ಹೆಚ್ಚು.] ಹೆಚ್ಚು ಕಡಿಮೆ [ಹೆಚ್ಚು ಕಡಮೆ], ಹೆಚ್ಚುಗೆ, ಹೆಚ್ಚುವಿಕೆ.

ರಾಟು— (ತಿರುಗಿಸು), ರಾಟಣ, ರಹಾಟ, ರಾಟವಾಣ, ರಾಟವಾಳ, ರಾಟಳ, ರಾಟಾಣ, ರಾಟಾಳ, ರಾಟ, ರಾಟೆ, ರಾಟ್ಣೆ, ರಾಟ್ಲ, ಕೈರಾಟೆ, ಕಾಲರಾಟೆ.

ಮಿನು— (ಪ್ರಕಾಶಿಸು), ಮಿನುಗು, ಮಿನುಕು, ಮಿನಿ, ಮಿನಿ ಮಿನಿಸು, ಮಿನು ಮಿನಿಸು, ಮಿನು ಮಿನುವು, (ಮಿನು ಮಿನುಪ ಯೋಗವಟ್ಟಿಗೆ) [ಮಿನುಗುವ ಆದಿಮೂರ್ತಿ. ಮಿನುಗುವ ವಸಂತದೂತಿಕೆ], ಮಿನುಗುವಡೆ, ಮಿಣ, ಮಿಣಗುಟ್ಟು, [ಮಿಣಮಿಣನೆ ಮಿಂಚು.] ಮಿಣಕು, ಮಿಣಕುಹುಳ, [ಮಿಣಕು ಹುಳ ತಿಣಕಿದರೆ ಜೇಪು ಬಂದೀತೇ?], ಮಿಣಕ್ಕೆನ್ನು, ಮಿಣಿಕೆ, ಮಿಣುಕು, ಮಿಣಕುಡು, ಮಿಣಿಮಿಣಿ, ಮಿಣಿಕರಿಸು.

ಬಿರಿ— [ಒಡೆಯು], ಬಿರಿಕು, ಬಿರುಕು, ಬಿರ್ಕು, [ಬಿರಿತು, ಬಿರಿದು, ಬಿರತು, ಬಿರಿದು.] ಬಿರವು, ಬಿರುವು, [ಬಿರವು ಬಿಟ್ಟಿತು], ಬಿರಿಮುಗುಳು

[ಬಿರುಮುಗುಳು] [ಬಿರಿಮುಗಳ ಬಂಡು- ಮಧು], ಕೋಟಿವಿರಿ, ಅರೆವಿರಿ, ಇನಿವಿರಿ, [ಕೆಯ್ಲಿದ್ದ ಕಲ್ಲು [ನಾನು] ಕೊಡೆ. ಮನೆಗೆ ಬಾ, ಬಿರಿದ ಬಾಳೆ ಹಣ್ಣು ಕೊಡುವೆನು.]

ಹೇಸು— [ಅಸಹ್ಯಪಡು], ಹೇಸಿಕೆ, [ಹೇಸಿಕೆಯ ನಾತ, ಹೇಸಿಕೆಯ ಮಾತು.] ಹೇಸಿಗೆ, [ದೊಡ್ಡವನು ಉಂಡರೆ ಮದ್ದು, ಬಡವನು ಉಂಡರೆ ಹೇಸಿಗೆ. ಪರಸೇ ಯಜಮಾನನೆಂದು, ಪರರ ಹೇಸಿಗೆ ತೆಗೆಸಿದ ಹಾಗೆ. ಹಂದೀ ಮೇಲೆ ಕೂತವ ಹೇಸಿಗೆಗೆ ಅಂಜ್ಯಾನೇ?] ಹೇಸಿಗೆ ಗಿಡ, ಹೇಸಿಗೆ ಮಾಡು, ಹೇಸಿಗೆಗೊಳಿಸು, [ಎಂಜಲಿಗೇ ಹೇಸದವಳು ತಂಗಳನ್ನಾ ಬಿಟ್ಟ್ಯಾಳೇ? ಏನೂ ಇಲ್ಲದವ ಯಾವದಕ್ಕೂ ಹೇಸ. ಮಾಸಿದ್ದಕ್ಕೆ ಹೇಸದವಳು ಮುಸುರಿಗೆ ಹೇಸ್ಯಾಳೇ?] ಹೇಸುಮಗ, ಹೇಸುಮಾತು, ಹೇಸುಮುಂಡೆ, ಹೇಸುತನ, ಹೇಸಿ, [A disgustful female]. [ಹೇಸಿಯ ಪಾಪ ಸನ್ಯಾಸಿಗೆ ಹತ್ತಿತು. ಹೇಸಿ ಮುಯ್ಲಿಗೆಗೆ ಅಂಜಳು, ನಾಸಿ ನಾಚಿಕೆಗೆ ಅಂಜಳು, [ನಾಸಿ- A woman who destroys]. ಹೇಡಿಯ ಬೆನ್ನು ಕಟ್ಟಲು ಸಲ್ಲ, ಹೇಸಿಯ ನಿಬ್ಬಣಕ್ಕೆ ಹೋಗಲು ಸಲ್ಲ] ಹೇಸಿಕತ್ವ.

ಮಿಸುಗು— [ಹೊಳೆ] ಮಿಸುನಿ [ಬಂಗಾರ], ನಲ್ಮಿಸುನಿ, [ಒಳ್ಳೆಯ ಬಂಗಾರ], ಮಿಸುನಿಮೊಗ [ಅಗ್ನಿ]. ಮಿಸುನಿವೆಟ್ಟ [ಮೇರು], ಮಿಸುನಿಯಡ್ಡಣಿಗೆ, ಮಿಸುನಿರವಕೆ, ಮಿಸುನಿವಟ್ಟಲು, ಮಿಸುನಿವಟ್ಟೆ, ಮಿಸುನಿವಣ್ಣ.

ಪೊಯ್-ಪೊಯ್ಯು- (ಸುರಿಸು. ಹೊಡೆಯು) (ಗದೆಯಿಂ ಪೊಯ್ದಾ. ಆರ್ಗೆ ಭೂತಂ ಪೊಯ್ದುದು?) ಅಡಂಗೆವೊಯ್. ಕೆಯ್ವೊಯ್. ತಳ್ವೊಯ್. ನನ್ದೆವೊಯ್. ಮನಂಬೊಯ್. ಮಾರ್ಪೊಯ್. ಪೊಯ್ದಾಡು. ಪೊಯ್ಕೊಂಡು (ಪೊಡೆಸೆಂಡು). ಪೊಯ್ನೀರು. [ಮಳೆಯಿಲ್ಲದೆ ಪೊಯ್ನೀರಿಂ ಬೆಳಗುಮೆ ಧರೆ?] ಪೊಯ್ವೆರ್ [ಪೊಯ್+ಪೆರ್— To receive blows] ಪೊಯಿದ ಎಡೆ [ಬಾಸುಳು] ಪೊಯಿಸು. ಪೊಯ್ಸು. ಪೊಯಿಲು. ಪೊಯ್ಲು. ಅರಿಬೊಯ್ಲು. ತಿರುವೊಯ್ಲು. ತೆರೆವೊಯ್ಲು. ಬಿರುವೊಯ್ಲು. ಪೊಯಿಗೆ, ಪೊಯ್ಗಡಬು.

ಹಂಗಿಸು— [ನಾಚಿಸು] [ಹಂಗಿಸಿದರೂ ಮಂಗತನ ಬಿಡಲಿಲ್ಲ. ಬೆಳೆ ಹೊಗಳಿಸಿ ಉಣ್ಣಬೇಕು, ಹಯನು [crop] ಹಂಗಿಸಿ ಉಣ್ಣಬೇಕು.] ಹಂಗು. (ಹಂಗು ಹರಿಬ ಮೇಲೆ ತೊಂಗೇನು? ತೊಡರೇನು?— ತೊರೆದವನಿಗೆ ಬರದ

ಹಂಗೇನು?–ಉಂಡದ್ದು ಉಂಡಹಾಗೆ ಹೋದರೆ ವೈದ್ಯನ ಹಂಗೇನು?—ತುಂಡು ಪಿಂಡ ಸಿಕ್ಕಿದ ಮೇಲೆ ಮುಂಡೆಗೆ ಯಾರ ಹಂಗು ಏನು?—ಬಂಗಿ ಕುಡಿಯುವವನಿಗೆ ಹುಂಗು ಯಿರಾದು?– ಮಣಿಯಗಾರನ ಹಂಗು ಹಣಗಾರನಿಗೂ ಬೇಕು.–ಬಂಗಿ ಸುಟ್ಟರೂ ಹಂಗು ಸುಡಲಿಲ್ಲ.—ಅಂಗ ಹರಿದ ಮೇಲೆ ಜಂಗಮನ ಹಂಗೇನು?—ವರದಿ ಹೇಳುವವನಿಗಾದರೂ ಹರದನ ಹಂಗು ಬೇಕು.) ಹಂಗಾಳು. [ಹಂಗಾಳಾದ ಮೇಲೆ ಮಂಗನ ಹಾಗೆ ಮಾಡಬೇಕು.] ಹಂಗಿಗ [ಪು] ಹಂಗಿಗೆ [ಸ್ತ್ರೀ.] ಹುಂಗಣೆ. ಹಂಗಿಣೆ. ಹಂಗು ಗಿಂಗು. [ಹಂಗಿನರಮನೆಗಿಂತ ಇಂಗಡದ ಗುಡಿ ಲೇಸು; ಭಂಗಪಟ್ಟು ಉಂಬ ಬಿಸಿಯನ್ನಕಿಂತಲು ತಂಗಳವೆ ಲೇಸು]

ಮುರಿ— [ಭಂಗಿಸು.] [ದೋಸೆ ತಿನ್ನುವಾಗ ಮೀಸೆ ಮುರಿದ ಹಾಗೆ] ಮೆಯ್ಮುರಿ. ಮುರಿಗಡಲು. ಮುರಿದಿಟ್ಟಿ, ಮುರಿಮುಲಕು. ಮುರಿಯಾಟ. ಕರಿಮುರಿ. [ಕರಿಮುರಿವೋಗು] ಬಲಮುರಿ. ಬೆಟ್ಟುಮುರಿ ಪುಲ್ಲಮುರಿ. [ಎತ್ತನ್ನು ಹುಲಿ ತಿಂತು, ಸಬರ [ಎತ್ತುಗಳ ಮೇಲೆ ಹಾಕುವ ಥಡಿ] ಮುರಿಯನ್ನು ಗೆದ್ದಲು ತಿಂತು] ಕೆಯ್ಮುರಿ. ನಾಗಮುರಿ. ಮುಟ್ಟಿಲ. ಮುರಿಕೆ-ಮುಟ್ಟಲು. ಮುರಿಕೆ [ನಾಚಿಗೆ ಗಿಡ] ಹೆಡಮುರಿಕೆ [ಹೆಡಮುರಿಗೆ] ಮುರಿವು. ಮುರಿಹು. ಮುರು. [ಮುರುಕೊಳ್ಳು] ಮುರುಹು. [ಮೊರಪು. ಮೊರೆಹು] ಮುರ. [ತನ್ನದಂತಾ ತಾನು ಮುರಕೊಂಡು ಅನ್ಯನ ಮೇಲೆ ದೂರು ಹೇಳಿದ.] ಮುರಕ. [ಮುರಕ ಮನೆಗೆ ಒಡಕ ಗಡಿಗೆ. ಪರರ ಒಡನೆ ಸಿಕ್ಕಿದರೆ ಹರಕಾದರೇನು? ಮುರಕಾದರೇನು? ತುರುಕ ಬಿಟ್ಟಾನೆ?] [ಧರ್ಮವಿಲ್ಲದ ಅರಸು ಮುರಿದ ಕಾಲಿನ ಗೊರಸು. ಮನೆ ಮುರಿದರೆ ಕಟ್ಟಬಹುದು, ಮನ ಮುರಿದರೆ ಕಟ್ಟಲಸಾಧ್ಯ. ಸೊಂಟ ಮುರಿದ ಮೇಲೆ ನೆಂಟರಿಲ್ಲ, ಗಂಟಲು ಮುರಿದ ಮೇಲೆ ರಾಗವಿಲ್ಲ. ಗಂಟು ಪರರ ಕೈಲಿ ಕೊಟ್ಟು ಸೊಂಟಾ ಮುರಿಸಿಕೊಂಡ. ಹನ್ನೆರಡು ವರ್ಷ ಸಾಧಕಾ ಮಾಡಿ [ಗರುಡಿಯಲ್ಲಿ ಅಭ್ಯಾಸಿಸಿ] ಮನೆಯ ಮುದುಕೀ ಸೊಂಟ ಮುರಿದ ಹಾಗೆ.] ಮುರಿಯು ನೂಕು. ಮುರಿಮುರಿದು. ಮುರಿಗೆಡೆ. ಮುರಿವಲೆ. ಮುರಿವಡೆ. ಮುರಿಗೆ. ಮುರಿಯುವಿಕೆ. [ಅಲ್ಲದ ಕೆಲಸಕ್ಕೆ ಹೋಗಿ, ಹಲ್ಲು ಮುರಿಸಿಕೊಂಡ.] ಮುರುಕ. [ಮನೆಮುರುಕ. ಮನೆಮುರುಕತನ.] ತಿರುಗಾ ಮುರುಗಾ. ತಿಗ್ಗಾ ಮುಗ್ಗಾ. ಮುರತ [ವಿಷದ ವೇಗ ಮುರಿಯಲಿಕ್ಕೆ ಕೊಟ್ಟ ಔಷಧ.] ಮುರ್ಪು [ಮುಪ್ಪು]

ಹಾಯು— [ಹೋಗು. ತಿವಿ, ಗಾಯಮಾಡು.] ಹಾಯಿಸು. ಹಾಯಿ

ಸುವಿಕೆ. [ಕಡೆ ಹಾಯಿಸುವಿಕೆ.- ಮರಣದ ವರೆಗೂ ಶಪಥದಿಂದ ಉಪವಾಸ ವ್ರತ ಮಾಡಿ ಕಡೆ ಹಾಯಿಸುವಿಕೆ ಪ್ರಾಯ. ದುರ್ಗವನ್ನು ಕಡೆ ಹಾಯುವಿಕೆ- ಸಂಕ್ರಮ, ದುರ್ಗ ಸಂಚರ.] ಹಾಯ್ಗಡ. [A place where a river is forded] ಹಾಯ್ಬಿಡು. [To let loose] (ತಲೆ ಗಟ್ಟಿಯೆಂದು, ಕಲ್ಲು ಹಾಯಬಾರದು. ಮಣ್ಣುಕುಂಡೆ ನಂಬಿ, ಹೊಳೆ ಹಾದರು. ಬುಡ್ಡೆಯನ್ನು ನಂಬಿ ಹೊಳೆ ಹಾದ ಹಾಗೆ) ಹಾದಾಡು. ಹಾದಾಟ. ಹಾದಿ. ಹಾದಿಕಾರ. ಹಾದಿಗ. [ಬೋಧಕನಾದರೆ ಸಾಧಕ ಮಾಡಲಿ, ಹಾದಿಗೆ ಏನು ಅಡ್ಡಿ? ವೇದಾ ತಿಳಿಯದಿದ್ದರೆ ಹಾದಿ ತಿಳಿಯದೇ? ಮಾದಿಗನ ಮನೇಲಿ ಪರಮಾನ್ನವಿದ್ದರೆ ಹಾದೀಲಿ ಹೋಗೋರಿಗೆ ಏನು? ಸೇದಿದ ನೀರು ಹಾದೀಲಿ ಹಾಕ್ಯಾರೇ] ಹಾದಿ ಗೊಳ್ಳು. ಹಾದಿಜಗಳ [ಹಾದಿಜಗಳ ಹಣವಡ್ಡಕ್ಕೆ ಕೊಂಡುಕೊಂಡರು.] [ವಾದಿಯ ಸಂಗಡ ವಾದಿಸಲು ಸಲ್ಲ, ಕುಂಟನ ಸಂಗಡ ಹಾದಿ ನಡೆಯಲು ಸಲ್ಲ] ಹಾದಿಬಾಕ [ಬೀದಿಬದಿಯ ಭಿಕ್ಷುಕ] [ಬೀದೀಲಿ ಬೆಲ್ಲ ಸುರಿದು, ಹಾದಿಯವರ ಸಂಗಡ ಜಗಳಾಡಿದ ಹಾಗೆ.] ಹಾದಿಹೋಕ. [ಹಾದಿಹೋಕನ ತಲೆ ಕಟ್ಟೇ [ನರಬಲಿ] ದೇವರಿಗೆ ಪೂಜೆ.]

ಸುರುಳು— (ಸುತ್ತು) ಸುರುಳಿಸು. [ಸುರುಳಿ ಮಾಡು. ಸುರುಳಿ ಸುತ್ತು] ಸುರುಳಿ. [ಹಾಸಿಗೆಯ ಸುತ್ತಿಟ್ಟ ಸುರುಳಿಯನ್ನು ಹಾಗೇ ಉರುಳಿಸಿ ಬಿಟ್ಟನು.] ಸುರುಳಿ ಸುತ್ತು. (ಟಗರಿನ ಕೋಡುಗಳು ಕೆಳಗೆ ಬಾಗಿ ಸುರುಳಿ ಸುತ್ತಿರುತ್ತವೆ.) ಸುಳಿ (ಸುಳ್ಳಿ)

ಪುರುಡು— [ಸ್ಪರ್ಧೆ, ದ್ವೇಷ, ಹಂಗಿಸು.] ಪುರುಡಿಸು. [ಸವತಿಗೆ ಸವತಿ ಪುರುಡಿಪಳ್.] ಪುರುಡಿಗ. ಪುರುಡಿ. ಪುರುಡುದೋರು. ಪುರುಡುವಾತು. ಪುರುಳ. (ಪೆರ್ಚುಂಬುರುಳು.) ಪುರುಳಿ.

ಹೇರು— (ಹೊರಿಸು, ಎತ್ತಿ ಇಡು.) ಹೇರಿಸು ಹೇರಗೊಡು. [ಆನೆ ಗಳು ಒಜ್ಜೆಗಳನ್ನು ಹೇರಗೊಡುತ್ತವೆ.] ಹೇರಾಟ. [ನೀರಾಟಕ್ಕೆ ಹೋಗಿ ಹೇರಾಟ ಕಳಕೊಂಡ] [ಹೇರು ನುಂಗುವವ ಸೇರು ಬಿಟ್ಟಾನೇ? ಹೇರು ಒಪ್ಪಿಸಿದ ಮೇಲೆ ಸುಂಕ ಕೇಳುವದೇನು? ಬಂಡಿ ಬಂಡಾಟ, ಹೇರು ಹೆಟ್ಟ್ಯಾಟ, ತಲೆ ಮೊಟ್ಟೆ ಪರಮಸುಖ. ಸಾದೆ (ಸಾಧು) ಎತ್ತಿಗೆ ಎರಡು ಹೇರು.] ಹೇರಿಗೆ. ಹೇರಾಳು.

ಮಣಿ— (ಬಾಗು.) ಅಡಿವಣಿಗೆ (ಅಡಿ+ಮಣಿಗೆ— ಕೆಸರೊಳ್ ಇರದೆ ಆದ ಪಜ್ಜೆ— A concave bend in mud) ಮಣಿಕಾಲು [ಮಂಡಿ ಗಾಲು] ಮಣಿಕಟ್ಟು [ಮಣಿಬಂಧ.] ಮಣಿತ ಮಣಿಸು. ಮಣಿಕೆ. ಮಣಿವು.

ಹರವು— [ಪಸರಿಸು.] ಹರ [ಆಲದ ಎಲೆಗಳು ಹರವಿರುವುದರಿಂದ ಪತ್ರಾವಳಿಗೆ ಬರುತ್ತವೆ. ಒಂಟೆಯ ಅಂಗಾಲು ಹರವಾಗಿ ಬಹುಮೆತ್ತಗೆ ಇರುತ್ತದೆ.] ಹರಹು. ಹರಹುಗೆಡು. ಹರವಿ. [ಹರವಿಯ ಅನ್ನದಲ್ಲಿ ಒಂದು ಅಗಳು ನೋಡಿದರೆ ಸರಿ. ಮುರುವಿಗೆ ಬಗೆ ಇಲ್ಲದಿದ್ದರೆ ಹರವಿಗೂ ದರಿದ್ರವೇ? ಹರದರ ವರಾತ [ಸಾಲದ ಹಣದ ಒತ್ತಾಯದ ಕೇಳಿಕೆ] ಎಂದು, ಹರವಿಯಲ್ಲಿ ತಲೇ ಅಡಗಿಸಿದ ಹಾಗೆ.] ಹರವಡಿ. [ಹರ+ಪಡಿ—ತೋರಿಕೆ, ಪ್ರಕಟನೆ] ಹರವರಿ. [ಹರ+ಪರಿ—ಹರಿಣಂಗಳ ಹರವರಿ]

ನೆಗಳು— [ಮಾಡು.] ನೆಗಳಿಸು. ನೆಗಳ್ಚು. ನೆಗಳ್ತೆ. ನೆಗಳಿಗೆ. ನೆಗಳ್ಕೆ.

ಹೊರಳು— (ಸುತ್ತಾಡು, ಉರುಳಾಡು) ಹೊರಳಿಸು. ಹೊರಳಾಡು. ಹೊರಳುವಿಕೆ. (ಉಪ್ಪಿನವ ಕೆಟ್ಟನೆಂದರೆ ತೆಂಗಿನ ಕಾಯಿಯುವ ಹೊರಳಿ ಹೊರಳಿ ಅತ್ತ, ಕತ್ತೆ ತಿಂದೂ ಹಾಳು, ಹೊರಳಿಯೂ ಹಾಳು.) ಹೊರಳಿ. ಹೊರಳಿಕೆ. ಹೊರಳ್ತೆ.

೧೪. ಮೂಲರೂಪ.

ಗೈ (ಧಾ)— ಹಾಡು. **ಗಾನ**— ಹಾಡುವಿಕೆ, ಹಾಡು, ಗಾಯನ. **ಗಾಯಕ**— ಹಾಡುವವ, ಸಂಗೀತಗಾರ. **ಗೀತ-ಗೀತೆ-ಗೀತಿ**- ಹಾಡು, ಕವನ, ಸಂಗೀತ. **ಗೀತಿಕೆ (ಕಾ)**— ಸಣ್ಣ ಹಾಡು (ಒಂದು ಜಾತಿಯ ಪದ್ಯ.) **ಸಂಗೀತ**— (ಸಮ್+ಗೀತ) ಒಳ್ಳೆಯ ಹಾಡು. (ನೃತ್ಯಮ್ ಆ ವಾದ್ಯಮ್ ಆ ಗೀತಮ್ ಇವು ಕೂಡಿದರೆ ಸಂಗೀತಮ್ ಎಂದೆನಿಕ್ಕುಂ.) **ಗಾಯನ.**

ಗೋ (ನಾಮಪದ)— ಆಕಳು. **ಗೋಪ**— ದನ ಕಾಯುವವ. **ಗೋಪಾಲ-ಗೋಪಾಲಕ**- ದನ ಕಾಯುವವ **ಗೋಷ್ಠ**- [ಸ್ಥಾ-ನಿಲ್ಲು] ದನ ಕಟ್ಟುವ ಸ್ಥಳ, ಹಟ್ಟಿ. **ಗವಾಕ್ಷ**- [ಗೋ+ಅಕ್ಷಿ] [ಆಕಳ ಕಣ್ಣಿನಷ್ಟು] ಬೆಳಕುಕಿಂಡಿ, ಕಿಟಿಕಿ.— ಗೋಪಿ. ಗೋಮುಖ. ಗೋರಸ. ಗೋರೋಚನ. ಗೋಮೇಧ. ಗೋವ. ಗೋವಿಂದ. ಗೋವತ್ಸ. ಗೋಷ್ಪದ. ಗೋವಾಹನ.

ಗ್ರಥ್ [ಧಾ]— ಕಟ್ಟು, ಪೋಣಿಸು, ರಚಿಸು. **ಗ್ರಥನ**- ಕಟ್ಟುವಿಕೆ,

ರಚನೆ, ಪ್ರಬಂಧ, ಪುಸ್ತಕ. **ಗ್ರಂಥಿ**- ಕಟ್ಟು, ಗಂಟು.-ಗ್ರಂಥಕರ್ತೃ. ಗ್ರಂಥಕಾರ. ಗ್ರಂಥನ. ಗ್ರಂಥಿತ.

ಗ್ರಸ್ [ಧಾ]— ತಿನ್ನು, ನುಂಗು. **ಗ್ರಸನ**- ತಿನ್ನುವಿಕೆ, ನುಂಗುವಿಕೆ. **ಗ್ರಸ್ತ**— ತಿಂದ, ನುಂಗಿದ. **ಗ್ರಾಸ**– ತುತ್ತು, ಆಹಾರ. ಸುಗ್ರಾಸ–ಒಳ್ಳೆಯ ಆಹಾರ.

ಗ್ರಹ್ (ಧಾ)— ಹಿಡಿ, ತಕ್ಕೊಳ್ಳು, ಸ್ವೀಕರಿಸು. **ಗ್ರಹ**— ಹಿಡಿಯುವಿಕೆ, ತೆಗೆದುಕೊಳ್ಳುವಿಕೆ. **ಗ್ರಹಣ**— ಹಿಡಿಯೋಣ, ಹಿಡಿತ, ಸ್ವೀಕಾರ. **ಗ್ರಾಹಕ**— ಹಿಡಿಯುವ, ತೆಗೆದುಕೊಳ್ಳುವ; ಸ್ವೀಕರಿಸುವವ. **ಗ್ರಾಹ**– ಹಿಡಿಯುವಿಕೆ, ತೆಗೆದುಕೊಳ್ಳುವಿಕೆ. **ಗ್ರಾಹ್ಯ**– ಸ್ವೀಕರಿಸಬಹುದಾದ, ತೆಗೆದುಕೊಳ್ಳಬಹುದಾದ. **ಅನುಗ್ರಹ**— ಒಟ್ಟಿಗೆ ಹಿಡಿಯುವಿಕೆ; ದಯೆ, ಸಹಾಯ. **ಆಗ್ರಹ**— ಹಿಡಿಯುವಿಕೆಯವರೆಗೆ; ಒತ್ತಾಯ, ಹಟ, ಚಲ. **ನಿಗ್ರಹ**- ಬಿಗಿ ಹಿಡಿಯುವಿಕೆ, ವಶದಲ್ಲಿಟ್ಟುಕೊಳ್ಳುವಿಕೆ, ಹತೋಟಿಯಲ್ಲಿಟ್ಟುಕೊಳ್ಳುವಿಕೆ; ಪೀಡೆ, ಹಿಂಸೆ, ಬಂಧನ, ಕೊಲೆ. **ಪ್ರಗ್ರಹ**— ಚೆನ್ನಾಗಿ ಹಿಡಿಯುವಿಕೆ; ಹಗ್ಗ. **ವಿಗ್ರಹ**— ಬೇರೆ ತಕ್ಕೊಳ್ಳುವಿಕೆ; ಪ್ರತ್ಯೇಕಿಸುವಿಕೆ, ಬಿಡಿಸುವಿಕೆ. **ಸಂಗ್ರಹ**– ಕೂಡಿ ಹಿಡಿಯುವಿಕೆ, ಕೂಡಿ ಹಾಕೋಣ.– ಗ್ರಹಿಕೆ. ಗ್ರಹಿತ. ಗ್ರಹಿಸು. ಅತಿಗ್ರಾಹಕ. ಗ್ರಾಹಿ. ಗ್ರಾಹಿತ್ವ. ಅಗ್ರಾಹ್ಯ. ಉಪಗ್ರಾಹ್ಯ. ಸಂಗ್ರಹಣ. ಸಂಗ್ರಹಿಸು. ಸಂಗ್ರಾಹ. ಸಂಗ್ರಾಹ್ಯ.

ಗ್ರಾಮ್ (ಧಾ)— ಒತ್ತಟ್ಟು ಕೂಡಿರು. **ಗ್ರಾಮ**- ಜನರು ಒತ್ತಟ್ಟು ಕೂಡಿದ್ದು ವಾಸಿಸುವ ಸ್ಥಳ; ಹಳ್ಳಿ. **ಗ್ರಾಮಣಿ**— ಹಳ್ಳಿಯ ಪ್ರಮುಖ. **(ಗಾವುಣಿ-ಗಾವುಳ-ಗಾವುಂಡ-ಗಾವುಡ-ಗೌಡ)** **ಗ್ರಾಮೀಣ**- ಹಳ್ಳಿಗ; ಅಸಂಸ್ಕೃತ. **ಸಂಗ್ರಾಮ**- ಒಟ್ಟು ಒತ್ತಟ್ಟಾಗಿ ಕೂಡುವುದು; ಯುದ್ಧ, ಜಗಳ. **ಗ್ರಾಮ್ಯ**— ಹಳ್ಳಿಗೆ ಸಂಬಂಧಿಸಿದ, ಹಳ್ಳಿಗಾಡಿನ; ಸಂಸ್ಕಾರವಿಲ್ಲದ, ಅಸಭ್ಯ.— ಗ್ರಾಮಕೀಟಕ. ಗ್ರಾಮತಕ್ಷ. ಗ್ರಾಮತೆ. ಗ್ರಾಮವಾಸಿ. ಗ್ರಾಮಶಾರ್ದೂಲ (ನಾಯಿ). ಗ್ರಾಮಸ್ಥ. ಗ್ರಾಮಾಧಿಪ. (ಗ್ರಾಮಾಧಿಪತಿ) ಗ್ರಾಮಿಣ. ಗ್ರಾಮೇಯಕ. ಗ್ರಾಮ್ಯಧರ್ಮ. ಗ್ರಾಮ್ಯಪಶು. ಗ್ರಾಮ್ಯಶಬ್ದ. ಸಂಗ್ರಾಮಧೀರ. ಸಂಗ್ರಾಮಲಂಪಟ.

ಗ್ಲೈ (ಧಾ)— ಕ್ಷೀಣವಾಗು. **ಗ್ಲಾನ**— ಕ್ಷೀಣವಾದ; ಬಳಲಿದ, ಬಾಡಿದ; ಆಯಾಸ, ಬಳಲಿಕೆ. **ಗ್ಲಾನಿ**– ಕ್ಷೀಣವಾಗುವಿಕೆ; ಆಯಾಸ,

ಬಳಲಿಕೆ, ಶ್ರಮ; ನೋವು.

ಘಟ್ (ಧಾ)— ಆಗು, ಆಗಿಬರು, ಕೂಡಿಬರು. **ಘಟ**— ಕೂಡಿ ಬರುವ; ಗಡಿಗೆ; ದೇಹ; ಆನೆಗಳ ಹಿಂಡು. **ಘಟನ (ನೆ)**— ಆಗಿಬರೋಣ, ಕೂಡಿ ಬರೋಣ; ಸಂಭವಿಸುವಿಕೆ. **ವಿಘಟನ**— ಕೂಡಿಬಾರದೆ ಹೋಗೋಣ, ಅಗಗೋಣ. **ಘಟಿತ**— ಆಗಿಬಂದ, ಕೂಡಿಬಂದ. **ಘಟಕ**— ಕೂಡಿಬರುವ; ಕೂಡಿಸುವ, ಜತೆಗೂಡಿಸುವ; ಯಜಮಾನ. **ಘಟಿ-ಘಟಿಕೆ**— ಗಳಿಗೆ; ವೇಳೆಯನ್ನು ಅಳೆಯುವ ಮಣ್ಣಿನ ಪಾತ್ರೆ.— ದುರ್ಘಟನೆ. ಘಟನಾಘಟನೆ. ಘಟಭೇದ. ಘಟಯೋನಿ. ಘಟಿತಾರ್ಥ. ಘಟಿಸು. ಘಟೀಯಂತ್ರ. ವಿಘಟಿಕೆ. ವಿಘಟಿಸು. ವಿಘಡಿಸು. ವಿಘಟಿತ. ಸಂಘಟ (ಸಂಘಟ್ಟ). ಸಂಘಟನ (ನೆ). ಸಂಘಟಿತ. ಸಂಘಟಿಸು. ಸಂಘಟೀಕರಣ. ಸಂಘಟ್ಟನ. ಸಂಘಟ್ಟಿತ.

ಘುಷ್ (ಧಾ) –ಕೂಗು. **ಘೋಷ**— ಕೂಗು, ಘರ್ಜನೆ, ದೊಡ್ಡ ಬೊಬ್ಬೆ. **ಘೋಷಣ(ಣೆ)**— ಕೂಗಿ ಹೇಳು, ಡಂಗುರ ಸಾರು, ಗದ್ದಲ ಮಾಡು, ಪ್ರಕಟನೆ. **ಘೋಷಿತ**— ಶಬ್ದ ಮಾಡಿದ. **ಅಘೋಷ**— ಶಬ್ದವಿಲ್ಲದ, ಮೂಕ. **ನಿರ್ಘೋಷ**— ಗಟ್ಟಿಯಾದ ಕೂಗು. **ಸಂಘೋಷ**— ಒಳ್ಳೆಯ ಕೂಗು, ಗಟ್ಟಿಯಾದ ಕೂಗು.— ಘೋಷಿ, ಘೋಷ್ಯತ್, ಘೋಷ್ಯದರ್ಣವ, ಘೋಷಕ, ಆಘೋಷ, ನಿರ್ಘೋಷಣ, ನಿರ್ಘೋಷಾಯಮಾಣ.

ಘೃ [ಧಾ] –ಉಗ್ಗು. **ಘೃತ**– ಅನ್ನದ ಮೇಲೆ ಉಗ್ಗತಕ್ಕ ಪದಾರ್ಥ-ತುಪ್ಪ. **ಅಭಿಘಾರ**— ತುಪ್ಪ.

ಘೃಷ್ [ಧಾ] —ತೇಯು. **ಘರ್ಷ**— ತೇಯು, ತಿಕ್ಕು. **ಘರ್ಷಣ**— ತೇಯುವಿಕೆ, ತಿಕ್ಕುವಿಕೆ, ಅರೆಯುವಿಕೆ. **ಘೃಷ್ಟ**– ತೇದ, ತಿಕ್ಕಿದ. ಸಂಘರ್ಷ, **ಸಂಘರ್ಷಣ.**

ಘ್ರಾ [ಧಾ] —ಮೂಸಿ ನೋಡು. **ಘ್ರಾಣ**— ಮೂಸುವಿಕೆ; ಮೂಗು. **ಘ್ರಾಣಿಸು**— ಮೂಸು, ವಾಸನೆ ನೋಡು. **ಘ್ರಾಣೀಯ**— ಮೂಸತಕ್ಕ, ಮೂಸಿ ನೋಡಲು ಯೋಗ್ಯವಾದ. **ಘ್ರಾಣೇಂದ್ರಿಯ**— ಮೂಸಿ ನೋಡುವ ಅಂಗ; ಮೂಗು. **ಘ್ರಾತ**— ಮೂಸಲ್ಪಟ್ಟ. **ಆಘ್ರಾಣ**— ಮೂಸಿ ನೋಡೋಣ. **ಆಘ್ರಾತ**— ಮೂಸಿ ನೋಡಿದ.— ಘ್ರಾಣತರ್ಪಣ, ಘ್ರಾಣಾಂಕುಶ, ಆಘ್ರಾಣಿತ, ಆಘ್ರಾಣಿಸು.

ಚಂಡ್ [ಧಾ] —ಸಿಟ್ಟಾಗು. **ಚಂಡ**— ಸಿಟ್ಟುಗೊಂಡ, ಉದ್ರಿಕ್ತ;

ಕ್ರೂರ, ತೀಕ್ಷ್ಣ; ಸಿಟ್ಟಿನವ. **ಚಂಡಿ**— ಸಿಟ್ಟಿನವಳು, ಸಿಡುಕಿ; ಹಟಮಾರಿ ಹೇಗುಸು; ದುರ್ಗೆ. **ಪ್ರಚಂಡ**— ಬಹಳ ಸಿಟ್ಟುಗೊಂಡ, ಬಹಳ ತೀಕ್ಷ್ಣ; ತುಂಬ ಸಿಟ್ಟಿನವ. **ಚಂಡಣೆ**— ಉದ್ರೇಕ, ರೌದ್ರತೆ. **ಚಂಡಿಗೊಳ್ಳು**— ಸಿಟ್ಟಾಗು; ಹಟಮಾಡು. **ಚಂಡರುಚಿ**— ತೀಕ್ಷ್ಣ ಕಿರಣ (ಕಾಂತಿ) ಉಳ್ಳವನು- ಸೂರ್ಯ. **ಚಂಡೇಶ**- ಶಿವ.— ಚಂಡಿತನ, ಚಂಡಕರ, ಚಂಡಾಂಶು, ಚಂಡೇಶ್ವರ, ಚಂಡಿಕೆ (ಕಾ), ಚಂಡಿಸು, ಚಂಡೀಶ್ವರ.

ಚತುರ್ (ವಿಶೇಷಣ) -ನಾಲ್ಕು. **ಚತುರ**— ನಾಲ್ಕು ಕಡೆ ಓಡಾಡುವವ- ಜಾಣ. **ಚಾತುರ**— ಜಾಣ, ಕುಶಲ. **ಚತುರ್ಮುಖ**— ನಾಲ್ಕು ಮುಖಗಳುಳ್ಳವ- ಬ್ರಹ್ಮ. **ಚಾತುರಿಯ (ಚಾತುರ್ಯ)**. **ಚತುರಸ್ರ**— ನಾಲ್ಕು ಮೂಲೆಗಳುಳ್ಳ; ಚಚ್ಚೌಕ. **ಚತುರಂತ**— ನಾಲ್ಕು ಮೇರೆಗಳುಳ್ಳದು- ಭೂಮಿ.— ಚತುರಂಗ, ಚತುರುಪಾಯ, ಚತುರಾನನ, ಚತುರ್ಗಡಿ, ಚತುರ್ಗತಿ, ಚತುರ್ಥ, ಚತುರ್ದಶ, ಚತುರಶ್ರ, ಚತುರ್ದಂತ, ಚತುರ್ಬಲ, ಚತುರ್ವಕ್ತ್ರ, ಚತುರ್ಭುಜ, ಚತುರ್ವರ್ಗ, ಚತುರ್ವಿಧ, ಚತುರ್ವಿಂಶತಿ, ಚತುರ್ಯುಗ, ಚತುರ್ವರ್ಣ, ಚತುರ್ವೇದ, ಚಾತುರ್ಥಿಕ, ಚಾತುರ್ಮಾಸ, ಚಾತುರ್ವರ್ಣ, ಚಾತುರಂಗ, ಚಾತುರ್ದಂತ, ಚಾತುರ್ವರ್ಗ, ಚಾತುಃಶ್ರುತಿ, ಚತುರಂಗಬಲ, ಚತುರತನ, ಚತುರತೆ, ಚತುರೋಪಾಯ, ಚತುರ್ಥಾಕ್ಷರ, ಚತುರ್ಥಾಶ್ರಮ, ಚತುರ್ಥಿ, ಚತುರ್ಭದ್ರ, ಚತುರ್ವಿಧ ನರ್ತನ, [ವಾದ್ಯ (ಹಿಮ್ಮೇಳ), ಗಾಯನ, ಅಭಿನಯ, ನರ್ತನ) ಚತುರ್ವಿಧ ಪುರುಷಾರ್ಥ, ಚತುರ್ವೇದಿ, ಚಾತುರತನ, ಚಾತುರ್ಥಿಕ, ಚಾತುರ್ಯುಕ್ತಿ.

ಚದ್ (ಧಾ) —ಹೊಳೆಯು. **ಚಂದ್ರ**— ಹೊಳೆಯುವ, ಹೊಳೆಯುವವ- ಚಂದಿರ. **ಚಂದ್ರಿಕೆ**— ಚಂದವಾಗಿ ಹೊಳೆಯುವ ಕಾಂತಿ— ತಿಂಗಳ ಬೆಳಕು. **ಚಂದ್ರಕ**, ಚಂದ್ರಕಾಂತ, ಚಂದ್ರಕಾಂತಿ, ಚಂದ್ರಿಕೆ, ಚಂದ್ರಗಾವ್ಯ, ಚಂದಚೂಡ, ಚಂದ್ರಜ, ಚಂದ್ರಜ್ಯೋತಿ, ಚಂದ್ರತಾರಾಬಲ, ಚಂದ್ರದಾರ, ಚಂದ್ರಧರ, ಚಂದ್ರನಖಿ (ಶೂರ್ಪನಖಿ), ಚಂದ್ರಮ, ಚಂದ್ರಮಂಡಲ. ಚಂದ್ರಮೌಲಿ, ಚಂದ್ರಲೇಖೆ, ಚಂದ್ರವದನೆ, ಚಂದ್ರಶಾಲೆ, ಚಂದ್ರಶಿಲೆ, ಚಂದ್ರಶೇಖರ, ಚಂದಹಾಸ, ಚಂದ್ರಹಾಸ, ಚಂದ್ರಾತಪ, ಚಂದ್ರಾತ್ಮಜ, ಚಂದ್ರಾಭರಣ, ಚಂದ್ರೋದಯ, ಚಾಂದ್ರ, ಚಾಂದ್ರಮಸ, ಚಾಂದ್ರಮಸಾಯನ, ಚಾಂದ್ರಮಾನ ಚಾಂದ್ರಮಾಸ, ಚಾಂದ್ರಾಯಣ.

ಚರ್ (ಧಾ) —ತಿರುಗು; ಚಲಿಸು. **ಚರಣ**— ತಿರುಗುವಿಕೆ, ಚಲಿಸುವಿಕೆ; ಪಾದ. **ಚರಿತ್ರ**— ಜನ್ಮದಲ್ಲಿ ತಿರುಗಿದ, ಅಂದರೆ ಘಟಿಸಿದ ಸಂಗತಿಗಳ ವೃತ್ತ. **ಚಾರ**— ತಿರುಗುವ, ಚಲಿಸುವ; ಊರಿಂದ ಊರಿಗೆ ಚಲಿಸಿ ಸುದ್ದಿ ಒಯ್ಯುವವ- ಸೇವಕ. **ಆಚಾರ**— ಒಳ್ಳೆಯ ರೀತಿಯಿಂದ ಚಲಿಸುವಿಕೆ ಅಂದರೆ ಒಳ್ಳೆಯ ನಡತೆ. **ಆಚಾರ್ಯ**— ಒಳ್ಳೆಯ ರೀತಿಯಿಂದ ಚಲಿಸುವುದನ್ನು ಕಲಿಸುವವ- ಒಳ್ಳೆಯ ನಡತೆಯನ್ನು ಕಲಿಸುವವ- ಗುರು. **ಪರಿಚಾರಕ**— ಯಜಮಾನನು ಹೇಳಿದ ಹಾಗೆ ಚಲಿಸುವವ- ಸೇವಕ. **ಪ್ರಚಾರ**— ಬಹಳ ತಿರುಗುವ, ಹೆಚ್ಚಾಗಿ ಚಲಿಸುವ; ಪ್ರಸಿದ್ಧಿ ಪಡಿಸುವಿಕೆ. **ಸಂಚಾರ**— ಒಳ್ಳೆಯ ರೀತಿಯಲ್ಲಿ ತಿರುಗುವ, ವಿಶೇಷ ಚಲಿಸುವ. **ವಿಚಾರ**— ವಿಶೇಷ ತಿರುಗುವಿಕೆ, ವಿಷಯದ ಕೂಲಂಕಷವಾದ ತಿಳುವಳಿಕೆ. **ಗೋಚರ**— (ಗೋ-ಕಣ್ಣು) ಚಲಿಸುವಾಗ ಕಣ್ಣಿಗೆ ಬೀಳುವಿಕೆ; ಕಾಣುವಿಕೆ. **ನಿಶಾಚರ**— ರಾತ್ರಿ ತಿರುಗುವವ- ರಾಕ್ಷಸ. **ವಾರಿಚರ**— ನೀರಲ್ಲಿ ಚಲಿಸುವ ಪ್ರಾಣಿ.— ಚರಣತಲ, ಚರಣನಲಿನ, ಚರಣಯುಗ, ಚರಣವಾಲ್ಮೀಕ, ಚರಣವಿನ್ಯಾಸ, ಚರಣಸರಸಿರುಹ, ಚರಣಾಭರಣ, ಚರಣಾಯುಧ, ಚರಮ, ಚರಯಿಸು, ಚರಾಚರ, ಚರಿಗೆ, ಚರಿತ, ಚರಿತೆ, ಚರಿತಾರ್ಥ, ಚರಿತ್ರೆ, ಚರಿತ್ರಗಾರ, ಚರಿಷ್ಣು, ಚಾರಕ, ಚಾರಣ, ಚಾರಿ, ಚಾರಿತ, ಚಾರಿತ್ರ, ಆಚರಣ, ಆಚರಣೆ, ಆಚರಿಸು, ಆಚಾರಕ, ಆಚಾರತ್ವ, ಆಚಾರದೂರ, ಆಚಾರವಂತ, ಆಚಾರಿ, ಆಚಾರ್ಯತನ, ಆಚಾರ್ಯಾನಿ, ಆಚಾರ್ಯೆ, ಪರಿಚರ, ಪರಿಚರಣ, ಪರಿಚರಣತೆ, ಪರಿಚರಿಯು, ಪರಿಚರ್ಯ, ಪರಿಚರ್ಯೆ, ಪರಿಚಾರ, ಪರಿಚಾರಿಕೆ, ಪ್ರಚರ, ಪ್ರಚರ್ಯ, ಪ್ರಚಾರತೆ, ವಿಚಾರಕ, ವಿಚಾರಣೆ, ವಿಚಾರದೂರ, ವಿಚಾರಪರ, ವಿಚಾರಭ್ರಷ್ಟ, ವಿಚಾರವಂತ, ವಿಚಾರಿ, ವಿಚಾರಿತ, ವಿಚಾರಿಸು, ವಿಚಾರಿಸುಹ, ಸಚರಾಚರ, ಸಂಚರ, ಸಂಚರಣ, ಸಂಚರಿಸು, ಸಂಚಾರಕ, ಸಂಚಾರತೆ, ಸಂಚಾರಿ, ಸಂಚಾರಿಕೆ, ಸಂಚಾರಿಭಾವ.

ಚರ್ಚ್ (ಧಾ) -ವಾದ ಮಾಡು; ಓದು. **ಚರ್ಚಾ-ಚರ್ಚೆ**— ವಾದ ಮಾಡುವಿಕೆ, ತರ್ಕ. **ಚರ್ಚಿತ**- ವಾದಿಸಲ್ಪಟ್ಟ; ವಿಚಾರಿಸಲ್ಪಟ್ಟ. **ಚರ್ಚಕ**- ವಾದಿಸುವವ - ಚರ್ಚಿಸು, ಚರ್ಚರಿ.

ಚಲ್ (ಧಾ) —ಹೋಗು; ಕಂಪಿಸು. **ಚಲ**— ಹೋಗುವ, ಚಲಿಸುವ, ಕಂಪಿಸುವ **ಚಲತ್**— ಹೋಗುವ, ಚಲಿಸುವ, ಕಂಪಿಸುವ. **ಚಲನ(ನೆ)**—

ಹೋಗುವಿಕೆ, ಚಲಿಸುವಿಕೆ. **ಚಲಿತ**— ಹೋದ, ಚಲಿಸಿದ, ಕಂಪಿಸಿದ, **ಚಾಲನ**— ಹೋಗುವಂತೆ ಮಾಡುವಿಕೆ, ಚಲಿಸುವಂತೆ ಮಾಡುವಿಕೆ. **ಚಂಚತ್**— ಹೋಗುವ, ಕಂಪಿಸುವ. **ಚಂಚಲ**— ಹೋಗುವ, ಸಂಚಲಿಸುವ, ಕಂಪಿಸುವ; ಅಸ್ಥಿರ. **ನಿಶ್ಚಲ**— ಹೋಗದ, ಕಂಪಿಸದ, ಸ್ಥಿರ. **ಅಚಲ**—ಹೋಗದ, ಸ್ಥಿರ. **ಪ್ರಚಲ**— ಬೇಗ ಹೋಗುವ.— ಚಲಿಸು, ಚಾಲಿಸು, ಚಲತ್ವ, ಚಾಲ, ಚಾಲತಿ (ಚಾಲ್ತಿ), ಚಾಲಿತ, ಚಾಲು, ಚಂಚದ್ರೂಪ, ಚಂಚಲತನ, ಚಂಚಲತ್ವ, ಚಂಚಲೆ, ಚಂಚಲನೇತ್ರೆ, ಚಂಚಲಾಕ್ಷಿ, ಚಂಚಲಾಪಾಂಗ, ಚಂಚಲಿತ, ನಿಶ್ಚಲತೆ, ನಿಶ್ಚಲಾಂಗ, ನಿಶ್ಚಲಿತ, ಪ್ರಚಲಾಯಿತ, ಸಂಚಲ, ಸಂಚಲತೆ, ಸಂಚಲತ್ವ, ಸಂಚಲನ, ಸಂಚಲಿತ, ಸಂಚಲಿಸು, ಸಂಚಲಿಯಿಸು, ಸಂಚಾಲನ, ಸಂಚಾಲಕ, ನಿಶ್ಚಂಚಲ, ನಿಶ್ಚಂಚಲಿತ, ವಿಚಾಲಿತ, ಅಚಾಲಿತ.

ಚರ್ವ್ (ಧಾ) –ಜಗಿ, ತಿನ್ನು. **ಚರ್ವಣ**– ಜಗಿಯುವಿಕೆ. **ಚರ್ವಿತ**– ಜಗಿದ. **ಚರ್ವಿತಕ**— ಜಗಿಯುವಿಕೆ, ತಿನ್ನುವಿಕೆ. **ಚರ್ವಿತಚರ್ವಣ**— ಜಗಿದುದನ್ನೆ ಜಗಿಯುವಿಕೆ— ತಿಂದದ್ದನ್ನೇ ತಿರುಗಿ ತಿನ್ನೋಣ— ಮೆಲುಕಾಡಿಸೋಣ.— ಮಾಡಿದ್ದನ್ನೇ ಮಾಡೋಣ– ಅಂದದ್ದನ್ನೇ ಅನ್ನೋಣ.

ಚಿ (ಧಾ) —ಕೂಡಿ ಹಾಕು. **ಚಯ**— ಕೂಡಿ ಹಾಕಿದ್ದು— ರಾಶಿ, ಗುಂಪು, ಸಮೂಹ. **ಚಯನ**— ಕೂಡಿ ಹಾಕೋಣ, ರಾಶಿ ಹಾಕೋಣ, ಶೇಖರಿಸೋಣ. **ಚಿತಿ-ಚಿತೆ-ಚಿತಾ**— ಹೆಣವನ್ನು ಸುಡುವುದಕ್ಕೆ ಕೂಡಿ ಹಾಕಿದ ಕಟ್ಟಿಗೆಯ ರಾಶಿ. **ನಿಶ್ಚಯ**— ಕೂಡಿ ಹಾಕದೆ ಒಂದೇ ಸ್ಥಿರವಾಗಿರುವಿಕೆ; ನಿರ್ಣಯ, ಸಿದ್ಧಾಂತ. **ಪರಿಚಯ**— ಬಹಳ ಕೂಡಿ ಹಾಕೋಣ— ಇನ್ನೊಬ್ಬರನ್ನು ಗೊತ್ತುಪಡಿಸಿಕೊಳ್ಳೋಣ; ಗುರುತು. **ಸಂಚಯ**— ಕೂಡಿ ಹಾಕೋಣ; ರಾಶಿ, ಸಮೂಹ. **ಸಂಚಿತ**— ಕೂಡಿ ಹಾಕಿದ, ಒಟ್ಟು ಮಾಡಲ್ಪಟ್ಟ.— ವಿಚಯ, ವಿಚಯನ, ಅಪಚಿತ, ನಿಚಿತ, ಅಪಚಿತಿ, ನಿಶ್ಚಯಿಸು, ನಿಶ್ಚಿತ, ನಿಶ್ಚಿತನಾಮ, ನಿಶ್ಚಿತಾರ್ಥ, ಪರಿಚಿತ, ಪರಿಚಿತಿ. ಸಂಚಯನ, ಚೈತ್ಯ.

ಚಿತ್ (ಧಾ) —ನೆನಸು. **ಚಿಂತೆ**(ತಾ)— ನೆನಸುವಿಕೆ, ಆಲೋಚನೆ; ಕಳವಳ, ವ್ಯಥೆ. **ಚಿಂತನ (ನೆ)**— ನೆನಸುವಿಕೆ, ಆಲೋಚಿಸುವಿಕೆ, ಚಿಂತೆ. **ಚಿಂತಿತ**— ನೆನಸಿದ, ಯೋಚಿಸಿದ. **ಚಿಂತ್ಯ**— ನೆನಸತಕ್ಕ, ಆಲೋಚಿಸತಕ್ಕ. **ಚಿಂತಾಮಣಿ**– ನೆನಸಿದುದನ್ನು ಕೊಡುವ ರತ್ನ. **ನಿಶ್ಚಿಂತ**– ಯೋಚನೆ

ಇಲ್ಲದ, ದುಃಖವಿಲ್ಲದ. **ಸಚಿಂತನ**— ಚಿಂತೆಯಿಂದ ಕೂಡಿದ.— ಚಿಂತಾಕುಲ, ಚಿಂತಾಕುಲತೆ, ಚಿಂತಾಕ್ರಾಂತ, ಚಿಂತಾಕ್ರಾಂತೆ, ಚಿಂತಾಗ್ನಿ, ಚಿಂತಾಂಗನೆ, ಚಿಂತಾತರಲತ್ವ, ಚಿಂತಾಸಕ್ತ, ಚಿಂತಾಪರತಂತ್ರೆ, ಚಿಂತಾಭರ, ಚಿಂತಾರತಿ, ಚಿಂತಾರತ್ನ, ಚಿಂತಿಸು, ಚಿಂತ್ಯ, ನಿಶ್ಚಿಂತತೆ, ನಿಶ್ಚಿಂತೆ, ದ್ರೋಹಚಿಂತನ, ಅಚಿಂತ್ಯ, ಪ್ರಚಿಂತ್ಯ.

ಚಿತ್ (ಧಾ) —ತಿಳಿ. **ಚಿತ್ತ**— ತಿಳಿದ, ತಿಳಿದುಕೊಳ್ಳುವ ಅಂಗ-ಮನಸ್ಸು, ಹೃದಯ. **ಚೇತನ**— ತಿಳಿಯುವ ಶಕ್ತಿ, ಮನಸ್ಸು, ಆತ್ಮ; ಬಲ. **ಚೈತನ್ಯ**— ಬೋಧ, ಪ್ರಜ್ಞೆ, ಅರಿವು; ಶಕ್ತಿ. **ಅಚೇತನ**— ತಿಳಿಯುವ ಶಕ್ತಿ ಇಲ್ಲದ; ಬಲವಿಲ್ಲದ. **ಸಚೇತನ**— ಚೇತನದಿಂದ ಕೂಡಿದ. **ವಿಚೇತನ**— ಚೇತನ ವಿರಹಿತ.— ಚಿತ್ತಜ, ಚಿತ್ತಜನ್ಮ, ಚಿತ್ತಜಾರಿ, ಚಿತ್ತಭವ, ಚಿತ್ತಭವರಿಪು, ಚಿತ್ತಭವಹರ, ಚಿತ್ತಭೇದ, ಚಿತ್ತಭ್ರಮೆ, ಚಿತ್ತಮೋಹನ, ಚಿತ್ತವಂತ, ಚಿತ್ತವಿಭ್ರಮ, ಚಿತ್ತವಿಮೋಹನ, ಚಿತ್ತವೃತ್ತಿ, ಚಿತ್ತಶುದ್ಧಿ, ಚಿತ್ತಸಮುನ್ನತಿ, ಚಿತ್ತಸ್ಫುರಣ, ಚಿತ್ತಾಭೋಗ — [ಚಿತ್ತ+ಆಭೋಗ], ಚಿತ್ತಾಭ್ಯಂತರ [ಚಿತ್ತ+ಅಭ್ಯಂತರ], ಚಿತ್ತಿನಿ, ಚಿದಕ್ಷಿ [ಚಿತ್+ಅಕ್ಷಿ], ಚಿದಂಗನಾಪ್ರಿಯ [ಚಿತ್+ಅಂಗನಾ+ಪ್ರಿಯ], ಚಿದಂಬರ [ಚಿತ್+ಅಂಬರ], ಚಿದಾನಂದ [ಚಿತ್+ಆನಂದ], ಚಿದಾನಂದಮೂರ್ತಿ [ಚಿತ್+ಆನಂದ+ಮೂರ್ತಿ], ಚಿದಾನಂದರೂಪ [ಚಿತ್+ಆನಂದ+ರೂಪ], ಚಿದ್ಗಗನರೂಪ [ಚಿತ್+ಗಗನ+ರೂಪ] ಚಿದ್ರೂಪ [ಚಿತ್+ರೂಪ], ಚಿನ್ಮಯ [ಚಿನುಮಯ] [ಚಿತ್+ಮಯ] ಚೇತನಕರಣ, ಚೇತನಧರ್ಮ, ಚೇತನಭಾವ, ಚೇತನಾಚೇತನ, ಚೇತನೆ, ಚೇತನ್ಯ, ಚೇತರಣೆ, ಚೇತರಿಸು.

ಚಿರ (ಅವ್ಯಯ) —ಬಹಳ ದಿನ. **ಚಿರಕಾಲ**— ಬಹಳ ಕಾಲ. **ಚಿರಂಜೀವ**- ಬಹು ದಿನ ಜೀವಿಸುವವ. (-ಬಹುಕಾಲ ಬದುಕಿರಬೇಕೆಂದು ಆಶೀರ್ವದಿಸಲು ಅಥವಾ ಇಚ್ಛಿಸಲು ಯೋಗ್ಯನಾದವನು- ಮಗ.) **ಚಿರಂತನ**- ಬಹು ದಿವಸದ.— ಚಿರಜೀವತೆ, ಚಿರಜೀವಿ (ಚಿರಂಜೀವಿ), ಚಿರತರ, ಚಿರರಾತ್ರ, ಚಿರರಾತ್ರಾಯ, ಚಿರಸ್ಥ, ಚಿರಾತ್, ಚಿರಾತೀತ (ಚಿರ+ಅತೀತ), ಚಿರಾಯ, ಚಿರಾಯಿತ, ಚಿರಾಯು, ಚಿರಪ್ರಾಯ.

ಚುರ್ (ಧಾ) —ಕದಿ. **ಚೋರ**— ಕದಿಯುವವ— ಕಳ್ಳ. **ಚೌರ್ಯ** —ಕಳ್ಳತನ. **ಚೋರಣ**— ಕಳ್ಳತನ ಬಲ್ಲವ. **ಚೋರಕ**— ಚೋರ.—

ಚೋರತ್ವ, ಚೋರಿ, ಚಾರ, ಚಾರಿಕೆ.

ಚೂಷ್ (ಧಾ)— ಸೀಪು. **ಚೋಷಣ**— ಸೀಪುವಿಕೆ, ಹೀರಿಕೊಳ್ಳೋಣ. **ಚೋಷಿತ**— ಸೀಪಿದ. ಹೀರಿಕೊಂಡ. **ಚೋಷ್ಯ**— ಸೀಪಲು (ಹೀರಲು) ಯೋಗ್ಯವಾದ.

ಚೇಷ್ಟ್ (ಧಾ) — ಅಲ್ಲಾಡು. **ಚೇಷ್ಟೆ** (ಷ್ಟ್ರಾ)— ಅಂಗಗಳ ಅಲ್ಲಾಡುವಿಕೆ; ಅಂಗವಿಕಾರ; ನಟನೆ, ಪರಿಹಾಸ. **ಚೇಷ್ಟನ**- ಅಂಗಗಳ ಚಲನವಲನ. **ನಿಶ್ಚೇಷ್ಟ**— ಅಲ್ಲಾಡುವಿಕೆ ಇಲ್ಲದ; ಸುಮ್ಮನೆ ಬಿದ್ದ. **ಸಚೇಷ್ಟ**— ಅಲ್ಲಾಡುವ. **ಕುಚೇಷ್ಟ**- ಅಂಗಗಳ ಕೆಟ್ಟರೀತಿಯ ಅಲ್ಲಾಟ; ಕೆಟ್ಟರೀತಿಯ ಹಾಸ್ಯ. **ಚೇಷ್ಟೆಗಿಡು**— ಅಂಗಚಲನೆ ನಿಂತುಹೋಗು; ಬೋಧ ತಪ್ಪು.— ಚೇಷ್ಟಿಸು. ಚೇಷ್ಟತೆ. ಚೇಷ್ಟಿತ. ಚೇಷ್ಟೆಗಾರ, ನಷ್ಟಚೇಷ್ಟೆ. ನಷ್ಟಚೇಷ್ಟತೆ. ಕುಚೇಷ್ಟೆ. ಕುಚೇಷ್ಟಕ. ನಿಶ್ಚೇಷ್ಟೆ. ನಿಶ್ಚೇಷ್ಟಿತ.

ಚ್ಯು (ಧಾ)— ಬೀಳು. **ಚ್ಯುತ**— ಬಿದ್ದ, ಜಾರಿದ; ನಾಶಹೊಂದಿದ. **ಚ್ಯುತಿ**— ಬೀಳುವಿಕೆ, ಜಾರುವಿಕೆ, ಪತನ; ನಾಶ. **ಪದಚ್ಯುತ**- ತನ್ನ ಸ್ಥಾನದಿಂದ ಬಿದ್ದವ, ಸ್ಥಾನ ತಪ್ಪಿದವ. **ರಾಜಚ್ಯುತ**— ತನ್ನ ರಾಜ್ಯದಿಂದ ಬಿದ್ದವ, ರಾಜ್ಯ ಕಳಕೊಂಡವ. **ಅಚ್ಯುತ**— ಎಂದೂ ಬೀಳದವ-ವಿಷ್ಣು.— ಪರಿಚ್ಯುತ. ಚ್ಯುತಕ. ಅಚ್ಯುತಕ. ಚ್ಯುತತ್ವ. ಅಚ್ಯುತತ್ವ.

ಛದ್ (ಧಾ)— ಮುಚ್ಚು. **ಛದ-ಛದನ**— ಮುಚ್ಚುವದು, ಹೊದಿಕೆ; ಎಲೆ. **ಛತ್ರ**— ಕೊಡೆ, ಸತ್ತಿಗೆ; ವಿಶ್ರಾಂತಿ ಗೃಹ, ಧರ್ಮಶಾಲೆ. **ಛನ್ನ**— ಮುಚ್ಚಿದ. **ಛದ್ಮ**— ಮುಸುಕು, ಬದಲಾಯಿಸಿದ ವೇಷ; ಮೋಸ, ಕಪಟ. **ಛಾದ-ಛಾದನ**— ಮುಚ್ಚುವಿಕೆ, ಹೊದಿಕೆ, ಮುಸುಕು. **ಛಾದನಿ**— ಮಂಟಪದ ಮೇಲೆ ಹಾಕುವ ಗುಡಾರ ಮುಂತಾದದ್ದು, ಚಾಂದಿನಿ. **ಪ್ರಚ್ಛಾದನ**— ಚೆನ್ನಾಗಿ ಮುಚ್ಚುವಿಕೆ. **ಛತ್ರಕ**— ನಾಯಿಕೊಡೆ. **ಛತ್ರಭಂಗ** - ಸತ್ತಿಗೆಯ ಮುರಿಯುವಿಕೆ; ಅರಸನ ಅಪಮಾನ.— ಛತ್ರಪತಿ. ಛತ್ರಿಕೆ. ಛತ್ರಿ. ಛತ್ವರ. ಛದಿಸ್. ಛದೆ. ಛದ್ಮನೆ. ಆಚ್ಛನ್ನ. ಆಚ್ಛಾದ. ಆಚ್ಛಾದನ. ಆಚ್ಛಾದಿತ. ಆಚ್ಛಾದಿಸು. ಪ್ರಚ್ಛದ. ಪ್ರಚ್ಛದಪಟ. ಪ್ರಚ್ಛನ್ನ. ಪ್ರಚ್ಛಾದಿತ. ಸಂಛನ್ನ.

ಛಿದ್ (ಧಾ)— ಕಡಿ. **ಛಿನ್ನ**— ಕಡಿದ, ತುಂಡುಮಾಡಿದ; ನಾಶಮಾಡಲ್ಪಟ್ಟ. **ಛಿದ್ರ**— ಕಡಿದು ತೂತು ಮಾಡಲ್ಪಟ್ಟ, ತೂತು; ಕುಂದು, ಕೊರತೆ. **ಛೇದ**- ಕಡಿದು ತುಂಡು ಮಾಡಿದ. ವಿಭಾಗಿಸಿದ; ತುಂಡು, ಭಾಗ,

ಚೂರು. ಛೇದನ-- ಕಡಿಯುವಿಕೆ, ತುಂಡು ಮಾಡುವಿಕೆ, ವಿಭಾಗಿಸು
ನಾಶಮಾಡುವಿಕೆ. ಛೇದ್ಯ—ಕಡಿಯತಕ್ಕ, ತುಂಡು ಮಾಡತಕ್ಕ. ಉಚ್ಛೇ
ಮೂಲದಿಂದ ಕಡಿಯೋಣ. ವಿಚ್ಛೇದನ-- ವಿಶೇಷವಾಗಿ ಕಡಿಯುವಿಕೆ,
ಯಾಗಿ ತುಂಡು ಮಾಡುವಿಕೆ.— ವಿಚ್ಛಿನ್ನ. ವಿಚ್ಛೇದ. ಸಂಚ್ಛೇದ. ಸಂಚ್ಛೇ
ಛಿದ್ರಿತ. ಛಿದ್ರಾನ್ವೇಷಣ. ಛಿದ್ರಾನ್ವೇಷಿ. ಛೇದಿಸು. ಛೇದಿ. ಸವಿಚ್ಛೇ
ಶೀರ್ಷಚ್ಛೇದ್ಯ.

ಛುರ್ (ಧಾ)— ಕೊಯ್ಯು. ಛುರಿ— ಚೂರಿ. ಛುರಿಕೆ— ಸುರಿ
ಚೂರಿ.

೧೫. ಸಂಧಿ-ಸಮಾಸ.

ಮಹದಾಹವ— ಮಹತ್+ಆಹವ (ಸಂ. ವ್ಯಂ. ಸಂ.) (ಕ. ಸ
ರಘೂದ್ವಹ- ರಘು+ಉದ್ವಹ. (ಸ.ಧೀ.) ರಘುವಿನ ಉದ್ವಹ (ಮಗ) (ತ. ಸ
ಉತ್+ವಹ (ಸಂ. ವ್ಯಂ.) ಸತ್ರೈಕರೂಪ–ಸತ್ರ+ಏಕರೂಪ (ವೃ. ಸಂ.
ಸತ್ರದ ಏಕರೂಪ (ಭಸ್ಮರಾಶಿ) (ತ. ಸ) ನಿಶಿತಾಸ್ತ್ರ-ನಿಶಿತ+ಅಸ್ತ್ರ-(ಸ. ದೀ
ನಿಶಿತವಾದ ಅಸ್ತ್ರ (ಕ. ಸ). ಗುಣಾವಳಿ—ಗುಣ+ಆವಳಿ (ಸ ದೀ) ಗುಣಗಳ
ಆವಳಿ (ತ. ಸ) ಸುಮಿತ್ರಾತ್ಮಜ–ಸುಮಿತ್ರ+ಆತ್ಮಜ (ಸ. ದೀ.) ಸುಮಿತ್ರೆಯ
ಆತ್ಮಜ (ತ. ಸ) ಪೂಗಣೆ–ಪೂ+ಕಣೆ (ಆದೇಶ) ಪೂವಿನ ಕಣೆ (ತ. ಸ) ಕುದು
ರೆಗಾವಲು-ಕುದುರೆ+ಕಾವಲು (ಆದೇಶ) ಕುದುರೆಯ ಕಾವಲು (ತ. ಸ)
ಕಪೀಶ್ವರ-ಕಪಿ+ಈಶ್ವರ (ಸ. ದೀ) ಕಪಿಗಳ ಈಶ್ವರ (ತ. ಸ) ಅಡಿಯಾಳು--
ಅಡಿ+ಆಳು (ಆಗಮ) ಅಡಿಯ ಆಳು (ತ. ಸ) ಒಡಲ್ವುಗಲ್-ಒಡಲ+ಪುಗಲ್-
(ಆದೇಶ). ಒಡಲನ್ನು ಪುಗಲ್ (ಕ್ರಿ. ಸ) ಅಬ್ಧಿ--ಅಪ್+ಧಿ (ಸಂ. ವ್ಯಂ.)
ಶೈತ್ಯೋಪಚಾರ--ಶೈತ್ಯ+ಉಪಚಾರ (ಗುಣ) ಶೈತ್ಯದ ಉಪಚಾರ (ತ. ಸ)
ಶೈತ್ಯವೂ ಉಪಚಾರವೂ (ಕ. ಸ.) ಸಮ್ಮೋಹನಾಸ್ತ್ರ-- ಸತ್+ಮೋಹನ
(ಅನುನಾಸಿಕ) ಸಮ್ಮೋಹನ+ಅಸ್ತ್ರ (ಸ. ದೀ.) ಸಮ್ಮೋಹನವೆಂಬ ಅಸ್ತ್ರ (ಕ.ಸ)
ದಾರಿದಪ್ಪಿದಿರಿ--ದಾರಿ+ತಪ್ಪಿದಿರಿ (ಆದೇಶ) ದಾರಿಯನ್ನು ತಪ್ಪಿದಿರಿ [ಕ್ರಿ. ಸ.]
ಬಲೋತ್ಕಾರ-ಬಲ+ಉತ್ಕಾರ [ಗುಣ] ಬಲದ ಉತ್ಕಾರ [ರಾಶಿ] [ತ. ಸ]
ರಾಕ್ಷಸಾಂತಕ--ರಾಕ್ಷಸ+ಅಂತಕ [ಸ. ದೀ.] ರಾಕ್ಷಸರ ಅಂತಕ [ತ. ಸ.]
ಭರತಾದಿಗಳ್ವೆರಸಿ--ಭರತ+ಆದಿಗಳ್ವೆರಸಿ [ಸ. ದೀ.] ಭರತಾದಿಗಳ್+ಬೆರಸಿ

[illegible] ಭ್ರಮಣ-
ಬ[illegible]. ಪಾಟಲಿ-
ಪ[illegible] ಜ್ಜರ. ಯಶ
(ಸ್ -ಜಸ. ಸ್ಫಟಿಕ-ಪಳಿಕ(ಕು), ಪಳುಕು. ವಿನೋದ-ಬ[illegible] ಕಾಮ-ಕಾವ.
ತ[illegible]-ದಡ. ಪಶು-ಹಸು. ಕುಡ್ಯ-ಗೋಡೆ. ವೈಶಾಖ-ಬೇಸಗೆ. ಭೂತಿ-ಬೂದಿ.
ಕುಠಾರ-ಕೊಡಲಿ. ಸಸ್ಯ-ಸಸಿ. ಕಾಷ್ಠ-ಕಡ್ಡಿ. ಶಿಖಾ-ಸೆಕೆ. ಕಿಂಚಿತ್-ಕೊಂಚ.

ಖಡ್ಗ-ಕತ್ತಿ. ಸಹಸ್ರ-ಸಾಸಿರ. (ಸಾವಿರ). ಆರ್ಯ-ಅಜ್ಜ. ವ್ಯವಸಾಯ-ಸಾಯ. ಗಥಾ-ಗಾದೆ. ಕುಟೀ-ಗುಡಿ. ಗುಪ್ತ-ಗುಟ್ಟು. ವರ್ಧಕಿ-ಬಡ ಕುಕ್ಕುಟ-ಕೋಳಿ.